ಶನಿವಾರ, ಸೆಪ್ಟೆಂಬರ್ 27, 2025 | ₹ 7.00

prajavani.net prajavani


www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮುಂಬೈಯಲ್ಲಿ ಬೋಲ್ಟ್

ಜಮೈಕಾದ ದಿಗ್ಗಜ ಅಥ್ಲೀಟ್ ಉಸೇನ್ ಬೋಲ್ಟ್ ಅವರು ಮುಂಬೈನಲ್ಲಿ ಶುಕ್ರವಾರ ನಡೆದ ಶಾಲಾ ಕಾರ್ಯಕ್ರಮದಲ್ಲಿ ಕ್ರಿಕೆಟ್ ಆಡಿದರು



ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ



CREDAI

PRM/KA/RERA/1251/472/PR/110925/008086
www.rera.karnataka.gov.in | T&C Apply*

LAUNCHING
CASAGRAND ESTANCIA

Extra-spacious **3 & 4 BHK** Homes
20 mins from **Manyata Tech Park**
At Kogilu

From ₹1.25cr

Kogilu Market Price: ~~₹8500/sft.~~ | Casagrand Launch Price: ~~₹7299/sft.~~ | Casagrand Early Bird Price: **₹6999/sft.** (FOR FIRST 25 BOOKINGS ONLY)

Sorry, we got a little carried away with the home

- **Dubai-inspired** glass façade on 7.32 acres
- Large living spaces with big bedrooms **(11*18ft.)**
- No overlooking units for **maximum privacy**
- All bedrooms have **convertible balconies**
- **8ft. high windows** for scenic unrestricted view
- **Swimming pool of 11,500 sft.** with exclusive poolside amenities like adult's pool, aqua gym, kids pool, interactive water jets & more
- **Grand clubhouse of 22,500 sft.** with exclusive indoor amenities

with the location

- Upcoming Kogilu Metro Station - **2.8 KM**
- REVA University - **3.2 KM**
- SPARSH Hospital - **4.7 KM**
- RMZ Galleria Mall - **5.7 KM**
- Phoenix Mall of Asia - **9.1 KM**

& the price

TYPE	SIZE	LAUNCH PRICE	EARLY BIRD PRICE
2 BHK	1323 - 1382 SFT.	~~₹96L - ₹1CR~~	₹93L - ₹97L
3 BHK	1770 - 2157 SFT.	~~₹1.30CR - ₹1.55CR~~	₹1.25CR - ₹1.49CR
4 BHK	2655 - 2773 SFT.	~~₹1.88CR - ₹1.96CR~~	₹1.81CR - ₹1.88CR

TOTAL UNITS: 429 | SOLD: 140 | AVAILABLE: 289



WHY CASAGRAND?

- **20+ years** of real estate excellence
- **160+** landmark projects
- **55,000+** happy families
- **2023** rigorous quality checks
- **87%** on-time delivery
- **7 cities** Chennai, Bengaluru, Hyderabad, Coimbatore, Pune, Delhi & Dubai
- **2 months** of rental support to find tenants
- **6 months** of resale support
- **8 years** warranty & 10 years of community maintenance
- **75%** open area for 2x more light & ventilation
- **0%** space wastage planning for carpet area efficiency
- **23** global brands used in fittings and finishing materials

SCHEDULE YOUR SITE VISIT TODAY
93840 54982
VISIT MODEL HOUSE AT SITE

SCAN TO EXPERIENCE OUR SPACE

CASAGRAND
building aspirations

ಶನಿವಾರ, ಸೆಪ್ಟೆಂಬರ್ 27, 2025| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗ್ರಂಥಾಲಯ ಉದ್ಘಾಟನೆ

ನವದೆಹಲಿಯ ಇಂದಿರಾ ಭವನದಲ್ಲಿ ಶುಕ್ರವಾರ ನಡೆದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಸ್ಮಾರಕ ಗ್ರಂಥಾಲಯ ಉದ್ಘಾಟನೆಯಲ್ಲಿ ಸಿಂಗ್ ಅವರ ಪತ್ನಿ ಗುರುಶರಣ್ ಕೌರ್ ಪಾಲ್ಗೊಂಡಿದ್ದರು





ಯುದ್ಧಕ್ಕೆ ವಿರೋಧ

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ನಡೆದ ಯುದ್ಧ ವಿರೋಧಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯೊಬ್ಬರು ಪ್ಯಾಲೆಸ್ಟೀನ್ ಪರ ಫಲಕಗಳನ್ನು ಪ್ರದರ್ಶಿಸಿದರು

ಶನಿವಾರ, ಸೆಪ್ಟೆಂಬರ್ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 268 | ಪುಟ 34

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭಾರತಕ್ಕೆ 'ಸೂಪರ್' ಜಯ

ಅಭಿಷೇಕ್ ಶರ್ಮಾ (61;31ಎ) ಏಷ್ಯಾ ಕಪ್ ಟೂರ್ನಿಯಲ್ಲಿ 'ಹ್ಯಾಟ್ರಿಕ್' ಅರ್ಧಶತಕ ದಾಖಲಿಸಿದರು. ಶುಕ್ರವಾರ ಶ್ರೀಲಂಕಾ ವಿರುದ್ಧದ ಪಂದ್ಯವನ್ನು ಭಾರತ ತಂಡವು 'ಸೂಪರ್ ಓವರ್'ನಲ್ಲಿ ಜಯಿಸಿತು



ಮಂಗನಾಟ...

ಬೆಂಗಳೂರಿನಲ್ಲಿ ಡೇರೆಯೊಂದರ ಚಾವಣಿ ಮೇಲೆ ಕೋತಿಯೊಂದು ಶುಕ್ರವಾರ ಆಟವಾಡುತ್ತಿತ್ತು



ಸೆನ್ಸೆಕ್ಸ್ 80,426 | ನಿಫ್ಟಿ 24,654 | $/₹ 88.72 | ಚಿನ್ನ (Std. 10g) ₹1,20,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,45,000 (ಬೆಂಗಳೂರು)

24x7 ತ್ರಿವಳಿ ತಜ್ಞ ವೈದ್ಯರ ಲಭ್ಯತೆ

'ತಾಯಿ–ನವಜಾತ ಶಿಶು ಸಾವಿನ ಪ್ರಮಾಣ ತಗ್ಗಿಸಲು ತಾಲ್ಲೂಕು ಆಸ್ಪತ್ರೆಗಳಲ್ಲಿ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿ ಮತ್ತು ನವಜಾತ ಶಿಶುಗಳ ಸಾವಿನ ಪ್ರಮಾಣವನ್ನು ತಗ್ಗಿಸಲು ತಾಲ್ಲೂಕು ಮಟ್ಟದ 148 ಆಸ್ಪತ್ರೆಗಳಲ್ಲಿ ದಿನದ 24 ಗಂಟೆಯೂ ತ್ರಿವಳಿ ತಜ್ಞರ ಲಭ್ಯತೆ ಸೇರಿ ವಿವಿಧ ಕ್ರಮಗಳನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಕಟಿಸಿದರು.

ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಗಳ ಬಲವರ್ಧನೆಗೆ ತ್ರಿವಳಿ ತಜ್ಞರ ಸೇವೆ ತರ್ಕಬದ್ಧಗೊಳಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಸಿಕ್ಕಿದೆ. ಈ ಬಗ್ಗೆ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ವಿವರ ನೀಡಿದರು.



ತ್ರಿವಳಿ ತಜ್ಞರು ಎಂದರೆ ಸ್ತ್ರೀರೋಗ, ಅರಿವಳಿಕೆ ಮತ್ತು ಮಕ್ಕಳ ತಜ್ಞರು. ಈ ಮೂವರು ತಜ್ಞರು ಎಲ್ಲ ತಾಲ್ಲೂಕು ಆಸ್ಪತ್ರೆಗಳಲ್ಲಿ 24 ಗಂಟೆಯೂ ಪಾಳಿಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಇದಕ್ಕಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ತಜ್ಞರ ಸಂಖ್ಯೆ ಹೆಚ್ಚಿಸುವುದರ ಜತೆಗೆ, ಯಾವುದೇ ಆಸ್ಪತ್ರೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ತಜ್ಞರಿದ್ದರೆ, ತಜ್ಞರ ಕೊರತೆ ಇರುವ ಕಡೆಗೆ ನಿಯೋಜಿಸಲಾಗುವುದು. ತಜ್ಞ ವೈದ್ಯರು ಇಲ್ಲದೇ ಯಾವ ತಾಯಿಯೂ ಸಾವಿಗೀಡಾಗಬಾರದು ಎಂಬುದು ಸರ್ಕಾರದ ಆದ್ಯತೆ ಎಂದು ಹೇಳಿದರು.



ಕೆಲವು ಅಗತ್ಯ ಕ್ರಮಗಳನ್ನು ತೆಗೆದುಕೊಂಡ ಕಾರಣ ತಾಯಿ– ಶಿಶುಗಳ ಸಾವಿನ ಪ್ರಮಾಣ ಹಿಂದಿನ ವರ್ಷಕ್ಕಿಂತ ಶೇ 25ರಷ್ಟು ಕಡಿಮೆ ಆಗಿದೆ. ಶೂನ್ಯಕ್ಕೆ ತರುವುದು ನಮ್ಮ ಗುರಿ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

'ರಾಜ್ಯದಲ್ಲಿ ಈಗ ಪ್ರತಿ 1 ಲಕ್ಷಕ್ಕೆ 60 ಮಂದಿ ತಾಯಂದಿರ ಸಾವು ಸಂಭವಿಸುತ್ತಿದೆ. ನೆರೆಯ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳಕ್ಕೆ ಹೋಲಿಸಿದರೆ, ನಮ್ಮ ರಾಜ್ಯದಲ್ಲಿ ಸಾವಿನ ಸಂಖ್ಯೆ ಹೆಚ್ಚು ಇದೆ. ಇದನ್ನು ಮೊದಲ ಹಂತದಲ್ಲಿ 40ಕ್ಕೆ ಇಳಿಸಿ, ಬಳಿಕ ಶೂನ್ಯಕ್ಕೆ ತರುವುದು ನಮ್ಮ ಉದ್ದೇಶ. ಇದಕ್ಕೆ ಪೂರಕವಾಗಿ ಸಾವಿನ ಆಡಿಟ್ ನಡೆಸಲಾಗಿದೆ. ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಲಭ್ಯತೆ ಸೇರಿ ವಿವಿಧ ಲೋಪಗಳನ್ನು ಸರಿಪಡಿಸಲಾಗಿದೆ' ಎಂದು ದಿನೇಶ್ ತಿಳಿಸಿದರು.

8

ಮುಖ್ಯಾಂಶಗಳು

- ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ
- 24 ಗಂಟೆಯೂ ಪಾಳಿಗಳಲ್ಲಿ ತಜ್ಞ ವೈದ್ಯರ ಕಾರ್ಯನಿರ್ವಹಣೆ

ತಾಲ್ಲೂಕು ಆಸ್ಪತ್ರೆಗಳಲ್ಲಿ ಹೆರಿಗೆ ಪ್ರಮಾಣ


ತಿಂಗಳಲ್ಲಿ ಹೆರಿಗೆ ಪ್ರಮಾಣ	ಆಸ್ಪತ್ರೆಗಳ ಸಂಖ್ಯೆ
30ಕ್ಕಿಂತ ಕಡಿಮೆ	32
30-50	36
50-100	49
100-150	11
150-200	9
200ಕ್ಕೂ ಹೆಚ್ಚು	11

ಮಕ್ಕಳ ಕಾಡುತ್ತಿದೆ ಹೃದ್ರೋಗ

• ವರುಣ ಹೆಗಡೆ

ಬೆಂಗಳೂರು: ಜನ್ಮಜಾತವಾಗಿ ಹೃದಯ ಕಾಯಿಲೆ ಎದುರಿಸುತ್ತಿರುವ ಮಕ್ಕಳ ಸಂಖ್ಯೆ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಆರೋಗ್ಯ ಇಲಾಖೆಯು ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ (ಆರ್‌ಬಿಎಸ್‌ಕೆ) ನಡೆಸಿದ ತಪಾಸಣೆಯಲ್ಲಿ ಕಳೆದ ಒಂದೇ ವರ್ಷದಲ್ಲಿ 18,256 ಮಕ್ಕಳಲ್ಲಿ ಈ ಸಮಸ್ಯೆ ಪತ್ತೆಯಾಗಿದೆ.

8



'ರಂಧ್ರ, ಕವಾಟಗಳು ಕಿರಿದಾಗುವಿಕೆ'

'ಪ್ರತಿ ಸಾವಿರ ಶಿಶುಗಳಲ್ಲಿ 8ರಿಂದ 10 ಶಿಶುಗಳು ಜನ್ಮಜಾತ ಹೃದಯ ರೋಗಗಳನ್ನು ಹೊಂದಿರುತ್ತಾರೆ. ಅಂತಹವರಲ್ಲಿ ಸಾಮಾನ್ಯವಾಗಿ ಹೃದಯದಲ್ಲಿ ರಂಧ್ರವಾಗುವಿಕೆ ಅಥವಾ ಕವಾಟಗಳು ಕಿರಿದಾಗುವಿಕೆ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಈ ರೀತಿ ಸಮಸ್ಯೆ ಹೊಂದಿರುವವರಿಗೆ ಜ್ವರ, ಕೆಮ್ಮು, ನೆಗಡಿ, ಬೆಳವಣಿಗೆ ಕುಂಠಿತಗೊಳ್ಳುವಿಕೆ, ಚರ್ಮ ಮತ್ತು ಉಗುರು ನೀಲಿ ಬಣ್ಣಕ್ಕೆ ತಿರುಗುವುದು ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳಲಿವೆ' ಎಂದು ಜಯದೇವ ಹೃದ್ರೋಗ ಸಂಸ್ಥೆಯ ಹೃದ್ರೋಗ ತಜ್ಞರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ಮಕ್ಕಳಲ್ಲಿ ಹೃದಯ ಸಮಸ್ಯೆ ಕಾಣಿಸಿಕೊಳ್ಳಲು ಜನ್ಮಜಾತ ಕಾಯಿಲೆ, ವಂಶವಾಹಿಯಲ್ಲಿನ ಸಮಸ್ಯೆಯೇ ಕಾರಣ. ನಿಯಮಿತ ತಪಾಸಣೆಯಿಂದ ಹೆಚ್ಚಿನ ಪ್ರಕರಣ ಪತ್ತೆಯಾಗುತ್ತಿವೆ

ಡಾ.ಬಿ. ದಿನೇಶ್,

ನಿರ್ದೇಶಕ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ



ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆ ಮುಂಭಾಗದ ದೋಣಿ ವಿಹಾರ ಸ್ಥಳದಲ್ಲಿ ಪ್ರತಿಷ್ಠಾಪಿಸಿದ್ದ ಕಾವೇರಿ ಪ್ರತಿಮೆ ಮುಂಭಾಗ ವೈದಿಕರ ತಂಡವು ಶುಕ್ರವಾರ ಸಂಜೆ 'ಕಾವೇರಿ ಆರತಿ' ಬೆಳಗಿತು

ರೈತರ ವಿರೋಧದ ನಡುವೆಯೇ ನಡೆದ ಅದ್ದೂರಿ ಸಮಾರಂಭ

ಕಾವೇರಿ ಆರತಿಗೆ ಚಾಲನೆ

• ಸಿದ್ದು ಆರ್.ಜಿ.ಹಳ್ಳಿ

ಕೆಆರ್‌ಎಸ್ ಬೃಂದಾವನ (ಮಂಡ್ಯ ಜಿಲ್ಲೆ): ರೈತ ಸಂಘಟನೆಗಳ ತೀವ್ರ ಪ್ರತಿಭಟನೆ ನಡುವೆಯೂ 'ಗಂಗಾರತಿ' ಮಾದರಿಯ 'ಕಾವೇರಿ ಆರತಿ' ಕಾರ್ಯಕ್ರಮಕ್ಕೆ ಕೆಆರ್‌ಎಸ್ ಬೃಂದಾವನ ಉದ್ಯಾನದ ಅಂಗಳದಲ್ಲಿ ಶುಕ್ರವಾರ ಸಂಜೆ ಅದ್ದೂರಿ ಚಾಲನೆ ಸಿಕ್ಕಿತು.

ವಿಶೇಷ ವಿದ್ಯುದ್ದೀಪಗಳಿಂದ ಅಲಂಕೃತಗೊಂಡಿದ್ದ ಬೃಂದಾವನ ಅಂಗಳದಲ್ಲಿ ಸೇರಿದ್ದ ಸಾವಿರಾರು ಪ್ರವಾಸಿಗರು ಮತ್ತು ಜಿಲ್ಲೆಯ ಜನ ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಕೆಆರ್‌ಎಸ್ ಅಣೆಕಟ್ಟೆ ಸಮೀಪದ ದೋಣಿ ವಿಹಾರ ಸ್ಥಳದಲ್ಲಿ ಪ್ರತಿಷ್ಠಾಪಿಸಿದ್ದ ಕಾವೇರಿ ಮೂರ್ತಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆರತಿ ಬೆಳಗಿ ಕಾರ್ಯಕ್ರಮಕ್ಕೆ ಸಂಜೆ 7.15ಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ನಂತರ 'ಶಿಲಾಫಲಕ' ಅನಾವರಣಗೊಳಿಸಿದರು. ವೈದಿಕ ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ 50ಕ್ಕೂ ಹೆಚ್ಚಿನ ವೈದಿಕರ ತಂಡ ಮಂತ್ರಘೋಷ ಮೊಳಗಿಸಿತು.

ನಂತರ ಮಾತನಾಡಿದ ಶಿವಕುಮಾರ್, 'ಇದು ಐತಿಹಾಸಿಕ ಕಾರ್ಯಕ್ರಮ. ಸ್ಟೇಡಿಯಂ ಮಾದರಿಯ ಆಸನಗಳನ್ನು ನಿರ್ಮಿಸಿ, 10 ಸಾವಿರ ಮಂದಿ ಆರತಿ ವೀಕ್ಷಿಸುವಂಥ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಿದ್ದೆವು. ಕೆಲವು ತೊಡಕುಗಳಿಂದ ಸಾಧ್ಯವಾಗಲಿಲ್ಲ. ಹೀಗಾಗಿ ಸಾಂಕೇತಿಕ ಕಾರ್ಯಕ್ರಮ ಹಮ್ಮಿಕೊಂಡೆವು' ಎಂದರು.

4B

ರೈತರ ಬಂಧನ

ಕೆ.ಆರ್.ಎಸ್ (ಮಂಡ್ಯ ಜಿಲ್ಲೆ): ಕಪ್ಪುಪಟ್ಟಿ ಧರಿಸಿ 'ಕಾವೇರಿ ಆರತಿ' ವಿರೋಧಿಸಿ ಅಣೆಕಟ್ಟೆಯ ಸೌತ್ ಗೇಟ್ ಬಳಿ ಪ್ರತಿಭಟಿಸುತ್ತಿದ್ದ ವಿವಿಧ ಸಂಘಟನೆಗಳ ನೂರಾರು ಮುಖಂಡರನ್ನು, ಡಿಸಿಎಂ ಡಿ.ಕೆ.ಶಿವಕುಮಾರ್ ಕಾರ್ಯಕ್ರಮಕ್ಕೆ ಬರುವ ಮುನ್ನವೇ ಪೊಲೀಸರು ಬಂಧಿಸಿದರು.

4B

ಚಿನಕುರುಳಿ ಪ್ರಕಾಶ್ ಶೆಟ್ಟಿ



ಔಷಧಕ್ಕೂ ಶೇ 100 ಸುಂಕ ಹೇರಿದ ಟ್ರಂಪ್

ವಾಷಿಂಗ್ಟನ್ (ಎಪಿ): ಅಮೆರಿಕವು ಆಮದು ಮಾಡಿಕೊಳ್ಳುವ ಔಷಧಗಳ ಮೇಲೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶೇ 100ರಷ್ಟು ಸುಂಕ ವಿಧಿಸಿದ್ದಾರೆ.




ಪರಿಷ್ಕೃತ ತೆರಿಗೆ ದರವು ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ.

ಔಷಧದ ಜತೆಗೆ, ಕಿಚನ್ ಕ್ಯಾಬಿನೆಟ್ ಮತ್ತು ಸ್ನಾನಗೃಹ ಉಪಕರಣಗಳ ಮೇಲೆ ಶೇ 50, ಮೆತ್ತನೆಯ ಹಾಸಿಗೆ, ಸೋಫಾಸೆಟ್, ಪೀಠೋಪಕರಣಗಳ ಮೇಲೆ ಶೇ 30 ಮತ್ತು ಭಾರಿ ಟ್ರಕ್‌ಗಳ ಮೇಲೆ ಶೇ 25ರಷ್ಟು ಆಮದು ಸುಂಕ ಹೇರುವುದಾಗಿ ಟ್ರಂಪ್ ಹೇಳಿದ್ದಾರೆ.

ಆಮದು ತೆರಿಗೆ ಹೆಚ್ಚಳವು ಸರ್ಕಾರದ ಬಜೆಟ್ ಹೊರೆಯನ್ನು ತಗ್ಗಿಸಲಿದೆ ಮತ್ತು ದೇಶೀಯ ತಯಾರಿಕೆಯನ್ನು ಹೆಚ್ಚಿಸಲಿದೆ ಎಂದು ಟ್ರಂಪ್ ತಮ್ಮ ಸಾಮಾಜಿಕ ಜಾಲತಾಣ 'ಟ್ರೂತ್'ನಲ್ಲಿ ಹೇಳಿದ್ದಾರೆ.

ಸುಂಕ ಏರಿಕೆಗೆ ಟ್ರಂಪ್ ಕಾನೂನು ಸಮರ್ಥನೆಯನ್ನು ನೀಡಿಲ್ಲ. ಆದರೆ, ರಾಷ್ಟ್ರೀಯ ಭದ್ರತೆ ಮತ್ತಿತರ ಕಾರಣಗಳಿಗಾಗಿ ಸುಂಕ ಏರಿಕೆ ಮಾಡುತ್ತಿರುವುದಾಗಿ ಹೇಳಿದ್ದಾರೆ.



ಡೊನಾಲ್ಡ್ ಟ್ರಂಪ್

6

ಆರ್ಥಿಕ ಅನಿಶ್ಚಿತತೆಯ ಸೂಚನೆ

ಆಮದು ಸುಂಕ ಏರಿಕೆಯು ಅಮೆರಿಕದ ಆರ್ಥಿಕ ಅನಿಶ್ಚಿತತೆಯ ಮತ್ತೊಂದು ಸೂಚನೆಯಾಗಿದೆ. ಸುಭದ್ರವಾದ ಷೇರು ಮಾರುಕಟ್ಟೆ ಇದ್ದರೂ ಉದ್ಯೋಗ ಕಡಿತ ಮತ್ತು ಹಣದುಬ್ಬರ ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ. ಆಮದು ಸುಂಕದ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡಬಹುದು ಎಂಬ ವಿಶ್ಲೇಷಣೆಗಳು ನಡೆಯುತ್ತಿವೆ.

'ಸುಂಕ ಮತ್ತು ಸರಕುಗಳ ಬೆಲೆ ಏರಿಕೆಯಿಂದ ಇತ್ತೀಚಿನ ವರ್ಷಗಳಲ್ಲಿ ಹಣದುಬ್ಬರ ಹೆಚ್ಚುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ' ಎಂದು ಫೆಡರಲ್ ರಿಸರ್ವ್‌ನ ಅಧ್ಯಕ್ಷ ಜೆರೋಮ್ ಪೊವೆಲ್ ಇತ್ತೀಚೆಗೆ ಎಚ್ಚರಿಕೆ ನೀಡಿದ್ದರು. ಆದರೆ, ಟ್ರಂಪ್ ಅವರು ಪೊವೆಲ್ ಅವರ ರಾಜೀನಾಮೆಗೆ ಒತ್ತಡ ಹೇರಿದ್ದರು.

'ಅಮೆರಿಕದಲ್ಲಿ ಯಾವುದೇ ಹಣದುಬ್ಬರ ಇಲ್ಲ. ನಾವು ನಂಬಲಾಗದ ಯಶಸ್ಸನ್ನು ಕಂಡಿದ್ದೇವೆ' ಎಂದು ಟ್ರಂಪ್ ಹೇಳಿದ್ದಾರೆ.

ಶಾಸಕ ವಿಶ್ವಾಸ್ ಸೇರಿ 11 ಮಂದಿಗೆ ಉಪಾಧ್ಯಕ್ಷ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗಮ–ಮಂಡಳಿಗಳ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನದ ಮತ್ತೊಂದು ಪಟ್ಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದನೆ ನೀಡಿದ್ದಾರೆ.

ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ಕಳುಹಿಸಿರುವ ಮುಖ್ಯಮಂತ್ರಿ, ಈ ಕುರಿತು ಆದೇಶ ಹೊರಡಿಸುವಂತೆ ಸೂಚಿಸಿದ್ದಾರೆ.

ಸವದತ್ತಿ–ಯಲ್ಲಮ್ಮ ಕ್ಷೇತ್ರದ ಶಾಸಕ ವಿಶ್ವಾಸ್ ವಸಂತ ವೈದ್ಯ ಅವರನ್ನು ರೇಣುಕಾ ಯಲ್ಲಮ್ಮ ದೇವಸ್ಥಾನದ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಅವರನ್ನು ನ್ಯಾಷನಲ್ ಮಿಲಿಟರಿ ಮೆಮೋರಿಯಲ್ ಮ್ಯಾನೇಜ್‌ಮೆಂಟ್ ಟ್ರಸ್ಟ್‌ನ ಉಪಾಧ್ಯಕ್ಷ ಹಾಗೂ ಐಶ್ವರ್ಯಾ ಮಹಾದೇವ ಅವರಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಹುದ್ದೆಗೆ ನೇಮಕ ಮಾಡುವಂತೆ ಶಿಫಾರಸು ಮಾಡಲಾಗಿದೆ.

ನ್ಯಾಷನಲ್ ಮಿಲಿಟರಿ ಮೆಮೋರಿಯಲ್ ಮ್ಯಾನೇಜ್‌ಮೆಂಟ್ ಟ್ರಸ್ಟ್‌ಗೆ ಏರ್‌ವೈಸ್ ಮಾರ್ಷಲ್ ಅಜೀಜ್ ಜಾವೀದ್, ಲೆಫ್ಟಿನೆಂಟರ್ ಜನರಲ್ ಬಿ.ಎನ್.ಬಿ.ಎಂ.ಪ್ರಸಾದ್, ಕರ್ನಲ್ ಮಲ್ಲಿಕಾರ್ಜುನ ಟಿ ನಿರುಪಾ ಮಾದಪ್ಪ ಮತ್ತು ರೀನಾ ಮುತ್ತಣ್ಣ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

4B

ಕಿದ್ವಾಯಿ ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಸೂಚನೆ

ಖಾಸಗಿ ಔಷಧ ಅಂಗಡಿಗಳಲ್ಲಿ ಔಷಧ ಖರೀದಿಸುವಂತೆ ಸೂಚಿಸಿದ್ದ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಲೋಕಾಯುಕ್ತರ ದಿಢೀರ್ ಭೇಟಿ ವೇಳೆ ಹಲವು ಅಕ್ರಮಗಳು ಪತ್ತೆ
- ಪ್ರಕರಣ ದಾಖಲಿಸಿ, ತನಿಖೆ ನಡೆಸುವಂತೆ ಸೂಚನೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯ ಕೆಲ ಸಿಬ್ಬಂದಿಯು ಇಂಥದ್ದೇ ಅಂಗಡಿಗಳಲ್ಲಿ, ಔಷಧಗಳನ್ನು ತೆಗೆದುಕೊಳ್ಳಿ ಎಂದು ರೋಗಿಗಳಿಗೆ ಚೀಟಿ ಬರೆದುಕೊಡುತ್ತಿದ್ದು, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರ ಭೇಟಿ ವೇಳೆ ಪತ್ತೆಯಾಗಿದೆ.

ಅಂತಹ ಸಿಬ್ಬಂದಿ ವಿರುದ್ಧ ತಕ್ಷಣ ಕ್ರಮ ತೆಗೆದುಕೊಳ್ಳಿ ಎಂದು ಆಸ್ಪತ್ರೆ ನಿರ್ದೇಶಕರಿಗೆ ಲೋಕಾಯುಕ್ತರು ಸೂಚಿಸಿದ್ದಾರೆ.

ಆಸ್ಪತ್ರೆಯ ಔಷಧಾಲಯದಲ್ಲಿ ಔಷಧಗಳು ಲಭ್ಯ ಇರುವುದಿಲ್ಲ, ರೋಗಿಗಳನ್ನು ಕಾರಣವಿಲ್ಲದೆ ಅಲೆಸಲಾಗುತ್ತದೆ ಎಂದು ಆರೋಪಿಸಿ ಬರೆಯಲಾಗಿದ್ದ ಅನಾಮಧೇಯ ಪತ್ರದ ಆಧಾರದಲ್ಲಿ ಲೋಕಾಯುಕ್ತರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದರು. ಅದರ ಪರಿಶೀಲನೆಗಾಗಿ ಲೋಕಾಯುಕ್ತರು, ಲೋಕಾಯುಕ್ತದ ಅಧಿಕಾರಿಗಳ ಜತೆಗೆ ಕಿದ್ವಾಯಿ ಆಸ್ಪತ್ರೆಗೆ ಶುಕ್ರವಾರ ದಿಢೀರ್ ಭೇಟಿ ನೀಡಿದರು.

ಈ ವೇಳೆ ಹಲವು ರೋಗಿಗಳನ್ನು ಭೇಟಿ ಮಾಡಿ, ಅವರಿಂದ ಮಾಹಿತಿ ಪಡೆದು ಕೊಂಡರು. ಆಸ್ಪತ್ರೆಗೆ ಹತ್ತಿರದ ಲಕ್ಕಸಂದ್ರ, ವಿಲ್ಸನ್‌ಗಾರ್ಡನ್‌ನಲ್ಲಿರುವ ಔಷಧದ ಅಂಗಡಿಗಳಲ್ಲೇ ಔಷಧ ತೆಗೆದುಕೊಳ್ಳಿ ಎಂದು ಕೆಲ ಸಿಬ್ಬಂದಿಯು ವಿಳಾಸ ಮತ್ತು ಮೊಬೈಲ್ ಸಂಖ್ಯೆ ಸಮೇತ ಬರೆದುಕೊಟ್ಟಿದ್ದ ಚೀಟಿಗಳನ್ನು ರೋಗಿಗಳು ಲೋಕಾಯುಕ್ತರಿಗೆ ತೋರಿಸಿದರು.

ಆಸ್ಪತ್ರೆ ಅಧಿಕಾರಿಗಳನ್ನು ಈ ಬಗ್ಗೆ ಪ್ರಶ್ನಿಸಿದರು. 'ಈ ಔಷಧಗಳ ದಾಸ್ತಾನು ಮುಗಿದಿದ್ದು, ಪೂರೈಕೆಗೆ ಟೆಂಡರ್ ಕರೆಯುವ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದು ಅಧಿಕಾರಿಗಳು ತಿಳಿಸಿದರು. ಈ ಉತ್ತರದಿಂದ ತೃಪ್ತರಾಗದ ಲೋಕಾಯುಕ್ತರು, 'ಚೀಟಿ ಬರೆದುಕೊಟ್ಟ ಸಿಬ್ಬಂದಿ ವಿರುದ್ಧ ಕ್ರಮ ತೆಗೆದುಕೊಳ್ಳಿ' ಎಂದು ನಿರ್ದೇಶನ ನೀಡಿದರು.

'ಪ್ರಕರಣ ದಾಖಲಿಸಿಕೊಂಡು, ಶೋಧ ವಾರಂಟ್ ಹೊರಡಿಸಿ. ಆಸ್ಪತ್ರೆಯ ಎಲ್ಲ ವಿಭಾಗಗಳಲ್ಲಿ ಶೋಧ ನಡೆಸಿ, ವರದಿ ನೀಡಿ' ಎಂದು ಲೋಕಾಯುಕ್ತ ಪೊಲೀಸರಿಗೆ ಸೂಚನೆ ನೀಡಿದರು.



ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ರೋಗಿಗಳಿಂದ ಮಾಹಿತಿ ಪಡೆದುಕೊಂಡರು

ಟೌನ್‌ಶಿಪ್ ಕೈಬಿಡಲು ಆಗ್ರಹ

ಚನ್ನಪಟ್ಟಣ: ಬಿಡದಿ ಬಳಿ ಸರ್ಕಾರ ನಿರ್ಮಿಸಲು ಉದ್ದೇಶಿಸಿರುವ ಟೌನ್‌ಶಿಪ್ ಅನ್ನು ಕೂಡಲೇ ಕೈಬಿಡಬೇಕು ಎಂದು ಒತ್ತಾಯಿಸಿ ರಾಜ್ಯ ರೈತಸಂಘ ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಶುಕ್ರವಾರ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ತಾಲ್ಲೂಕು ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಪ್ರತಿಭಟನಕಾರರು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಊರಿನತ್ತ ಜನ: ಸಂಚಾರ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವರಾತ್ರಿ ಉತ್ಸವ ಹಾಗೂ ಶಾಲಾ ಮಕ್ಕಳಿಗೆ ದಸರಾ ರಜೆ ಘೋಷಣೆಯ ಹಿನ್ನೆಲೆಯಲ್ಲಿ ಊರಿನತ್ತ ಜನರು ಮುಖ ಮಾಡಿದ್ದು, ಪ್ರಮುಖ ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿದೆ.

ಮೈಸೂರು–ಬೆಂಗಳೂರು ರಸ್ತೆಯ ಕೆಂಗೇರಿ ಬಳಿ ವಾಹನಗಳು ಸಾಲು ಗಟ್ಟಿ ನಿಂತಿದ್ದು, ಸವಾರರು ಪರದಾಡಿದರು. ಅದೇ ಪರಿಸ್ಥಿತಿ ಬಳ್ಳಾರಿ ರಸ್ತೆ, ತುಮಕೂರು ರಸ್ತೆಯಲ್ಲಿಯೂ ಕಂಡು ಬಂತು.

ಸ್ವಂತ ವಾಹನ, ಕ್ಯಾಬ್‌ಗಳು ಹಾಗೂ ಸಾರ್ವಜನಿಕ ಸಾರಿಗೆಯಲ್ಲಿ ಜನರು ದೂರದ ಊರಿಗೆ ಪ್ರಯಾಣಿಸಿದರು. ವಾಹನ ದಟ್ಟಣೆ ಪರಿಹರಿಸಲು ಪೊಲೀಸರು ಹರಸಹಾಸಪಟ್ಟರು.

ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್. ಪುರ, ಹೆಬ್ಬಾಳ ರಸ್ತೆ, ಜಾಲಹಳ್ಳಿ ಕ್ರಾಸ್, ಎಂಟನೇ ಮೈಲಿ, ನಾಗಸಂದ್ರ, ನೆಲಮಂಗಲ, ಹೊರವರ್ತುಲ ರಸ್ತೆಯಲ್ಲೂ ವಿಪರೀತ ದಟ್ಟಣೆ ಕಂಡು ಬಂತು.

ಶುಕ್ರವಾರ ರಾತ್ರಿ ಸಾವಿರಾರು ಪ್ರಯಾಣಿಕರು ಬಂದ ಕಾರಣ ಮೆಜೆಸ್ಟಿಕ್‌ನಲ್ಲಿ ಬಸ್‌ಗಳ ಕೊರತೆ ಉಂಟಾಗಿ, ದೂರದ ಊರಿಗೆ ಹೋಗುವ ಪ್ರಯಾಣಿಕರು ಪರದಾಡಿದರು.

ದಸರಾ ಮಹೋತ್ಸವ, ಶಾಲಾ, ಕಾಲೇಜುಗಳಿಗೆ ರಜೆ ಇರುವುದರಿಂದ ಪ್ರವಾಸ ಹೋಗುವವರ ಸಂಖ್ಯೆ ಹೆಚ್ಚಾಗಿದ್ದು, ಕೆಎಸ್‌ಆರ್‌ಟಿಸಿ ಹೆಚ್ಚುವರಿ ಬಸ್‌ಗಳನ್ನು ರಸ್ತೆಗಿಳಿಸಿದೆ. ಆದರೂ ಬಸ್‌ಗಳ ಕೊರತೆ ಎದುರಾಗಿತ್ತು.

ಬೆಂಗಳೂರಿನಿಂದ ರಾಜ್ಯದ ವಿವಿಧ ಪ್ರದೇಶಗಳಿಗೆ ಹಾಗೂ ಅ.2, 5ರಂದು ವಿವಿಧ ಪ್ರದೇಶಗಳಿಂದ ಬೆಂಗಳೂರಿಗೆ ಈ ವಿಶೇಷ ಬಸ್‌ಗಳ ಸಂಚಾರ ಇರಲಿದೆ.

ಕರ್ನಾಟಕ ಸಾರಿಗೆ (ವೇಗದೂತ), ರಾಜಹಂಸ, ಸ್ಲೀಪರ್, ಐರಾವತ, ಐರಾವತ ಕ್ಲಬ್ ಕ್ಲಾಸ್ (ಮಲ್ಟಿ ಆಕ್ಸಲ್) ಇ.ವಿ ಪವರ್ ಪ್ಲಸ್, ಅಂಬಾರಿ ಕ್ಲಬ್ ಕ್ಲಾಸ್, ಅಂಬಾರಿ ಉತ್ಸವ್, ಪಲ್ಲಕ್ಕಿ ಸಾರಿಗೆ ಸೇವೆಗಳ ಜೊತೆಗೆ ಹೆಚ್ಚುವರಿ ಬಸ್‌ಗಳ ಸಂಚಾರ ಇರಲಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯು ಯಾವುದೇ ಲೋಪದೋಷಗಳಿಲ್ಲದಂತೆ ನಡೆಸಬೇಕು ಎಂದು ಬೆಂಗಳೂರು ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2025 ಕುರಿತು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜೊತೆ ನಡೆದ ಸಭೆಯಲ್ಲಿ ಮಾತನಾಡಿದರು.

ಬೆಂಗಳೂರು ಜಿಲ್ಲೆಯಾದ್ಯಂತ ಒಟ್ಟು 8,972 ಮತಗಟ್ಟೆ ಕೇಂದ್ರಗಳ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ನಡೆಸಲಾಗುತ್ತಿದೆ. ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಬರುವ ದೂರುಗಳಿಗೆ ಶೀಘ್ರ ಸ್ಪಂದಿಸಬೇಕು. ರಾಜಕೀಯ ಪಕ್ಷಗಳು ಕೇಳುವ ಮಾಹಿತಿಯನ್ನು ಕೂಡಲೇ ನೀಡಬೇಕು. ಯಾವುದೇ ನ್ಯೂನತೆಗಳಿಲ್ಲದಂತೆ ಪರಿಷ್ಕರಣೆ ಕಾರ್ಯವನ್ನು ನಡೆಸಲು ಸೂಚನೆ ನೀಡಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕಣೆಯನ್ನು ನಡೆಸುವ ಬೂತ್ ಮಟ್ಟದ ಅಧಿಕಾರಿಗಳು ರಜಾ ದಿನಗಳಲ್ಲೂ ಕೆಲಸ ಮಾಡಬೇಕು. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮತ್ತು ಈ ಸಂಬಂಧ ಬೂತ್ ಮಟ್ಟದ ಏಜೆಂಟ್‌ಗಳನ್ನು ನೇಮಿಸಲು ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಕೋರಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್, ವಿಶೇಷ ಸಮಗ್ರ ಪರಿಷ್ಕರಣೆ ಕುರಿತಂತೆ ಸಾಂವಿಧಾನಿಕ ನಿಯಮಗಳು, ಶಾಸನಾತ್ಮಕ ನಿಯಮಗಳು, ವಿಶೇಷ ಸಮಗ್ರ ಪರಿಷ್ಕರಣೆಯ ಇತಿಹಾಸ, ವಿಶೇಷ ಉದ್ದೇಶಿತ ಪರಿಷ್ಕರಣೆ, ವಿಶೇಷ ಸಾರಾಂಶ ಪರಿಷ್ಕರಣೆಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ವಿಶೇಷ ಶಿಬಿರ ನಡೆಸಲಾಗುವುದು. 15 ದಿನಕ್ಕೊಮ್ಮೆ ಸಭೆ ನಡೆಸಿ ಅಗತ್ಯ ಮಾಹಿತಿ ನೀಡಲಾಗುವುದು. ಅದಲ್ಲದೆ ನಾಗರಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಸಾಮಾಜಿನ ಜಾಲತಾನದಲ್ಲಿ ಕಿರು ಚಿತ್ರ, ಪೋಸ್ಟರ್‌ಗಳನ್ನು ಸಿದ್ಧಪಡಿಸಲಾಗುವುದೆಂದು ಮಾಹಿತಿ ನೀಡಲಾಗುವುದು ಎಂದು ಹೇಳಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ಸಾಧಾರಣ ಮಳೆ ಸಾಧ್ಯತೆ

ಹಳೆ ವಿದ್ಯಾರ್ಥಿಗಳ ಸಮಾಗಮ



ಶಿವಮೊಗ್ಗದ ಮೇರಿ ಇಮ್ಯಾಕ್ಯುಲೇಟ್ ಗರ್ಲ್ಸ್ ಹೈಸ್ಕೂಲ್‌ನ 1978ನೇ ಬ್ಯಾಚ್‌ನವರು ಇದೇ 24ರಂದು ಮೊದಲ ಬಾರಿಗೆ ಪುನರ್ ಸಮಾಗಮಗೊಂಡರು. (ಮುಂದೆ ಕುಳಿತವರು ಎಡದಿಂದ) ಮಾಲತಿ ಬಿ. ರಾವ್, ಕಮಲೇಶ್ವರಿ, ಭುವನಾ ಮುರಳಿ, ಉಷಾ ವೆಂಕಟೇಶ್, ಲತಾ ಇಕ್ಕೇರಿ ನಿಂಗಪ್ಪ, ತೇಜಾ ನಾಗೇಶ್, (ಮಧ್ಯದಲ್ಲಿ ಕುಳಿತವರು ಎಡದಿಂದ) ಶಾಲಿನಿ ವಿ., ಶಾರದಾ ನಾಗೇಂದ್ರಪ್ಪ, ವೀಣಾ ಎಸ್.ಆರ್., ಶ್ಯಾಮಲಾ ಸಂಧ್ಯಾ ಎಸ್. ಭಟ್, ಪದ್ಮಾ ಸುಬ್ರಹ್ಮಣ್ಯ, (ನಿಂತಿರುವವರು ಎಡದಿಂದ) ಮಮತಾ ನಾಗೇಶ್, ಭಾಗ್ಯಲಕ್ಷ್ಮಿ ಡಿ.ಎಸ್., ಸುಧಾ ವಿಶ್ವೇಶ್ವರ, ಕವಿತಾ ವೆಂಕಟೇಶ್, ಹೆಲೆನ್ ಕ್ವಾಡ್ರೋಸ್, ಶಶಿಕಲಾ, ಮಾನಸಾ ಗುಬ್ಬಿವಾಣಿ, ಶೈಲಾ ದೇವದತ್ತ, ಪ್ರವೀಣಾ ಗುಲ್ವಾಡಿ, ಉಷಾ ಹಾರನಹಳ್ಳಿ, ಆಯೇಷಾ ಸುಲ್ತಾನ್, ಸುಜಾತಾ ತಿಲಕ್ ಕುಮಾರ್, ಸುಮನಾ ಯಾದಲಂ, ಕಲ್ಪನಾ ಶ್ರೀನಿವಾಸ್ ಮತ್ತು ನಿರ್ಮಲಾ ಗೌಡರ ಉಪಸ್ಥಿತರಿದ್ದರು

ಕಾನೂನು ಸೇವಾ ಕ್ಲಿನಿಕ್ ಒಪ್ಪಂದ ವಿಸ್ತರಣೆ

ಬೆಂಗಳೂರು: ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಮತ್ತು ಕ್ರೈಸ್ಟ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಲಾ ಜಂಟಿಯಾಗಿ ಕಾನೂನು ಸೇವಾ ಕ್ಲಿನಿಕ್ ಬಲಪಡಿಸಲು ಒಪ್ಪಂದವನ್ನು 10 ವರ್ಷ ಕಾಲ ನವೀಕರಿಸಿವೆ.

ಕ್ರೈಸ್ಟ್ ವಿಶ್ವವಿದ್ಯಾಲಯದ ಸೆಂಟ್ರಲ್ ಕ್ಯಾಂಪಸ್‌ನಲ್ಲಿ ಬುಧವಾರ ಒಪ್ಪಂದ ನವೀಕರಣ ಸಮಾರಂಭ ನಡೆಯಿತು.

ಕಾನೂನು ಸೇವಾ ಪ್ರಾಧಿಕಾರದ ಬೆಂಗಳೂರು ನಗರ ಜಿಲ್ಲಾ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ ಶೆಟ್ಟಿ, ಕಾನೂನು ಸೇವಾ ಕ್ಲಿನಿಕ್ ಸಂಯೋಜಕರಾದ ಎಚ್.ಎಲ್. ಜಯಂತಿ ಬಾಯಿ ಮಾತನಾಡಿದರು. ಕಾರ್ಯಕ್ರಮದಲ್ಲಿ ರಿಜಿಸ್ಟ್ರಾರ್ ಅನಿಲ್ ಜೋಸೆಫ್ ಪಿಂಟೊ, ಟಿ.ವಿ.ಥಾಮಸ್, ಎಸ್.ಸಪ್ನಾ, ಪಿ.ಶಿಬು, ಜಯದೇವ ಎಸ್.ನಾಯರ್ ಹಾಜರಿದ್ದರು.

ಆಹಾರ ಸಂಸ್ಕರಣೆ ಉದ್ದಿಮೆಗಳಿಗೆ ಸಹಾಯಧನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮ ಬದ್ಧಗೊಳಿಸುವಿಕೆ (ಪಿಎಂಎಫ್‌ಎಂಇ) ಯೋಜನೆಯಡಿ ಶೇ 35ರಷ್ಟು ಸಹಾಯಧನ ಅಂದರೆ ₹60.90 ಕೋಟಿ ಬಿಡುಗಡೆ ಮಾಡಲಾಗಿದೆ.

ಸೆ.28ರವರೆಗೆ ನವದೆಹಲಿಯಲ್ಲಿ ನಡೆಯಲಿರುವ ವರ್ಲ್ಡ್ ಫುಡ್ ಇಂಡಿಯಾ 2025 ವ್ಯಾಪಾರ ಮೇಳದ ಭಾಗವಾಗಿ ಸಹಾಯಧನವನ್ನು 1,642 ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ.

ಇದರಲ್ಲಿ ಕೇಂದ್ರದ ಪಾಲು ₹ 36.54 ಕೋಟಿ ಹಾಗೂ ರಾಜ್ಯದ ಪಾಲು ₹ 24.36 ಕೋಟಿ ಆಗಿರಲಿದೆ. ಹಾಗೆಯೇ ರಾಜ್ಯ ಸರ್ಕಾರದಿಂದ ₹ 27.17 ಕೋಟಿ ಹೆಚ್ಚುವರಿ ಟಾಪ್-ಅಪ್ ಅನುದಾನವನ್ನು ಫಲಾನುಭವಿಗಳಿಗೆ ಶೀಘ್ರ ಬಿಡುಗಡೆ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ(ಕೆಪೆಕ್) ಅಧ್ಯಕ್ಷ ಬಿ.ಎಚ್.ಹರೀಶ್ ತಿಳಿಸಿದ್ದಾರೆ.

ಈ ಅನುದಾನ ಆಹಾರ ಸಂಸ್ಕರಣಾ ಕ್ಷೇತ್ರ ಉತ್ತೇಜಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರ ಕೈಗೊಂಡಿರುವ ಮಹತ್ವದ ಹೆಜ್ಜೆಯಾಗಿದೆ ಎಂದು ತಿಳಿಸಿದ್ದಾರೆ.

ಹೊಸಕೆರೆ ಕೆರೆ ಒಡಲಿಗೆ ತ್ಯಾಜ್ಯ

ಕಪ್ಪು ಬಣ್ಣಕ್ಕೆ ತಿರುಗಿದ ನೀರು
• ದುರ್ವಾಸನೆಯಿಂದ ನಾಗರಿಕರಿಗೆ ಸಂಕಷ್ಟ

• ಚಿಕ್ಕರಾಮು

ರಾಜರಾಜೇಶ್ವರಿ ನಗರ: ಉಲ್ಲಾಳು ವಾರ್ಡ್‌ನ ಗಾಂಧಿ ನಗರ ಹೊಸಕೆರೆ ಕೆರೆಗೆ ಕಸ, ಪ್ಲಾಸ್ಟಿಕ್ ತ್ಯಾಜ್ಯ ಸೇರಿ ಕೆರೆಯ ನೀರು ಮಲಿನಗೊಂಡು, ಕಪ್ಪು ಬಣ್ಣಕ್ಕೆ ತಿರುಗಿದೆ.

ಅತಿಯಾದ ತ್ಯಾಜ್ಯದ ಕಾರಣ ದುರ್ವಾಸನೆ ಬೀರುತ್ತಿದ್ದು, ಸುತ್ತಮುತ್ತಲಿನ ಜನ ಜೀವನ ಸಾಗಿಸುವುದು ದುಸ್ತರವಾಗಿದೆ. ಕೆರೆ ಸುತ್ತಮುತ್ತ ವಾಸಿಸುವ ನಾಗರಿಕರು ಮೂಗು ಮುಚ್ಚಿ ಓಡಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ರಾತ್ರಿ ವೇಳೆ ಲಾರಿಗಳಲ್ಲಿ ತಂದು ಕೆರೆಯ ಒಡಲು, ಬದಿ ಹಾಗೂ ಏರಿ ಮೇಲೆ ತ್ಯಾಜ್ಯವನ್ನು ಸುರಿದು ಹೋಗಲಾಗುತ್ತಿದೆ. ಈ ಬಗ್ಗೆ ಬಿಡಿಎ, ಜಿಬಿಎ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ನಿಯಂತ್ರಿಸಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಕೆರೆ ಸಮೀಪವಿರುವ ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ, ಜ್ಞಾನಭಾರತಿ ಬಡಾವಣೆ, ಗಾಂಧಿನಗರ ನಿವಾಸಿಗಳು ಕೆಟ್ಟ ವಾಸನೆಯಿಂದ ಮನೆ ಕಿಟಕಿ, ಬಾಗಿಲುಗಳನ್ನು ಮುಚ್ಚಿಕೊಂಡೇ ಇರುವಂತಾಗಿದೆ.

‘ಗಾಳಿ ಬೀಸಿದಾಗ ದುರ್ವಾಸನೆಯಿಂದ ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿದೆ’ ಎಂದು ಸ್ಥಳೀಯ ನಿವಾಸಿಗಳು ಅಳಲು ತೋಡಿಕೊಂಡರು.

‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಕೆರೆ ಅಭಿವೃದ್ಧಿಪಡಿಸಿದೆ. ಆದರೆ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿಲ್ಲ. ಜೋರು ಮಳೆ ಸುರಿದಾಗ ಮಲ್ಲತ್ತಹಳ್ಳಿ, ಮರಿಯಪ್ಪನ ಪಾಳ್ಯ, ಪಾಪರೆಡ್ಡಿಪಾಳ್ಯ, ಡಿ ಗ್ರೂಪ್ ಲೇಔಟ್, ಭುವನೇಶ್ವರಿ ನಗರ, ಉಲ್ಲಾಳು, ಮಾರುತಿನಗರ, ದೊಡ್ಡಗೊಲ್ಲರಹಟ್ಟಿ ಸುತ್ತಮುತ್ತಲಿನ ಬಡಾವಣೆಗಳ ಒಳ ಚರಂಡಿ ನೀರು, ತ್ಯಾಜ್ಯ ಸಹ ಕೆರೆಗೆ ಸೇರುತ್ತಿದೆ. ಕೆರೆಯ ದಡ ಬಳಿಯೇ ವ್ಯಕ್ತಿಯೊಬ್ಬರು ನೂರಾರು ನಾಯಿಗಳನ್ನು ಸಾಕುತ್ತಿದ್ದಾರೆ. ಸತ್ತ ನಾಯಿಗಳನ್ನು ಕೆರೆಗೆ ಬಿಸಾಡುತ್ತಿದ್ದು, ಕೊಳೆತು ತೇಲುತ್ತಿವೆ.



ಕಪ್ಪು ಬಣ್ಣಕ್ಕೆ ತಿರುಗಿರುವ ನೀರು

‘ರಾತ್ರಿ ವೇಳೆ ಹೊಸಕೆರೆ ಕೆರೆಗೆ ಕೋಳಿ, ಕುರಿ, ಮೇಕೆ ತ್ಯಾಜ್ಯಗಳನ್ನು ಚೀಲಗಳಲ್ಲಿ ತಂದು ಸುರಿಯಲಾಗುತ್ತಿದೆ. ಕೆಲವರು ಕೆರೆ ಆವರಣ ಹಾಗೂ ರಸ್ತೆಗಳಲ್ಲೇ ಕೋಳಿ ತ್ಯಾಜ್ಯ ಸುರಿದು ಹೋಗುತ್ತಿದ್ದಾರೆ. ಈ ಬಗ್ಗೆ ಹಲವು ಬಾರಿ ಪಾಲಿಕೆಗೆ ದೂರು ನೀಡಿದರೂ ಕ್ರಮ ಕೈಗೊಂಡಿಲ್ಲ’ ಎಂದು ಸ್ಥಳೀಯರು ದೂರಿದರು.

ಸಾರ್ವಜನಿಕರ ಆಕ್ರೋಶ

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ ಮೊದಲನೇ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎನ್. ರಮೇಶ್ ಮಾತನಾಡಿ, ‘ಸುಮಾರು 54 ಎಕರೆ ವಿಸ್ತೀರ್ಣವಿದ್ದ ಕೆರೆಯನ್ನು ಒತ್ತುವರಿ ಮಾಡಿಕೊಂಡಿದ್ದು, 34 ಎಕರೆಗೆ ಕುಸಿದಿದೆ. ಕೆರೆಯಿಂದ ಬರುವ ದುರ್ನಾತ ಹಾಗೂ ಸುತ್ತಮುತ್ತಲ ಅಡ್ಡ ರಸ್ತೆಗಳಲ್ಲಿ ಮಾಂಸದ ತ್ಯಾಜ್ಯ ಸುರಿಯಲಾಗುತ್ತಿದೆ. ಇದರ ರುಚಿ ನೋಡಿರುವ ಬೀದಿ ನಾಯಿಗಳು ಮಕ್ಕಳ ಮೇಲೆ ದಾಳಿ ಮಾಡಿವೆ. ಕೆರೆಯ ಕಲುಷಿತ ನೀರನ್ನು ಕುಡಿದು ಪಕ್ಷಿಗಳು, ಜಲಚರಗಳು ಸಾವನ್ನಪ್ಪುತ್ತಿವೆ’ ಎಂದು ಆರೋಪಿಸಿದರು.

‘ಕೆರೆ ಅಭಿವೃದ್ಧಿಯಾಗಿದೆ. ಕೆರೆಯ ಏರಿ ಮೇಲೆ ವಾಯುವಿಹಾರ ಮಾಡಲು ಚೆನ್ನಾಗಿದೆ. ಕೆರೆಗೆ ತ್ಯಾಜ್ಯ ಮತ್ತು ಕಲುಷಿತ ನೀರು ಸೇರುವುದನ್ನು ಅಧಿಕಾರಿಗಳು ತಡೆಗಟ್ಟಬೇಕು’ ಎಂದು ಟೋಯೋಟಾ ಕಂಪನಿಯ ಉಪ ವ್ಯವಸ್ಥಾಪಕ ಡಿ. ಮನೋಜ್ ಕುಮಾರ್ ಹೇಳಿದರು.

‘ಡಬಲ್ ರಸ್ತೆಯ ಸೇತುವೆ ಬಳಿ ಕಬ್ಬಿಣದ ಮೆಷ್ ಅಳವಡಿಸಿದರೆ ಕೆರೆಗೆ ಮಳೆ ನೀರಿನ ಜೊತೆಗೆ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ಸೇರುವುದಿಲ್ಲ. ಮೇಕೆ, ಕುರಿ, ಕೋಳಿ, ಸತ್ತ ನಾಯಿಗಳನ್ನು ಕೆರೆಗೆ ಎಸೆಯದಂತೆ ಕ್ರಮ ತೆಗೆದುಕೊಂಡು ಕೆರೆ ಉಳಿಸಬೇಕು ಇಲ್ಲದಿದ್ದರೆ ಜಿಬಿಎ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ’ ಎಂದು ಸಾಮಾಜಿಕ ಕಾರ್ಯಕರ್ತ ಎನ್.ಸಿ. ಕುಮಾರ್ ಎಚ್ಚರಿಕೆ ನೀಡಿದರು.

ಬಿಜೆಪಿ ಮುಖಂಡ ಎನ್. ಕದಿರಪ್ಪ ಮಾತನಾಡಿ, ‘ಕೆರೆ ಒಡಲಿಗೆ ತ್ಯಾಜ್ಯ ಸೇರುವುದನ್ನು ತಡೆಗಟ್ಟಿ, ಕೆರೆ ಉಳಿಸಬೇಕು’ ಎಂದರು. ಜಿಬಿಎ (ಬಿಬಿಎಂಪಿ) ಕೆರೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಎಲ್. ಗೀತಾ ಮಾತನಾಡಿ, ‘ಮಳೆ ಬಂದಾಗ ಬೃಹತ್ ನೀರುಗಾಲುವೆಯಿಂದ ತ್ಯಾಜ್ಯ ಬರುತ್ತಿದೆ. ಅದನ್ನು ತೆರವುಗೊಳಿಸುವ ಕೆಲಸ ಮಾಡಲಾಗುತ್ತಿದೆ. ಕೆರೆಗೆ ಒಳಚರಂಡಿ ನೀರು ಸೇರದಂತೆ ಕ್ರಮ ತೆಗೆದುಕೊಳ್ಳಲಾಗಿದೆ’ ಎಂದರು.



ಕೆರೆಯ ಒಡಲಿಗೆ ತ್ಯಾಜ್ಯ ಸುರಿದಿರುವುದು





ದಸರಾ ಬೊಂಬೆಗಳ ಚಿತ್ರ ಕಳುಹಿಸಿ

ದಸರಾ ಹಬ್ಬದ ಪ್ರಯುಕ್ತ ಮನೆಗಳಲ್ಲಿ ಬೊಂಬೆಗಳನ್ನು ಪ್ರದರ್ಶನಕ್ಕೆ ಇಟ್ಟದ್ದರೆ ಅವುಗಳ ಫೋಟೊ ಕಳುಹಿಸಿ. ಆಯ್ದ ಚಿತ್ರಗಳನ್ನು ಪ್ರಕಟಿಸಲಾಗುವುದು.

ವಾಟ್ಸ್‌ಆ್ಯಪ್ ನಂಬರ್
9606038256



ಆನೇಕಲ್ ತಾಲ್ಲೂಕಿನ ಹುಲಿಮಂಗಲ ನಕ್ಷ ಗೋಕುಲ ಗ್ರೀನ್‌ಸಿಟಿ ಫಾರ್ಮ್‌ನಲ್ಲಿರುವ ರಾಮೋಜಿ ಗೌಡ ಮನೆಯಲ್ಲಿ ಮಂಜುಳಾ ಗೌಡ ಮತ್ತು ಅವರ ಮಗಳು ಹರ್ಷಿತಾ ಆರ್. ಗೌಡ ಜೋಡಿಸಿರುವ ಗೊಂಬೆಗಳು



ಶ್ರೀನಿವಾಸನಗರ ಬ್ಯಾಂಕ್ ಕಾಲೊನಿಯ ರೂಪಾ ಗಿರೀಶ ಅವರ ಮನೆಯ ಗೊಂಬೆಗಳು



ಬೆಳ್ಳಂದೂರು ದಿ ಸೆಂಟ್ರಲ್ ರೀಜೆನ್ಸಿಯ ಗಾಯತ್ರಿ ನಿಲಯದಲ್ಲಿ ಜೆ. ಸುದರ್ಶನ್, ವೃದ್ಧಿ, ಯುವಾಂಶ್ ಎಸ್., ರುಹಾನ್ ಎಸ್. ಜೋಡಿಸಿರುವ ಗೊಂಬೆಗಳೊಂದಿಗೆ ಕುಟುಂಬ



ವಿಜಯನಗರ ಸಂಕಲ್ಪ ಮೊಂಟೆಸ್ಸರಿ ಸ್ಕೂಲ್‌ನಲ್ಲಿ ದಸರಾ ಪ್ರಯುಕ್ತ ‘ಹಳ್ಳಿ ಆಟಗಳು’ ಘೋಷವಾಕ್ಯ ಇಟ್ಟುಕೊಂಡು ಜೋಡಿಸಿರುವ ಗೊಂಬೆಗಳು



ರಾಜಾಜಿನಗರದ ಬೀನಾ ಜೀವನ್ ಜೋಡಿಸಿರುವ ದಸರಾ ಗೊಂಬೆಗಳು



ಚಾಮರಾಜಪೇಟೆಯ ರೇಖಾ ಸುಂದರೇಶ್ ಜೋಡಿಸಿರುವ ಬೊಂಬೆಗಳು





ಮನಸೂರೆಗೊಂಡ ಯುವ ದಸರಾ

ಕೆಂಗೇರಿ: ಇಂದು ರಘು ದೀಕ್ಷಿತ್ ಸಂಗೀತ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಯಶವಂತಪುರ ಕ್ಷೇತ್ರದ ಕೆಂಗೇರಿಯ ಗಣೇಶ ಆಟದ ಮೈದಾನದಲ್ಲಿ ಆಯೋಜನೆಗೊಂಡಿದ್ದ ಯುವ ದಸರಾ ಜನರ ಮನಸೂರೆಗೊಂಡಿತು. ಕಾಲೇಜು ಯುವಕ ಯುವತಿಯರ ಮೈ ನವಿರೇಳಿಸುವ ನೃತ್ಯ, ಫ್ಯಾಷನ್ ಷೋ, ಎದೆ ಬಡಿತ ಹೆಚ್ಚಿಸುತ್ತಿದ್ದ ಸಂಗೀತದ ಅಬ್ಬರ ನೆರೆದಿದ್ದವರನ್ನು ನಿಂತಲ್ಲೇ ಕುಣಿಯುವಂತೆ ಮಾಡುವಲ್ಲಿ ಯಶಸ್ವಿಯಾಯಿತು.

ಕ್ಷೇತ್ರದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಜನ ಶಿಳ್ಳೆ ಚಪ್ಪಾಳೆ ಹಾಕಿ ಆನಂದಿಸಿದರು. ಎರಡು ದಿನ ಕಾರ್ಯಕ್ರಮ ಆಯೋಜನೆಗೊಂಡಿದ್ದು, ಶನಿವಾರ ಸಂಜೆ 5ಕ್ಕೆ ಖ್ಯಾತ ಹಾಡುಗಾರ ರಘು ದೀಕ್ಷಿತ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಂಸ್ಕೃತಿ, ಸೌಂದರ್ಯ ಹಾಗೂ ಸಾಮರ್ಥ್ಯದ ಪರಿಕಲ್ಪನೆಯೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ವಿವಿಧ ಕ್ಷೇತ್ರದ ಸಾಧಕರು ಕಾರ್ಯಕ್ರಮದ ತೀರ್ಪುಗಾರರಾಗಿ ಆಗಮಿಸಲಿದ್ದು, ಕಾರ್ಯಕ್ರಮದ ವಿಜೇತರನ್ನು ಆಯ್ಕೆ ಮಾಡಲಿದ್ದಾರೆ. ವಿಜೇತರಿಗೆ ಯುವರಾಣಿ ಆಫ್ ಯಶವಂತಪುರ ಕ್ಷೇತ್ರ, ಯುವರಾಜ ಆಫ್ ಯಶವಂತಪುರ ಕ್ಷೇತ್ರ ಎಂಬ ಬಿರುದಿನೊಂದಿಗೆ ನಗದು ಬಹುಮಾನ ನೀಡಲಾಗುವುದು ಎಂದು ಯಶವಂತಪುರ ಕ್ಷೇತ್ರ ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.



ಯುವ ದಸರಾದಲ್ಲಿ ಹಾಡೊಂದಕ್ಕೆ ಮಂಜು ಮಾಸ್ಟರ್ ಅವರೊಂದಿಗೆ ಶಾಸಕ ಎಸ್.ಟಿ.ಸೋಮಶೇಖರ್ ಹೆಜ್ಜೆ ಹಾಕಿದರು

ನಾಡದೇವಿ ಚಾಮುಂಡಿ, ಕ್ಷೇತ್ರ ಹಾಗೂ ಸಮಸ್ತ ರಾಜ್ಯದ ಜನರಿಗೆ ಒಳ್ಳೆಯದನ್ನು ಮಾಡಲಿ ಎಂದು ಹಾರೈಸಿದರು. ಇದೇ ವೇಳೆ ಮಂಜು ಮಾಸ್ಟರ್ ಅವರೊಂದಿಗೆ ಶಾಸಕ ಎಸ್.ಟಿ.ಸೋಮಶೇಖರ್ ಹೆಜ್ಜೆ ಹಾಕಿ, ನೆರೆದಿದ್ದವರನ್ನು ರಂಜಿಸಿದರು.

'ರಾಣಿ ಚನ್ನಮ್ಮ ಪಡೆ'ಗೆ ಚಾಲನೆ

ಸ್ವಯಂ ರಕ್ಷಣೆ ಕಲೆ ಕುರಿತು ಮಹಿಳಾ ಸಿಬ್ಬಂದಿ ಪ್ರಾತ್ಯಕ್ಷಿಕೆ

ಪ್ರಮುಖ ಅಂಶಗಳು
- 20 ಮಂದಿಯ ರಾಣಿ ಚನ್ನಮ್ಮ ಪಡೆ
- ಪಬ್ಲಿಕ್ ಔಟರೀಚ್ ಕಾರ್ಯಕ್ರಮದಡಿ ಶಾಲಾ, ಕಾಲೇಜಿನ ವಿದ್ಯಾರ್ಥಿನಿಯರಿಗೆ ತರಬೇತಿ: ಕಮಿಷನರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳು- ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಹಾಗೂ ಅಪರಾಧ ನಿಯಂತ್ರಣಕ್ಕಾಗಿ ರಚಿಸಿರುವ ಉತ್ತರ ವಿಭಾಗದ ಮಹಿಳಾ ಪೊಲೀಸರ 'ರಾಣಿ ಚನ್ನಮ್ಮ ಪಡೆ'ಗೆ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಮತ್ತು ನಟಿ ಸುಧಾರಾಣಿ ಚಾಲನೆ ನೀಡಿದರು.

ಮಲ್ಲೇಶ್ವರ 18ನೇ ರಸ್ತೆಯ ಮೈದಾನದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 20 ಮಂದಿಯ ರಾಣಿ ಚನ್ನಮ್ಮ ಪಡೆಗೆ ಹಸಿರು ಬಾವುಟ ತೋರಿಸಿದರು. ಪೊಲೀಸ್ ಸಿಬ್ಬಂದಿ ದ್ವಿಚಕ್ರ ವಾಹನದಲ್ಲಿ ಮೈದಾನ ಒಂದು ಸುತ್ತು ಹಾಕಿ, ಜಾಗೃತಿ ಮೂಡಿಸಿದರು. ಇವರೊಂದಿಗೆ ಒನಕೆ ಓಬವ್ವ ಪಡೆಯ ಮಹಿಳಾ ಸಿಬ್ಬಂದಿ ಸಹ ಸಾಗಿದರು.

ಬಳಿಕ ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜಿನಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಆತ್ಮರಕ್ಷಣೆ ಹಾಗೂ ಕಾನೂನುಗಳ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಲಾಯಿತು.

ಮಹಿಳೆಯರು ಅಪಾಯದಲ್ಲಿದ್ದ ಸಂದರ್ಭದಲ್ಲಿ ಸ್ವಯಂ ರಕ್ಷಣೆ ಕಲೆ ಬಳಸಿ ಪಾರಾಗುವುದರ ವಿಧಾನವನ್ನು ಪ್ರದರ್ಶಿಸಿದರು. ಹೆಣ್ಣು ಮಕ್ಕಳನ್ನು ಚುಡಾಯಿಸುವಾಗ, ಚಿನ್ನದ ಸರ ಕಿತ್ತುಕೊಳ್ಳಲು ಯತ್ನಿಸುವಾಗ, ಅಸಭ್ಯ ವರ್ತನೆ ಹಾಗೂ ಚಾಕುವಿನಿಂದ ದಾಳಿ ಮಾಡಲು ಯತ್ನಿಸುವ ಸಂದರ್ಭದಲ್ಲಿ ಯಾವ ರೀತಿ ರಕ್ಷಿಸಿಕೊಳ್ಳಬೇಕು ಎಂಬುದರ ಬಗ್ಗೆ ಮಹಿಳಾ ಸಿಬ್ಬಂದಿ ಗೌರಿ, ಶಿಲ್ಪಾ, ಅಶ್ವಿನಿ, ಕಾಂಚನಾ, ರುಕ್ಮಿಣಿ, ಗೀತಾ, ಪ್ರತಿಭಾ, ಶ್ರುತಿ, ನೇತ್ರಾ, ಶ್ರೀದೇವಿ ಪ್ರಾತ್ಯಕ್ಷಿಕೆ ನೀಡಿದರು.

'ಪ್ರತಿ ಠಾಣೆಯಲ್ಲೂ ಮೂರು ಮಹಿಳಾ ಸಿಬ್ಬಂದಿಗೆ ತರಬೇತಿ ನೀಡಲಾಗಿದ್ದು, ನಿಯಂತ್ರಣ ಕೊಠಡಿ ಹಾಗೂ ಸುರಕ್ಷಾ ಆ್ಯಪ್ ಮೂಲಕ ತುರ್ತು ಕರೆ ಮಾಡುವ ಮಹಿಳೆಯರಿಗೆ ಪಡೆಯ ಸಿಬ್ಬಂದಿ ರಕ್ಷಣೆ ನೀಡುವರು. ಹೆಣ್ಣುಮಕ್ಕಳು ಹಾಗೂ ಮಹಿಳೆಯರಿಗೆ ಆತ್ಮರಕ್ಷಣೆ ಕಲಿಸುವುದು ಇದರ ಮುಖ್ಯ ಉದ್ದೇಶವಾಗಿದ್ದು, ಶಾಲಾ, ಕಾಲೇಜು, ಉದ್ಯಾನ ಬಳಿ ಈ ಪಡೆ ಗಸ್ತು ತಿರುಗುತ್ತದೆ. ಮಾದಕ ವಸ್ತು, ಸೈಬರ್ ಅಪರಾಧ ಕುರಿತು ಜಾಗೃತಿ ಮೂಡಿಸುತ್ತದೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಮಾತನಾಡಿ, 'ಸಮಾಜಘಾತುಕ ಶಕ್ತಿಗಳಿಗೆ ಕಡಿವಾಣ ಹಾಕಲು ಹಾಗೂ ಅಪರಾಧ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಪಬ್ಲಿಕ್ ಔಟರೀಚ್ ಕಾರ್ಯಕ್ರಮದಡಿ ಶಾಲಾ, ಕಾಲೇಜಿನ ಆಸಕ್ತ ವಿದ್ಯಾರ್ಥಿನಿಯರಿಗೆ ಪಡೆಯ ಸದಸ್ಯೆಯರು ವಿಶೇಷ ಆತ್ಮರಕ್ಷಣೆ ಕಲೆಯ ಬಗ್ಗೆ ತರಬೇತಿ ನೀಡುವರು. ಕಾನೂನು ಸುವ್ಯವಸ್ಥೆ ಕಾಪಾಡಲು, ಅಪರಾಧ ನಿಯಂತ್ರಿಸಲು ಹಾಗೂ ಇಲಾಖೆಯಲ್ಲಿ ಸುಧಾರಣೆ ತರಲು ಈ ರೀತಿಯ ಕಾರ್ಯಕ್ರಮ ಅಗತ್ಯ' ಎಂದು ಅಭಿಪ್ರಾಯಪಟ್ಟರು.

ನಗರದಲ್ಲಿ ಹೆಚ್ಚುತ್ತಿರುವ ಮಾದಕ ವಸ್ತು ಹಾಗೂ ಸೈಬರ್ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕಲಾಗುತ್ತಿದೆ. ಕಾಲೇಜುಗಳಲ್ಲಿ ಡ್ರಗ್ಸ್ ವಿರೋಧಿ ಸಮಿತಿ ರಚಿಸಬೇಕು. ಮಹಿಳೆಯರು ಮತ್ತು ಮಕ್ಕಳು ಸುರಕ್ಷತೆಗೆ ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ನಟಿ ಸುಧಾರಾಣಿ ಮಾತನಾಡಿ, 'ಎಲ್ಲ ಕ್ಷೇತ್ರದಲ್ಲೂ ಮಹಿಳೆ ಸಾಧನೆ ಮಾಡಿದ್ದಾಳೆ. ನಕಾರಾತ್ಮಕ ಅಂಶಗಳ ಎಚ್ಚರ ವಹಿಸಿ ಮುಂದೆ ಸಾಗಬೇಕು. ಮಹಿಳೆಯರನ್ನು ಪುರುಷರಿಗೆ ಹೋಲಿಕೆ ಮಾಡಿಕೊಳ್ಳಬಾರದು. ಸಾಮಾಜಿಕ ಜಾಲತಾಣವನ್ನು ಅಗತ್ಯವಿದಷ್ಟು ಮಾತ್ರ ಬಳಸಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ಪಶ್ಚಿಮ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಸಿ. ವಂಶಿ ಕೃಷ್ಣ, ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ, ಎಸಿಪಿಗಳಾದ ಕೃಷ್ಣಮೂರ್ತಿ, ತನ್ವಿರ್ ಹಾಗೂ ಪ್ರಾಂಶುಪಾಲರು ಹಾಜರಿದ್ದರು.



ನಗರದ ಮಲ್ಲೇಶ್ವರ ಮೈದಾನದಲ್ಲಿ ಬೆಂಗಳೂರು ಉತ್ತರ ವಿಭಾಗದ ರಾಣಿ ಚನ್ನಮ್ಮ ಪಡೆ ಜಾಗೃತಿ ಕಾರ್ಯಕ್ರಮಕ್ಕೆ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಹಾಗೂ ನಟಿ ಸುಧಾರಾಣಿ ಚಾಲನೆ ನೀಡಿದರು
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ವಾರದಲ್ಲಿ ಎರಡು ದಿನ ವಿಶೇಷ ಗಸ್ತು

ನಗರದಲ್ಲಿ ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗಿದ್ದು, ವಾರದಲ್ಲಿ ಎರಡು ದಿನ ವಿಶೇಷ ಗಸ್ತು ನಡೆಸಲಾಗುವುದು ಎಂದು ಸೀಮಾಂತ್‌ಕುಮಾರ್ ಸಿಂಗ್ ತಿಳಿಸಿದರು.


ಸಾರ್ವಜನಿಕರಲ್ಲಿ ಸ್ಥೈರ್ಯ ಮೂಡಿಸಲು ನಗರದಾದ್ಯಂತ ಪೊಲೀಸರು ನಾಕಾಬಂದಿ ಹಾಕಿ ಪರಿಶೀಲಿಸುತ್ತಿದ್ದಾಗ ಮಾದಕ ವಸ್ತುಗಳು ಪತ್ತೆಯಾಗಿವೆ. ದಾಖಲೆ ಇಲ್ಲದ ಸಾವಿರಕ್ಕೂ ಹೆಚ್ಚು ದ್ವಿಚಕ್ರ ವಾಹನಗಳನ್ನು ಪತ್ತೆ ಹಚ್ಚಲಾಗಿದೆ. ಜನಸ್ನೇಹಿಯಾಗಿ ಪೊಲೀಸ್ ವ್ಯವಸ್ಥೆ ಬಲಪಡಿಸಲು ಕ್ರಮ ವಹಿಸಲಾಗಿದೆ ಎಂದರು.

ಅಪರಾಧ ವಿಭಾಗದ ಪೊಲೀಸರು ನಗರದಲ್ಲಿ ಹೆಚ್ಚು ನಾಕಾಬಂದಿ, ಗಸ್ತು ಮಾಡಬೇಕು. ರಾತ್ರಿ ಗಸ್ತು ಹೊರತುಪಡಿಸಿ ಹೆಚ್ಚುವರಿಯಾಗಿ ವಿಶೇಷ ಗಸ್ತು ಮಾಡಬೇಕು. ಪ್ರತಿ ಮಂಗಳವಾರ ಹಾಗೂ ಗುರುವಾರ ಪೊಲೀಸ್ ಠಾಣಾ ವ್ಯಾಪ್ತಿಯ ಒಂದು ಪ್ರದೇಶವನ್ನು ರಾತ್ರಿ 9 ರಿಂದ 11 ಗಂಟೆಯ ಅಂತರದಲ್ಲಿ ತಪಾಸಣೆ ಮಾಡಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಅದೇ ರೀತಿ ಪ್ರತಿ ಶುಕ್ರವಾರ ಹಾಗೂ ಶನಿವಾರ ಕಾಲ್ನಡಿಗೆಯಲ್ಲಿ ಅತಿ ಸೂಕ್ಷ್ಮ ಹಾಗೂ ಜನಸಂದಣಿ ಪ್ರದೇಶದಲ್ಲಿ ಗಸ್ತು ನಡೆಸುವರು. ಈ ಎಲ್ಲಾ ಚಟುವಟಿಕೆಗಳಲ್ಲಿ ಡಿಸಿಪಿಗಳು, ಎಸಿಪಿಗಳು ಮತ್ತು ಇನ್‌ಸ್ಪೆಕ್ಟರ್‌ಗಳು ಭಾಗವಹಿಸುತ್ತಾರೆ. ಕಂಟ್ರೋಲ್ ರೂಮ್‌ಗೆ ಮಾಹಿತಿ ನೀಡುವಂತೆ ಆದೇಶಿಸಲಾಗಿದೆ ಎಂದು ಹೇಳಿದರು.

5 ಎಕರೆ ಸರ್ಕಾರಿ ಜಮೀನು ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರು ನಗರವ್ಯಾಪ್ತಿಯಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಮುಂದುವರಿಸಿರುವ ಜಿಲ್ಲಾಡಳಿತವು ಅಂದಾಜು ₹7.69 ಕೋಟಿ ಮೌಲ್ಯದ 5 ಎಕರೆ ಸರ್ಕಾರಿ ಜಮೀನನ್ನು ವಶಕ್ಕೆ ಪಡೆದುಕೊಂಡಿದೆ.

ವಿವಿಧ ತಾಲ್ಲೂಕು ತಹಶೀಲ್ದಾರರು ತಮ್ಮ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಗುಂಡುತೋಪು, ಸ್ಮಶಾನ, ಸರ್ಕಾರಿ ಓಣಿ, ಖರಾಬು, ಗೋಮಾಳ ಮತ್ತು ಕೆರೆ ಜಾಗಗಳನ್ನು ಶುಕ್ರವಾರ ತೆರವುಗೊಳಿಸಿದರು.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ದೇವಗೆರೆ ಗ್ರಾಮದ ಸ.ನಂ 71ರ 0.22 ಗುಂಟೆ ಗುಂಡುತೋಪು ಒತ್ತುವರಿ ತೆರವುಗೊಳಿಸಲಾಗಿದೆ. ಇದರ ಅಂದಾಜು ಮೌಲ್ಯ ₹50ಲಕ್ಷ.

ತಾವರೆಕೆರೆ ಹೋಬಳಿ ದೊಡ್ಡೇರಿ ಗ್ರಾಮದ ಸ.ನಂ 62ರ ಸ್ಮಶಾನದಲ್ಲಿ ₹19 ಲಕ್ಷ ಮೌಲ್ಯದ 0.05 ಗುಂಟೆ ಒತ್ತುವರಿ ತೆರವುಗೊಳಿಸಲಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಶಿವನಪುರ ಗ್ರಾಮದ ಸ.ನಂ 2/4ಎ ರ 0.02.08 ಗುಂಟೆ ಸರ್ಕಾರಿ ಓಣಿ ತೆರವು ಮಾಡಲಾಗಿದೆ. ಇದರ ಅಂದಾಜು ಮೌಲ್ಯ ₹20ಲಕ್ಷ.

ದಾಸನಪುರ ಹೋಬಳಿಯ ಶಿವನಪುರ ಗ್ರಾಮದ ಸ.ನಂ 2/4ಬಿ1ರ ₹10 ಲಕ್ಷ ಮೌಲ್ಯದ 0.012 ಗುಂಟೆ ಸರ್ಕಾರಿ ಓಣಿ ಒತ್ತುವರಿ ತೆರವುಗೊಳಿಸಲಾಗಿದೆ.

[illegible] ಗ್ರಾಮದ ಸ.ನಂ 40ರ ₹2 ಕೋಟಿ ಮೌಲ್ಯದ 2 ಎಕರೆ ವಿಸ್ತೀರ್ಣದ [illegible] ಒತ್ತುವರಿ ತೆರವುಗೊಳಿಸಲಾಗಿದೆ.

ತೊರೆನಾಗಸಂದ್ರ ಗ್ರಾಮದ ಸ.ನಂ 34 ರ ₹1.50 ಕೋಟಿ ಮೌಲ್ಯದ 0.27 ಗುಂಟೆ ಖರಾಬು ಒತ್ತುವರಿ ತೆರವು ಮಾಡಲಾಗಿದೆ.

ಯಲಹಂಕ ತಾಲ್ಲೂಕಿನ ಹೆಸರಘಟ್ಟ1 ಹೋಬಳಿಯ ಕೊಡಿಗೆ ತಿರುಮಲಾಪುರ ಗ್ರಾಮದ ಸ.ನಂ 14ರ 0.31 ಗುಂಟೆ ಗೋಮಾಳ ಒತ್ತುವರಿ ತೆರವು ಮಾಡಲಾಗಿದೆ. ಇದರ ಮೌಲ್ಯ ₹1.20 ಕೋಟಿ.

ಹೆಸರಘಟ್ಟ-2 ಹೋಬಳಿಯ ಕಾಕೋಳು ಗ್ರಾಮದ ಸ.ನಂ 44ರ ₹2 ಕೋಟಿ ಮೌಲ್ಯದ 1 ಎಕರೆ ಕೆರೆ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ.



ಯಲಹಂಕದ ಕಾಮಾಕ್ಷಮ್ಮ ಮತ್ತು ಕೊಂಡಪ್ಪ ಬಡಾವಣೆಯಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಚಾಲನೆ ನೀಡಿದರು

₹12 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಯಲಹಂಕ: ಕೆಂಪೇಗೌಡ ಮತ್ತು ಚೌಡೇಶ್ವರಿ ವಾರ್ಡ್ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ₹12 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಚಾಲನೆ ನೀಡಿದರು.

ಇದೇ ವೇಳೆ ಮನೆಗಳಿಗೆ ಕಾವೇರಿ ಕುಡಿಯುವ ನೀರು ಸರಬರಾಜಿಗೆ ಚಾಲನೆ ನೀಡಿ ಮಾತನಾಡಿದ ವಿಶ್ವನಾಥ್, 'ವಿವಿಧ ಮೂಲಗಳಿಂದ ಅನುದಾನ ಮಂಜೂರು ಮಾಡಿಸಿಕೊಂಡು ಅಭಿವೃದ್ಧಿ ಕಾರ್ಯಗಳು ಕುಂಠಿತವಾಗದಂತೆ ಕ್ರಮವಹಿಸಲಾಗಿದೆ. ಯಲಹಂಕದಲ್ಲಿ ಶೀಘ್ರದಲ್ಲೇ ಗುಂಡಿ ಮುಕ್ತ ರಸ್ತೆ ಕಾರ್ಯ ಆರಂಭಿಸಲಾಗುವುದು' ಎಂದು ಹೇಳಿದರು.

ಯಲಹಂಕ: ರಸ್ತೆ ಅಭಿವೃದ್ಧಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: 'ಸರ್ಕಾರ ಈಗಾಗಲೇ ಶಾಸಕರಿಗೆ ₹25 ಕೋಟಿ ಅನುದಾನ ಬಿಡುಗಡೆ ಮಾಡುವುದಾಗಿ ಘೋಷಣೆ ಮಾಡಿದ್ದರೂ ಹಣ ಮಾತ್ರ ಬಂದಿಲ್ಲ' ಎಂದು ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ತಿಳಿಸಿದರು.

ಯಲಹಂಕದ ಕೆಂಪೇಗೌಡ ಮತ್ತು ಚೌಡೇಶ್ವರಿ ವಾರ್ಡ್ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ₹12 ಕೋಟಿ ವೆಚ್ಚದಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿ, ಮನೆಗಳಿಗೆ ಕಾವೇರಿ ಕುಡಿಯುವ ನೀರು ಸರಬರಾಜು ಯೋಜನೆಗೆ ಚಾಲನೆ ನೀಡಿ ಮಾತನಾಡಿದರು.

'ಕ್ಷೇತ್ರದಲ್ಲಿ ರಸ್ತೆಗಳ ಸಮಸ್ಯೆ ದೊಡ್ಡದಾಗಿದೆ. ಯಲಹಂಕದಲ್ಲಿ ಶೀಘ್ರವೇ ಗುಂಡಿ ಮುಕ್ತ ರಸ್ತೆ ಕಾರ್ಯ ಆರಂಭಿಸಲಾಗುವುದು. ಉದ್ಯಾನ ಮತ್ತು ಕೆರೆಗಳ ವಿಚಾರದಲ್ಲಿ ಹಣ ಮಂಜೂರಾಗದೇ ತೊಂದರೆಯಾಗುತ್ತಿದೆ. ಕೂಡಲೇ ಸರ್ಕಾರ ಅಗತ್ಯ ಅನುದಾನ ಮಂಜೂರು ಮಾಡಬೇಕು' ಎಂದರು.

ಬಿಬಿಎಂಪಿ ಮಾಜಿ ಸದಸ್ಯರಾದ ಚಂದ್ರಮ್ಮ ಕೆಂಪೇಗೌಡ, ಎಂ.ಮುನಿರಾಜು, ಬಿಜೆಪಿ ಮುಖಂಡರಾದ ಮುರಾರಿರಾಮು, ಈಶ್ವರ್, ವಿ.ಪವನ್ ಕುಮಾರ್, ವಿ.ವಿ.ರಾಮಮೂರ್ತಿ, ಎ.ಎಸ್. ರಾಜ, ಈಶ್ವರಪ್ಪ, ಮುನಿಯಪ್ಪ, ಓಂರವೀಂದ್ರ ಹಾಜರಿದ್ದರು.

ಸಾಕ್ಷಿ ದೂರುದಾರ ಮತ್ತೆ ನ್ಯಾಯಾಲಯಕ್ಕೆ ಇಂದು

ಮಂಗಳೂರು: 'ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ಸಾಕ್ಷಿ ದೂರುದಾರನ ಹಣಕಾಸಿನ ವ್ಯವಹಾರ, ಆದಾಯದ ಮೂಲಗಳ ವಿಚಾರಣೆ ತುಸು ವಿಳಂಬವಾಗಿದೆ. ಹಬ್ಬಗಳು ಎದುರಾಗಿರುವುದು ಇದಕ್ಕೆ ಕಾರಣ' ಎಂದು ಎಸ್‌ಐಟಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇಲ್ಲಿಯವರೆಗೆ, ಎಸ್‌ಐಟಿ ತಂಡವು ಮಹೇಶ್ ಶೆಟ್ಟಿ ತಿಮರೋಡಿ ಜೊತೆ ನಿಕಟ ಸಂಪರ್ಕ ಹೊಂದಿರುವ 11 ವ್ಯಕ್ತಿಗಳ ವಿಚಾರಣೆ ನಡೆಸಲು ಯೋಜಿಸಿತ್ತು. ಆದರೆ, ಹಲವರು ವಿಚಾರಣೆ ಹಾಜರಾಗದೇ ಬೇರೆ ಬೇರೆ ಕಾರಣಗಳನ್ನು ಮುಂದಿಡುತ್ತಿದ್ದಾರೆ. ಧರ್ಮಸ್ಥಳ ಗ್ರಾಮದ ಪ್ರಕರಣಕ್ಕೆ ಸಂಬಂಧಿಸಿದ ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಸಾಕ್ಷಿ ದೂರುದಾರನ ಹೇಳಿಕೆ ದಾಖಲಿಸಿಕೊಳ್ಳುವ ಪ್ರಕ್ರಿಯೆ ಸೆ.27ರಂದು ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದರು.

ಉಡುಪಿಗೆ ಭೇಟಿ ನೀಡಿದ್ದ ಸಚಿವ ಕೆ.ಎಚ್.ಮುನಿಯಪ್ಪ ಈ ಪ್ರಕರಣಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿ, 'ಧರ್ಮಸ್ಥಳದ ಬಗ್ಗೆ ನಮಗೆ ಅಪಾರ ಗೌರವವಿದೆ. ಏನೇ ಇರಲಿ ಸತ್ಯ ಸಂಗತಿ ಹೊರಬರಬೇಕು. ಅದಕ್ಕಾಗಿಯೇ ಎಸ್‌ಐಟಿ ರಚಿಸಲಾಗಿದ್ದು, ರಚನೆ ಅಗತ್ಯವೇ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎಸ್‌ಐಟಿ ವರದಿ ಸಲ್ಲಿಸಿದ ನಂತರ ಎಲ್ಲವೂ ಸ್ಪಷ್ಟವಾಗುತ್ತದೆ' ಎಂದರು.

ಲಿಂಗಾಯತ ಮಹಾಸಭಾದ ಎಸ್.ಎಂ.ಜಾಮದಾರ ಹೇಳಿಕೆ

‘ಶಿವನು ವೇದ ಮೂಲದವನಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿವನು ವೇದ ಮೂಲದವನಲ್ಲ ಎನ್ನುವುದಾದರೂ ನಿಮಗೆ ಗೊತ್ತಿದೆಯೇ’ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಅವರು ಬಿಜೆಪಿಯ ಪ್ರತಾಪ್ ಸಿಂಹ ಅವರನ್ನು ಪ್ರಶ್ನಿಸಿದ್ದಾರೆ.

‘ಪ್ರತಾಪ ಅವರೆ, ‘ಕಾವಿಧಾರಿಗಳೆ ನಿಮ್ಮ ದೇವರು ಯಾವುದು’ ಎಂದು ಪ್ರಶ್ನಿಸಿದ್ದೀರಿ. ಲಿಂಗಾಯತರ ‘ಶಿವ’ ಎಂಬ ದೇವರು, ‘ವೈದಿಕ’ರ ಶಿವನಲ್ಲ. ಋಗ್ವೇದದಲ್ಲಿ ಬರುವ ರುದ್ರನನ್ನು ನೀವೇ ಬಹುಕಾಲದ ನಂತರ ಶಿವ ಎಂದು ಹಲುಬಿದಿರಿ. ಆಗಮ ಮೂಲದ ಶಿವನೂ ನಿಮ್ಮ ಅನರ್ಥ ಅರ್ಥೈಸುವಿಕೆಯಿಂದ ಭಗ್ನನಾದನು. ಆ ನಂತರ ಬಂದ ಶ್ವೇತಾಶ್ವರ ಉಪನಿಷತ್ತಿನಲ್ಲಿ ಶಿವನ ಬಗ್ಗೆ ಒಂದಿಷ್ಟು ಮಾಹಿತಿಯಿದೆ. ಆದಾಗ್ಯೂ, ಹರಪ್ಪ, ಮಹೆಂಜದಾರೋಗಳ ಉತ್ಖನನದಲ್ಲಿ ದೊರೆತ ಶಿವಲಿಂಗಗಳು ವೇದಪೂರ್ವ ಕಾಲದವು ಎಂಬುದು ಜಗತ್ತಿಗೆ ತಿಳಿದಿದೆ’ ಎಂದಿದ್ದಾರೆ.

‘ಲಿಂಗಾಯತರ ಶಿವ ಬೂದಿಬಡುಕನಲ್ಲ. ಸ್ಮಶಾನದಲ್ಲಿ ಪಿಶಾಚಿಯಂತೆ ತಿರುಗುವವನಲ್ಲ. ಇವೆಲ್ಲ ಒಬ್ಬ ಶಿವನಿಗೆ ಕೊಟ್ಟ ಹೆಸರುಗಳು, ಹೆಸರಿಗೊಂದರಂತೆ ಬರೆದ ಕತೆಗಳು ಮತ್ತು ಶೈವ ಪುರಾಣಗಳ ಸೃಷ್ಟಿಗಳು. ಲಿಂಗಾಯತ ಶರಣರು ಈ ಪುರಾಣಗಳನ್ನು, ‘ಪುಂಡರ ಗೋಷ್ಠಿಗಳು’ ಎಂದು ಅವುಗಳನ್ನು ತಿರಸ್ಕರಿಸಿದ್ದಾರೆ’ ಎಂದಿದ್ದಾರೆ.



ಜಾಮದಾರ

‘ನಿಮ್ಮ ಸ್ವರ್ಗ–ನರಕಗಳನ್ನು ಶರಣರು ಅಲ್ಲಗೆಳೆದಿದ್ದಾರೆ. ಅಲ್ಲಮರ ವಚನಗಳಂತೂ ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತಗಳನ್ನು ತಿರಸ್ಕರಿಸುತ್ತವೆ. ಆದ್ದರಿಂದಲೇ ಲಿಂಗಾಯತರು ಸತ್ತಾಗ ‘ಲಿಂಗೈಕ್ಯ’ರಾಗುತ್ತಾರೆ. ವೀರಶೈವರು ಸತ್ತರೆ ‘ಸ್ವರ್ಗವಾಸಿ’ ಇಲ್ಲವೆ ‘ಕೈಲಾಸ ವಾಸಿ’ಯಾಗುತ್ತಾರೆ’ ಎಂದು ಜಾಮದಾರ ಹೇಳಿದ್ದಾರೆ.

ವಯೋಮಿತಿ ಹೆಚ್ಚಳ

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ ಮತ್ತು ಪಿಎಸ್ಐ ಹುದ್ದೆಗಳ ಭರ್ತಿಗೆ ಗರಿಷ್ಠ ವಯೋಮಿತಿ ಹೆಚ್ಚಿಸಲು ಗೃಹ ಇಲಾಖೆ ಅನುಮತಿ ನೀಡಿದೆ.

ಪರಿಶಿಷ್ಟ ಜಾತಿ/ ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಪಿಎಸ್ಐ ಹುದ್ದೆಗೆ 32 ವರ್ಷ, ಕಾನ್‌ಸ್ಟೆಬಲ್‌ಗೆ 30, ಇತರೆ ಅಭ್ಯರ್ಥಿಗಳಿಗೆ ಪಿಎಸ್ಐಗೆ 30 ಹಾಗೂ ಕಾನ್‌ಸ್ಟೆಬಲ್‌ಗೆ 27 ವರ್ಷ ನಿಗದಿಪಡಿಸಲಾಗಿದೆ.

2020ರಲ್ಲಿ ಕಾನ್‌ಸ್ಟೆಬಲ್ ನೇಮಕಾತಿಗೆ ಗರಿಷ್ಠ ವಯೋಮಿತಿ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗದವರಿಗೆ 27, ಇತರೆ ಅಭ್ಯರ್ಥಿಗಳಿಗೆ 25 ವರ್ಷ ನಿಗದಿಪಡಿಸಲಾಗಿತ್ತು


‘ಎಸ್‌ಸಿ, ಎಸ್‌ಟಿ ಪರೀಕ್ಷಾಪೂರ್ವ ತರಬೇತಿ: ಅನುದಾನದಲ್ಲಿ ಅಕ್ರಮ’

ಕಳಪೆ ಸಂಸ್ಥೆಗಳಿಗೆ ತರಬೇತಿ ಟೆಂಡರ್: ಎನ್.ಮಹೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ಪರೀಕ್ಷಾ ಪೂರ್ವ ತರಬೇತಿಗೆಂದು ನಿಗದಿಪಡಿಸಿರುವ ₹112.87 ಕೋಟಿ ಅನುದಾನದಲ್ಲಿ ಅಕ್ರಮ ನಡೆದಿದೆ. ಈ ಕುರಿತು ಲೋಕಾಯುಕ್ತ ತನಿಖೆ ನಡೆಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎನ್.ಮಹೇಶ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಮಾಜ ಕಲ್ಯಾಣ ಇಲಾಖೆ 2024–25 ರ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅರ್ಹ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಗಾಗಿ ಈ ಮೊತ್ತವನ್ನು ನಿಗದಿಪಡಿಸಿದೆ. ಈಗ ಎಸ್ಐ ಮತ್ತು ಕಾನ್‌ಸ್ಟೆಬಲ್ ನೇಮಕಾತಿ ನಡೆಯುತ್ತಿದೆ. ಇದಕ್ಕೆ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಉತ್ತಮ ಸಂಸ್ಥೆಗಳಿಗೆ ಟೆಂಡರ್ ನೀಡಿಲ್ಲ. ಬದಲಿಗೆ ಟೆಂಡರ್‌ನಲ್ಲಿ ಎಲ್–1 ಆಗಿದ್ದ ಕಡಿಮೆ ಗುಣಮಟ್ಟದ ತರಬೇತಿ ಸಂಸ್ಥೆಗಳಿಗೆ ಟೆಂಡರ್ ನೀಡಲಾಗಿದೆ. ವಿಜಯಪುರದ ಕಬ್ಬೂರ್ ಅಕಾಡೆಮಿ ಮತ್ತು ಎಸ್.ವಿ.ವಿಸ್ಡಂ ಅಕಾಡೆಮಿಗಳಿಗೆ ₹40 ಕೋಟಿ ಟೆಂಡರ್ ನೀಡಲಾಗಿದೆ’ ಎಂದು ದೂರಿದರು.



ಎನ್.ಮಹೇಶ್

ಟೆಂಡರ್ ಷರತ್ತುಗಳಲ್ಲಿ ತರಬೇತಿ ಸಂಸ್ಥೆಯು 5 ವರ್ಷಗಳ ಅನುಭವ ಹೊಂದಿರಬೇಕು ಮತ್ತು ಸಂಸ್ಥೆಯ ವಾರ್ಷಿಕ ವಹಿವಾಟು ₹9 ಕೋಟಿ ಇರಬೇಕು. ಆದರೆ ಎಸ್‌ವಿ ವಿಸ್ಡಂ ಅಕಾಡೆಮಿಗೆ ಕೇವಲ 2 ವರ್ಷದ ಅನುಭವವಿದೆ. ಈ ಸಂಸ್ಥೆ ₹9 ಕೋಟಿ ವಹಿವಾಟು ನಡೆಸಿರುವುದಕ್ಕೆ ದಾಖಲೆ ನೀಡಿಲ್ಲ ಎಂದು ಮಹೇಶ್ ಆರೋಪಿಸಿದರು.

ಪರೀಕ್ಷಾ ಪೂರ್ವ ತರಬೇತಿಗೆ ಹಿಂದೆ ಟೆಂಡರಿನ ಎಲ್–1 ವ್ಯವಸ್ಥೆ ಇರಲಿಲ್ಲ. ಆದರೆ ಈಗ ಎಲ್–1 ವ್ಯವಸ್ಥೆಯನ್ನು ಏಕೆ ಜಾರಿಗೆ ತಂದಿದೆ ಎಂದು ಪ್ರಶ್ನಿಸಿದ ಅವರು, 2025–26 ನೇ ಸಾಲಿನ ಪರೀಕ್ಷಾ ಪೂರ್ವ ತರಬೇತಿಗೆ ಟೆಂಡರ್‌ನ ಎಲ್–1 ವ್ಯವಸ್ಥೆ ಮಾಡುತ್ತಿರುವುದನ್ನು ಕೈಬಿಡಬೇಕು. ನುರಿತ ಮತ್ತು ಅತ್ಯುತ್ತಮ ಫಲಿತಾಂಶ ನೀಡುವ ಸಂಸ್ಥೆಗಳಿಗೆ ಟೆಂಡರ್ ನೀಡಬೇಕು. ಇದರಿಂದ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಪ್ರಯೋಜನ ಸಿಗಲಿದೆ ಎಂದು ಅವರು ಹೇಳಿದರು.

ತರಬೇತಿ ಸಂಸ್ಥೆಯ ಹೆಸರು ‘ಪರೀಕ್ಷಾ ಪೂರ್ವ ತರಬೇತಿ ಕೇಂದ್ರ’ ಎಂದು ಇತ್ತು. ಅದನ್ನು ಸಿದ್ದರಾಮಯ್ಯ ಸರ್ಕಾರ ‘ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ’ ಎಂದು ಮಾಡಿದೆ. ಡಾ.ಅಂಬೇಡ್ಕರ್ ತರಬೇತಿ ಕೇಂದ್ರ ಎಂಬುದಾಗಿ ಹೆಸರಿಸಬೇಕಿತ್ತು ಎಂದರು.

ಸುದ್ದಿಗೋಷ್ಠಿಯಲ್ಲಿ ಛಲವಾದಿ ನಾರಾಯಣಸ್ವಾಮಿ, ನಿವೃತ್ತ ಐಎಎಸ್ ಅಧಿಕಾರಿ ಅನಿಲ್‌ಕುಮಾರ್ ಮತ್ತು ಇತರರು ಇದ್ದರು.

ನಾಪತ್ತೆ ಪ್ರಕರಣ: ಆಧಾರ್ ಮಾಹಿತಿ ಒದಗಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ಮಗ ನಾಪತ್ತೆ ಆಗಿದ್ದು ಆತ ಆಧಾರ್ ಬಳಕೆ ಮಾಡಿದ್ದ ಸ್ಥಳದ ವಿವರಗಳನ್ನು ಒದಗಿಸಲು ನಿರ್ದೇಶಿಸಬೇಕು’ ಎಂಬ ತಂದೆಯೊಬ್ಬರ ಮನವಿಯನ್ನು ಪುರಸ್ಕರಿಸಿರುವ ಹೈಕೋರ್ಟ್, ಮಾಹಿತಿ ಒದಗಿಸುವಂತೆ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರಕ್ಕೆ (ಯುಐಎಡಿಐ) ನಿರ್ದೇಶಿಸಿದೆ.

ಈ ಸಂಬಂಧ ಹುಬ್ಬಳ್ಳಿಯ ರಾಮಲಿಂಗೇಶ್ವರ ನಗರದ ಕೃಷ್ಣಮೂರ್ತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ (ಧಾರವಾಡ) ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ತನಿಖೆಯ ವೇಳೆ ಪೊಲೀಸರಾಗಲಿ ಅಥವಾ ಇತರೆ ಯಾವುದೇ ಸಂಸ್ಥೆಯಾಗಲಿ ದೃಢೀಕರಣ ಸೇರಿದಂತೆ ಆಧಾರ್ ಅನ್ನು ಬಳಕೆ ಮಾಡಬೇಕಾಗಿ ಬಂದರೆ ಅಂತಹ ಸಂದರ್ಭಗಳಲ್ಲಿ ಆಧಾರ್ ಕಾಯ್ದೆ-2016ರ ಕಲಂ 33ರ ಅನ್ವಯ ಹೈಕೋರ್ಟ್ ಮುಂದೆ ಅರ್ಜಿ ಸಲ್ಲಿಸಬೇಕು. ಹೈಕೋರ್ಟ್ ಯುಐಡಿಎಐಗೆ ಆಧಾರ್ ವಿವರಗಳನ್ನು ಬಳಸಿಕೊಳ್ಳಲು ಮತ್ತು ಅದನ್ನು ಕೊನೆಯದಾಗಿ ಯಾವ ಸ್ಥಳದಲ್ಲಿ ಬಳಕೆ ಮಾಡಲಾಗಿದೆ ಎಂಬ ವಿವರ ಒದಗಿಸಲು ಸೂಕ್ತ ಆದೇಶಗಳನ್ನು ಹೊರಡಿಸಲು ಸಮಯ ಮತ್ತು ಅವಕಾಶ ನೀಡುವ ಮೂಲಕ ಆದೇಶಗಳನ್ನು ನೀಡಲಿದೆ’ ಎಂದು ನ್ಯಾಯಪೀಠ ತಿಳಿಸಿದೆ.

‘ಆಧಾರ್ ಕಾಯ್ದೆಯ ಕಲಂ 29ರ ಅಡಿಯಲ್ಲಿ ಮಾಹಿತಿ ನೀಡಲು ನಿರ್ಬಂಧವಿದೆ. ಆದರೆ, ಆ ನಿರ್ಬಂಧ ಮೂಲ ಬಯೋಮೆಟ್ರಿಕ್ ಮಾಹಿತಿಗಷ್ಟೇ ಸೀಮಿತವಾಗಿದೆ. ಆದರೆ, ಯಾರಾದರೂ ನಿರ್ದಿಷ್ಟವಾಗಿ ಅರ್ಜಿ ಸಲ್ಲಿಸಿದಾಗ ಆಧಾರ್ ಸಂಖ್ಯೆ, ಬಯೋಮೆಟ್ರಿಕ್ ಮಾಹಿತಿ ಮತ್ತು ಡೆಮೋಗ್ರಾಫಿಕ್ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ತನಿಖೆಯ ಉದ್ದೇಶಕ್ಕೆ ಅಗತ್ಯ ಮಾಹಿತಿಯನ್ನು ಒದಗಿಸುವಂತೆ ಯುಐಡಿಎಐಗೆ ನ್ಯಾಯಾಲಯಗಳು ಸೂಕ್ತ ನಿರ್ದೇಶನ ನೀಡಬಹುದಾಗಿದೆ’ ಎಂದು ನ್ಯಾಯಪೀಠ ವಿವರಿಸಿದೆ.

‘ನನ್ನ ಮಗ 2019ರಿಂದ ಕಾಣೆ ಆಗಿದ್ದಾನೆ. ಈವರೆಗೂ ಪತ್ತೆಯಾಗಿಲ್ಲ. ಆದರೆ, 2023ರ ಜೂನ್ 20ರಂದು ಆತನ ಆಧಾರ್ ಬಳಕೆ ದೃಢೀಕರಣವಾಗಿರುವ ಮಾಹಿತಿ ಇದೆ. ಹಾಗಾಗಿ, ಆ ವಿವರ ಒದಗಿಸಲು ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಶೂ ಧರಿಸಿದ್ದ ಕಾಲಿನಿಂದ ಒದ್ದಿದ್ದ ಇಬ್ಬರ ಸೆರೆ

ಅವೆನ್ಯೂ ರಸ್ತೆಯ ಬಟ್ಟೆ ಅಂಗಡಿಯಲ್ಲಿ ಸೀರೆ ಕಳವು ಮಾಡಿದ್ದ ಆರೋಪ; ಮಹಿಳೆಯ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಟ್ಟೆ ಮಳಿಗೆಯೊಂದರಲ್ಲಿ ಸೀರೆ ಕಳವು ಮಾಡಿ ಪರಾರಿಯಾಗಿದ್ದ ಆರೋಪದ ಮೇಲೆ ಮಹಿಳೆಗೆ ಶೂ ಧರಿಸಿದ್ದ ಕಾಲಿನಿಂದ ಒದ್ದಿದ್ದ ಅಂಗಡಿ ಮಾಲೀಕ ಹಾಗೂ ಸಿಬ್ಬಂದಿಯನ್ನು ಕೆ.ಆರ್.ಮಾರುಕಟ್ಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಪೇಟೆಯ ಅವೆನ್ಯೂ ರಸ್ತೆ ಬಟ್ಟೆ ಅಂಗಡಿ ಮಾಲೀಕ ಉಮೇದ್ ರಾಮ್, ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಮಹೇಂದ್ರ ಸೀರ್ವಿ ಬಂಧಿತರು.

ಆಂಧ್ರಪ್ರದೇಶದ ಹಂಪಮ್ಮ ಹಲ್ಲೆಗೊಳಗಾಗಿದ್ದ ಮಹಿಳೆ.

ಮಹಿಳೆಗೆ ಆರೋಪಿಯು ಬೂಟು ಕಾಲಿನಿಂದ ಒದ್ದಿದ್ದರು. ಹಲ್ಲೆ ನಡೆಸುತ್ತಿರುವ ಈ ದೃಶ್ಯವನ್ನು ಸ್ಥಳೀಯರು


ಉಮೇದ್


ಮಹೇಂದ್ರ

ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಹಲ್ಲೆ ನಡೆಸಿದವರನ್ನು ಬಂಧಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದರು.

ಆರೋಪಿ ಉಮೇದ್ ಕುಮಾರ್ ಚಿಕ್ಕಪೇಟೆಯ ಅವೆನ್ಯೂ ರಸ್ತೆಯಲ್ಲಿ ಬಟ್ಟೆ ಅಂಗಡಿ ಹೊಂದಿದ್ದರು.

ಸೆ.21ರಂದು ಬಟ್ಟೆ ಅಂಗಡಿ ಬಳಿ ಪುತ್ರನ ಜೊತೆಗೆ ಬಂದಿದ್ದ ಹಂಪಮ್ಮ, ಅಂಗಡಿಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿ ಅಂಗಡಿಯಲ್ಲಿದ್ದ 50ಕ್ಕೂ ಹೆಚ್ಚು ಸೀರೆಯಿರುವ ಬಂಡಲ್ ಸಮೇತ ಕಳವು ಮಾಡಿದ್ದರು. ಮಹಿಳೆ ಸೀರೆ ಕಳ್ಳತನ ಮಾಡುತ್ತಿರುವ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ದೃಶ್ಯಾವಳಿ ಗಮನಿಸಿದ್ದ ಅಂಗಡಿ ಮಾಲೀಕ ಹಾಗೂ ಸಿಬ್ಬಂದಿ ದೃಶ್ಯವನ್ನು ವಿವಿಧ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಕಳುಹಿಸಿದ್ದರು.

ಈ ನಡುವೆ ಚಿಕ್ಕಪೇಟೆಯ ಅಂಗಡಿಯೊಂದರ ಎದುರು ಆ ಮಹಿಳೆ ಕಾಣಿಸಿಕೊಂಡಿದ್ದರು. ಇದನ್ನು ಗಮನಿಸಿದ್ದ ಸ್ಥಳೀಯರು ಉಮೇದ್‌ಗೆ ಮಾಹಿತಿ ನೀಡಿದ್ದರು. ಅಲ್ಲಿಗೆ ತೆರಳಿದ್ದ ಉಮೇದ್ ಮಹಿಳೆ ಎದೆಗೆ ಒದ್ದು ಹಲ್ಲೆ ಮಾಡಿದ್ದರು. ಇದಕ್ಕೆ ಅಂಗಡಿ ಸಿಬ್ಬಂದಿ ಮಹೇಂದ್ರ ಸೀರ್ವಿ ಸಾಥ್ ನೀಡಿದ್ದರು. ಬಳಿಕ, ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಕಳ್ಳತನ ಪ್ರಕರಣ ದಾಖಲಿಸಿಕೊಂಡು ಪೊಲೀಸರು ಮಹಿಳೆ ಹಂಪಮ್ಮ ಅವರನ್ನು ಬಂಧಿಸಿದ್ದರು.


ಶೂ ಧರಿಸಿದ್ದ ಕಾಲಿನಿಂದ ಮಹಿಳೆಗೆ ಒದೆಯುತ್ತಿರುವ ದೃಶ್ಯ

ಮಹಿಳೆ ಮೇಲೆ ಹಲ್ಲೆ ಮಾಡುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಮೇಲೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಉಮೇದ್ ರಾಮ್, ಮಹೇಂದ್ರ ಸೀರ್ವಿ ಅವರನ್ನು ಬಂಧಿಸಿದ್ದಾರೆ.

ಗಾಂಜಾ ಮಾರಾಟ: ಮೂರು ವರ್ಷ ಜೈಲು

ಬೆಂಗಳೂರು: ಗಾಂಜಾ ಮಾರಾಟ ಮಾಡಿದ್ದ ಅಪರಾಧಿಗೆ ಮೂರು ವರ್ಷ ಜೈಲು ಶಿಕ್ಷೆ ಹಾಗೂ ₹50 ಸಾವಿರ ದಂಡ ವಿಧಿಸಿ ನಗರದ ಸಿಸಿಎಚ್ 33ನೇ ವಿಶೇಷ ನ್ಯಾಯಾಲಯವು ಆದೇಶಿಸಿದೆ.

ಸ್ಯಾಮ್ಯುವೆಲ್ ಅಲಿಯಾಸ್ ಶಾಮ್ ಶಿಕ್ಷೆಗೆ ಗುರಿಯಾದ ಅಪರಾಧಿ. 2021ರ ಡಿ.9 ರಂದು ಸ್ಯಾಮ್ಯುವೆಲ್‌ನನ್ನು ಆಡುಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದರು. ದಾಳಿ ವೇಳೆ ಐದು ಕೆ.ಜಿ. ಗಾಂಜಾ ಜಪ್ತಿ ಮಾಡಲಾಗಿತ್ತು. ಪಿಎಸ್‌ಐಗಳಾದ ಬಸವರಾಜ್ ಜಂದೆ ಹಾಗೂ ನಾಗರಾಜ್ ಎಸ್. ಶೆಟ್ಟರ್ ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷರೋಪ ಪಟ್ಟಿ ಸಲ್ಲಿಸಿದ್ದರು.

ಪೀಠೋಪಕರಣ ಮಳಿಗೆಯಲ್ಲಿ ಬೆಂಕಿ ಅವಘಡ: ಅಪಾರ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಪೈಪ್‌ಲೈನ್ ರಸ್ತೆಯ ಅಡಿಗ ಪೀಠೋಪಕರಣ ಮಳಿಗೆಯಲ್ಲಿ ಗುರುವಾರ ರಾತ್ರಿ ಬೆಂಕಿ ಅವಘಡ ಸಂಭವಿಸಿದ್ದು, ಪೀಠೋಪಕರಣಗಳು ಸುಟ್ಟು ಭಸ್ಮವಾಗಿವೆ.

ಅಂದಾಜು ₹3 ಕೋಟಿ ಮೌಲ್ಯದ ಪೀಠೋಪಕರಣಗಳು ಭಸ್ಮವಾಗಿವೆ ಎಂದು ಮಾಲೀಕರು ತಿಳಿಸಿದರು.

ಮಳಿಗೆಯು ಎರಡು ಅಂತಸ್ತಿನಲ್ಲಿದ್ದು, ನೆಲ ಮಾಳಿಗೆಯಲ್ಲಿ ರಾತ್ರಿ 2.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ.

ಬೆಂಕಿ ವ್ಯಾಪಿಸುವುದಕ್ಕೂ ಮುನ್ನ ಮೊದಲ ಅಂತಸ್ತಿನಲ್ಲಿ ಮಲಗಿದ್ದ ನಾಲ್ಕು ಮಂದಿ ಕಾರ್ಮಿಕರು, ಹೊರಗೆ ಬಂದು ಪಾರಾಗಿದ್ದಾರೆ. ನಂತರ, ಬೆಂಕಿಯು ಇಡೀ ಮಳಿಗೆಗೆ ವ್ಯಾಪಿಸಿ, ಪೀಠೋಪಕರಣಗಳು ಹೊತ್ತಿ ಉರಿದಿವೆ.

ನಾಲ್ಕು ತಾಸು ಕಾರ್ಯಾಚರಣೆ: ಅಗ್ನಿಶಾಮಕ ಇಲಾಖೆಯ 13 ವಾಹನಗಳನ್ನು ಬೆಂಕಿ ನಂದಿಸುವ ಕಾರ್ಯಾಚರಣೆಗೆ ಬಳಕೆ ಮಾಡಿಕೊಳ್ಳಲಾಯಿತು. ಸಿಬ್ಬಂದಿಯು ನಾಲ್ಕು ತಾಸಿಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಅಡಿಗ ಮಳಿಗೆಯಲ್ಲಿ ಪೂಜಾ ಮಂಟಪಗಳು ಹಾಗೂ ಪೀಠೋಪಕರಣಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತದೆ. ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ ಸಂಭವಿಸಿರುವಂತೆ ಕಾಣಿಸುತ್ತಿದೆ. ಅಗ್ನಿಶಾಮಕ ಸಿಬ್ಬಂದಿಯು ಪರಿಶೀಲನೆ ಮಾಡಿ ವರದಿ ನೀಡಿದ ಬಳಿಕ ಅವಘಡಕ್ಕೆ ನಿಖರ ಕಾರಣ ಏನು ಎಂಬುದು ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದರು. ವೈಯಾಲಿಕಾವಲ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

ಮಾರಕಾಸ್ತ್ರದಿಂದ ವಾಹನಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಸೇರಿ ನಗರದ ವಿವಿಧೆಡೆ ರಸ್ತೆಬದಿಯಲ್ಲಿ ನಿಲುಗಡೆ ಮಾಡಿದ್ದ ವಾಹನಗಳ ಮೇಲೆ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹೊಡೆದು ಹಾನಿ ಮಾಡಿದ್ದಾರೆ.

ಸುಮಾರು 20ಕ್ಕೂ ಹೆಚ್ಚು ವಾಹನಗಳಿಗೆ ಹಾನಿಯಾಗಿದೆ. ಇದೀಗ ಪೊಲೀಸರು ಆರೋಪಿಗಳ ಪತ್ತೆ ಕಾರ್ಯ ನಡೆಸುತ್ತಿದ್ದಾರೆ.

ಬ್ಯಾಡರಹಳ್ಳಿಯ ರಸ್ತೆಬದಿ ನಿಲುಗಡೆ ಮಾಡಲಾಗಿದ್ದ ಕಾರುಗಳ ಗಾಜುಗಳನ್ನು ಆರೋಪಿಗಳು ಒಡೆದು ಹಾನಿ ಮಾಡಿದ್ದಾರೆ. 15 ಕಾರುಗಳು, 1 ದ್ವಿಚಕ್ರ ವಾಹನಕ್ಕೆ ಹಾನಿಯಾಗಿದೆ. ಈ ಬಗ್ಗೆ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇನ್ನು ಅನ್ನಪೂರ್ಣೇಶ್ವರಿ ನಗರದ ಮುದ್ದಯ್ಯನ ಪಾಳ್ಯದಲ್ಲಿ ಬುಧವಾರ ರಾತ್ರಿ ಆರೋಪಿಗಳು ದೊಣ್ಣೆ ಹಿಡಿದು ತಿರುಗಾಡುತ್ತಾ ರಸ್ತೆಬದಿಯಲ್ಲಿ ನಿಲ್ಲಿಸಿದ್ದ 6 ಕಾರುಗಳು ಹಾಗೂ 1 ಆಟೊರಿಕ್ಷಾಕ್ಕೆ ಹಾನಿ ಮಾಡಿದ್ದಾರೆ.

ನಂತರ, ಮಾಗಡಿ ರಸ್ತೆಗೆ ತೆರಳಿ ಅಲ್ಲೂ ರಸ್ತೆಬದಿಯಲ್ಲಿ ನಿಲುಗಡೆ ಮಾಡಿದ್ದ ಹಾಲಿನ ಕ್ಯಾಂಟರ್ ವಾಹನದೊಳಗೆ ಮಲಗಿದ್ದ ಚಾಲಕನನ್ನು ಬೆದರಿಸಿ ಅವರ ಮೇಲೆ ಹಲ್ಲೆ ನಡೆಸಿ ಮೊಬೈಲ್ ಹಾಗೂ ಹಣ ಕಸಿದುಕೊಂಡು ಪರಾರಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನೈಸ್ ಸಂಸ್ಥೆ ದೂರು; ಪ್ರಕರಣ ದಾಖಲು

ನಕಲಿ ಜಿಪಿಎ, ಕರಾರು ಒಪ್ಪಂದ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಜಿಪಿಎ ಹಾಗೂ ಕರಾರು ಒಪ್ಪಂದ ತಯಾರು ಮಾಡಿಕೊಂಡಿದ್ದ ಆರೋಪಿಗಳ ವಿರುದ್ಧ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೈಸ್ ಸಂಸ್ಥೆಯವರು ನೀಡಿದ ದೂರಿನ ಮೇರೆಗೆ ಕೆ.ವಿ.ಚಂದ್ರನ್ ಹಾಗೂ ಇತರರ ವಿರುದ್ಧ ಗುರುವಾರ ಪ್ರಕರಣ ದಾಖಲಾಗಿದೆ.

ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿಯ ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ.86ರಲ್ಲಿ 79 ಎಕರೆ ಏಳು ಗುಂಟೆ ಜಮೀನನ್ನು ಕೆಐಎಡಿಬಿಯು ನೈಸ್ ಸಂಸ್ಥೆಗೆ 2000ರಲ್ಲಿ ಪೊಸಿಷನ್ ಸರ್ಟಿಫಿಕೇಟ್ ನೀಡಿ ಹಸ್ತಾಂತರಿಸಿತ್ತು. ಕೆ.ವಿ.ಚಂದ್ರನ್ ಹಾಗೂ ಇತರರು ಸೇರಿಕೊಂಡು ಆಧಾರ್ ಕಾರ್ಡ್‌ನಲ್ಲಿ ತಮ್ಮ ಜನ್ಮ ದಿನಾಂಕವನ್ನು 1934ರ ಜೂನ್ 7 ಎಂಬುದಾಗಿ ನಕಲಿ ದಾಖಲೆ ಸೃಷ್ಟಿಸಿಕೊಂಡಿದ್ದರು. ಎಂ.ಪಿ. ದೇವರಾಜು ಅವರ ಜತೆಗೆ ಸೇರಿಕೊಂಡು 2023ರ ಜುಲೈ 12ರಂದು ಜಿಪಿಎ ಹಾಗೂ ಕರಾರು ಒಪ್ಪಂದ ತಯಾರು ಮಾಡಿಕೊಂಡಿದ್ದರು.

ಆ ಕರಾರು ಹಾಗೂ ಜಿಪಿಎನಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂಬರ್ 86 ಹಾಗೂ ಹೊಸ ಸರ್ವೆ ನಂಬರ್ 144ರಲ್ಲಿ ನಾಲ್ಕು ಎಕರೆ ಜಮೀನು ತಮಗೆ ಸೇರಿರುವಂತೆ ಕರಾರಿನಲ್ಲಿ ನಮೂದು ಮಾಡಿದ್ದಾರೆ. ಕೆ.ವಿ.ಚಂದ್ರನ್ ಕರ್ನಾಟಕ ಬ್ಯಾಂಕ್, ಹೇರೋಹಳ್ಳಿ ಶಾಖೆಯಲ್ಲಿ ಖಾತೆ ತೆರೆಯುವಾಗ ಸಲ್ಲಿಸಿದ್ದ ಆಧಾರ್ ಕಾರ್ಡ್ ಹಾಗೂ ಪಾನ್‌ಕಾರ್ಡ್ ದಾಖಲೆಗಳಲ್ಲಿ ಚಂದ್ರನ್ ಅವರ ಜನ್ಮ ದಿನಾಂಕ 1957ರ ಜೂನ್ 7 ಎಂದು ನಮೂದಾಗಿರುತ್ತದೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ನೀಡಿದ್ದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸಚಿವ ಸುಧಾಕರ್ ಮನೆಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಥಿ ಉಪನ್ಯಾಸಕರ ನೇಮಕಾತಿ ವಿಳಂಬ ಖಂಡಿಸಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರ ಮನೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಪೊಲೀಸರು ಗುಂಪನ್ನು ಚದುರಿಸಿ, ಕಾರ್ಯಕರ್ತರ ಯತ್ನವನ್ನು ವಿಫಲಗೊಳಿಸಿದರು.

ಅತಿಥಿ ಉಪನ್ಯಾಸಕರ ನೇಮಕ ಮಾಡದೆ ಸರ್ಕಾರ ಬೇಜವಾಬ್ದಾರಿ ತೋರುತ್ತಿದೆ. ಅನಗತ್ಯ ವಿಳಂಬ ಮಾಡುತ್ತಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ಹಿನ್ನಡೆಯಾಗಿದೆ. ಅವರ ಭವಿಷ್ಯದ ಜತೆ ಚೆಲ್ಲಾಟವಾಡುತ್ತಿದೆ. ತಕ್ಷಣ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನೇ ನಂಬಿಕೊಂಡು ಪ್ರವೇಶ ಪಡೆದ ಬಡ, ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ.

ರಾಜ್ಯ ಸರ್ಕಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕು. ಇಲ್ಲವಾದರೆ ಸಚಿವ ಎಂ.ಸಿ.ಸುಧಾಕರ್ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಸಂಜಯ್ ನಗರದಲ್ಲಿರುವ ಸಚಿವರ ಮನೆಯ ಮುಂದೆ ಧರಣಿ ಕುಳಿತ ಎಬಿವಿಪಿ ಕಾರ್ಯಕರ್ತರನ್ನು ಸ್ವಾತಂತ್ರ್ಯ ಉದ್ಯಾನದ ಬಳಿ ಪ್ರತಿಭಟನೆ ನಡೆಸುವಂತೆ ಮನವೊಲಿಸಿದರು.

ಒಪ್ಪದೇ ಇದ್ದಾಗ, ಅವರನ್ನು ವಶಕ್ಕೆ ಪಡೆದ ಪೊಲೀಸರು ನಂತರ ಬಿಡುಗಡೆ ಮಾಡಿದರು.

ಬ್ಯಾಡ್ಮಿಂಟನ್: ಭಾರತಕ್ಕೆ 4 ಪದಕ

ನವದೆಹಲಿ (ಪಿಟಿಐ): ಭಾರತ ತಂಡದ ಸ್ಪರ್ಧಿಗಳು, ಕ್ವಾಲಾಲಂಪುರದಲ್ಲಿ ಸೆ. 16 ರಿಂದ 20ರವರೆಗೆ ನಡೆದ ವಿಶೇಷ ಒಲಿಂಪಿಕ್ಸ್ ಏಷ್ಯಾ ಪೆಸಿಫಿಕ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಒಂದು ಚಿನ್ನ, ಮೂರು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಚಾನ್ವಿ ಶರ್ಮಾ ಮಹಿಳೆಯರ ಸಿಂಗಲ್ಸ್‌ನಲ್ಲಿ ಚಿನ್ನ ಗೆದ್ದರು. ನಂತರ ಸುಜಿತಾ ಸುಕುಮಾರನ್ ಜೊತೆಗೂಡಿ ಡಬಲ್ಸ್‌ನಲ್ಲಿ ಬೆಳ್ಳಿ ಜಯಿಸಿದರು ಎಂದು ಸ್ಪೆಷಲ್ ಒಲಿಂಪಿಕ್ಸ್ ಭಾರತ್ ಪ್ರಕಟಣೆ ತಿಳಿಸಿದೆ.

ಅಂಕಿತ್ ದಲಾಲ್ ಪುರುಷರ ಸಿಂಗಲ್ಸ್‌ನಲ್ಲಿ ಬೆಳ್ಳಿ ಜಯಿಸಿದರಲ್ಲದೇ, ನಂತರ ಡಬಲ್ಸ್‌ನಲ್ಲಿ ಅಮಲ್ ಬಿಜು ಜೊತೆಗೂಡಿ ಇನ್ನೊಂದು ಬೆಳ್ಳಿ ಪದಕವನ್ನೂ ಗೆದ್ದರು.

ಚಿಟಿಕೆ ಸುದ್ದಿ

ಸುಳ್ಳು ಪ್ರಕರಣ ದಾಖಲು: ಆರೋಪ

ಬೆಂಗಳೂರು: ಕೇಂದ್ರ ಸರ್ಕಾರದ ಸಂಸದೀಯ ರಾಜಭಾಷಾ ಸಮಿತಿಯು ಹಿಂದಿಯೇತರ ರಾಜ್ಯಗಳ ಜನರ ಮೇಲೆ ಹಿಂದಿ ಹೇರಿಕೆ ಮಾಡುವ ಸಂಬಂಧ ನಗರದ ಹೋಟೆಲ್‌ನಲ್ಲಿ ನಡೆಸುತ್ತಿದ್ದ ಕಾರ್ಯಕ್ರಮದ ವಿರುದ್ಧ ಪ್ರತಿಭಟನೆ ನಡೆಸಿದ ಕಾರ್ಯಕರ್ತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಜೈಲಿಗೆ ಕಳುಹಿಸಲಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ ಆರೋಪಿಸಿದರು.


ನಾರಾಯಣ ಗೌಡ

‘ಪೊಲೀಸರ ಕೇಸು, ಜೈಲಿಗೆ ಹೆದರುವುದಿಲ್ಲ. ಹೆದರಿಸಿ ನಮ್ಮ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲ. ವೇದಿಕೆ ಕಾರ್ಯಕರ್ತರ ಮೇಲೆ ಹೂಡಲಾಗಿರುವ ಸುಳ್ಳು ಮೊಕದ್ದಮೆಗಳನ್ನು ರಾಜ್ಯ ಸರ್ಕಾರ ಈ ಕೂಡಲೇ ಹಿಂದಕ್ಕೆ ಪಡೆದು, ಅವರನ್ನು ಬಿಡುಗಡೆ ಮಾಡಬೇಕು. ಇಲ್ಲವಾದಲ್ಲಿ ರಾಜ್ಯದಾದ್ಯಂತ ಚಳವಳಿ ಸಂಘಟಿಸಲಾಗುವುದು’ ಎಂದು ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ಇನ್ನು ಮುಂದೆ ರಾಜ್ಯದ ಯಾವುದೇ ಭಾಗದಲ್ಲಿ ಹಿಂದಿ ಪ್ರಚಾರಕ್ಕೆ ಯಾವುದೇ ಸಂಸ್ಥೆ ಕಾರ್ಯಕ್ರಮ ಮಾಡಲು ಮುಂದಾದರೆ ಅದರ ಪರಿಣಾಮವನ್ನು ಅವರೇ ಎದುರಿಸಬೇಕಾಗುತ್ತದೆ ಎಂದರು.

ನಗರದ ತಾಜ್ ವೆಸ್ಟೆಂಡ್ ಹೋಟೆಲ್‌ಗೆ ಅಕ್ರಮ ಪ್ರವೇಶ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ವೇದಿಕೆಯ 41 ಕಾರ್ಯಕರ್ತರಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಸೋಂಪುರ: ಪ್ರತಿ ಎಕರೆಗೆ ₹1.6 ಕೋಟಿ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯ ನಾಲ್ಕು ಗ್ರಾಮಗಳಲ್ಲಿ ಭೂಸ್ವಾಧೀನಗೊಳ್ಳಲಿರುವ ಜಮೀನಿಗೆ ದರ ನಿಗದಿಪಡಿಸಲಾಗಿದ್ದು, ಕೆಐಎಡಿಬಿಯಿಂದ ಒಂದು ಎಕರೆಗೆ ₹1ಕೋಟಿ 60 ಲಕ್ಷ ನೀಡಲಾಗುತ್ತದೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ವತಿಯಿಂದ ಹೊಸಪಾಳ್ಯದಲ್ಲಿ ಸೋಂಪುರ ಕೈಗಾರಿಕಾ ಪ್ರದೇಶದ ಏಳನೇ ಹಂತದ ಕಂಬಾಳು, ಕಾಸರಘಟ್ಟ, ಫಂಟೆ ಹೊಸಹಳ್ಳಿ, ಮಾಚನಹಳ್ಳಿ ಗ್ರಾಮಗಳ ಸುಮಾರು 444.31 ಎಕರೆ ಭೂ ಸ್ವಾಧೀನದ ಜಮೀನುಗಳ ದರ ನಿಗದಿ ಮಾಡುವ ಸಂಬಂಧ ರೈತರ ಜತೆ ಕೆಐಎಡಿಬಿ ಅಧಿಕಾರಿಗಳು ಸಭೆ ನಡೆಸಿದರು.


ನೆಲಮಂಗಲ ತಾಲ್ಲೂಕು ಹೊಸಪಾಳ್ಯದಲ್ಲಿ ನಡೆದ ಸಭೆಯಲ್ಲಿ ಎ.ಎನ್.ರಘುನಂದನ್ ಮಾತನಾಡಿದರು.

ಈ ವೇಳೆ ಮಾತನಾಡಿದ ಕೆಐಎಡಿಬಿ ವಿಶೇಷ ಭೂ ಸ್ವಾಧೀನಾಧಿಕಾರಿ ರಘುನಂದನ್ ಮಾತನಾಡಿ, ‘ಇಲ್ಲಿನ ನಾಲ್ಕು ಗ್ರಾಮಗಳ ಜಮೀನ ದರ ಎಕರೆಗೆ ₹ 1 ಕೋಟಿ 60 ಲಕ್ಷ ನಿಗದಿಯಾಗಿದೆ’ ಎಂದು ಪ್ರಕಟಿಸಿದರು.

‘ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಕೆಲವು ಅಧಿಕಾರಿಗಳೇ ತಕರಾರು ಅರ್ಜಿ ಹಾಕುವಂತೆ ಮಾಡಿ, ಅದನ್ನು ಬಗೆಹರಿಸುವ ನೆಪದಲ್ಲಿ ರೈತರಿಂದ ಕಮಿಷನ್ ವಸೂಲಿ ಮಾಡುತ್ತಿದ್ದಾರೆ. ಭೂಮಿ ಕಳೆದುಕೊಳ್ಳುವವರು ಹಣ ಪಡೆಯಲು ಲಂಚ ಕೊಡುವಂತಾಗಿದೆ’ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

‘ಕಾಸರಘಟ್ಟ, ಕಂಬಾಳು, ಫಂಟೆಹೊಸಹಳ್ಳಿ ಗ್ರಾಮಗಳು ಜಲಾನಯನ ಪ್ರದೇಶಕ್ಕೆ ಒಳಪಟ್ಟಿವೆ. ಆದರೂ ಅಲ್ಲಿನ ಭೂಮಿಯನ್ನು ಭೂಸ್ವಾಧೀನದಿಂದ ಕೈ ಬಿಡಬೇಕು’ ಎಂದು ಕೆಲವರು ಆಗ್ರಹಿಸಿದರು.

ಭಾರತೀಯ ಕಿಸಾನ್ ಸಂಘದ ಕಾಸರಘಟ್ಟ ಗಂಗಾಧರ್ ಮಾತನಾಡಿ, ‘ಕೃಷಿಯನ್ನೇ ನಂಬಿ ಬದುಕುತ್ತಿರುವ ಈ ಭಾಗದ ಭೂಮಿ ಸ್ವಾಧೀನಪಡಿಸಿಕೊಂಡರೆ ಏನು ಮಾಡಬೇಕು. ಸರ್ಕಾರ ನೀಡುವ ಪರಿಹಾರದಿಂದ ಬೇರೆ ಕಡೆ ಜಮೀನು ಕೊಳ್ಳಲು ಆಗುವುದಿಲ್ಲ. ಮುಂದೆ ಭೂ ಪರಿಹಾರ ತೆಗೆದುಕೊಳ್ಳಬೇಕಾದರೆ ಮಧ್ಯವರ್ತಿಗಳನ್ನು ಅವಲಂಬಿಸುವ ಸನ್ನಿವೇಶ ಸೃಷ್ಟಿಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಫುಟ್‌ಬಾಲ್: ಸೌತ್ ಯುನೈಟೆಡ್‌ಗೆ ಜಯ

ಬೆಂಗಳೂರು: ಮೊಹಮ್ಮದ್ ಕೈಫ್ (64ನೇ ನಿ.) ಹಾಗೂ ಮಕಕ್ ಮಯುಂ ದನಿಯಲ್ (66ನೇ ನಿ.) ಅವರ ಗೋಲುಗಳ ನೆರವಿನಿಂದ ಬೆಂಗಳೂರು ಯುನೈಟೆಡ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–0ಯಿಂದ ಬೆಂಗಳೂರು ಸಿಟಿ ಎಫ್‌ಸಿ ತಂಡವನ್ನು ಸೋಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 1–0ಯಿಂದ ಎಫ್‌ಸಿ ಅಗ್ನಿಪುತ್ರ ತಂಡವನ್ನು ಮಣಿಸಿತು. ಕಿಕ್‌ಸ್ಟಾರ್ಟ್ ಎಫ್‌ಸಿ ಹಾಗೂ ಕೊಡಗು ಎಫ್‌ಸಿ ನಡುವಣ ಪಂದ್ಯವು 2–2 ಡ್ರಾ ಆಯಿತು.


ಕೊಡಗು ಎಫ್‌ಸಿ ತಂಡದ ಜ್ಯಾಕ್ ಲಿಯಾನ್‌ಲಾಲ್‌ಮಾವಿ ನೈಹಸಿಲ್ (ಎಡ) ಹಾಗೂ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದ ಎಂಗೈರಂಗ್ಬಮ್ ಅವರು ಚೆಂಡಿಗಾಗಿ ಸೆಣಸಿದರು ಚಿತ್ರ: ಪುಷ್ಕರ್ ವಿ.


ಬಸವೇಶ್ವರನಗರದ ವಾತ್ಸಲ್ಯ ಸ್ಪೆಷಾಲಿಟಿ ಕ್ಲಿನಿಕ್ ವತಿಯಿಂದ ಡಾ.ಪಿ ಚೇತನಾ ಅರವಿಂದ ನೇತೃತ್ವದಲ್ಲಿ ಗುರುವಾರ ಮಹಿಳೆಯರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಯಿತು

ಆನೆ ದಾಳಿ: ಕಚೇರಿಗೆ ಬೀಗ ಹಾಕಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಕುಂಭಾಪುರದಲ್ಲಿ ಕಾಡಾನೆ ಹಾವಳಿಯಿಂದ ಬೆಳೆ ನಷ್ಟವಾಗಿದ್ದು, ಆಕ್ರೋಶಗೊಂಡ ರೈತರು, ನಗರದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಕಚೇರಿಗೆ ಶುಕ್ರವಾರ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ವೇಳೆ ಮಹದೇವ ಎಂಬುವರು ವಿಷ ಕುಡಿಯಲು ಯತ್ನಿಸಿದರೆ, ಶಾಂತಕುಮಾರ್ ಮೈಮೇಲೆ ಡೀಸೆಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳಲು ಯತ್ನಿಸಿದರು. ಇತರೆ ಪ್ರತಿಭಟನಕಾರರು, ಪೊಲೀಸರು ಇಬ್ಬರಿಂದಲೂ ಬಾಟಲಿ ಕಸಿದುಕೊಂಡರು.

‘ಗುರುವಾರ ರಾತ್ರಿ ಆನೆಯು ತೆಂಗಿನ ಮರ, ರೇಷ್ಮೆ ಸೇರಿದಂತೆ ಇತರ ಬೆಳೆಗಳನ್ನು ನಾಶ ಮಾಡಿದೆ. ಸುತ್ತಮುತ್ತಲಿನ ಗ್ರಾಮಗಳಲ್ಲಿ ಆನೆ ಕಾಟದಿಂದ ಯಾವ ಬೆಳೆಯೂ ಉಳಿಯುತ್ತಿಲ್ಲ. ಸಮಸ್ಯೆ ತಡೆಗೆ ಅರಣ್ಯ ಇಲಾಖೆಗೆ ಮನವಿ ಮಾಡಿಸಾಕಾಗಿದೆ’ ಎಂದು ರೈತರು ದೂರಿದರು.

‘ಕಾಡಾನೆ ಬರದಂತೆ ತಡೆಯಲು ಗ್ರಾಮದಲ್ಲಿ ಮೈಕ್ ಅಳವಡಿಸಲಾಗಿತ್ತು. ಗ್ರಾಮದ ಸಮೀಪ ಜಿಲ್ಲಾಧಿಕಾರಿ ನಿವಾಸವಿದ್ದು, ಅವರಿಗೆ ಅಡಚಣೆಯಾಗುತ್ತಿದೆ ಎಂಬ ಕಾರಣಕ್ಕೆ ಪೊಲೀಸರು ಮೈಕ್ ಕಿತ್ತುಕೊಂಡು ಹೋಗಿದ್ದಾರೆ’ ಎಂದು ಆರೋಪಿಸಿದರು.

ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಬೆಳೆ ನಾಶಕ್ಕೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಸ್ಥಳಕ್ಕೆ ಬಂದ ಡಿಸಿಎಫ್ ರಾಮಕೃಷ್ಣಪ್ಪ ಅವರು ಪರಿಹಾರದ ಭರವಸೆ ನೀಡಿದ್ದು, ಬಳಿಕ ರೈತರು ಪ್ರತಿಭಟನೆ ನಿಲ್ಲಿಸಿದರು.

ಟಿ.ಟಿ: ತಮನ್ನಾ, ಆರ್ಣವ್ ಚಾಂಪಿಯನ್

ಬೆಂಗಳೂರು: ತಮನ್ನಾ ನೇರ್ಲಾಜೆ ಮತ್ತು ಆರ್ಣವ್ ಮಿಥುನ್ ಅವರು ಜೆಟಿಟಿಎ ಆಶ್ರಯದಲ್ಲಿ ಇಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಹೋಪ್ಸ್ ಬಾಲಕಿಯರ ಮತ್ತು ಬಾಲಕರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು.

ನಗರದ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶುಕ್ರವಾರ ನಡೆದ ಫೈನಲ್‌ನಲ್ಲಿ ತಮನ್ನಾ 11-9, 14-12, 6-11, 11-9 ರಿಂದ ಸಮನ್ವಿ ಸಂದೀಪ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ತಮನ್ನಾ 5-11, 11-5, 11-9, 11-7 ರಿಂದ ಸಾನ್ವಿ ಹರಿಪ್ರಸಾದ್ ರಾವ್ ವಿರುದ್ಧ; ಸಮನ್ವಿ 2-11, 11-9, 11-8, 11-4 ರಿಂದ ನಂದನಾ ಬಂಡಿ ವಿರುದ್ಧ ಗೆಲುವು ಸಾಧಿಸಿದ್ದರು.

ಆರ್ಣವ್ ಅವರು ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 12-10, 11-7, 9-11, 8-11, 11-6 ರಿಂದ ಶರ್ವಿಲ್ ಕರಂಬೆಲ್ಕರ ಅವರನ್ನು ಮಣಿಸಿದರು. ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಆರ್ಣವ್ 11-4, 11-5, 11-4 ರಿಂದ ಪೂರಬ್ ಬಿಸ್ವಾಸ್ ಎದುರು; ಶರ್ವಿಲ್ 11-1, 11-4, 11-6ರಿಂದ ಮುಕುಂದ್ ರಾವ್ ಎದುರು ಜಯ ಸಾಧಿಸಿದ್ದರು.


ಪ್ರಶಸ್ತಿಯೊಂದಿಗೆ ಆರ್ಣವ್ ಮಿಥುನ್ ಮತ್ತು ತಮನ್ನಾ ನೇರ್ಲಾಜೆ

ಮಾನವೀಯತೆ ಜಾಗೃತಿ ಅಭಿಯಾನ

ಬೆಂಗಳೂರು: ಬೆಂಗಳೂರಿನ ಗರ್ಲ್ಸ್ ಇಸ್ಲಾಮಿಕ್ ಆರ್ಗನೈಸೇಷನ್ (ಜಿಯೋ) ಕರ್ನಾಟಕದಾದ್ಯಂತ ಅ.2 ರಿಂದ 12ರವರೆಗೆ 'ಅರಿವು: ಮಾನವೀಯತೆಯ ಜಾಗೃತಿ' ಅಭಿಯಾನ ಹಮ್ಮಿಕೊಂಡಿದೆ.

ಅಭಿಯಾನದ ಅಂಗವಾಗಿ ವಿವಿಧ ಸಮಾಜ ಸೇವಾ ಚಟುವಟಿಕೆಗಳು ನಡೆಯಲಿವೆ. ಅಂತರ್ಧರ್ಮೀಯ ಸಂವಾದ, ಮಾನಸಿಕ ಆರೋಗ್ಯ ಕಾರ್ಯಾಗಾರ, ಕಲೆ, ಕವನ ಮತ್ತು ಪೋಸ್ಟರ್ ಸ್ಪರ್ಧೆ, ಸಾಮಾಜಿಕ ಮಾಧ್ಯಮ ರೀಲ್ಸ್ ಮತ್ತು ಜಾಗೃತಿ ವಿಡಿಯೊಗಳು, ಮಾಹಿತಿ ಪುಸ್ತಕ ಮತ್ತು ಕರಪತ್ರಿಕೆಗಳ ವಿತರಣೆ, ಮನೆಮನೆಗೆ ಜಾಗೃತಿ ಭೇಟಿ ಕಾರ್ಯಕ್ರಮಗಳು ನಡೆಯಲಿವೆ ಎಂದು ಸಂಘಟನೆ ರಾಜ್ಯಾಧ್ಯಕ್ಷೆ ನವೀದಾ ಅಸ್ಸಾದಿ ತಿಳಿಸಿದರು.

‘ಅಂತರ್ಧರ್ಮೀಯ ಸಂವಾದ ಉತ್ತೇಜಿಸುವುದು, ಮಾನವೀಯ ಸಮಸ್ಯೆಗಳಿಗೆ ಸ್ಪಂದಿಸಿ ಸಮಾಜದಲ್ಲಿ ಬದಲಾವಣೆ ತರಲು ಪ್ರಯತ್ನಿಸುವುದು. ಸಾಮಾಜಿಕ ಬದಲಾವಣೆಗೆ ವೇದಿಕೆಗಳನ್ನು ಒದಗಿಸುವುದು, ಮಾನವೀಯ ಕಾರ್ಯಗಳ ಮೂಲಕ ಇಸ್ಲಾಂನ ಸಂದೇಶ ತಿಳಿಸುವುದು ಅಭಿಯಾನದ ಉದ್ದೇಶವಾಗಿದೆ’ ಎಂದು ಹೇಳಿದರು.

ನಗರದಲ್ಲಿ ಇಂದು

ವಿಶ್ವ ಅಲ್ಝೈಮರ್ (ಮರೆವು ಕಾಯಿಲೆ) ಮಾಸಿಕದ ಪ್ರಯುಕ್ತ ವಾಕಥಾನ್: ಆಯೋಜನೆ: ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್, ಸ್ಥಳ: ಸ್ವಾತಂತ್ರ್ಯ ಉದ್ಯಾನದಿಂದ ವಿಧಾನಸೌಧ, ಬೆಳಿಗ್ಗೆ 6.45ರಿಂದ

‘ರಾಜ್ಯ ಉನ್ನತ ಶಿಕ್ಷಣ ನೀತಿ’ ಬಗ್ಗೆ ಶೃಂಗ: ಶಿವಕಾಂತಮ್ಮ ನಾಯಕ್, ಎನ್.ಎಂ. ನಾಗರಾಜ್, ಸುಮತಿ ಬಿ.ಎಸ್, ರುದ್ರೇಶ್ ಎಚ್.ಎಸ್., ಅಧ್ಯಕ್ಷತೆ: ಎಸ್. ಚಂದ್ರಶೇಖರ ಶೆಟ್ಟಿ, ಆಯೋಜನೆ ಹಾಗೂ ಸ್ಥಳ: ವಂಡರ್‌ಲಾ, ಮೈಸೂರು ರಸ್ತೆ, ಬೆಳಿಗ್ಗೆ 9ರಿಂದ

ಪುನರ್ಮನನ ಕಾರ್ಯಕ್ರಮ ಹಾಗೂ ರವಿವರ್ಮ ಕುಮಾರ್ ಅವರಿಗೆ ಅಭಿನಂದನೆ: ಅತಿಥಿ: ಲಾರೆನ್ಸ್ ಸುರೇಂದ್ರ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಶೇಷಾದ್ರಿಪುರಂ ಕಾನೂನು ಕಾಲೇಜು, ಸ್ಥಳ: ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್, ಶೇಷಾದ್ರಿಪುರ, ಬೆಳಿಗ್ಗೆ 9

ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಅತಿಥಿ: ಎಂ.ಸಿ. ಸುಧಾಕರ್, ಘಟಿಕೋತ್ಸವ ಭಾಷಣ: ಜೆ.ಎನ್. ಮೂರ್ತಿ, ಆಯೋಜನೆ: ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ, ಸ್ಥಳ: ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಮೈದಾನ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 10

ಡಾ.ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾರಕ ದತ್ತಿ ಉಪನ್ಯಾಸ: ‘ಪ್ರೊ. ದೊಡ್ಡರಂಗೇಗೌಡ ಅವರ ಕಾವ್ಯ–ಒಂದು ವಿವೇಚನೆ’ ವಿಷಯದ ಬಗ್ಗೆ: ಸೋಮಶಂಕರ ಎನ್., ಅಧ್ಯಕ್ಷತೆ: ಶೀಲಾದೇವಿ ಎಸ್. ಮಳೀಮಠ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಸಮುದಾಯ 50: ‘ಮನುಷ್ಯತ್ವದೆಡೆಗೆ ಸಮುದಾಯ 50’ ಶೀರ್ಷಿಕೆಯಡಿ ಕಲಾ ಶಿಬಿರದ ಕಲಾಕೃತಿಗಳ ಪ್ರದರ್ಶನ ಹಾಗೂ ಮಾರಾಟ, ಉದ್ಘಾಟನೆ: ಎಂ.ಜೆ. ಕಮಲಾಕ್ಷಿ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಅತಿಥಿಗಳು: ಅಗ್ರಹಾರ ಕೃಷ್ಣಮೂರ್ತಿ, ಪ್ರಸನ್ನ, ಆಯೋಜನೆ: ಸಮುದಾಯ ಕರ್ನಾಟಕ, ಸ್ಥಳ: ದೇವರಾಜ ಅರಸು ಸಭಾಂಗಣ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಳಿಗ್ಗೆ 11

ಅಭಿನಯ ಹಾಗೂ ನಿರ್ದೇಶನ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ: ಮುಖ್ಯ ಅತಿಥಿ: ರಘು ಮುಖರ್ಜಿ, ಕಿರುಚಿತ್ರ ಬಿಡುಗಡೆ: ಆದರ್ಶ್ ಈಶ್ವರಪ್ಪ ನಿರ್ದೇಶನದ ‘ದಿ ರಿಯೂನಿಯನ್’, ಮನೋಜ್ ಕುಮಾರ್ ವಿ. ನಿರ್ದೇಶನದ ‘60 ಕ್ಯಾರೆಟ್ಸ್’, ಆಯೋಜನೆ ಹಾಗೂ ಸ್ಥಳ ಟೆಂಟ್ ಸಿನಿಮಾ, ಲಿರಿಕ್ಸ್, 17ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಮಧ್ಯಾಹ್ನ 12

‘ಕಲಬುರಗಿ ಕಲಾ ದರ್ಶನ’ ಸಮೂಹ ವರ್ಣಚಿತ್ರ ಪ್ರದರ್ಶನ: ಉದ್ಘಾಟನೆ: ಪ.ಸ. ಕುಮಾರ್, ಅತಿಥಿಗಳು: ಸಿ.ಚಂದ್ರಶೇಖರ, ಶ್ರೀನಿವಾಸು ಪರಿಸಿ, ಪರಶುರಾಮ್ ಪಿ., ಆಯೋಜನೆ: ರಂಗೋಲಿ ಮೆಟ್ರೊ ಕಲಾ ಕೇಂದ್ರ, ಕಲಬುರಗಿಯ ದೃಶ್ಯ ಬೆಳಕು ಸಾಂಸ್ಕೃತಿಕ ಸಂಸ್ಥೆ, ಸ್ಥಳ: ರಂಗೋಲಿ ಮೆಟ್ರೊ, ಎಂ.ಜಿ. ರಸ್ತೆ, ಸಂಜೆ 4


ಪ.ಸ.ಕುಮಾರ್

‘ಸ್ವರ ಸಂಧ್ಯಾ’ ಸಂಗೀತ ಸಂಜೆ: ತಬಲಾ: ಮಿಲಿಂದ್, ಹಾರ್ಮೋನಿಯಂ: ವಿಶ್ವಜಿತ್ ಕಿಣಿ, ಗಾಯನ: ರಾಮ್ ದೇಶಪಾಂಡೆ, ತಬಲಾ: ಉದಯರಾಜ್ ಕರ್ಪೂರ್, ಹಾರ್ಮೋನಿಯಂ: ರವೀಂದ್ರ ಕಟೋಟಿ, ಆಯೋಜನೆ: ಶ್ರೀರಾಮ ಕಲಾ ವೇದಿಕೆ, ಸ್ಥಳ: ಇಎಸ್‌ವಿ ಹಾಲ್, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಸಂಜೆ 5.30

ನೇತಾಜಿ ಕುರಿತ ಸಂಶೋಧನಾ ಕಾದಂಬರಿ ‘ಮಹಾಕಾಲ–2’ ಬಿಡುಗಡೆ: ಉಪಸ್ಥಿತಿ: ಸಿಬಂತಿ ಪದ್ಮನಾಭ ಕೆ.ವಿ., ರಾಜೇಶ್ ಪದ್ಮಾರ್, ಜಿ.ಬಿ. ಹರೀಶ, ಆಯೋಜನೆ: ಅಯೋಧ್ಯಾ ಪ್ರಕಾಶನ, ಸ್ಥಳ: ಸುಚಿತ್ರಾ, ಬನಶಂಕರಿ, ಸಂಜೆ 5.30

42ನೇ ಅಂತರ ವಿಭಾಗ ನಾಟಕ ಸ್ಪರ್ಧೆ ಬಹುಮಾನ ವಿತರಣೆ: ನರಸಿಂಹನಾಯ್ಕ, ಅಧ್ಯಕ್ಷತೆ: ಸುಂದರ್ ರಾಜ್ ಕೆ., ಮುಖ್ಯ ಅತಿಥಿ: ಸುಧಾ ನರಸಿಂಹ ರಾಜು, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

‘ಪ್ರಜಾಪ್ರಭುತ್ವಕ್ಕೆ ಪಾಠಗಳು’ ವಿಚಾರಸಂಕಿರಣ: ತುರ್ತು ಪರಿಸ್ಥಿತಿಯಿಂದ 50 ವರ್ಷಗಳು, ಭಾಷಣಕಾರರು: ಪೀಟರ್ ರೊನಾಲ್ಡ್ ಡಿಸೋಜಾ, ಜಾನಕಿ ನಾಯರ್, ಚಂದನ್ ಗೌಡ, ರಿಂಕು ಲಾಂಬಾ, ಥಾಮಸ್ ಅಬ್ರಹಾಂ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಸಂಜೆ 6.30

ಕಪ್ಪಣ್ಣ ಅಂಗಳ ದಶಮಾನೋತ್ಸವ: ಎಲ್ಲ ಕಲೆಗಳ ತಾಯಿ ಬೇರು ಜನಪದ: ಸವಿತಕ್ಕ, ಸಂವಾದ: ಶ್ರೀನಿವಾಸ ಜಿ. ಕಪ್ಪಣ್ಣ, ಸ್ಥಳ: ಕಪ್ಪಣ್ಣ ಅಂಗಳ, ಐದನೇ ಮುಖ್ಯರಸ್ತೆ, ಐಟಿಐ ಕಾಲೊನಿ, ಜೆ.ಪಿ. ನಗರ ಮೊದಲ ಹಂತ, ಸಂಜೆ 6.30


ಶ್ರೀನಿವಾಸ ಜಿ.ಕಪ್ಪಣ್ಣ

ಶ್ರೀನಿವಾಸ ಉಡುಪ 75: ಗಾಯನ, ಸನ್ಮಾನ, ಅತಿಥಿಗಳು: ಉದಯ್ ಗರುಡಾಚಾರ್, ವೇಲು, ವೈ.ಕೆ. ಮುದ್ದುಕೃಷ್ಣ, ಹಂಪ ನಾಗರಾಜಯ್ಯ, ಬಿ.ಆರ್. ಲಕ್ಷ್ಮಣರಾವ್, ಸನ್ಮಾನಿತರು: ರತ್ನಮಾಲಾ ಪ್ರಕಾಶ್, ಮಂಜುಳಾ ಗುರುರಾಜ್, ಬಿ.ಆರ್. ಛಾಯಾ, ಮಾಲತಿ ಶರ್ಮ, ಇಂದೂ ವಿಶ್ವನಾಥ್, ಆಯೋಜನೆ: ಅರ್ಚನಾ ಉಡುಪ, ಸ್ಥಳ: ಟೌನ್ ಹಾಲ್, ಜೆ.ಸಿ. ರಸ್ತೆ, ಸಂಜೆ 6.30

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ‘ಅಣ್ಣನ ನೆನಪು’ ಸಾಕ್ಷ್ಯ ನಾಟಕ ಪ್ರದರ್ಶನ: ನಿರ್ದೇಶನ: ಹನು ರಾಮಸಂಜೀವ್, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಟಿ.ಪಿ. ಕೈಲಾಸಂ ಅವರ ‘ಹುತ್ತದಲ್ಲಿ ಹುತ್ತ’ ನಾಟಕ ಪ್ರದರ್ಶನ: ನಿರ್ದೇಶನಾ: ಅರ್ಚನಾ ಶ್ಯಾಮ್, ತಂಡ: ಅಂತರಂಗ, ಸ್ಥಳ: ಡಾ.ಸಿ.ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 7.15

ನವರಾತ್ರಿ ವಿಶೇಷ

ದಸರಾ ಮಹೋತ್ಸವ: ಅಂಬಿಕಾ ದುರ್ಗಾ ಹೋಮ, ಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ: ರಜಪೂತ್ ಸಭಾ, ಸ್ಥಳ: ರಜಪೂತ ಭವನ, ವಸಂತನಗರ, ಬೆಳಿಗ್ಗೆ 9 ಹಾಗೂ ಸಂಜೆ 7

ನವರಾತ್ರಿ ಮಹೋತ್ಸವದ ಅಂಗವಾಗಿ ‘ಧಾತು’ ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ದಸರಾ ಉತ್ಸವ: ಲಲಿತಾ ಸಹಸ್ರನಾಮ, ಚಾಮುಂಡೇಶ್ವರಿ ಪೂಜೆ, ಪ್ರಸಾದ ವಿತರಣೆ, ದೇವರನಾಮ ಗಾಯನ: ಲಕ್ಷ್ಮಿ ವರುಣ್ ಶಿಷ್ಯ ವೃಂದ, ನವರಸ ಶಕ್ತಿ: ಅನುರಾಧಾ ವಿಕ್ರಾಂತ್ ಮತ್ತು ದೃಷ್ಟಿ ಆರ್ಟ್ ಸೆಂಟರ್‌ನಿಂದ ದುರ್ಗಾ ದೇವಿಯ 9 ಅವತಾರಗಳ ನೃತ್ಯ ನಾಟಕ, ಆಯೋಜನೆ: ಕೃಷ್ಣಬೈರೇಗೌಡ ತಂಡ, ಸ್ಥಳ: ಸಹಕಾರನಗರ ಮೈದಾನ, ಸಂಜೆ 4ರಿಂದ

ವಚನ ದಸರಾ: ವಚನ ಗಾಯನ: ಭ್ರಮರಾಂಭ ಮತ್ತು ತಂಡ, ಅತಿಥಿಗಳು: ಅನುಪಮ ಪಂಚಾಕ್ಷರಿ, ಬಿ.ಎಸ್. ಶಿವಪ್ರಕಾಶ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, # 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ನವರಾತ್ರಿ ವಿಶೇಷ

ಯುವ ದಸರಾ: ವೇಣು–ವಯೋಲಿನ್ ಜುಗಲ್‌ಬಂದಿ: ರಾಜಕಮಲ್ ಎನ್., ಕೆ.ಜೆ. ದಿಲೀಪ್, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5.45

ತ್ರಿಮೂರ್ತಿ ದೇವಸ್ಥಾನದಲ್ಲಿ ತರಕಾರಿ ಅಲಂಕಾರ: ಆಯೋಜನೆ ಹಾಗೂ ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ.ನಗರ 3ನೇ ಹಂತ, ಸಂಜೆ 6

ದೇವಿಗೆ ಎಳ್ಳಿನ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ನವಧಾನ್ಯ ಅಲಂಕಾರ: ನೃತ್ಯ: ಕೋಲಾರ ರಮೇಶ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ನವರಾತ್ರೋತ್ಸವ: ವಿದ್ವಾಂಸರಿಂದ ಉಪನ್ಯಾಸ: ‘ಶ್ರೀನಿವಾಸ ಕಲ್ಯಾಣದಲ್ಲಿ ಲಕ್ಷ್ಮಿ ತತ್ವ’ ವಿಷಯದ ಬಗ್ಗೆ: ಅಂಬರೀಶಾಚಾರ್ಯ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿ ಮಠ, ರಾಜರಾಜೇಶ್ವರಿ ನಗರ, ಸಂಜೆ 6

ದುರ್ಗಾ ಪರಮೇಶ್ವರಿ ದೇವಿಗೆ ಗಂಧ ಅಲಂಕಾರ: ಕೆನರಾ ಬ್ಯಾಂಕ್ ಕಾಲೊನಿ ಮಹಿಳಾ ಸಮಾಜದ ಸದಸ್ಯರಿಂದ ಮನೋರಂಜನಾ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಯರಿಗೆ ವಿಶೇಷ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೇವಿ ಸಲ್ಲಾಪುರಮ್ಮ, ದೇವಿ ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ ಗ್ರಾಮ, ಜೆ.ಪಿ. ನಗರ, ಸಂಜೆ 6.30

ದೇವಿಗೆ ಮೀನಾಕ್ಷಿ ಅಲಂಕಾರ: ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ಭರತನಾಟ್ಯ ಪ್ರದರ್ಶನ: ಶಾಂತಲಾ ತಂಡ, ಬಿಂದ್ಯ ಸುಭಾಷ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶಾಂತಲಾ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

ಮಹಾ ಗಣಪತಿ ಉತ್ಸವ: ಗಾಯನ: ರಾಜೇಶ್ ಕೃಷ್ಣನ್, ಸ್ಥಳ: ಕಮಲಮ್ಮನ ಗುಂಡಿ ಆಟದ ಮೈದಾನ, ಮಹಾಲಕ್ಷ್ಮಿ ಬಡಾವಣೆ, ಸಂಜೆ 6.30


ರಾಜೇಶ್ ಕೃಷ್ಣನ್

ದೇವಿಗೆ ಅರ್ಧನಾರೀಶ್ವ ಅಲಂಕಾರ: ದ್ರಾಕ್ಷಿ–ಗೊಡಂಬಿ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್.ಪುರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಚಿಟಿಕೆ ಸುದ್ದಿ

'ಹೊರಗುತ್ತಿಗೆ ಸಿಬ್ಬಂದಿ ಸಕ್ರಮ ಪ್ರಸ್ತಾವವಿಲ್ಲ'

ಬೆಂಗಳೂರು: ಹೊರಗುತ್ತಿಗೆ ಸಿಬ್ಬಂದಿಯನ್ನು ಸಕ್ರಮಗೊಳಿಸುವ ಯಾವುದೇ ಕರಡು ಅಧಿಸೂಚನೆ ಸಿದ್ಧಪಡಿಸಿಲ್ಲ ಹಾಗೂ ಇಂತಹ ಕರಡು ಅಧಿಸೂಚನೆ ಸಿದ್ಧಪಡಿಸುವ ಪ್ರಸ್ತಾವವು ನಿಗಮದ ಮುಂದೆ ಇಲ್ಲ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಸ್ಪಷ್ಟನೆ ನೀಡಿದೆ.

ಸೇವಾ ಭದ್ರತೆ ಒದಗಿಸುವಂತೆ ಹೊರಗುತ್ತಿಗೆ ನೌಕರರು ಕೋರಿರುವ ಪ್ರಸ್ತಾವವನ್ನು ಪರಿಶೀಲಿಸಲು ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಾಲ್ವರು ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ ಎಂದು ತಿಳಿಸಿದೆ.

ಸುಳ್ಳು ಪ್ರಕರಣ ದಾಖಲು: ಆರೋಪ

ಬೆಂಗಳೂರು: ಕೇಂದ್ರ ಸರ್ಕಾರದ ಸಂಸದೀಯ ರಾಜಭಾಷಾ ಸಮಿತಿಯು ಹಿಂದಿಯೇತರ ರಾಜ್ಯಗಳ ಜನರ ಮೇಲೆ ಹಿಂದಿ ಹೇರಿಕೆ ಮಾಡುವ ಸಂಬಂಧ ನಗರದ ಹೋಟೆಲ್‌ನಲ್ಲಿ ನಡೆಸುತ್ತಿದ್ದ ಕಾರ್ಯಕ್ರಮದ ವಿರುದ್ಧ ಪ್ರತಿಭಟನೆ ನಡೆಸಿದ ಕಾರ್ಯಕರ್ತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಜೈಲಿಗೆ ಕಳುಹಿಸಲಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ. ನಾರಾಯಣಗೌಡ ಆರೋಪಿಸಿದರು.


ನಾರಾಯಣಗೌಡ

'ಪೊಲೀಸರ ಕೇಸು, ಜೈಲಿಗೆ ಹೆದರುವುದಿಲ್ಲ. ಹೆದರಿಸಿ ನಮ್ಮ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲ. ವೇದಿಕೆ ಕಾರ್ಯಕರ್ತರ ಮೇಲೆ ಹೂಡಲಾಗಿರುವ ಸುಳ್ಳು ಮೊಕದ್ದಮೆಗಳನ್ನು ರಾಜ್ಯ ಸರ್ಕಾರ ಈ ಕೂಡಲೇ ಹಿಂದಕ್ಕೆ ಪಡೆದು, ಅವರನ್ನು ಬಿಡುಗಡೆ ಮಾಡಬೇಕು. ಇಲ್ಲವಾದಲ್ಲಿ ರಾಜ್ಯದಾದ್ಯಂತ ಚಳವಳಿ ಸಂಘಟಿಸಲಾಗುವುದು' ಎಂದು ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ಇನ್ನು ಮುಂದೆ ರಾಜ್ಯದ ಯಾವುದೇ ಭಾಗದಲ್ಲಿ ಹಿಂದಿ ಪ್ರಚಾರಕ್ಕೆ ಯಾವುದೇ ಸಂಸ್ಥೆ ಕಾರ್ಯಕ್ರಮ ಮಾಡಲು ಮುಂದಾದರೆ ಅದರ ಪರಿಣಾಮವನ್ನು ಅವರೇ ಎದುರಿಸಬೇಕಾಗುತ್ತದೆ ಎಂದರು.

ನಗರದ ತಾಜ್ ವೆಸ್ಟೆಂಡ್ ಹೋಟೆಲ್‌ಗೆ ಅಕ್ರಮ ಪ್ರವೇಶ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ವೇದಿಕೆಯ 41 ಕಾರ್ಯಕರ್ತರಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಹಣ ಕೊಡಿ ಗುತ್ತಿಗೆದಾರರ ಮನವಿ

ಬೆಂಗಳೂರು: 'ಗುತ್ತಿಗೆದಾರರು ಹಾಗೂ ಕಾರ್ಮಿಕರಿಗೆ ಅತ್ಯಂತ ಮಹತ್ವದ ಹಬ್ಬವಾಗಿರುವ ದಸರಾ ಆರಂಭವಾಗಿದ್ದು, ಎಲ್ಲರಿಗೂ ಅನುಕೂಲವಾಗುವ ದೃಷ್ಟಿಯಿಂದ ಎಲ್ಲ ಇಲಾಖೆಗಳಲ್ಲಿ ಬಾಕಿ ಬಿಲ್‌ಗಳ ಬಿಡುಗಡೆ ಸೂಚನೆ ನೀಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಮನವಿ ಮಾಡಿಕೊಂಡಿದೆ.

'ಯುಗಾದಿ ಮತ್ತು ದಸರಾ ಆಚರಣೆ-ಸಂಭ್ರಮ ಗುತ್ತಿಗೆದಾರರಿಗೆ ವಿಶೇಷವಾಗಿರುತ್ತವೆ. ಈವರೆಗೆ ಎಲ್ಲ ಸರ್ಕಾರಗಳು, ಮುಖ್ಯಮಂತ್ರಿಗಳು ಈ ಹಬ್ಬಗಳ ಸಂದರ್ಭದಲ್ಲಿ ಬಿಲ್‌ಗಳ ಹಣ ಬಿಡುಗಡೆ ಮಾಡಿದ್ದಾರೆ. ತಾವೂ ಈ ಬಾರಿ ಹಣ ಬಿಡುಗಡೆ ಮಾಡಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

'ಕಳೆದ ಮೂರು ವರ್ಷಗಳಿಂದ ಯುಗಾದಿ ಹಬ್ಬದ ಸಂದರ್ಭದಲ್ಲಿ ಹಣ ಬಿಡುಗಡೆ ಆಗಿಲ್ಲ. ಈ ಬಾರಿ ದಸರಾಗೆ ಹಣ ಬಿಡುಗಡೆ ಮಾಡಬೇಕು. ಕಾರ್ಮಿಕರಿಗೆ ಮುಂಗಡ ಹಾಗೂ ಬೋನಸ್ ನೀಡುವ ಆಚರಣೆಗಳಿವೆ. ಹೀಗಾಗಿ, ತಾವು ಕಾರ್ಮಿಕರ ಸಮಸ್ಯೆಗಳನ್ನು ಅರಿತು, ಬಾಕಿ ಬಿಲ್ ಪಾವತಿಸಲು ಎಲ್ಲ ಇಲಾಖೆಗಳ ಸಚಿವರು ಹಾಗೂ ಅಧಿಕಾರಿಗಳಿಗೆ ತುರ್ತಾಗಿ ಸೂಚಿಸಬೇಕು.' ಎಂದು ಮುಖ್ಯಸಂಘದ ಅಧ್ಯಕ್ಷ ಆರ್. ಮಂಜುನಾಥ್ ಅವರು ಪತ್ರ ಬರೆದಿದ್ದಾರೆ.

ಶಿಕ್ಷಣ ಇಲಾಖೆ ಪಟ್ಟಿ ಕೈಬಿಟ್ಟು ಸಮೀಕ್ಷೆ

ಕೆಇಎಸ್ ಅಧಿಕಾರಿಗಳಿಗೆ ಮೇಲುಸ್ತುವಾರಿ ಆಗಿ ಸಹ ಶಿಕ್ಷಕರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ (ಜಾತಿವಾರು ಸಮೀಕ್ಷೆ) ಸಮೀಕ್ಷಕರನ್ನು ನೇಮಿಸುವಾಗ ನಗರ ಸ್ಥಳೀಯ ಸಂಸ್ಥೆಗಳು ಹಲವು ಲೋಪ ಎಸಗಿರುವುದು ಆಕ್ಷೇಪಕ್ಕೆ ಕಾರಣವಾಗಿದೆ.

ಸಮೀಕ್ಷಾ ಕಾರ್ಯ ಆರಂಭಕ್ಕೂ ಸಾಕಷ್ಟು ಮೊದಲು ಶಿಕ್ಷಣ ಇಲಾಖೆ ಸಮೀಕ್ಷಕರಾಗಿ ನೇಮಕವಾಗುವ ಶಿಕ್ಷಕರೂ ಸೇರಿದಂತೆ ವಿವಿಧ ಸ್ತರಗಳಿಗೆ ಬಳಸಿಕೊಳ್ಳಬಹುದಾದ ಅಧಿಕಾರಿಗಳ ಪಟ್ಟಿಯನ್ನು ಸಿದ್ಧಪಡಿಸಿತ್ತು. ಹೀಗೆ ಪಟ್ಟಿ ಸಿದ್ಧಪಡಿಸುವಾಗ ನಿವೃತ್ತಿಗೆ ಹತ್ತಿರ ಇರುವವರು, ತೀವ್ರತರ ಕಾಯಿಲೆಯಿಂದ ಬಳಲುತ್ತಿರುವವರು, ಗರ್ಭಿಣಿ-ಬಾಣಂತಿಯರು, ಅಂಗವಿಕಲರನ್ನು ಕೈಬಿಡಲಾಗಿತ್ತು. ಬಹುತೇಕ ಭಾಗಗಳಲ್ಲಿ ಇದೇ ಪಟ್ಟಿ ಆಧಾರದಲ್ಲಿ ಸಮೀಕ್ಷಕರು, ಮುಖ್ಯ ತರಬೇತುದಾರರು, ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿತ್ತು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸೇರಿದಂತೆ ಕೆಲ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಸಮೀಕ್ಷೆ ಕೈಗೊಳ್ಳಲು ಶಿಕ್ಷಕರನ್ನು ಬಳಸಿಕೊಳ್ಳುವಾಗ ಶಿಕ್ಷಣ ಇಲಾಖೆ ಸಿದ್ಧಪಡಿಸಿದ ಪಟ್ಟಿ ಕೈಬಿಟ್ಟು ನೇರವಾಗಿ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ (ಎಚ್‌ಆರ್‌ಎಂಎಸ್) ಲಭ್ಯವಿದ್ದ ಶಿಕ್ಷಕರ ಪಟ್ಟಿಯನ್ನೇ ಬಳಸಿಕೊಂಡಿವೆ. ಇದರಿಂದ ಹಲವು ಯಡವಟ್ಟುಗಳಾಗಿವೆ.

ಜಿಬಿಎ ವ್ಯಾಪ್ತಿಯ ಬಹುತೇಕ ಕಡೆ ಕರ್ನಾಟಕ ಶಿಕ್ಷಣ ಸೇವೆ (ಕೆಇಎಸ್) ಅಧಿಕಾರಿಗಳನ್ನು ಸಮೀಕ್ಷಕರಾಗಿ ಕೆಲಸ ಮಾಡುವಂತೆ ಆದೇಶ ನೀಡಲಾಗಿದೆ. ಪ್ರೌಢಶಾಲಾ ಸಹ ಶಿಕ್ಷಕರನ್ನು ಅವರ ಮೇಲುಸ್ತುವಾರಿಗೆ ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

'ಸಮೀಕ್ಷಾ ಕಾರ್ಯದಲ್ಲಿ ಭಾಗವಹಿಸುವ ಶಿಕ್ಷಕರಿಗೆ ತರಬೇತಿ ನೀಡಲು ನಮ್ಮನ್ನು ಮುಖ್ಯ ತರಬೇತುದಾರರನ್ನಾಗಿ ಆಯ್ಕೆ ಮಾಡಿಕೊಂಡು ಈಗಾಗಲೇ ತರಬೇತಿ ನೀಡಲಾಗಿದೆ. ತನ್ನ ವ್ಯಾಪ್ತಿಯ ಶಿಕ್ಷಕರಿಗೆ ಇದೇ ಸೆ.29ರಿಂದ ಮನೆಮನೆಗೆ ಭೇಟಿ ನೀಡಿ, ಸಮೀಕ್ಷೆ ನಡೆಸುವ ಕುರಿತು ತರಬೇತಿ ನೀಡಬೇಕಿತ್ತು. ಆದರೆ, ಜಿಬಿಎ ನಮ್ಮನ್ನೇ ಸಮೀಕ್ಷಕರಾಗಿ ನೇಮಿಸಿ ಆದೇಶ ನೀಡಿದೆ' ಎಂದು ಕೆಇಎಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ದಾಖಲೆಗಳ ಸಹಿತ ಮಾಹಿತಿ ಒದಗಿಸಿದ್ದಾರೆ.

ಸಮೀಕ್ಷಾ ಕಾರ್ಯ ಅ.3ರಿಂದ: ಸೆ. 22ರಿಂದ ಆರಂಭವಾಗಿದ್ದ ಸಮೀಕ್ಷೆ ತಾಂತ್ರಿಕ ತೊಂದರೆಗಳಿಂದ ನಿಗದಿತ ಗುರಿ ತಲುಪಲು ಸಾಧ್ಯವಾಗಿಲ್ಲ. ಸಮೀಕ್ಷಕರಾಗಿ ನೇಮಕವಾದವರಿಗೆ ಕೆಲವೆಡೆ ಸೆ. 29ರಿಂದ ತರಬೇತಿಗೆ ಹಾಜರಾಗುವಂತೆ ಸೂಚಿಸಲಾಗಿದೆ. ಅ.3ರಿಂದ ಸಮೀಕ್ಷೆ ಆರಂಭಿಸುವಂತೆ ಸೂಚಿಸಲಾಗಿದೆ.

ಸುಗಮ ಸಮೀಕ್ಷೆಗೆ ನೌಕರರ ಸಂಘ ಸಾಥ್

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಆರಂಭದಲ್ಲೇ ವಿಘ್ನಗಳು ಎದುರಾಗಿದ್ದು, ಸಮಸ್ಯೆ ಬಗೆಹರಿಸಿಕೊಂಡು ಸುಗಮವಾಗಿ ನೆರವೇರಿಸಲು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಕೈಜೋಡಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ನೇತೃತ್ವದ ನಿಯೋಗ, ಸಮೀಕ್ಷಾ ತೊಡಕುಗಳು ಹಾಗೂ ಅವುಗಳ ನಿವಾರಣೆ ಕುರಿತು ಚರ್ಚೆ ನಡೆಸಿತು.

ಆ್ಯಪ್ ಅಳವಡಿಸಿದ ಮೊಬೈಲ್, ಟ್ಯಾಬ್, ಇಂಟರ್‌ನೆಟ್ ಸೌಲಭ್ಯ ನೀಡಬೇಕು. ತಾಂತ್ರಿಕ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಬೇಕು. ಒಂದು ಕುಟುಂಬದಲ್ಲಿ ಎಷ್ಟೇ ಸದಸ್ಯರಿದ್ದರೂ ಒಂದೇ ಒಟಿಪಿ ಬಳಸಬೇಕು. ಕುಟುಂಬದ ಸದಸ್ಯರ ಸೇರ್ಪಡೆ, ಕೈಬಿಡುವ ಅಧಿಕಾರವನ್ನು ಸಮೀಕ್ಷಕರಿಗೆ ನೀಡಬೇಕು. ಸಮೀಕ್ಷೆ ವೇಳೆಯೇ ದಾಖಲೆಗಳನ್ನು ನೀಡುವಂತೆ ಸಾರ್ವಜನಿಕರಿಗೆ ಮೊದಲೇ ತಿಳಿವಳಿಕೆ ನೀಡಬೇಕು. ನೆಟ್‌ವರ್ಕ್ ಸಮಸ್ಯೆ ಇರುವ ಮಲೆನಾಡು, ಗುಡ್ಡಗಾಡು ಪ್ರದೇಶದಲ್ಲಿ ಕೈಬರಹದಲ್ಲೇ ಮಾಹಿತಿ ಸಂಗ್ರಹಿಸಲು ಅವಕಾಶ ನೀಡಬೇಕು. ಸೂಕ್ತ ರಕ್ಷಣೆ ಒದಗಿಸಬೇಕು. ಸಮೀಕ್ಷಾ ಕಾರ್ಯದಲ್ಲಿ ಭಾಗವಹಿಸುವವರಿಗೆ ಗೌರವಧನ, ಭತ್ಯೆ, ರಜೆಯ ಕುರಿತು ಆದೇಶ ಹೊರಡಿಸಬೇಕು. ಗರ್ಭಿಣಿಯರು, ಬಾಣಂತಿಯರು, ಆರೋಗ್ಯ ಸಮಸ್ಯೆ ಇರುವವರು, ನಿವೃತ್ತಿ ಸಮೀಪ ಇರುವವರನ್ನು ಕೈಬಿಡಬೇಕು ಎಂದು ನಿಯೋಗ ವಿನಂತಿಸಿತು.

ಸಮೀಕ್ಷೆಗೆ ತೆರಳಿದ ಶಿಕ್ಷಕನ ಮೇಲೆ ಹಲ್ಲೆ

ಕುಣಿಗಲ್: ಸಮೀಕ್ಷೆಗೆ ತೆರಳಿದ್ದ ಶಿಕ್ಷಕ ಮರಿಯಪ್ಪ ಅವರ ಮೇಲೆ ಗ್ರಾಮಸ್ಥನೊಬ್ಬ ಹಲ್ಲೆ ನಡೆಸಿರುವ ಘಟನೆ ಶುಕ್ರವಾರ ನಡೆದಿದೆ.

ಶಿಕ್ಷಕ ತಾಲ್ಲೂಕಿನ ಅಮೃತೂರು ಹೋಬಳಿ ಹಾಲಗೆರೆಗೆ ಸಮೀಕ್ಷೆಗೆ ತೆರಳಿದ್ದು, ವ್ಯಕ್ತಿಯೊಬ್ಬರ ಬಳಿ ಕುಟುಂಬದ ಮಾಹಿತಿ ಕೇಳಿದಾಗ ಕೆರಳಿದ ವ್ಯಕ್ತಿ, 'ದಾಖಲೆಗಳನ್ನು ಕೇಳಲು ನೀನು ಯಾರು' ಎಂದು ಪ್ರಶ್ನೆ ಮಾಡಿ ಹಲ್ಲೆ ನಡೆಸಿದ್ದಾರೆ.

ಬ್ಯಾಗ್ ಮತ್ತು ಮೊಬೈಲ್ ಕಸಿದು, ಬಟ್ಟೆ ಹರಿದು ಹಲ್ಲೆ ಮಾಡಿದ್ದಾರೆ ಎಂದು ಶಿಕ್ಷಕ ದೂರಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿಗೆ ಈ ಸಂಬಂಧ ದೂರು ನೀಡಲಾಗಿದೆ. ಹಲ್ಲೆ ನಡೆಸಿದ ವ್ಯಕ್ತಿ ಗ್ರಾಮ ಪಂಚಾಯಿತಿ ಸದಸ್ಯ ರವಿ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸುದ್ದಿ 2 ನಿಮಿಷ

'ಕುರುಬರು ಹಿಂದೂ ಎಂದೇ ಬರೆಸಿ'

ಬೆಂಗಳೂರು: 'ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯಲ್ಲಿ ಕುರುಬ ಸಮುದಾಯದವರು ಧರ್ಮದ ಕಾಲಂನಲ್ಲಿ 'ಹಿಂದೂ' ಎಂದು, ಜಾತಿ ಕಾಲಂನಲ್ಲಿ 'ಕುರುಬ' ಎಂದೇ ಬರೆಯಿಸಬೇಕು' ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ಕರೆ ನೀಡಿದರು.

ಕರ್ನಾಟಕ ಕುರುಬರ ಜಾಗೃತಿ ಸಮಿತಿಯು ಶುಕ್ರವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕುರುಬ ಸಮುದಾಯದ ಎಲ್ಲರೂ ಸಮೀಕ್ಷೆಯಲ್ಲಿ ಭಾಗಿಯಾಗಬೇಕು. ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಯ ಬಗ್ಗೆ ತಿಳಿದುಕೊಳ್ಳಲು ಇದು ನೆರವಾಗಲಿದೆ' ಎಂದರು.

'ಜಾತಿಯ ಕಾಲಂನಲ್ಲಿ ಎಲ್ಲರೂ 'ಕುರುಬ' ಎಂದೇ ಬರೆಯಿಸಬೇಕು ಎಂಬುದನ್ನು ಮರೆಯಬಾರದು. ಉಪಜಾತಿಯ ಕಾಲಂನಲ್ಲಿ ನಿಮ್ಮ ನಿಮ್ಮ ಉಪಜಾತಿಗಳ ಹೆಸರನ್ನು ಬರೆಯಿಸಬೇಕು. ನಿಮ್ಮ ಜಾತಿ ಪ್ರಮಾಣ ಪತ್ರದಲ್ಲಿ ಗೊಂಡ, ಜೇನು ಕುರುಬ, ಕಾಡು ಕುರುಬ, ಬೆಟ್ಟ ಕುರುಬ ಎಂದು ಇದ್ದರೆ, ಅದನ್ನೇ ಉಪಜಾತಿ ಕಾಲಂನಲ್ಲಿ ಬರೆಯಿಸಬೇಕು' ಎಂದು ವಿವರಿಸಿದರು.

'ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸಿದ್ದರಾಮಯ್ಯ ಮುಂದಾಗಿದ್ದಾರೆ ಎಂದು ಕೆಲವರು ಆರೋಪಿಸುತ್ತಿದ್ದಾರೆ. ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರೇ, ಕುರುಬರನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಿ ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. ಅಂತಹ ಬದಲಾವಣೆ ಮಾಡುವ ಅಧಿಕಾರ ಇರುವುದು ಕೇಂದ್ರ ಸರ್ಕಾರಕ್ಕೆ ಮಾತ್ರ. ಆದರೆ ಈಗ ಸಿದ್ದರಾಮಯ್ಯ ವಿರುದ್ಧ ಆರೋಪ ಮಾಡುತ್ತಿದ್ದಾರೆ' ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಸಮಿತಿಯ ಸಂಚಾಲಕರಾದ ಟಿ.ಬಿ.ಬಳಗಾವಿ, ಬಿ.ಎಸ್. ಶಾಂತಕುಮಾರ್, ಸಿದ್ಧಣ್ಣ ಮೇಟಿ ಸುದ್ದಿಗೋಷ್ಠಿಯಲ್ಲಿ ಭಾಗಿಯಾಗಿದ್ದರು.

'ವೀರಶೈವ ಲಿಂಗಾಯತ ಸಮಾಜ ಒಡೆಯಲು ಸಂಚು'

ಬಸವಕಲ್ಯಾಣ (ಬೀದರ್ ಜಿಲ್ಲೆ): 'ಸಮೀಕ್ಷೆ ಹೆಸರಲ್ಲಿ ನಮ್ಮ ನಮ್ಮಲ್ಲೇ ಭಿನ್ನಾಭಿಪ್ರಾಯ ತಂದು ವೀರಶೈವ ಲಿಂಗಾಯತ ಸಮಾಜ ಒಡೆಯುವ ವ್ಯವಸ್ಥಿತ ಸಂಚು ನಡೆಯುತ್ತಿದೆ ಎಂಬುದನ್ನು ಸಮಾಜ ಬಾಂಧವರು ಗಂಭೀರವಾಗಿ ಪರಿಗಣಿಸಬೇಕು' ಎಂದು ರಂಭಾಪುರಿ ವೀರಸೋಮೇಶ್ವರ ಶಿವಾಚಾರ್ಯರು ಹೇಳಿದ್ದಾರೆ.

ನಗರದಲ್ಲಿ ಶುಕ್ರವಾರ ನಡೆದ ದಸರಾ ಧರ್ಮ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ವೀರಶೈವ ಲಿಂಗಾಯತ ಒಂದೇ ಆಗಿದೆ. ಈ ಧರ್ಮ ಸ್ವತಂತ್ರ ಧರ್ಮ ಆಗಬೇಕು ಎಂಬುದು ನಮ್ಮ ಆಶಯ. ಇದಕ್ಕಾಗಿ ಹಲವಾರು ಸಲ ನಾವು ಪ್ರಯತ್ನಿಸಿದ್ದೇವೆ. ದೊಡ್ಡ ಸಮಾವೇಶಗಳನ್ನು ಆಯೋಜಿಸಿದ್ದೇವೆ. ಅದರಲ್ಲಿ ಗುರು-ವಿರಕ್ತರು ಪಾಲ್ಗೊಂಡಿದ್ದರೂ ನಮ್ಮ ಉದ್ದೇಶ ಈಡೇರಲಿಲ್ಲ' ಎಂದು ಹೇಳಿದರು.

'ಬೆರಳೆಣಿಕೆಯ ಜನ ಮೊದಲಿನಿಂದಲೂ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಸಮಕಾಲೀನ ಸಮಾಜದ ಸಮಸ್ಯೆ ಅರಿತು ಸಾಗುವುದಕ್ಕೆ ನಾವು ಒಂದು ಹೆಜ್ಜೆ ಮುಂದಿದ್ದೇವೆ. ಆದರೆ, ಇದಕ್ಕೆ ಕೆಲವರು ವಿರೋಧಿಸುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಕಲ್ಯಾಣ'ದಲ್ಲಿ ಮುಂದುವರಿದ ವರುಣಾರ್ಭಟ

ಉಕ್ಕಿ ಹರಿಯುತ್ತಿದೆ ಭೀಮಾ ನದಿ: ಕಲಬುರಗಿ ಜಿಲ್ಲೆ ನದಿಪಾತ್ರದ 36 ಗ್ರಾಮಗಳಲ್ಲಿ ಪ್ರವಾಹ ಸ್ಥಿತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಮಳೆ ಅಬ್ಬರ ಮುಂದುವರಿದಿದೆ. ಭೀಮಾನದಿ ಪಾತ್ರದ 36 ಗ್ರಾಮಗಳಲ್ಲಿ ಪ್ರವಾಹ ಸ್ಥಿತಿ ಏರ್ಪಟ್ಟಿದೆ.

ಮಹಾರಾಷ್ಟ್ರ ಅಣೆಕಟ್ಟೆಗಳಿಂದ 3.50 ಲಕ್ಷ ಕ್ಯೂಸೆಕ್ ನೀರು ಹೊರಬಿಡಲಾಗುತ್ತಿದ್ದು, ಭೀಮಾ ನದಿಯಲ್ಲಿ ಹರಿವಿನ ಮಟ್ಟ ಹೆಚ್ಚಿದೆ.

ಜಿಲ್ಲೆಯಲ್ಲಿ ಗಂಭೀರ ಪ್ರವಾಹ ಸ್ಥಿತಿಯಿರುವ ಕಡೆ 12 ಕಾಳಜಿ ಕೇಂದ್ರ ತೆರೆಯಲಾಗಿದ್ದು, ಇಲ್ಲಿ 1,436 ಜನರು ಆಶ್ರಯ ಪಡೆದಿದ್ದಾರೆ. ರಕ್ಷಣಾ ಕಾರ್ಯಕ್ಕಾಗಿ 20 ಸಿಬ್ಬಂದಿ ಇರುವ ಎನ್‌ಡಿಆರ್‌ಎಫ್ ತಂಡವನ್ನು ದೇವಲ-ಗಾಣಗಾಪುರದಲ್ಲಿ ನಿಯೋಜಿಸಲಾಗಿದೆ.

ಬಿರುಸು ಪಡೆದ ಮಳೆ: ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಶುಕ್ರವಾರ ಮತ್ತೆ ಮಳೆ ಬಿರುಸು ಪಡೆದಿದೆ. ಕಲಬುರಗಿ ಜಿಲ್ಲೆಯ ವಿವಿಧೆಡೆ ಗುರುವಾರ ತಡರಾತ್ರಿ ಆರಂಭವಾಗಿದ್ದು, ಶುಕ್ರವಾರ ದಿನವಿಡೀ ಸುರಿಯಿತು. ಜನಜೀವನ ಅಸ್ತವ್ಯಸ್ತಗೊಂಡಿತ್ತು.

ಕರ್ನಾಟಕ-ತೆಲಂಗಾಣ ಗಡಿಯಲ್ಲಿ ಹಳ್ಳದಲ್ಲಿ ಪ್ರವಾಹ ಸ್ಥಿತಿ ಇದ್ದು, ಚಿಂಚೋಳಿ ತಾಲ್ಲೂಕಿನ ಮಿರಿಯಾಣ ಮತ್ತು ತೆಲಂಗಾಣದ ಕೊತಲಾಪುರ ಗ್ರಾಮದ ನಡುವೆ ರಾಷ್ಟ್ರೀಯ ಹೆದ್ದಾರಿ-167 ಶುಕ್ರವಾರ ಸಂಜೆಯಿಂದ ತಡರಾತ್ರಿ ತನಕ ಜಲಾವೃತಗೊಂಡಿತ್ತು.


ಕಲಬುರಗಿಯ ಗಾಣಗಾಪುರದಲ್ಲಿ ಪ್ರವಾಹದ ನೀರು ಹೊಕ್ಕಿದ್ದ ಮನೆಗಳವರು ಮನೆ ವಸ್ತುಗಳನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಿದರು ಚಿತ್ರ: ತಾಜುದ್ದೀನ್ ಆಜಾದ್

ವಿಜಯಪುರ: ಜನಜೀವನ ಅಸ್ತವ್ಯಸ್ತ

ವಿಜಯಪುರ: ಜಿಲ್ಲೆಯಾದ್ಯಂತ ಶುಕ್ರವಾರ ದಿನವಿಡೀ ಬಿಡುವು ನೀಡದೇ ಮಳೆ ಸುರಿದು ಜನಜೀವನ ಅಸ್ತವ್ಯಸ್ತವಾಯಿತು. ಸೀನಾ ನದಿ ಪ್ರವಾಹದ ನೀರು ತಗ್ಗಿದ್ದರಿಂದ ವಿಜಯಪುರ-ಸೋಲಾಪುರ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಶುಕ್ರವಾರ ಆರಂಭವಾಯಿತು. ಭೀಮಾ ನದಿ ತೀರದಲ್ಲಿ ಪ್ರವಾಹ ಹೆಚ್ಚುತ್ತಿದ್ದು, ಆಲಮೇಲ ತಾಲ್ಲೂಕಿನ ತಾರಾಪುರ ಗ್ರಾಮ ನಡುಗಡ್ಡೆಯಾಗಿ ಮಾರ್ಪಟ್ಟಿದೆ. ಪ್ರವಾಹದಲ್ಲಿ ಸಿಲುಕಿದ 50ಕ್ಕೂ ಹೆಚ್ಚು ಜನರನ್ನು ಸಮೀಪದ ಪುನರ್ ವಸತಿ ಕೇಂದ್ರದ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು.

ನದಿ ತೀರದ ಗ್ರಾಮಗಳಾದ ದೇವಣಗಾಂವ, ತಾವರಖೇಡ, ಬ್ಯಾಡಗಿಹಾಳ, ಕುಮಸಗಿ, ಶೇಂಬೆವಾಡ, ಕಡ್ಲೆವಾಡ, ಶಿರಸಗಿ ಗ್ರಾಮಗಳ ಕೆಲ ಮನೆಗಳಿಗೆ ನೀರು ಸುತ್ತುವರೆದು ಜಲಾವೃತಗೊಂಡಿದೆ. ಆಲಮೇಲ ತಾಲ್ಲೂಕಿನ ದೇವಣಗಾಂವ ಸಮೀಪದ ಸೊನ್ನ ಬ್ಯಾರೇಜ್‌ನಿಂದ ಗುರುವಾರ 3.55 ಲಕ್ಷ ಕ್ಯೂಸೆಕ್ ನೀರು ಹೊರ ಬಿಡಲಾಗಿದೆ.

ಕೊಚ್ಚಿಹೋದ ರಸ್ತೆ: ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಹಂಚಿನಾಳ ಗ್ರಾಮದಲ್ಲಿನ ಶೀಲಹಳ್ಳಿ ರಸ್ತೆ ಕೊಚ್ಚಿಹೋಗಿದೆ. ಬಂಡೆಭಾವಿ ಗ್ರಾಮದ ಹಳ್ಳ ತುಂಬಿ ಹರಿದು ರಸ್ತೆ ಸಂಪರ್ಕ ಕಡಿತಗೊಂಡಿದೆ. ಗುರುಗುಂಟಾ ಹೋಬಳಿಯಲ್ಲಿ 35 ಮನೆಗಳು ಕುಸಿದಿವೆ.

ನಾಲ್ಕು ಕುರಿ ಸಾವು: ಯಾದಗಿರಿ ತಾಲ್ಲೂಕಿನ ಸೌದಾಗರ್ ತಾಂಡಾದ ಮನೆ, ದನದ ಕೊಟ್ಟಿಗೆಗಳಿಗೆ ಮಳೆಯ ನೀರು ನುಗ್ಗಿದೆ. ಹುಣಸಗಿಯಲ್ಲಿ ಗೋಡೆ ಬಿದ್ದು ನಾಲ್ಕು ಕುರಿಗಳು ಮೃತಪಟ್ಟಿವೆ. ಕೆಂಭಾವಿಯಲ್ಲಿ ಮಳೆಗೆ ಮೂರು ಮನೆಗಳ ಗೋಡೆ ಬಿದ್ದಿವೆ. ಮನೆಗಳಲ್ಲಿ ದವಸ ಧಾನ್ಯಗಳು ತೊಯ್ದಿವೆ.

ಮಹಾರಾಷ್ಟ್ರದಿಂದ ಹೆಚ್ಚಿನ ಪ್ರಮಾಣದ ನೀರು ಭೀಮಾ ನದಿಗೆ ಹರಿದು ಬರುತ್ತಿದ್ದು, ಸನ್ನತಿ ಬ್ಯಾರೇಜ್‌ನಿಂದ 4 ಲಕ್ಷ ಕ್ಯೂಸೆಕ್ ನೀರು ನದಿ ಪಾತ್ರಕ್ಕೆ ಹರಿಸುವ ಸಾಧ್ಯತೆಗಳಿವೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ರಮೇಶ ಕೋಲಾರ ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಸಾಧಾರಣ ಮಳೆ ಸುರಿದಿದೆ. ಬೀದರ್ ಜಿಲ್ಲೆಯ ವಿವಿಧೆಡೆ ದಿನವಿಡೀ ಜಿಟಿಜಿಟಿ ಮಳೆಯಾಗಿದೆ. ಮಾಂಜ್ರಾ ನದಿಯಲ್ಲಿ ಪ್ರವಾಹ ಸ್ಥಿತಿ ಮುಂದುವರಿದಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.44	5,978	6,405
ಹಾರಂಗಿ	2,859	2,856.90	1,158	1,600
ಕಬಿನಿ	2,284.00	2,281.89	1,271	1,850
ಹೇಮಾವತಿ	2,922	2,918.75	3,806	6,335
ಲಿಂಗನಮಕ್ಕಿ	1,819	1,816	3,858	7,451
ಸೂಪಾ (ಮೀ)	564	559.58	1,881.30	4,659.90
ಮಾಣಿ	595	594	663	663
ತುಂಗಭದ್ರಾ	1,633	1,626.06	14,048	13,792
ಮಲಪ್ರಭಾ	2,079.5	2,079.50	1,494	1,494
ಘಟಪ್ರಭಾ	2175	2,174.81	1,701	1,382
ಭದ್ರಾ *	186	184.10	2,255	4,350
ಆಲಮಟ್ಟಿ (ಮೀ)	519.6	519.58	24,572	12,000
ನಾರಾಯಣಪುರ (ಮೀ)	492.25	492.23	35,000	47,480

* ನೆಲಮಟ್ಟದಿಂದ

ಕಾವೇರಿ ಆರತಿಗೆ ಚಾಲನೆ...

ಒಂದನೇ ಪುಟದಿಂದ...

'ಪವಿತ್ರ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು ದೀಪ ಬೆಳಗಿಸಿದ್ದಾರೆ. ಬದುಕು ಕ್ಷಣಿಕವಾಗಿದ್ದು, ಜೀವಿತಾವಧಿಯಲ್ಲಿ ಸಾರ್ಥಕ ಕೆಲಸ ಮಾಡಬೇಕು. ಅದಕ್ಕಾಗಿಯೇ ನಾಲ್ವಡಿ, ವಿಶ್ವೇಶ್ವರಯ್ಯ ಅವರನ್ನು ಜನ ನೆನೆಯುತ್ತಾರೆ. ಅದೇ ರೀತಿ ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಉದ್ಯೋಗಾವಕಾಶ ಸೃಷ್ಟಿಸಲು ಅಡಿಗಲ್ಲು ಹಾಕಿದ್ದೇವೆ. ಭವಿಷ್ಯದಲ್ಲಿ ವಿಶ್ವಮಟ್ಟದಲ್ಲಿ ಪ್ರಖ್ಯಾತಿ ಪಡೆಯಲಿದೆ' ಎಂದರು.

'ತಾಯಿ ಚಾಮುಂಡೇಶ್ವರಿ ಮತ್ತು ಕಾವೇರಿ ಮಾತೆಯ ಆಶೀರ್ವಾದದಿಂದ ಮೇಕೆದಾಟು ಯೋಜನೆ ಅನುಷ್ಠಾನ ಸಾಧ್ಯವಾಗಲಿದೆ. ಪ್ರಾರ್ಥನೆ ಯಾರ ಮನೆಯ ಸ್ವತ್ತೂ ಅಲ್ಲ. ಪ್ರಯತ್ನ ವಿಫಲವಾಗಬಹುದು, ಪ್ರಾರ್ಥನೆ ಎಂದಿಗೂ ವಿಫಲವಾಗಲಾರದು' ಎಂದು ಹೇಳಿ, ಕಾವೇರಿ ಆರತಿ ವಿರೋಧಿಸುವವರ ನಿಲುವನ್ನು ಟೀಕಿಸಿದರು.

ರೈತರ ಬಂಧನ

ಒಂದನೇ ಪುಟದಿಂದ...

ಪ್ರತಿಭಟನೆ ಕೈಬಿಡುವಂತೆ ಪೊಲೀಸರು ಮಾಡಿದ ಮನವಿಯನ್ನು ತಿರಸ್ಕರಿಸಿದ ಮುಖಂಡರು, 'ಕಾವೇರಿ ಆರತಿ' ಕುರಿತು ಜನಜಾಗೃತಿ ಮೂಡಿಸುತ್ತಿದ್ದೇವೆ. ತಡೆಯಬೇಡಿ. ನ್ಯಾಯಾಲಯದ ತಡೆಯಾಜ್ಞೆ ಇದ್ದರೂ ಕಾನೂನು ಉಲ್ಲಂಘಿಸಿ ಸರ್ಕಾರ ಕಾವೇರಿ ಆರತಿ ಮಾಡುತ್ತಿದೆ' ಎಂದು ದೂರಿ ಧಿಕ್ಕಾರ ಕೂಗಿದರು. ಜಿಲ್ಲಾ ರೈತ ಹಿತರಕ್ಷಣಾ ಸಮಿತಿ, ರೈತ ಸಂಘ, ವಿವಿಧ ಕನ್ನಡ ಪರ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು.

ಓಟ...

ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ


ನವರಾತ್ರಿ ಪ್ರಯುಕ್ತ ಬೆಳಗಾವಿಯಲ್ಲಿ ಶುಕ್ರವಾರ 'ದುರ್ಗಾಮಾತಾ ದೌಡ್ (ದುರ್ಗೆ ಹೆಸರಲ್ಲಿ ಓಟ)' ಕಾರ್ಯಕ್ರಮದಲ್ಲಿ ಯುವತಿಯರು ಪಾಲ್ಗೊಂಡಿದ್ದರು

ಲಂಚ: ಗ್ರಾ.ಪಂ ಸದಸ್ಯರು ಸೇರಿ ಮೂವರು ಲೋಕಾಯುಕ್ತ ಬಲೆಗೆ

ಚನ್ನಗಿರಿ: ತಾಲ್ಲೂಕಿನ ಹೊದಿಗೆರೆಯ ಸರ್ಕಾರಿ ಬಾಲಕರ ಶಾಲೆ ಕೊಠಡಿಯ ಚಾವಣಿ ನಿರ್ಮಾಣ ಆರಂಭಿಸಲು ಗುತ್ತಿಗೆದಾರರಿಂದ ಲಂಚ ಪಡೆಯುವಾಗ ಗ್ರಾಮ ಪಂಚಾಯಿತಿಯ ಇಬ್ಬರು ಸದಸ್ಯರು, ಒಬ್ಬ ನಿವಾಸಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.


ಪ್ರದೀಪ


ಶಿವಕುಮಾರ

ಶಾಲೆ ಕೊಠಡಿಗೆ ಚಾವಣಿ ನಿರ್ಮಿಸಲು ₹ 2 ಲಕ್ಷದ ಕಾಮಗಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ ಅನುಮೋದನೆ ನೀಡಿತ್ತು. ಶಿವಮೊಗ್ಗದ ಗುತ್ತಿಗೆದಾರ ಸುನೀಲ್ ಗುತ್ತಿಗೆ ಪಡೆದಿದ್ದು, ನಿರ್ವಹಣೆಯ ಉಸ್ತುವಾರಿಯನ್ನು ಜಾವೀದ್ ಅಹಮದ್‌ಗೆ ವಹಿಸಿದ್ದರು.

ಕಾಮಗಾರಿ ಆರಂಭಿಸಲು ಜಾವೀದ್ ಬಂದಾಗ ಹೊದಿಗೆರೆ ಗ್ರಾ.ಪಂ. ಸದಸ್ಯರಾದ ಪ್ರದೀಪ, ಶಿವಕುಮಾರ, ಗ್ರಾಮಸ್ಥ ಮಂಜು ₹ 30,000 ಲಂಚ ನೀಡಬೇಕು ಎಂದು ಕೇಳಿದರು

ಈ ಬಗ್ಗೆ ದೂರು ಆಧರಿಸಿ ಲೋಕಾಯುಕ್ತ ಡಿವೈಎಸ್‌ಪಿ ಕಲಾವತಿ, ಪಿಎಸ್‌ಐ ಸರಳಾ ಮತ್ತು ಸಿಬ್ಬಂದಿ ದಾಳಿ ನಡೆಸಿದ್ದು, ₹ 10,000 ಲಂಚ ಪಡೆಯುವಾಗ ಹಣದ ಸಮೇತ ಮೂವರನ್ನು ವಶಕ್ಕೆ ಪಡೆದಿದ್ದಾರೆ ಲೋಕಾಯುಕ್ತ ಎಸ್.ಪಿ. ಎಂ.ಎಸ್. ಕೌಲಾಪೂರೆ ತಿಳಿಸಿದ್ದಾರೆ.

11 ಮಂದಿಗೆ ಉಪಾಧ್ಯಕ್ಷ ಪಟ್ಟ....

ಒಂದನೇ ಪುಟದಿಂದ...

ಈ ಹಿಂದೆ ಎಐಸಿಸಿ ಅನುಮೋದಿಸಿದ್ದ 32 ನಿಗಮ-ಮಂಡಳಿಗಳ ಅಧ್ಯಕ್ಷರ ನೇಮಕದ ಪಟ್ಟಿಗೆ ಸಂಬಂಧಿಸಿದಂತೆ ಆದೇಶ ಹೊರಡಿಸಲು ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ.

ನಿಗಮ ಮಂಡಳಿ ಅಧ್ಯಕ್ಷರು	
ಎಚ್.ಡಿ.ಗಣೇಶ್	ಮೈಸೂರು ಪೈಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್
ನಿಕೇತ್ ರಾಜ್ ಎಂ	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ(ಬಿಎಂಟಿಸಿ)
ಉಪಾಧ್ಯಕ್ಷರು:	
ಪ್ಯಾರಿ ಜಾನ್	ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ
ಸುನೀಲ್ ಜೆ.ಹನುಮಣ್ಣನವರ್	ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಎಸ್.ವಿ.ತಂಬಿದೊರೈ	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ
ವಿ.ಎಸ್.ಆರಾಧ್ಯ	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಿ.ಎಸ್.ಅರುಣ್ ಮಾಚಯ್ಯ	ಕರ್ನಾಟಕ ಕ್ರೀಡಾ ಪ್ರಾಧಿಕಾರ
ಎಚ್.ಲಕ್ಷ್ಮಣ	ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್
ವಿಜಯಲಕ್ಷ್ಮಿ	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ

ನಿತ್ರಾಣಗೊಂಡು ಒದ್ದಾಡುತ್ತಿದ್ದ ಹಾವು • ಸ್ನೇಕ್ ಶಿವು ಸಮಯಪ್ರಜ್ಞೆಯಿಂದ ಚಿಕಿತ್ಸೆ

ಟ್ಯೂಬ್ ನುಂಗಿದ್ದ ಹಾವಿಗೆ ಯಶಸ್ವಿ ಶಸ್ತ್ರಚಿಕಿತ್ಸೆ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಸನ್‌ಸ್ಕ್ರೀನ್ ಟ್ಯೂಬ್ ನುಂಗಿ ಒದ್ದಾಡುತ್ತಿದ್ದ ಕೇರೆ ಹಾವಿಗೆ ನಗರದ ಉರಗಪ್ರೇಮಿ ಸ್ನೇಕ್ ಶಿವು ಹೊಸ ಬದುಕು ನೀಡಿದ್ದಾರೆ. ಸಕಾಲಕ್ಕೆ ಬೆಂಗಳೂರಿನ ವನ್ಯಜೀವಿ ಆಸ್ಪತ್ರೆಗೆ ಕೊಂಡೊಯ್ದು ಶಸ್ತ್ರಚಿಕಿತ್ಸೆ ಮಾಡಿಸಿ ಹಾವಿನ ಜೀವ ಉಳಿಯಲು ಕಾರಣರಾಗಿದ್ದಾರೆ.


ಸ್ನೇಕ್ ಶಿವು

ತಾಲ್ಲೂಕಿನ ಕಲ್ಲಹಳ್ಳಿಯ ಮಹಿಳೆ ಶ್ರೀದೇವಿ ಅವರ ತೋಟದ ಪಂಪ್‌ಹೌಸ್‌ನಲ್ಲಿ ಕೇರೆಹಾವು ಕಾಣಿಸಿಕೊಂಡಿತ್ತು. ಫೋನ್ ಕರೆ ಆಧರಿಸಿ ಸ್ಥಳಕ್ಕೆ ತೆರಳಿದ ಸ್ನೇಕ್ ಶಿವು ಅವರು ಹಾವು ರಕ್ಷಣೆ ಮಾಡಿದರು. ಆದರೆ, ಹೊಟ್ಟೆ ಊದಿಕೊಂಡಿದ್ದ ಹಾವು ಚಲಿಸಲಾಗದೇ ಒದ್ದಾಡುತ್ತಿತ್ತು.


ಹಾವಿನ ಹೊಟ್ಟೆಯಿಂದ ಸನ್‌ಸ್ಕ್ರೀನ್ ಟ್ಯೂಬ್ ಹೊರತೆಗೆದಿರುವುದು

ಕಬ್ಬಿಣ ಅಥವಾ ಪ್ಲಾಸ್ಟಿಕ್ ನುಂಗಿರಬಹುದು ಎಂದು ಊಹಿಸಿದ ಶಿವು ನಗರದ ಜಿಲ್ಲಾ ಆಸ್ಪತ್ರೆಯ ಪಶುವೈದ್ಯಕೀಯ ವಿಭಾಗಕ್ಕೆ ಕೊಂಡೊಯ್ದರು. ಹಾವಿಗೆ ಎಕ್ಸ್-ರೇ ಮಾಡಿ ನೋಡಿದಾಗ ಹೊಟ್ಟೆಯಲ್ಲಿ ಅಪಾಯಕಾರಿ ವಸ್ತು ಇರುವುದು ಖಾತ್ರಿಯಾಯಿತು. ಬಳಿಕ ಬೆಂಗಳೂರಿನ ಪಿಎಫ್‌ಎ (ಪೀಪಲ್ ಫಾರ್ ಅನಿಮಲ್ಸ್) ವನ್ಯಜೀವಿ ಆಸ್ಪತ್ರೆಗೆ ಒಯ್ದರು.

ತೀವ್ರ ನಿಗಾ ಘಟಕದಲ್ಲಿರಿಸಿ ಚಿಕಿತ್ಸೆ ನೀಡಿದ ವೈದ್ಯರು ಹೊಟ್ಟೆಯೊಳಗಿರುವ ವಸ್ತು ಪತ್ತೆಗೆ ಶಸ್ತ್ರಚಿಕಿತ್ಸೆ ಮಾಡಲು ನಿರ್ಧರಿಸಿದರು. ಹಾವಿನ ಹೊಟ್ಟೆಯನ್ನು 6 ಇಂಚು ಕೊಯ್ದಾಗ ಹೊಟ್ಟೆಯಲ್ಲಿ ಸನ್‌ಸ್ಕ್ರೀನ್ ಟ್ಯೂಬ್ ಪತ್ತೆಯಾಯಿತು.

ಹಾವಿನ ಹೊಟ್ಟೆಯಲ್ಲಿ ಇಲಿ, ಇತರೆ ಹಾವು, ಬೇರೆ ವಸ್ತುಗಳನ್ನು ನೋಡುತ್ತಿದ್ದ ವೈದ್ಯರು ಇದೇ ಮೊದಲ ಬಾರಿ ಸನ್‌ಸ್ಕ್ರೀನ್ ಟ್ಯೂಬ್ ಇರುವುದನ್ನು ನೋಡಿ ಚಕಿತರಾದರು.

ಒಂದೂವರೆ ಗಂಟೆ ಶಸ್ತ್ರಚಿಕಿತ್ಸೆ ನಡೆಯಿತು. ಟ್ಯೂಬ್ ಹಿಂಬದಿ ಚೂಪಾಗಿದ್ದರಿಂದ ತೀವ್ರ ಗಾಯಗಳಾಗಿವೆ. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದರೂ ಹಾವನ್ನು ತೀವ್ರ ನಿಗಾ ಘಟಕದಲ್ಲೇ ಇರಿಸಲಾಗಿದೆ. ಸೆ.16ರಂದು ಶಸ್ತ್ರಚಿಕಿತ್ಸೆ ನಡೆಯಿತು.

> ಕರ್ನಲ್ ಡಾ.ನವಾಜ್ ಷರೀಫ್, ಡಾ.ಮಾಧವ್ ಅವರು ವಿಶೇಷ ಆಸಕ್ತಿಯಿಂದ ಶಸ್ತ್ರಚಿಕಿತ್ಸೆ ಮಾಡಿದ್ದು, ಹಾವು ಅಪಾಯದಿಂದ ಪಾರಾಗಿದೆ. ಕೆಲ ದಿನ ನಿಗಾ ವಹಿಸಲಾಗುವುದು
>
> **ಸಲ್ಮಾನ್ ಖಾನ್,** ಸಂಯೋಜಕ, ವನ್ಯಜೀವಿ ಸಂರಕ್ಷಣಾ ಆಸ್ಪತ್ರೆ, ಬೆಂಗಳೂರು

> 2,000ಕ್ಕೂ ಹೆಚ್ಚು ಹಾವುಗಳನ್ನು ರಕ್ಷಿಸಿದ್ದೇನೆ. ಮೊದಲ ಬಾರಿಗೆ ಹಾವು ಸನ್‌ಸ್ಕ್ರೀನ್ ಟ್ಯೂಬ್ ನುಂಗಿದ್ದು ಕಂಡಿದ್ದೇನೆ. ಹಾವು ಚೇತರಿಸಿಕೊಂಡ ಬಳಿಕ ಜೋಗಿಮಟ್ಟಿ ಅರಣ್ಯದಲ್ಲಿ ಬಿಡಲಾಗುವುದು
>
> **ಸ್ನೇಕ್ ಶಿವು,** ಉರಗಪ್ರೇಮಿ, ಚಿತ್ರದುರ್ಗ

ಸಂಜನಾ ಗರ್ಲಾನಿಗೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಚತಾರಾ ಪಾರ್ಟಿಗಳಿಗಾಗಿ ದೇಶದಾದ್ಯಂತ ವಿವಿಧ ಸ್ಥಳಗಳಿಂದ ಮಾದಕ ವಸ್ತುಗಳನ್ನು ಖರೀದಿಸಿದ ಆರೋಪದಡಿ ದಾಖಲಾಗಿದ್ದ ಪ್ರಕರಣವನ್ನು ರದ್ದುಗೊಳಿಸಿರುವುದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ನಟಿ ಅರ್ಚನಾ ಗರ್ಲಾನಿ ಅಲಿಯಾಸ್ ಸಂಜನಾ ಗರ್ಲಾನಿ ಮತ್ತು ಇತರರಿಗೆ ನೋಟಿಸ್ ಜಾರಿಗೆ ಶುಕ್ರವಾರ ಆದೇಶಿಸಿದೆ.


ಸಂಜನಾ ಗರ್ಲಾನಿ

2024ರ ಮಾರ್ಚ್ 25ರ ಹೈಕೋರ್ಟ್ ತೀರ್ಪಿನ ಸಿಂಧುತ್ವವನ್ನು ಪ್ರಶ್ನಿಸುವ ಅರ್ಜಿ ಕುರಿತು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು, ಸಂಜನಾ ಮತ್ತು ಶಿವಪ್ರಕಾಶ್ ಅಲಿಯಾಸ್ ಚಿಪ್ಪಿ ಮತ್ತು ಆದಿತ್ಯ ಮೋಹನ್ ಅಗರ್ವಾಲ್ ಅವರಿಂದ ಪ್ರತಿಕ್ರಿಯೆ ಕೇಳಿದೆ.

ಜಾಮೀನು ಅರ್ಜಿ: ವೀರೇಂದ್ರಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಡಿ ಬಂಧನದಲ್ಲಿರುವ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಅವರಿಗೆ ವಿಚಾರಣಾ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಲು ಹೈಕೋರ್ಟ್ ಅನುಮತಿ ನೀಡಿದೆ.


ಕೆ.ಸಿ.ವೀರೇಂದ್ರ

'ನನ್ನ ಪತಿಯ ಬಂಧನ ಅಕ್ರಮ ಎಂಬುದಾಗಿ ಘೋಷಿಸಬೇಕು' ಎಂದು ಕೋರಿ ಕೆ.ಸಿ. ವೀರೇಂದ್ರ ಪತ್ನಿ ಆರ್.ಡಿ.ಚೈತ್ರಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ಪೀಠ ಶುಕ್ರವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಕೀಲರು, ದಸರಾ ಹಬ್ಬದ ಪ್ರಯುಕ್ತ ಎರಡು ದಿನ ಮಧ್ಯಂತರ ಜಾಮೀನು ನೀಡುವಂತೆ ಕಳೆದ ವಿಚಾರಣೆ ವೇಳೆ ನ್ಯಾಯಪೀಠವನ್ನು ಕೋರಿದ್ದರು.

ಇದಕ್ಕೆ ಕೇಂದ್ರ ಸರ್ಕಾರದ ಪರ ವಕೀಲರು, 'ಅರ್ಜಿದಾರರ ಪತಿಗೆ ಜಾಮೀನು ಅಗತ್ಯವಿದ್ದಲ್ಲಿ ವಿಚಾರಣಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ. ನೇರವಾಗಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗದು ಮತ್ತು ಮಧ್ಯಂತರ ಮಂಜೂರು ಮಾಡಬಾರದು' ಎಂದು ಆಕ್ಷೇಪಿಸಿದ್ದರು.

ಇದಕ್ಕೆ ಅರ್ಜಿದಾರರ ಪರ ವಕೀಲರು, 'ವಿಚಾರಣಾ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಲು ಅನುಮತಿ ನೀಡಬೇಕು' ಎಂದು ಕೋರಿದರು. ನ್ಯಾಯಪೀಠ ಇದಕ್ಕೆ ಸಮ್ಮತಿ ಸೂಚಿಸಿ ವಿಚಾರಣೆ ಮುಂದೂಡಿದೆ.

ತಾಯಿ-ಮಕ್ಕಳು ರಷ್ಯಾಕ್ಕೆ ಹಿಂದಿರುಗಲು ಅನುವು


ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಗುಹೆಯಲ್ಲಿ ವಾಸವಾಗಿದ್ದ ತಾಯಿ ಮತ್ತು ಆಕೆಯ ಇಬ್ಬರು ಮಕ್ಕಳು ರಷ್ಯಾಕ್ಕೆ ಹಿಂತಿರುಗಲು ಅಗತ್ಯವಾದ ಪ್ರಯಾಣ ದಾಖಲೆಗಳನ್ನು ಒದಗಿಸಲು ಹೈಕೋರ್ಟ್, ಕೇಂದ್ರ ಸರ್ಕಾರಕ್ಕೆ ಅನುಮತಿ ನೀಡಿದೆ.

ಈ ಪ್ರಕರಣ ಸಂಬಂಧಿತ ಮಕ್ಕಳ ತಂದೆ ಡ್ರೋರ್ ಶ್ಲೋಮೊ ಗೋಲ್ಡ್‌ಸ್ಟೈನ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಗುಹೆಯಲ್ಲಿ ತಂಗಿದ್ದ ಮಹಿಳೆ ಮತ್ತು ಮಕ್ಕಳು ವೀಸಾ ಪಡೆದು ರಷ್ಯಾದಿಂದ ಭಾರತಕ್ಕೆ ಬಂದಿದ್ದರೂ, ಅವಧಿ ಮೀರಿ ನೆಲಸಿದ್ದಾರೆ. ಹೀಗಾಗಿ, ರಷ್ಯಾ ಸರ್ಕಾರಕ್ಕೆ ಅಗತ್ಯವಾದ ಎಲ್ಲ ವಿವರಗಳನ್ನು ಒದಗಿಸಬೇಕು. ತಾಯಿ ಸ್ವತಃ ಮಕ್ಕಳೊಂದಿಗೆ ರಷ್ಯಾಕ್ಕೆ ಹಿಂತಿರುಗಲು ವಿನಂತಿಸಿದ್ದಾರೆ. ರಷ್ಯಾ ಸರ್ಕಾರವೂ ತಾಯಿ ಮತ್ತು ಮಕ್ಕಳನ್ನು ತನ್ನ ದೇಶಕ್ಕೆ ಕರೆತರಲು ಸೂಚಿಸಿದೆ. ಆದ್ದರಿಂದ, ಸಾಧ್ಯವಾದಷ್ಟು ಬೇಗ ಮೂವರನ್ನೂ ವಾಪಸು ಕಳುಹಿಸಬೇಕು. ಅದಕ್ಕೆ ಅಗತ್ಯವಿರುವ ಎಲ್ಲ ದಾಖಲೆಗಳನ್ನು ಕೇಂದ್ರ ಸರ್ಕಾರ ಒದಗಿಸಬೇಕು' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.


BIGGEST Deepavali SALE
FESTIVAL OF SAVINGS
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
GST 28% 18%
ನಿಶ್ಚಿತ ಕಡಿಮೆ ಬೆಲೆಯಲ್ಲಿ
ಮಳಿಗೆಗಳು: 10.30AM - 10PM ತೆರೆದಿರುತ್ತದೆ
(26 Sept - 26 Oct 2025)
ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ವಸ್ತುಗಳ ಮೇಲಿನ ಜಿಎಸ್‌ಟಿ ಕಡಿಮೆಯಾಗಿದೆ*
ಫೈನಾನ್ಸ್ ಬೊನಾಂಜಾ 1 ಇ.ಎಮ್.ಐ ಉಚಿತ* ₹15,000 ಕ್ಯಾಶ್ ಬ್ಯಾಕ್*
ಕ್ಯಾಶ್‌ಬ್ಯಾಕ್ ಬೊನಾಂಜಾ Upto ₹50,000 CASH BACK*
ಎಕ್ಸ್‌ಚೇಂಜ್ ಬೊನಾಂಜಾ Upto ₹25,000 ಎಕ್ಸ್‌ಚೇಂಜ್ ಮೇಲೆ*
HDFC BANK 10% INSTANT CASH BACK ON CC & DC EMI* MIN TXN ₹17,000 MAX CAP ₹3,000
DBS Upto 5% INSTANT CASH BACK ON CC EMI* MIN TXN ₹20,000 MAX CASH BACK ₹2,500
kotak Upto 5% INSTANT CASH BACK ON CC EMI* MIN TXN ₹10,000 MAX CASH BACK ₹1,500
YES BANK Upto 5% INSTANT CASH BACK ON CC EMI* MIN TXN ₹10,000 MAX CASH BACK ₹2,000
scapia Upto 5% INSTANT CASH BACK ON CC EMI* MIN TXN ₹15,000 MAX CASH BACK ₹2,000
HSBC Upto 5% INSTANT CASH BACK ON CC EMI* MIN TXN ₹10,000 MAX CASH BACK ₹7,500
SAMSUNG 100 CLASS NEO Qಎಲ್.ಇ.ಡಿ SMART TV 100QN80F 20% CASH BACK ಹಳೆಯ ಬೆಲೆ ₹6,67,220 ಹೊಸ ಬೆಲೆ ₹6,15,093
SONY 98 BRAVIA 4K ULTRA HD SMART MINI ಎಲ್.ಇ.ಡಿ GOOGLE TV 98XR55A 10% CASH BACK ಹಳೆಯ ಬೆಲೆ ₹6,17,490 ಹೊಸ ಬೆಲೆ ₹5,69,250
Haier 98 QLED 144HZ GOOGLE TV WITH HANDS FREE VOICE CONTROL & LOCAL DIMMING 98S9QT 25% CASH BACK ಹಳೆಯ ಬೆಲೆ ₹4,58,610 ಹೊಸ ಬೆಲೆ ₹2,79,990 FREE: HAIER 43 4K UHD LED TV WORTH ₹52490
LG 75 4K ULTRA HD SMART ಎಲ್.ಇ.ಡಿ NANOCELL TV 75NANO83A6A 26% CASH BACK ಹಳೆಯ ಬೆಲೆ ₹1,09,100 ಹೊಸ ಬೆಲೆ ₹1,00,580
LOWEST PRICE CHALLENGE 55 Q ಎಲ್.ಇ.ಡಿ 52% OFF 10% CASH BACK ಹಳೆಯ ಬೆಲೆ ₹35,760 ಹೊಸ ಬೆಲೆ ₹32,960
OPPO F31 10% CASH BACK EFFECTIVE PRICE ₹21,290* (PRICE AFTER CASH BACK) EMI ₹1,374 Onwards FREE: BT NECKBAND WORTH ₹1649
xiaomi Redmi 15 10% CASH BACK SALE PRICE ₹14,999* EMI ₹1,250 Onwards FREE: BT NECKBAND WORTH ₹1649
realme 14X 10% CASH BACK EFFECTIVE PRICE ₹13,390* Onwards (PRICE AFTER CASH BACK) EMI ₹1,116 Onwards FREE: BT NECKBAND WORTH ₹1649
SAMSUNG S25 ULTRA 10% CASH BACK EFFECTIVE PRICE ₹1,08,499* Onwards (PRICE AFTER CASH BACK) EMI ₹4,812 Onwards MAGSAFE W/L POWER BANK WORTH ₹7999 @ ₹99
vivo Y31 10% CASH BACK EFFECTIVE PRICE ₹13,990* (PRICE AFTER CASH BACK) EMI ₹1,249 Onwards FREE: BT NECKBAND WORTH ₹1649
LG 14 PLACE SETTIN FREESTANDING DISHWASHER DFB532FP 26% CASH BACK ಹಳೆಯ ಬೆಲೆ ₹53,330 ಹೊಸ ಬೆಲೆ ₹49,160
BOSCH HEAT PUMP TUMBLE DRYER 9 KG SILVER INOX 10% CASH BACK ಹಳೆಯ ಬೆಲೆ ₹64,800 ಹಬ್ಬದ ಬೆಲೆ ₹62,250
DELL 3530 • 13TH GEN i5 • 16GB RAM, 512GB SSD • 15.6 FHD • WIN 11 MSO 24 10% CASH BACK EMI ₹4,249 ಹಬ್ಬದ ಬೆಲೆ ₹50,990 FREE: BAG-FREE GIFTS- 64GB PENDRIVE + W/L MOUSE + QUICKHEAL INTERNET SECURITY WORTH ₹3990
hp VICTUS • RYZEN 5 5600H • 16GB, 512GB SSD • 4GB GFX • 15.6 FHD, WIN 11 10% CASH BACK EMI ₹4,416 ಹಬ್ಬದ ಬೆಲೆ ₹52,990 FREE: BAG - FREE GIFTS- 64GB PENDRIVE + W/L COMBO KEYBOARD MOUSE + QUICKHEAL INTERNET SECURITY WORTH ₹4990
Lenovo SLIM 3I • 13TH GEN i7 • 16GB RAM, 512GB SSD • 15.6 WXGA • WIN 11 MSO 24 10% CASH BACK EMI ₹4,999 ಹಬ್ಬದ ಬೆಲೆ ₹59,990 FREE: BAG-FREE GIFTS- 64GB PENDRIVE + W/L MOUSE + QUICKHEAL INTERNET SECURITY WORTH ₹3990
SAMSUNG 653 LTRS SIDE BY SIDE SMART REFRIGERATOR RS76CB81A333HL 20% CASH BACK ಹಳೆಯ ಬೆಲೆ ₹1,13,980 ಹಬ್ಬದ ಬೆಲೆ ₹1,08,410
Godrej 600LTRS TOUGHENED GLASS DOOR SIDE BY SIDE REFRIGERATOR 10% CASH BACK ಹಳೆಯ ಬೆಲೆ ₹72,390 ಹಬ್ಬದ ಬೆಲೆ ₹68,940
DAIKIN 2.02 TON 3 STAR, INVERTER SPLIT AC 10% CASH BACK ಹಳೆಯ ಬೆಲೆ ₹67,470 ಹೊಸ ಬೆಲೆ ₹62,200
TOSHIBA 9.0 KG 1400 RPM FRONT LOAD WASHING MACHINE 10% CASH BACK ಹಳೆಯ ಬೆಲೆ ₹36,750 ಹಬ್ಬದ ಬೆಲೆ ₹35,500
IFB DEEPCLEAN® 8 KG FRONT LOAD WASHING MACHINE 10% CASH BACK STEAM REFRESH ECO INVERTER ಹಳೆಯ ಬೆಲೆ ₹39,730 ಹಬ್ಬದ ಬೆಲೆ ₹37,480
KAFF KEC 60A-DC 60CM 1400M³/ HR BLDC AUTOCLEAN CURVED SHAPE CHIMNEY ಹಳೆಯ ಬೆಲೆ ₹15,990 ಹಬ್ಬದ ಬೆಲೆ ₹14,490
Preethi MIXER GRINDER ZODIAC 10% CASH BACK ಹಳೆಯ ಬೆಲೆ ₹9,700 ಹಬ್ಬದ ಬೆಲೆ ₹9,099
Racold GEYSER:CDR/DLX SP 25V 10% CASH BACK ಹಳೆಯ ಬೆಲೆ ₹8,699 ಹಬ್ಬದ ಬೆಲೆ ₹8,299
EUREKA FORBES WATER PURIFIER:AQUAGUARD ENHANCE NXT 2X LIFE RO+UV+TA 10% CASH BACK ಹಳೆಯ ಬೆಲೆ ₹17,500 ಹಬ್ಬದ ಬೆಲೆ ₹13,990
LG 28 ಲೀ ಕನ್‌ವೆಕ್ಷನ್ ಮೈಕ್ರೋವೇವ್ MC2846BR 26% CASH BACK ಹಳೆಯ ಬೆಲೆ ₹15,210 ಹಬ್ಬದ ಬೆಲೆ ₹14,480
JBL BAR 500 5.1 CH, 590W, DOLBY ATMOS®, 3D SURROUND, WIRELESS SUBWOOFER 10% CASH BACK ಹಳೆಯ ಬೆಲೆ ₹49,999 EFFECTIVE PRICE ₹33,299* (PRICE AFTER CASH BACK)
GIRIAS THE CONSUMER DURABLE PEOPLE Since 1971
STORE LOCATOR
179 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
facebook

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,890
ಇಂದಿನ ಅಂತ್ಯ:	24,654
ದಿನದ ಕನಿಷ್ಠ:	24,629
↓	236

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹250-647
ದ್ವಿತಳಿ (ಬಿ.ವಿ)	₹385-812

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹184
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹164

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1275 (1270)
ಸೂರ್ಯಕಾಂತಿ (ರಿಫೈನ್ಡ್)	₹1425 (1425)
ಪಾಮೋಲಿನ್	₹1280 (1275)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹29500-29500
ಪುತ್ತೂರು	₹6000-25500

ಔಷಧಕ್ಕೆ ಸುಂಕ: ಷೇರು ಸೂಚ್ಯಂಕ ಕುಸಿತ

ಆರು ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 2,587, ನಿಫ್ಟಿ 768 ಅಂಶ ಇಳಿಕೆ



ಮುಂಬೈ / ನವದೆಹಲಿ (ಪಿಟಿಐ): ಅಮೆರಿಕವು ಔಷಧ ಆಮದು ಮೇಲೆ ಶೇ 100ರಷ್ಟು ಸುಂಕ ವಿಧಿಸಿದೆ. ಇದರಿಂದಾಗಿ ದೇಶದ ಔಷಧ ವಲಯದ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿ ಶುಕ್ರವಾರದ ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳು ಶೇ 1ರಷ್ಟು ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 733 ಅಂಶ ಇಳಿಕೆಯಾಗಿ, 80,426ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ 827 ಅಂಶ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 236 ಅಂಶ ಕಡಿಮೆಯಾಗಿ, 24,654ಕ್ಕೆ ಕೊನೆಗೊಂಡಿದೆ. ಈ ಇಳಿಕೆಯು ಮೂರು ವಾರದ ಕನಿಷ್ಠ ಮಟ್ಟವಾಗಿದೆ.

ಬಿಎಸ್‌ಇ ಹೆಲ್ತ್‌ಕೇರ್ ಸೂಚ್ಯಂಕ ಶೇ 2.14ರಷ್ಟು ಇಳಿಕೆ ಕಂಡಿದೆ. ವೊಕ್ಹಾರ್ಟ್ ಕಂಪನಿಯ ಷೇರಿನ ಮೌಲ್ಯ ಶೇ 9.4ರಷ್ಟು ಕುಸಿದಿದೆ. ಲಾರಸ್ ಲ್ಯಾಬ್ಸ್, ಗ್ಲೆನ್‌ಮಾರ್ಕ್, ಬಯೊಕಾನ್, ಝೈಡಸ್ ಲೈಫ್, ಸನ್ ಫಾರ್ಮಾ ಮತ್ತು ಡಾ. ರೆಡ್ಡೀಸ್ ಷೇರಿನ ಮೌಲ್ಯ ಇಳಿಕೆ ಆಗಿದೆ.

'ಅಮೆರಿಕ ವಿಧಿಸಿರುವ ಶೇ 100ರಷ್ಟು ಸುಂಕವು ಬ್ರ್ಯಾಂಡೆಡ್ ಮತ್ತು ಹಕ್ಕುಸ್ವಾಮ್ಯ ಪಡೆದಿರುವ ಔಷಧಗಳ ಮೇಲೆ ಮಾತ್ರ. ಆದರೆ, ಭಾರತ ರಫ್ತು ಮಾಡುವ ಬಹುತೇಕ ಉತ್ಪನ್ನಗಳು ಜೆನರಿಕ್ ಔಷಧಗಳಾಗಿವೆ. ಇವುಗಳಿಗೆ ಈಗ ವಿನಾಯಿತಿ ಇದೆ. ಆದರೆ, ರಫ್ತು ನಿಯಮಗಳ ಸುತ್ತಲಿನ ಅನಿಶ್ಚಿತತೆಯು ಆತಂಕವನ್ನು ಉಂಟು ಮಾಡಿದೆ' ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಅಜಿತ್ ಮಿಶ್ರಾ ಹೇಳಿದ್ದಾರೆ.

ಎಚ್‌-1ಬಿ ವೀಸಾ ಮೇಲಿನ ಶುಲ್ಕ ಹೆಚ್ಚಳವು ಮಾಹಿತಿ ತಂತ್ರಜ್ಞಾನ ಕಂಪನಿಗಳ ಷೇರುಗಳ ಮಾರಾಟಕ್ಕೆ ಕಾರಣವಾಯಿತು. ಇದು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ಹೇಳಿದ್ದಾರೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಎಟರ್ನಲ್, ಟಾಟಾ ಸ್ಟೀಲ್, ಬಜಾಜ್ ಫೈನಾನ್ಸ್, ಏಷ್ಯನ್ ಪೇಂಟ್ಸ್, ಟೆಕ್ ಮಹೀಂದ್ರ, ಇನ್ಫೊಸಿಸ್, ಟಿಸಿಎಸ್ ಮತ್ತು ಎಚ್‌ಸಿಎಲ್‌ನ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ. ಲಾರ್ಸನ್ ಆ್ಯಂಡ್ ಟೊಬ್ರೊ, ಟಾಟಾ ಮೋಟರ್ಸ್, ಐಟಿಸಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಜೆನರಿಕ್ ಔಷಧಗಳಿಗೆ ಸುಂಕ ಇಲ್ಲ: ಐಪಿಎ



ಅಮೆರಿಕವು ಔಷಧಗಳ ಆಮದಿಗೆ ವಿಧಿಸಿರುವ ಶೇ 100ರಷ್ಟು ಸುಂಕ ಹೇರಿಕೆಯು ದೇಶದ ಜೆನರಿಕ್ ಔಷಧಗಳ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಭಾರತೀಯ ಔಷಧ ಒಕ್ಕೂಟ (ಐಪಿಎ) ತಿಳಿಸಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಹಕ್ಕುಸ್ವಾಮ್ಯ ಪಡೆದಿರುವ ಅಥವಾ ಬ್ರ್ಯಾಂಡೆಡ್ ಔಷಧಗಳ ಮೇಲೆ ಮಾತ್ರ ಅಕ್ಟೋಬರ್ 1ರಿಂದ ಜಾರಿಗೆ ಬರುವಂತೆ ಶೇ 100ರಷ್ಟು ಸುಂಕ ವಿಧಿಸಿದ್ದಾರೆ. ಆದರೆ, ಈ ಸುಂಕವು ಜೆನರಿಕ್ ಔಷಧಗಳಿಗೆ ಅನ್ವಯ ಆಗುವುದಿಲ್ಲ ಎಂದು ಐಪಿಎ ಪ್ರಧಾನ ಕಾರ್ಯದರ್ಶಿ ಸುದರ್ಶನ್ ಜೈನ್ ಹೇಳಿದ್ದಾರೆ.

ಭಾರತೀಯ ಔಷಧ ಒಕ್ಕೂಟವು, ಡಾ. ರೆಡ್ಡಿ, ಸನ್ ಫಾರ್ಮಾ, ಲುಪಿನ್, ಜೈಡಸ್ ಲೈಫ್‌ಸೈನ್ಸಸ್ ಸೇರಿದಂತೆ ದೇಶದ ಪ್ರಮುಖ 23 ಔಷಧ ಕಂಪನಿಗಳನ್ನು ಪ್ರತಿನಿಧಿಸುತ್ತದೆ.

ಐಪಿಎ ಸದಸ್ಯರು ದೇಶದ ಔಷಧ ರಫ್ತಿನ ಪೈಕಿ ಶೇ 80ಕ್ಕೂ ಹೆಚ್ಚು ಔಷಧಗಳನ್ನು ರಫ್ತು ಮಾಡುತ್ತಾರೆ. ದೇಶೀಯ ಮಾರುಕಟ್ಟೆಯಲ್ಲಿ ಈ ಔಷಧಗಳ ಪಾಲು ಶೇ 64ರಷ್ಟಿದೆ.

ಐ.ಟಿ ಕಂಪನಿಗಳ ಲಾಭದ ಮೇಲೆ ಅಲ್ಪ ಪರಿಣಾಮ

ಅಮೆರಿಕದ ಎಚ್‌-1ಬಿ ವೀಸಾ ಶುಲ್ಕ ಹೆಚ್ಚಳವು, ದೇಶದ ಐ.ಟಿ ಕಂಪನಿಗಳ ಲಾಭದ ಮೇಲೆ ಶೇ 0.20ರಷ್ಟು ಮಾತ್ರ ಪರಿಣಾಮ ಬೀರಲಿದೆ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ಹೇಳಿದೆ.

2018ರಿಂದ ಐ.ಟಿ ಕಂಪನಿಗಳು ಎಚ್‌-1ಬಿ ವೀಸಾದ ಮೇಲಿನ ಅವಲಂಬನೆ ಕಡಿಮೆ ಮಾಡಿವೆ. ಆದರೆ, ಇದೀಗ ಹೊಸದಾಗಿ ಪಡೆಯುವ ಎಚ್‌-1ಬಿ ವೀಸಾ ಮೇಲಿನ ಶುಲ್ಕವನ್ನು ಅಮೆರಿಕ 1 ಲಕ್ಷ ಡಾಲರ್‌ಗೆ (ಅಂದಾಜು ₹88 ಲಕ್ಷ) ಹೆಚ್ಚಿಸಿದೆ. ಇದು ಮುಂದಿನ ಆರ್ಥಿಕ ವರ್ಷದಲ್ಲಿ ದೇಶದ ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳ (ಐ.ಟಿ) ಲಾಭದ ಮೇಲೆ ಶೇ 0.10ರಿಂದ ಶೇ 0.20ರಷ್ಟು ಪರಿಣಾಮ ಬೀರಲಿದೆ. ಈ ಕಂಪನಿಗಳು ಕಳೆದ ಆರ್ಥಿಕ ವರ್ಷದಲ್ಲಿ ಶೇ 22ರಷ್ಟು ಲಾಭ ಗಳಿಸಿವೆ.

ಅಮೆರಿಕದ ಅಧಿಕೃತ ದಾಖಲೆಗಳ ಪ್ರಕಾರ ಎಚ್‌-1ಬಿ ವೀಸಾ ಹೊಂದಿದ ಟಿಸಿಎಸ್, ಇನ್ಫೊಸಿಸ್, ವಿಪ್ರೊ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್‌ನಲ್ಲಿ ಕೆಲಸ ಮಾಡುವ ಭಾರತೀಯ ಉದ್ಯೋಗಿಗಳ ಸಂಖ್ಯೆ 2017ರಲ್ಲಿ 34,507 ಇತ್ತು. ಇದು 2025ರ ವೇಳೆಗೆ 17,997ಕ್ಕೆ ಇಳಿದಿದೆ. ವೀಸಾ ನಿರಾಕರಣೆ ಪ್ರಮಾಣದ ಹೆಚ್ಚಳವು, ಇದರ ಇಳಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ.

ಸೆಪ್ಟೆಂಬರ್ 19ರಿಂದ ನಡೆದ ಆರು ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 2,587 (ಶೇ 3.11) ಮತ್ತು ನಿಫ್ಟಿ 768 (ಶೇ 3) ಕುಸಿದಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ ಮತ್ತು ಹಾಂಗ್‌ಕಾಂಗ್ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಗುರುವಾರದ ವಹಿವಾಟಿನಲ್ಲಿ ₹4,995 ಕೋಟಿ ಮೌಲ್ಯದ ಷೇರು ಮಾರಾಟ ಮಾಡಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.27ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರಲ್ ದರವು 69.23 ಡಾಲರ್ ಆಗಿದೆ.

ಚಿಟಿಕೆ ಸುದ್ದಿ

ಬೆಳ್ಳಿ ₹1,900 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹1,900 ಹೆಚ್ಚಳವಾಗಿ, ₹1,41,900ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹330 ಹೆಚ್ಚಳವಾಗಿ, ₹1,17,700 ಆಗಿದೆ. ಆಭರಣ ಚಿನ್ನದ ದರವು (ಶೇ 99.5 ಪರಿಶುದ್ಧತೆ) ₹400 ಏರಿಕೆಯಾಗಿ, ₹1,17,100ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಇಎಸ್‌ಐಸಿ: ಹೊಸ ಸದಸ್ಯರ ನೋಂದಣಿ ಏರಿಕೆ

ನವದೆಹಲಿ (ಪಿಟಿಐ): ಜುಲೈ ತಿಂಗಳಿನಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮದಡಿ (ಇಎಸ್‌ಐಸಿ) 20.36 ಲಕ್ಷ ಸದಸ್ಯರು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ಶುಕ್ರವಾರ ತಿಳಿಸಿದೆ.

ಜೂನ್ ತಿಂಗಳಿನಲ್ಲಿ 19.37 ಲಕ್ಷ ಸದಸ್ಯರು ನೋಂದಣಿ ಮಾಡಿಕೊಂಡಿದ್ದರು. ಇದಕ್ಕೆ ಹೋಲಿಸಿದರೆ ಈ ಪ್ರಮಾಣ ಶೇ 5ರಷ್ಟು ಹೆಚ್ಚಳವಾಗಿದೆ. ಇದೇ ತಿಂಗಳಿನಲ್ಲಿ ಇಎಸ್‌ಐ ಯೋಜನೆಯಡಿ 31,146 ಕಂಪನಿಗಳು ಹೊಸದಾಗಿ ನೋಂದಣಿಯಾಗಿವೆ ಎಂದು ತಿಳಿಸಿದೆ.

ಒಟ್ಟು 20.36 ಲಕ್ಷ ಸದಸ್ಯರ ಪೈಕಿ, ಮಹಿಳಾ ಸದಸ್ಯರ ಸಂಖ್ಯೆ 4.33 ಲಕ್ಷವಿದೆ. 9.85 ಲಕ್ಷ ಸದಸ್ಯರು (ಶೇ 48) 25 ವರ್ಷದ ವಯೋಮಾನದವರು.

88 ಲಿಂಗತ್ವ ಅಲ್ಪಸಂಖ್ಯಾತರು ಉದ್ಯೋಗಿಗಳ ಯೋಜನೆಯಡಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ. ಸಮಾಜದ ಪ್ರತಿ ವರ್ಗಕ್ಕೂ ತನ್ನ ಪ್ರಯೋಜನಗಳನ್ನು ತಲುಪಿಸುವ ಇಎಸ್‌ಐಸಿಯ ಬದ್ಧತೆಯನ್ನು ಇದು ದೃಢೀಕರಿಸುತ್ತದೆ ಎಂದು ತಿಳಿಸಿದೆ.

ಔಷಧಕ್ಕೂ ಶೇ 100 ಸುಂಕ ಹೇರಿದ ಟ್ರಂಪ್

ಒಂದನೇ ಪುಟದಿಂದ...

1962ರ ವ್ಯಾಪಾರ ವಿಸ್ತರಣಾ ಕಾಯ್ದೆಯಡಿ ಅಮೆರಿಕವು, ಔಷಧ, ಭಾರಿ ಟ್ರಕ್, ಮರದ ದಿಮ್ಮಿಗಳು ಸೇರಿದಂತೆ ವಿವಿಧ ವಸ್ತುಗಳ ಆಮದಿನಿಂದ ರಾಷ್ಟ್ರೀಯ ಭದ್ರತೆ ಮೇಲೆ ಆಗುತ್ತಿರುವ ಪರಿಣಾಮಗಳ ಬಗ್ಗೆ ಇತ್ತೀಚೆಗೆ ತನಿಖೆ ನಡೆಸಿತ್ತು. ಈಗ ಔಷಧ, ಪೀಠೋಪಕರಣಗಳ ಮೇಲೆ ಆಮದು ಸುಂಕ ಹೆಚ್ಚಿಸಿರುವುದು ಇದೇ ಕಾರಣಕ್ಕಾಗಿಯೇ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ.

ಶೇ 100ರಷ್ಟು ತೆರಿಗೆಯು ಅಮೆರಿಕದಲ್ಲಿ ಹೊಸದಾಗಿ ನಿರ್ಮಣವಾಗುವ ಮತ್ತು ನಿರ್ಮಾಣ ಹಂತದಲ್ಲಿರುವ ಔಷಧ ತಯಾರಿಕಾ ಘಟಕಗಳಿಗೆ ಅನ್ವಯಿಸುವುದಿಲ್ಲ ಎಂದು ಟ್ರಂಪ್ ಹೇಳಿದ್ದಾರೆ. ಆದರೆ, ಈಗಾಗಲೇ ಅಲ್ಲಿ ಔಷಧ ತಯಾರಿಸುತ್ತಿರುವ ಘಟಕಗಳಿಗೆ ಈ ತೆರಿಗೆ ಅನ್ವಯಿಸಲಿದೆಯೇ ಎನ್ನುವುದು ಸಷ್ಟಗೊಂಡಿಲ್ಲ.

ಸುಂಕ ಬೆದರಿಕೆ ಬೆನ್ನಲ್ಲೇ, ಜಾನ್ಸನ್ ಆ್ಯಂಡ್ ಜಾನ್ಸನ್, ಅಸ್ಟ್ರಾ ಜೆನೆಕಾ, ರೋಚ್, ಬ್ರಿಸ್ಟೊಲ್, ಎಲಿ ಲಿಲ್ಲಿ ಸೇರಿದಂತೆ ಹಲವು ಔಷಧ ತಯಾರಿಕಾ ಕಂಪನಿಗಳು ಅಮೆರಿದಲ್ಲಿ ಹೂಡಿಕೆ ಮಾಡುವುದಾಗಿ ಹೇಳಿವೆ.

₹6.77 ಲಕ್ಷ ಕೋಟಿ ಸಂಗ್ರಹಕ್ಕೆ ನಿರ್ಧಾರ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ (ಅಕ್ಟೋಬರ್–ಮಾರ್ಚ್) ₹6.77 ಲಕ್ಷ ಕೋಟಿ ಸಂಗ್ರಹಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಬಾಂಡ್ ಹಂಚಿಕೆ ಮೂಲಕ ಈ ಮೊತ್ತದ ಸಂಗ್ರಹಕ್ಕೆ ಮುಂದಾಗಿರುವುದಾಗಿ ಕೇಂದ್ರ ಹಣಕಾಸು ಸಚಿವಾಲಯವು ಶುಕ್ರವಾರ ತಿಳಿಸಿದೆ.

ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಅಂದಾಜಿಗಿಂತ ₹5 ಸಾವಿರ ಕೋಟಿ ಸಾಲ ಕಡಿಮೆ ಪಡೆದಿದೆ. ಈಗ ಅಕ್ಟೋಬರ್–ಮಾರ್ಚ್‌ನಲ್ಲಿ ಕೂಡ ಇಷ್ಟೇ ಪ್ರಮಾಣದಲ್ಲಿ ಕಡಿಮೆ ಪಡೆಯುತ್ತಿದೆ. ಒಟ್ಟು ₹10 ಸಾವಿರ ಕೋಟಿ ಸಾಲ ಅಂದಾಜಿಗಿಂತ ಕಡಿಮೆ ಪಡೆಯುತ್ತಿದೆ.

2025–26ರ ಬಜೆಟ್‌ನಲ್ಲಿ ಸರ್ಕಾರವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಒಟ್ಟು ₹14.82 ಲಕ್ಷ ಕೋಟಿ ಸಾಲ ಪಡೆಯಲು ಯೋಜಿಸಿತ್ತು. ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್–ಸೆಪ್ಟೆಂಬರ್) ₹8 ಲಕ್ಷ ಕೋಟಿ ಸಾಲ ಪಡೆಯಲು ಯೋಜಿಸಿತ್ತು. ಆದರೆ, ₹7.95 ಲಕ್ಷ ಕೋಟಿ ಸಾಲ ಪಡೆದಿತ್ತು. ಈಗ ದ್ವಿತೀಯಾರ್ಧದಲ್ಲಿ ₹6.77 ಲಕ್ಷ ಕೋಟಿ ಪಡೆಯಲಿದೆ. ಒಟ್ಟು ₹14.72 ಲಕ್ಷ ಕೋಟಿ ಆಗಲಿದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ		ಯಲ್ಲಾಪುರ	
ಚಾಲಿ	38569-44899	ಹೊಸತು	57599-62869	ತಟ್ಟಿಬೆಟ್ಟೆ	35089-40499
ಚಿಪ್ಪು	27569-33999	ರಾಶಿ	48111-63869	ಬಿಳಿಗೋಟು	21669-34810
ಕೋಕ	7289-28099	ಸರಕು	62699-93800	ಚಾಲಿ	35009-45069
ಫ್ಯಾಕ್ಟರಿ	5099-27390	ಬಿಳಿಗೋಟು	24699-33619	ಕೋಕ	10199-21899
ಹಳೆಚಾಲಿ	39999-44500	ಚಾಲಿ	38399-44569	ಕೆಂಪುಗೋಟು	21195-30799
ಶಿವಮೊಗ್ಗ		ಕೋಕ	20319-29399	ರಾಶಿ	45000-57399
ಬೆಟ್ಟೆ	52200-68699	ಕೆಂಪುಗೋಟು	26499-31600	ತಟ್ಟಿಬೆಟ್ಟೆ	37209-43000
ಗೊರಬಲು	34299-39869	ರಾಶಿ	46019-53999		

ಮುಂಬೈ ಧಾರಣೆ (ಶೇಂಗಾ)

26-09-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಪಾಮ್ ವಾರದ ಡೆಲಿವರಿ	1278 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1340)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,13,050 (1,12,450)
ಬೆಳ್ಳಿ ಕೆ.ಜಿಗೆ	1,39,000 (1,36,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ತೇಜ್ ಪ್ರತಾಪ್‌ರಿಂದ ಹೊಸ ಪಕ್ಷ

ಪಟ್ನಾ (ಪಿಟಿಐ): ಆರ್‌ಜೆಡಿ ಪಕ್ಷದ ಮುಖ್ಯಸ್ಥ ಲಾಲು ಪ್ರಸಾದ್ ಅವರ ಹಿರಿಯ ಮಗ ತೇಜ್ ಪ್ರತಾಪ್ ಯಾದವ್ ಅವರು ಹೊಸ ಪಕ್ಷ ಸ್ಥಾಪಿಸಿರುವುದಾಗಿ ಶುಕ್ರವಾರ ಘೋಷಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಮಾಹಿತಿ ನೀಡಿ, 'ಜನ ಶಕ್ತಿ ಜನತಾ ದಳ'ದ ಪೋಸ್ಟರ್ ಅನ್ನು ಹಂಚಿಕೊಂಡಿದ್ದಾರೆ.

'ತೇಜ್ ಅವರ ಪಕ್ಷ ನೋಂದಣಿ ಯಾಗಿರುವ ಬಗ್ಗೆ ಮತ್ತು ಚಿಹ್ನೆ ಹಂಚಿಕೆಯಾಗಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲ' ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ತನ್ನ ನೇತೃತ್ವದಲ್ಲಿ ಐದು ಸಣ್ಣ ಪಕ್ಷಗಳು ಮೈತ್ರಿ ಮಾಡಿಕೊಳ್ಳಲಿವೆ ಎಂದು ತೇಜ್ ಆಗಸ್ಟ್‌ನಲ್ಲಿ ಹೇಳಿದ್ದರು..

ಸುದ್ದಿ 2 ನಿಮಿಷ

ಕ್ಲೇಮು ಇತ್ಯರ್ಥಕ್ಕೆ ಆರ್‌ಬಿಐ ಗಡುವು

ಮುಂಬೈ (ಪಿಟಿಐ): ಮೃತಪಟ್ಟ ಗ್ರಾಹಕರ ಬ್ಯಾಂಕ್ ಖಾತೆಗಳು ಮತ್ತು ಲಾಕರ್‌ಗಳ ಮೇಲಿನ ಕ್ಲೇಮುಗಳನ್ನು 15 ದಿನದೊಳಗೆ ಇತ್ಯರ್ಥಪಡಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಪರಿಷ್ಕೃತ ಮಾನದಂಡಗಳನ್ನು ಹೊರಡಿಸಿದೆ. ಕ್ಲೇಮ್ ಇತ್ಯರ್ಥ ವಿಳಂಬವಾದರೆ ನಾಮನಿರ್ದೇಶಿತರಿಗೆ ಪರಿಹಾರವನ್ನು ನಿಗದಿಪಡಿಸಿದೆ.

ಈ ನಿರ್ದೇಶನಗಳು ಮೃತಪಟ್ಟ ಗ್ರಾಹಕರ ಠೇವಣಿ ಖಾತೆಗಳಲ್ಲಿನ ಕ್ಲೇಮುಗಳು, ಸುರಕ್ಷಿತ ಠೇವಣಿ, ಲಾಕರ್‌ನಲ್ಲಿರುವ ವಸ್ತುಗಳ ಇತ್ಯರ್ಥಕ್ಕೆ ಸಂಬಂಧಿಸಿವೆ ಎಂದು ತಿಳಿಸಿದೆ.

ಮೃತಪಟ್ಟ ಗ್ರಾಹಕರಿಗೆ ಸಂಬಂಧಿಸಿದಂತೆ ಕ್ಲೇಮುಗಳ ಇತ್ಯರ್ಥದಲ್ಲಿ ಬ್ಯಾಂಕುಗಳು ವಿಭಿನ್ನ ಮಾರ್ಗಗಳನ್ನು ಅನುಸರಿಸುತ್ತಿದೆ. ಇದನ್ನು ಸುವ್ಯವಸ್ಥಿತಗೊಳಿಸುವ ಗುರಿಯನ್ನು ಈ ಪರಿಷ್ಕೃತ ಸೂಚನೆಗಳು ಹೊಂದಿವೆ. ಇದು ಗ್ರಾಹಕ ಸೇವೆಯ ಗುಣಮಟ್ಟದಲ್ಲಿ ಸುಧಾರಣೆ ತರಲಿದೆ. ಈ ಪರಿಷ್ಕೃತ ಸೂಚನೆಗಳನ್ನು 2026ರ ಮಾರ್ಚ್ 31ರ ಒಳಗಾಗಿ ಸಾಧ್ಯವಾದಷ್ಟು ಬೇಗ ಜಾರಿಗೆ ತರಲಾಗುವುದು ಎಂದು ತಿಳಿಸಿದೆ.



ಸೇಫ್ ಡಿಪಾಸಿಟ್ ಲಾಕರ್‌ಗೆ ಸಂಬಂಧಿಸಿದಂತೆ ನಿಗದಿತ ಸಮಯದೊಳಗೆ ಕ್ಲೇಮ್ ಇತ್ಯರ್ಥವಾಗದಿದ್ದರೆ ಬ್ಯಾಂಕ್‌ಗಳು ಗ್ರಾಹಕರಿಗೆ ಪ್ರತಿ ದಿನ ₹5 ಸಾವಿರದಂತೆ ಪರಿಹಾರ ನೀಡಬೇಕು ಎಂದು ಆರ್‌ಬಿಐ ಹೇಳಿದೆ.

'ಸ್ವದೇಶಿ' 4 ಜಿಗೆ ಇಂದು ಚಾಲನೆ

ನವದೆಹಲಿ (ಪಿಟಿಐ): ಭಾರತ್ ಸಂಚಾರ ನಿಗಮ ಲಿಮಿಟೆಡ್‌ನ (ಬಿಎಸ್‌ಎನ್‌ಎಲ್) 'ಸ್ವದೇಶಿ' 4 ಜಿ ನೆಟ್‌ವರ್ಕ್‌ಗೆ ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಲಿದ್ದಾರೆ.

ಇದು ಸ್ವದೇಶಿ ನಿರ್ಮಿತ ಕ್ಲೌಡ್ ಆಧಾರಿತ ನೆಟ್‌ವರ್ಕ್ ಆಗಿದೆ. ಇದನ್ನು ಸರಾಗವಾಗಿ 5ಜಿ ಗೆ ಮೇಲ್ದರ್ಜೆಗೇರಿಸಬಹುದಾಗಿದೆ ಎಂದು ಕೇಂದ್ರ ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ.

'ಇದು ಟೆಲಿಕಾಂ ವಲಯಕ್ಕೆ ಹೊಸ ಯುಗ. ಭಾರತವು ಟೆಲಿಕಾಂ ಉಪಕರಣಗಳನ್ನು ಉತ್ಪಾದಿಸುವ ಮತ್ತು ತಯಾರಿಸುವ ದೇಶಗಳ ಸಾಲಿಗೆ ಪ್ರವೇಶಿಸಿದ ಯುಗ. ಇದರಲ್ಲಿ ಡೆನ್ಮಾರ್ಕ್, ಸ್ವೀಡನ್, ದಕ್ಷಿಣ ಕೊರಿಯಾ, ಚೀನಾ ಸೇರಿವೆ. ಭಾರತ ಈಗ ಐದನೇ ದೇಶವಾಗಿದೆ' ಎಂದು ಸಿಂಧಿಯಾ ಹೇಳಿದ್ದಾರೆ.

ಬಿಹಾರ: ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಗೆ ಚಾಲನೆ

ಆರ್‌ಜೆಡಿಯಿಂದ ಸಂಕಷ್ಟ: ಮೋದಿ

ಪಟ್ನಾ (ಪಿಟಿಐ): ಬಿಹಾರದಲ್ಲಿ ಆರ್‌ಜೆಡಿ ಅಧಿಕಾರದಲ್ಲಿದ್ದಾಗ ಮಹಿಳೆಯರು ನಾನಾ ಸಂಕಷ್ಟಗಳಿಗೆ ಸಿಲುಕಿ ತೀವ್ರವಾಗಿ ನೊಂದಿದ್ದರು ಎಂದು ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಬಿಹಾರದಲ್ಲಿ ಲಾಲು ಪ್ರಸಾದ್ ನೇತೃತ್ವದ ಪಕ್ಷ ಮತ್ತು ಅದರ ಮಿತ್ರ ಪಕ್ಷಗಳು ಎಂದಿಗೂ ಅಧಿಕಾರಕ್ಕೆ ಮರಳದಂತೆ ರಾಜ್ಯದ ಮಹಿಳೆಯರು ಖಾತರಿಸಪಡಿಸಬೇಕು' ಎಂದು ಅವರು ಮನವಿ ಮಾಡಿದರು.

ಚುನಾವಣೆ ಸಮೀಪಿಸುತ್ತಿರುವ ಬಿಹಾರದಲ್ಲಿ 'ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆ'ಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ದೆಹಲಿಯಿಂದ ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು. ಈ ಯೋಜನೆಯಡಿ ರಾಜ್ಯದ 75 ಲಕ್ಷ ಮಹಿಳೆಯರ ಖಾತೆಗೆ ತಲಾ ₹10,000 (ಒಟ್ಟು ₹7,500 ಕೋಟಿ) ವರ್ಗಾಯಿಸಲಾಯಿತು.

ಮುಖ್ಯಾಂಶಗಳು

- ಪ್ರತಿ ಮಹಿಳೆಯ ಖಾತೆಗೆ ₹ 10,000
- 75 ಲಕ್ಷ ಫಲಾನುಭವಿಗಳಿಗೆ ನೆರವು
- ಏಕಕಾಲಕ್ಕೆ ₹ 7,500 ಕೋಟಿ ವರ್ಗಾವಣೆ

ಹೆಚ್ಚುವರಿಯಾಗಿ ₹ 2ಲಕ್ಷ ನೆರವು: 'ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆ'ಯಡಿ 75 ಲಕ್ಷ ಫಲಾನುಭವಿ ಮಹಿಳೆಯರಿಗೆ ಹೆಚ್ಚುವರಿಯಾಗಿ ತಲಾ ₹ 2 ಲಕ್ಷ ನೆರವು ದೊರೆಯಲಿದೆ. ಜತೆಗೆ ಉದ್ಯಮಶೀಲತಾ ಕೌಶಲ ಸುಧಾರಣೆಗೆ ಅಗತ್ಯ ತರಬೇತಿ ಸಹ ಸಿಗಲಿದೆ ಎಂದು ಪ್ರಧಾನಿ ವಿವರಿಸಿದರು.

'ಯಾವುದೇ ಸಹೋದರಿ ಅಥವಾ ಮಗಳು ಉದ್ಯೋಗ ಪಡೆದಾಗ ಅಥವಾ ಸ್ವಯಂ ಉದ್ಯೋಗಿಗಳಾದಾಗ ಅವರ ಕನಸುಗಳಿಗೆ ಹೊಸ ರೆಕ್ಕೆಗಳು ಬರುತ್ತವೆ. ಸಮಾಜದಲ್ಲಿ ಅವರ ಗೌರವ ಇನ್ನಷ್ಟು ಹೆಚ್ಚಾಗುತ್ತದೆ' ಎಂದ ಪ್ರಧಾನಿ ಅವರು, ಹೊಸ ಯೋಜನೆಯನ್ನು ಶ್ಲಾಘಿಸಿದರು. ಮಹಿಳೆಯರ ಏಳಿಗೆಗೆ ಈ ಯೋಜನೆ ಜಾರಿಗೊಳಿಸುವ ಮೂಲಕ ನಿತೀಶ್ ಅವರ ಸರ್ಕಾರ ಮಹತ್ವದ ಹೆಜ್ಜೆಯಿಟ್ಟಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಬ್ಬರು ಸಹೋದರರು: 'ಬಿಹಾರದ ಮಹಿಳೆಯರಿಗೆ ನಿತೀಶ್ ಮತ್ತು ಮೋದಿ ಇಬ್ಬರು ಸಹೋದರರಿದ್ದಾರೆ. ನಿಮ್ಮ ಒಳಿತಿಗಾಗಿ ನಾವು ಅವಿರತವಾಗಿ ದುಡಿಯುತ್ತಿದ್ದೇವೆ. ಡಬಲ್ ಎಂಜಿನ್ ಸರ್ಕಾರ ರಾಜ್ಯದ ತಾಯಂದಿರು, ಸಹೋದರಿಯರು ಮತ್ತು ಮಹಿಳೆಯರ ಕಲ್ಯಾಣಕ್ಕಾಗಿ ಶ್ರಮಿಸುತ್ತಿದೆ' ಎಂದು ಹೇಳಿದರು.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಮತ್ತು ಇತರ ಸಚಿವರು ಪಟ್ನಾದಿಂದ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಪಾಲ್ಗೊಂಡಿದ್ದರು.



'ಬಿಹಾರ ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆ'ಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಶುಕ್ರವಾರ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿದರು ಪಿಟಿಐ ಚಿತ್ರ

ಬರೇಲಿಯಲ್ಲಿ ಹಿಂಸಾಚಾರ

ಬರೇಲಿ (ಪಿಟಿಐ): 'ಐ ಲವ್ ಮಹಮದ್' ಪ್ರದರ್ಶನ ಜಾಥಾವನ್ನು ಕೊನೆ ಕ್ಷಣದಲ್ಲಿ ಮುಂದೂಡಿದ್ದರಿಂದ ಬರೇಲಿಯಲ್ಲಿ ಶುಕ್ರವಾರ ಹಿಂಸಾಚಾರ ಭುಗಿಲೆದ್ದಿತು.

ನಗರದ ಹೃದಯ ಭಾಗದಲ್ಲಿರುವ ಮಸೀದಿಯ ಬಳಿ ಜಾಥಾಗಾಗಿ ಜಮಾಯಿಸಿದ್ದ ಅಸಂಖ್ಯಾತ ಜನರು ಆಕ್ರೋಶಿತರಾಗಿ ಪೊಲೀಸರ ಮೇಲೆ ಕಲ್ಲು ತೂರಿದರು. ಕೆಲವು ಅಂಗಡಿಗಳನ್ನು ಧ್ವಂಸಗೊಳಿಸಿದರು. ಕಾಲ್ತುಳಿತದಂತಹ ಪರಿಸ್ಥಿತಿಯೂ ನಿರ್ಮಾಣಗೊಂಡಿತ್ತು.

ಪ್ರದರ್ಶನಕ್ಕೆ ಕರೆ ನೀಡಿದ್ದ ತೌಕೀರ್: ಸ್ಥಳೀಯ ಧರ್ಮಗುರು ಹಾಗೂ ಇತ್ತೇಹಾದ್–ಎ–ಮಿಲತ್ ಕೌನ್ಸಿಲ್‌ನ ಮುಖ್ಯಸ್ಥ ಮೌಲಾನಾ ತೌಕೀರ್ ರಜಾ ಖಾನ್ ಅವರು 'ಐ ಲವ್ ಮಹಮ್ಮದ್' ಅಭಿಯಾನ ಬೆಂಬಲಿಸುವ ಪ್ರದರ್ಶನ ಮೆರವಣಿಗೆ ಆಯೋಜಿಸಿದ್ದರು.

ಜಾಥಾ ಆರಂಭಕ್ಕೂ ಕೆಲ ಕ್ಷಣಗಳಿಗೆ ಮುನ್ನ ಮುಂದೂಡಿದ್ದರಿಂದ ಬೃಹತ್ ಜನಸಮೂಹ ಮತ್ತು ಪೊಲೀಸರ ನಡುವೆ ಘರ್ಷಣೆಗೆ ಕಾರಣವಾಯಿತು.

'ಮತದಾರರ ಖರೀದಿಗೆ ಎನ್‌ಡಿಎ ಯತ್ನ'

ಪಟ್ನಾ (ಪಿಟಿಐ): 'ಬಿಜೆಪಿ ನೇತೃತ್ವದ ಎನ್‌ಡಿಎ ನೀಡುತ್ತಿರುವ ಕೊಡುಗೆಗಳಿಗೆ ಮರುಳಾಗಬೇಡಿ, ಅವರಿಗೆ ನಿಮ್ಮ ಮತದ ಮೇಲಷ್ಟೇ ಆಸಕ್ತಿಯಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಶುಕ್ರವಾರ ಆರೋಪಿಸಿದರು.

ಬಿಹಾರ ಕಾಂಗ್ರೆಸ್ ಸಮಿತಿಯ ಕೇಂದ್ರ ಕಚೇರಿಯಲ್ಲಿ ನಡೆದ 'ಮಹಿಳಾ ಸಂವಾದ'ದಲ್ಲಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಿಜವಾದ ಉದ್ದೇಶಗಳನ್ನು ಅರ್ಥಮಾಡಿಕೊಂಡು, ಜಾಗೃತರಾಗಿರಿ' ಎಂದು ಕರೆ ನೀಡಿದರು.

ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಯಡಿ ಪ್ರಧಾನಿ ನರೇಂದ್ರ ಮೋದಿ ಅವರು 75 ಲಕ್ಷ ಮಹಿಳೆಯರಿಗೆ ತಲಾ ₹10,000ದಂತೆ ₹7,500 ಕೋಟಿ ವರ್ಗಾಯಿಸಿದ್ದನ್ನು ಉಲ್ಲೇಖಿಸಿದ ಪ್ರಿಯಾಂಕಾ, "ಚುನಾವಣೆ ಸಮೀಪಿಸುತ್ತಿರುವಾಗ ಹಣ ನೀಡುತ್ತಿದ್ದಾರೆ ಅಂದರೆ ಅವರ ಕಣ್ಣು ನಿಮ್ಮ ಮತಗಳ ಮೇಲಷ್ಟೇ ಇದೆ ಎಂಬುದು ಅತ್ಯಂತ ಸ್ಪಷ್ಟವಾಗಿದೆ. ಅವರಿಗೆ ನಿಮ್ಮ ಗೌರವ, ಸುರಕ್ಷತೆಗಿಂತೆ ಮತವೇ ಮುಖ್ಯ. 10 ವರ್ಷಗಳಲ್ಲಿ ಬಿಹಾರದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಹತ್ತು ಪಟ್ಟು ಹೆಚ್ಚಾಗಿರುವುದೇ ಅದಕ್ಕೆ ನಿದರ್ಶನ' ಎಂದು ದೂರಿದರು.

ಯುದ್ಧ ನಿಲ್ಲಿಸಿದ್ದು ಟ್ರಂಪ್: ಪಾಕ್ ಪ್ರಧಾನಿ ಹೇಳಿಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ನ್ಯೂ ಯಾರ್ಕ್ / ನವದೆಹಲಿ / ಇಸ್ಲಾಮಾಬಾದ್: 'ಪಾಕಿಸ್ತಾನ–ಭಾರತ ನಡುವಿನ ಕದನ ವಿರಾಮಕ್ಕೆ ಕಾರಣವಾದ ಟ್ರಂಪ್ ಅವರದ್ದು ದಿಟ್ಟ, ಧೈರ್ಯಶಾಲಿ ಮತ್ತು ನಿರ್ಣಾಯಕ ನಾಯಕತ್ವ' ಎಂದು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಹೊಗಳಿದ್ದಾರೆ' ಎಂದು ಪಾಕಿಸ್ತಾನ ಸರ್ಕಾರದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಪಾಲ್ಗೊಳ್ಳಲು ಅಮೆರಿಕ ಪ್ರವಾಸ ಕೈಗೊಂಡಿದ್ದ ಶೆಹಬಾಜ್ ಷರೀಫ್ ಅವರು, ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರೊಂದಿಗೆ ಟ್ರಂಪ್ ಅವರನ್ನು ಭೇಟಿಮಾಡಿದ್ದರು. ತಮ್ಮ ಅಧಿಕೃತ ನಿವಾಸದಲ್ಲಿ ಟ್ರಂಪ್ ಅವರು ಶೆಹಬಾಜ್ ಮತ್ತು ಮುನೀರ್ ಅವರಿಗೆ ಆತಿಥ್ಯ ನೀಡಿದ್ದರು.

ಪಾಕ್ ಪ್ರಧಾನಿ ಹೊಗಳಿದ ಟ್ರಂಪ್: ಶುಕ್ರವಾರ ನಡೆದ ಭೇಟಿ ವೇಳೆ ಷರೀಫ್ ಅವರನ್ನು 'ಮಹಾನ್ ನಾಯಕ' ಮತ್ತು ಮುನೀರ್ ಅವರನ್ನು 'ಮಹಾನ್ ವ್ಯಕ್ತಿ' ಎಂದು ಟ್ರಂಪ್ ಮೆಚ್ಚಿಕೊಂಡಿದ್ದಾರೆ.

'ಕದನ ವಿರಾಮಕ್ಕೆ ನಾನೇ ಕಾರಣ'

ಭಾರತ–ಪಾಕಿಸ್ತಾನ ಮಧ್ಯೆ ಕದನ ವಿರಾಮ ಮಧ್ಯಸ್ಥಿಕೆ ವಹಿಸಿದ್ದು ನಾನೇ ಎಂದು ಟ್ರಂಪ್ ಪದೇಪದೇ ಹೇಳುತ್ತಿದ್ದಾರೆ. ವಿಶ್ವಸಂಸ್ಥೆಯ ಮಹಾಧಿವೇಶನದ ಭಾಷಣದಲ್ಲಿ ಟ್ರಂಪ್ ಇದೇ ವಿಚಾರ ಪುನರುಚ್ಚರಿಸಿದ್ದಾರೆ.

ಮೂರನೇಯವರ ಮಧ್ಯಸ್ಥಿಕೆ ಇರಲಿಲ್ಲ ಎಂದು ಪ್ರಧಾನಿ ಮೋದಿಯವರೇ ಸ್ಪಷ್ಟಪಡಿಸಿದ್ದರೂ, 'ನಾನು ನಿಲ್ಲಿಸಿದ ಏಳು ಯುದ್ಧಗಳಲ್ಲಿ ಭಾರತ–ಪಾಕಿಸ್ತಾನ ನಡುವಿನ ಸಂಘರ್ಷವೂ ಒಂದು ಎಂದು ಟ್ರಂಪ್ ಹೇಳಿದ್ದಾರೆ.

ವಿಐಟಿ ವಿವಿಯಲ್ಲಿ 'ಗ್ರಾವಿಟಾಸ್ 2025'

ವೆಲ್ಲೂರು: ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಪರಿವರ್ತಿಸಲು, ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಯಲ್ಲಿ ಗಮನಾರ್ಹ ಪ್ರಗತಿ ಅತ್ಯಗತ್ಯ ಎಂದು 'ಗ್ರಾವಿಟಾಸ್ 2025' ಸಮಾರಂಭದಲ್ಲಿ ವಿಐಟಿಯ ಸ್ಥಾಪಕ ಮತ್ತು ಕುಲಪತಿ ಡಾ. ಜಿ. ವಿಶ್ವನಾಥನ್ ಹೇಳಿದರು.

ಸೆ.26 ರಂದು ವೆಲ್ಲೂರಿನ ಅಣ್ಣಾ ಸಭಾಂಗಣದಲ್ಲಿ ಆರಂಭವಾದ ಮೂರು ದಿನಗಳ ತಾಂತ್ರಿಕ ನಿರ್ವಹಣಾ ಉತ್ಸವ 'ಗ್ರಾವಿಟಾಸ್ 2025' ರ ಉದ್ಘಾಟನೆ ನೆರವೇರಿಸಿ ಮಾತನಾಡಿದರು. 1984 ರಲ್ಲಿ ಕೇವಲ 180 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ವಿಐಟಿ ವೆಲ್ಲೂರು, ಇಂದು ಭೋಪಾಲ್, ಚೆನ್ನೈ ಮತ್ತು ಆಂಧ್ರಪ್ರದೇಶದ ನಾಲ್ಕು ಕ್ಯಾಂಪಸ್‌ಗಳಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಷ್ಟು ಎತ್ತರಕ್ಕೆ ಬೆಳೆದಿದೆ. ನಾವು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಏಕೆ ಸೇರಿಸಿಕೊಳ್ಳುತ್ತೇವೆ ಎಂದು ಕೆಲವರು ಕೇಳಿದ್ದಾರೆ. ನಮ್ಮ ದೇಶದಲ್ಲಿ, ಸಾಧ್ಯವಾದಷ್ಟು ಹೆಚ್ಚಿನ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಗುರಿಯನ್ನು ಹೊಂದಿದ್ದೇವೆ ಎಂದರು.

'50 ರಾಜ್ಯಗಳನ್ನು ಹೊಂದಿರುವ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ, ಕ್ಯಾಲಿಫೋರ್ನಿಯಾ ಮಾತ್ರ 4 ಕೋಟಿ ಜನಸಂಖ್ಯೆಯನ್ನು ಹೊಂದಿದ್ದು, 4 ಟ್ರಿಲಿಯನ್ ಡಾಲರ್‌ಗಳ ಜಿಡಿಪಿ ಹೊಂದಿದೆ. 146 ಕೋಟಿ ಜನಸಂಖ್ಯೆ ಹೊಂದಿರುವ ಭಾರತ ಅಂತಹ ಆರ್ಥಿಕ ಚೇತನ ಹೊಂದಲು ಶ್ರಮಿಸಬೇಕು. 2047 ರ ವೇಳೆಗೆ ನಮ್ಮ ದೇಶ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು, ನಾವು ಉನ್ನತ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಗೆ ಆದ್ಯತೆ ನೀಡಬೇಕು'.



'ಗ್ರಾವಿಟಾಸ್ 2025' ಸಮಾರಂಭದಲ್ಲಿ ಅಬುಧಾಬಿಯ ಸಚಿವ ಮಜೀದ್ ಅಲಿ ಅಲ್ ಮನ್ಸೂರಿ ಮಾತನಾಡಿದರು. ವಿಐಟಿಯ ಡಾ. ಸೇಕರ್ ವಿಶ್ವನಾಥನ್, ಡಾ. ಸಂಧ್ಯಾ ಪೆಂಟಾರೆಡ್ಡಿ, ಮ್ಯಾಕ್ಸಿಮಸ್ ಇಂಡಿಯಾದ ಪ್ರವೀಣಾ ಭೀಮವರಪು, ಡಾ.ಕಾಂಚನಾ ಭಾಸ್ಕರನ್, ಡಾ.ಜಯ ಗ್ರಾವಿತ್ ಇತರರು ಉಪಸ್ಥಿತರಿದ್ದರು.

'ಅಬುಧಾಬಿ ಆರ್ಥಿಕವಾಗಿ ಸಮೃದ್ಧವಾಗಿದೆ. ಯುಎಇಯ ಶೇ 95 ರಷ್ಟು ತೈಲ ಮತ್ತು ಅನಿಲ ನಿಕ್ಷೇಪಗಳೊಂದಿಗೆ, ಅಬುಧಾಬಿ 1 ಟ್ರಿಲಿಯನ್ ಡಾಲರ್ ಹೂಡಿಕೆಗಳನ್ನು ಆಕರ್ಷಿಸುತ್ತದೆ. ಭಾರತವು ಅಂತಹ ಮಾದರಿಗಳಿಂದ ಕಲಿಯಬೇಕು ಎಂದು ಅವರು ವಿವರಿಸಿದರು.

ಅಬುಧಾಬಿ ಪುರಸಭೆ ಮತ್ತು ಆಡಳಿತ ಇಲಾಖೆಯ ಸಚಿವ ಮಜೀದ್ ಅಲಿ ಅಲ್ ಮನ್ಸೂರಿ ಅವರು ನಾವೀನ್ಯತೆಯ ಪಾತ್ರದ ಬಗ್ಗೆ ವಿವರಿಸಿದರು. 'ಅಂತರ್ಜಾಲದಿಂದ ನವೀಕರಿಸಬಹುದಾದ ಶಕ್ತಿಯವರೆಗೆ, ಎಲ್ಲ ಆವಿಷ್ಕಾರಗಳು ವಿಜ್ಞಾನಿಗಳ ಉತ್ಸಾಹ ಮತ್ತು ಪರಿಶ್ರಮದಿಂದ ಹುಟ್ಟಿಕೊಂಡಿವೆ. ವಿದ್ಯಾರ್ಥಿಗಳು ಜಾಗತಿಕ ನಾಗರಿಕರಾಗಲು ಮತ್ತು ಸುಸ್ಥಿರತೆಗೆ ಕೊಡುಗೆ ನೀಡಲು ತಾಂತ್ರಿಕ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಬೇಕು. ಕೃತಕ ಬುದ್ಧಿಮತ್ತೆ, ಜೈವಿಕ ತಂತ್ರಜ್ಞಾನ, ಬಾಹ್ಯಾಕಾಶ ಪರಿಶೋಧನೆ ಮತ್ತು ಹವಾಮಾನ ಬದಲಾವಣೆಯಲ್ಲಿನ ಸವಾಲುಗಳನ್ನು ಎದುರಿಸಬೇಕು. ನಾವೀನ್ಯತೆ ತಂತ್ರಜ್ಞಾನವನ್ನು ಮುನ್ನಡೆಸುವುದಲ್ಲದೆ ಮಾನವ ಜೀವನವನ್ನು ಹೆಚ್ಚಿಸಬೇಕು' ಎಂದರು.

ಖಾಸಗಿ ಚಾನೆಲ್ ವ್ಯವಸ್ಥಾಪಕ ಸಂಪಾದಕ ಆನಂದ್ ನರಸಿಂಹನ್, 'ವಿದ್ಯಾರ್ಥಿಗಳು ಉದ್ಯೋಗಗಳನ್ನು ಸೃಷ್ಟಿಸುವ ಸಂಶೋಧಕರು ಮತ್ತು ಉದ್ಯಮಿಗಳಾಗುವ ಗುರಿ ಹೊಂದಿರಬೇಕು. ಅವರು ನಾವೀನ್ಯತೆ ಹೆಚ್ಚಿಸಲು ಸಾಂಪ್ರದಾಯಿಕ ಚೌಕಟ್ಟುಗಳೊಂದಿಗೆ ವೈಜ್ಞಾನಿಕ ಚಿಂತನೆಯನ್ನು ಸಂಯೋಜಿಸಬೇಕೆಂದರು.'

ಕಾರ್ಯಕ್ರಮಗಳು: ಸೆ. 26 ರಿಂದ 28 ರವರೆಗೆ 207 ಕಾರ್ಯಕ್ರಮಗಳು, 57 ಕಾರ್ಯಾಗಾರಗಳು, 51 ಹ್ಯಾಕಥಾನ್‌ಗಳು, ರೋಬೋಟ್ ಯುದ್ಧಗಳು ಮತ್ತು ಡ್ರೋನ್ ಪ್ರದರ್ಶನಗಳನ್ನು ಒಳಗೊಂಡಿರುತ್ತದೆ.

ಯುದ್ಧ ಸಮರ್ಥಿಸಿಕೊಂಡ ನೆತನ್ಯಾಹು

ವಿಶ್ವಸಂಸ್ಥೆ: ಗಾಜಾದ ಮೇಲೆ ಸಂಘರ್ಷ ಕೊನೆಗೊಳಿಸಲು ಹೆಚ್ಚುತ್ತಿರುವ ಒತ್ತಡ, ಯುದ್ಧ ಅಪರಾಧದ ಆರೋಪಗಳ ನಡುವೆಯೇ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಶುಕ್ರವಾರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕೆಲವು ದಿನಗಳಿಂದ ಆಸ್ಟ್ರೇಲಿಯಾ, ಕೆನಡಾ, ಫ್ರಾನ್ಸ್ ಹಾಗೂ ಬ್ರಿಟನ್ ಹಾಗೂ ಇತರೆ ದೇಶಗಳು ಪ್ಯಾಲೆಸ್ಟೀನ್‌ಗೆ ಸ್ವತಂತ್ರ ದೇಶದ ಮಾನ್ಯತೆ ನೀಡುವುದಾಗಿ ಘೋಷಿಸಿದ್ದವು. ಐರೋಪ್ಯ ಒಕ್ಕೂಟವು ಇಸ್ರೇಲ್ ಮೇಲೆ ಹೆಚ್ಚಿನ ಸುಂಕ ಹಾಗೂ ನಿರ್ಬಂಧ ವಿಧಿಸುವುದಾಗಿ ಪ್ರಕಟಿಸಿತ್ತು. ಅಂತರರಾಷ್ಟ್ರೀಯ ನ್ಯಾಯಾಲಯವು ಬಂಧನ ವಾರಂಟ್ ಹೊರಡಿಸಿತ್ತು.

> ವೆಸ್ಟ್‌ಬ್ಯಾಂಕ್‌ನಲ್ಲಿ ವಿವಾದಾಸ್ಪದ ವಸತಿ ಯೋಜನೆ ಜಾರಿಗೊಳಿಸಲು ಇಸ್ರೇಲ್ ಸರ್ಕಾರಕ್ಕೆ ಅವಕಾಶ ನೀಡುವುದಿಲ್ಲ
>
> **ಡೊನಾಲ್ಡ್ ಟ್ರಂಪ್**
> ಅಮೆರಿಕ ಅಧ್ಯಕ್ಷ

ಈ ಎಲ್ಲಾ ಬೆಳವಣಿಗೆಯ ಮಧ್ಯದಲ್ಲೇ ಉನ್ನತ ಅಧಿಕಾರಿಗಳ ಜೊತೆ ವಿಮಾನ ಏರಿದ್ದ ನೆತನ್ಯಾಹು ಅವರ ತಂಡವು ನ್ಯೂಯಾರ್ಕ್‌ಗೆ ಬಂದಿಳಿಯಿತು.

'ನಾನು ನಮ್ಮ ಸತ್ಯವನ್ನೇ ಹೇಳುತ್ತೇನೆ' ಎಂದು ಮಾತು ಆರಂಭಿಸಿದ ನೆತನ್ಯಾಹು, ಕೊಲೆಗಾರರು, ಅತ್ಯಾಚಾರಿಗಳು, ಮಕ್ಕಳನ್ನು ಸುಡುವವರಿಗೆ ಇಸ್ರೇಲ್‌ನ ಹೃದಯಭಾಗದಲ್ಲಿ ದೇಶ ನೀಡಲು ಬಯಸುತ್ತಿರುವ ನಿರ್ಧಾರವನ್ನು ಖಂಡಿಸುತ್ತೇನೆ' ಎಂದರು.

'ಗುರು ಪೂಜೆ ವಿಮರ್ಶಕರು ನಕಲಿ ಭಕ್ತರು'

ಕೋಯಿಕ್ಕೋಡ್ (ಪಿಟಿಐ): 'ಗುರು ಪೂಜೆ, ಭಾರತ ಮಾತೆಯನ್ನು ವಿಮರ್ಶಿಸುವವರು ತೋರಿಕೆಗಷ್ಟೇ ಶಬರಿಮಲೆಯ ಭಕ್ತರಂತೆ ನಟಿಸುತ್ತಿದ್ದಾರೆ' ಎಂದು ಕೇರಳ ಸರ್ಕಾರದ ವಿರುದ್ಧ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಪರೋಕ್ಷ ವಾಗ್ದಾಳಿ ನಡೆಸಿದರು.

'ಶಬರಿಮಲೆಯ ಈ ನಕಲಿ ಭಕ್ತರು ತಮ್ಮ ಮನಸ್ಸಿನೊಳಗಿರುವ ಪವಿತ್ರತೆ, ಆದರ್ಶ ಮತ್ತು ಭಾವನೆಗಳ ಬಗ್ಗೆ ಬಹಿರಂಗವಾಗಿ ಮಾತನಾಡಬೇಕು' ಎಂದು ನವರಾತ್ರಿ ಸಂಬಂಧಿತ ಕಾರ್ಯಕ್ರಮವೊಂದರಲ್ಲಿ ಹೇಳಿದರು.

'ಅವರೆಲ್ಲರೂ ಏಕೆ ಹೀಗೆ ಮಾಡುತ್ತಿದ್ದಾರೆ. ರಾಜಕೀಯ ಅನುಕೂಲಕ್ಕಾಗಿ ಮಾತ್ರವಾ? ಭಾರತ ಮಾತೆ, ಗುರು ಪೂಜೆ ಮತ್ತು ಅಂತಹ ಎಲ್ಲ ವಿಷಯಗಳು ರಾಜಕೀಯವಾಗಿ ಯಾರಿಗೂ ಅನುಕೂಲಕರವಲ್ಲ.

ಇದು ನಮ್ಮ ರಕ್ತ, ಚಿಂತನೆ ಮತ್ತು ಎಲ್ಲದರಲ್ಲೂ ಅಡಕವಾಗಿದೆ. ನಾವು ರಾಜಕೀಯ ಪ್ರೇರಿತರಲ್ಲ' ಎಂದರು.

'ಸಮತೋಲಿತ ವಿಧಾನ' ಜಾರಿಗೆ ಕೇಂದ್ರಕ್ಕೆ ಸುಪ್ರೀಂಕೋರ್ಟ್ ಸೂಚನೆ

ಹಸಿರು ಪಟಾಕಿಗೆ ಷರತ್ತುಬದ್ಧ ಅನುಮತಿ

ನವದೆಹಲಿ (ಪಿಟಿಐ): ದೆಹಲಿ –ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ (ಎನ್‌ಸಿಆರ್) ವಾಯು ಮಾಲಿನ್ಯ ಹೆಚ್ಚುತ್ತಿದೆ ಎಂಬ ಕಳವಳದ ನಡುವೆಯೇ, ಹಸಿರು ಪಟಾಕಿ ಬಳಕೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ಷರತ್ತುಬದ್ಧ ಅನುಮತಿ ನೀಡಿದೆ.

ದೆಹಲಿ– ಎನ್‌ಸಿಆರ್ ವಲಯದಲ್ಲಿ ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಎಂ.ಸಿ ಮಹ್ತಾ ಅವರ 1985ರ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಕೋರ್ಟ್ ಈ ಆದೇಶ ನೀಡಿದೆ. ದೆಹಲಿ– ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ಹಸಿರು ಪಟಾಕಿಗಳನ್ನು ಅನುಮತಿ ಇಲ್ಲದೆ ಮಾರಾಟ ಮಾಡುವಂತಿಲ್ಲ ಎಂಬ ಷರತ್ತನ್ನು ನ್ಯಾಯಾಲಯ ವಿಧಿಸಿದೆ.

'ಮಾಲಿನ್ಯ ತಗ್ಗಿಸುವುದು ಅತ್ಯುನ್ನತವಾದರೂ, ಪಟಾಕಿಯ ಸಂಪೂರ್ಣ ನಿಷೇಧವು ಇದಕ್ಕೆ ಪ್ರಾಯೋಗಿಕ ಅಥವಾ ಮಾದರಿಯಾದ ಕ್ರಮವಲ್ಲ' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ತ್ರಿಸದಸ್ಯ ಪೀಠ ಅಭಿಪ್ರಾಯಪಟ್ಟಿತು. ಬಿಹಾರದ ದೃಷ್ಟಾಂತ ನೀಡಿದ ನ್ಯಾಯಪೀಠ, ಅಲ್ಲಿ ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಿದ ನಂತರ, ಅಕ್ರಮ ಗಣಿಗಾರಿಕೆ ಮಾಫಿಯಾ ಹೇಗೆ ಶಕ್ತವಾಗಿ ಬೆಳೆಯಿತು ಎನ್ನುವುದನ್ನು ವಿವರಿಸಿತು. ಹೀಗಾಗಿ ದೆಹಲಿಯಲ್ಲಿ ಪಟಾಕಿ ಬಳಕಗೆ ಸಂಪೂರ್ಣ ನಿಷೇಧ ಹೇರುವ ಮೊದಲು, ಇಂತಹ ಪಟಾಕಿ ತಯಾರಿಕಾ ಘಟಕಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಜೀವನೋಪಾಯದ ಹಕ್ಕುಗಳನ್ನೂ ಗಮನದಲ್ಲಿಟ್ಟುಕೊಂಡು 'ಸಮತೋಲಿತ ಕ್ರಮ' ಕೈಗೊಳ್ಳುವಂತೆ ಸೂಚಿಸಿತು. ಈ ಬಗ್ಗೆ ಮುಂದಿನ ವಿಚಾರಣೆ ಅಕ್ಟೋಬರ್ 8ರಂದು ನಡೆಯಲಿದೆ.

ಪ್ರಮಾಣೀಕೃತ ತಯಾರಕರಿಗೆ ಅವಕಾಶ

ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ (ಎನ್‌ಇಇಆರ್‌ಐ) ಮತ್ತು ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆಯಿಂದ (ಪಿಇಎಸ್‌ಒ) ಹಸಿರು ಪಟಾಕಿ ತಯಾರಿಕೆಗೆ ಪ್ರಮಾಣಪತ್ರ ಪಡೆದಿರುವ ತಯಾರಕರಿಗೆ, ಮುಂದಿನ ಆದೇಶದವರೆಗೆ ಪಟಾಕಿ ತಯಾರಿಕೆಗೆ ಅನುಮತಿ ನೀಡುತ್ತೇವೆ ಎಂದು ಮುಖ್ಯ ನ್ಯಾಯಮೂರ್ತಿ ಬಿ. ಆರ್.ಗವಾಯಿ, ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್ ಮತ್ತು ಎನ್.ವಿ ಅಂಜಾರಿಯಾ ಅವರನ್ನೊಳಗೊಂಡ ಪೀಠವು ಹೇಳಿದೆ.

ಪಾರ್ಥ ಚಟರ್ಜಿಗೆ ಜಾಮೀನು

ನವದೆಹಲಿ: ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯ ಆರೋಪಿ, ಪಶ್ಚಿಮ ಬಂಗಾಳದ ಶಿಕ್ಷಣ ಖಾತೆಯ ಮಾಜಿ ಸಚಿವ, ತೃಣಮೂಲ ಕಾಂಗ್ರೆಸ್ ಪಕ್ಷದ ಶಾಸಕ ಪಾರ್ಥ ಚಟರ್ಜಿ ಅವರಿಗೆ ಕಲ್ಕತ್ತಾ ಹೈಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

ವಿಚಾರಣೆಯ ಬಾಕಿ ಅವಧಿಯವರೆಗೂ ಚಟರ್ಜಿ ಅವರನ್ನು ಯಾವುದೇ ಹುದ್ದೆಗೂ ನೇಮಕಗೊಳಿಸಬಾರದು ಎಂದು ಘೋಷ್ ಅವರು ತಮ್ಮ ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

ಶಿಕ್ಷಣ ಇಲಾಖೆಯಲ್ಲಿ ಅನರ್ಹ ಅಭ್ಯರ್ಥಿಗಳನ್ನು ಶಿಕ್ಷಕರು ಹಾಗೂ ಇತರೆ ಹುದ್ದೆಗಳಿಗೆ ನೇಮಿಸಿದ ಆರೋಪ ಚಟರ್ಜಿ ಮೇಲಿದೆ. ಭ್ರಷ್ಟಾಚಾರ ಜೊತೆ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಪಾರ್ಥ ಚಟರ್ಜಿ ಅವರನ್ನು 2022ರ ಜುಲೈ 23ರಂದು ಇ.ಡಿ ಬಂಧಿಸಿತ್ತು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಜಾವಾಣಿ

ನವವರ್ಣ



ಕೆಂಪು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಶನಿವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಅಮೂಲ್ಯ & ಲೀಲಾ, ಬೆಂಗಳೂರು


ಮಲ್ಲೇಶ್ವರಂ ಕೋ-ಆಪ್ ಬ್ಯಾಂಕ್ ಸಿಬ್ಬಂದಿ


ಸರ್ಕಾರಿ ಪಾಲಿಟೆಕ್ನಿಕ್ ಸಿಬ್ಬಂದಿ, ರಾಮನಗರ


ಅನನ್ಯ & ಶ್ರೀರಕ್ಷಾ, NR ಕಾಲೋನಿ


ಆಕ್ಸ್‌ಬ್ರಿಡ್ಜ್ ಬಿಸಿನೆಸ್ ಸ್ಕೂಲ್, ಬೆಂಗಳೂರು


ಡಾ ಮಾಯಾ & ತಂಡ, ಬೆಂಗಳೂರು


ಭಾಗ್ಯಶ್ರೀ & ಗೆಳತಿಯರು, ಬೆಂಗಳೂರು


ಅನುಪಮಾ & ಗೆಳತಿಯರು, ಬೆಂಗಳೂರು


ಸವಿತಾ & ಗೆಳತಿಯರು, ತುಮಕೂರು


ಸಾಂಖ್ಯಿಕ & ಆರ್ಥಿಕ ನಿರ್ದೇಶನಾಲಯ, ಬೆಂಗಳೂರು


ಆಶಾ & ಗೆಳತಿಯರು, ಬೆಂಗಳೂರು


ತೇಜಸ್ವಿನಿ & ಗೆಳತಿಯರು, ಬೆಂಗಳೂರು


ಚಂದ್ರ & ಗೆಳತಿಯರು, ಸರಸ್ವತಿ ನಗರ


ಪತಂಜಲಿ ಯೋಗ ಸಮಿತಿ


ಶಮಿಕಾ & ಗೆಳತಿಯರು, ಕೆಂಗೇರಿ


ಗಂಗಾಂಬಿಕೆ & ಕುಟುಂಬ, ಚಾಮುಂಡಿಗುಡ್ಡ


ಕಾವ್ಯ & ನಿತ್ಯ, ಚಿಕ್ಕಮಗಳೂರು


ಭಾರ್ಗವಿ & ಗೆಳತಿಯರು, ಹೆಬ್ಬಾಳ

ಇಂದಿನ ಬಣ್ಣ - ಕೆಂಪು


ಕಾನ್ಕಾರ್ಡ್ ಸ್ಪ್ರಿಂಗ್ ಮೆಡೋಸ್ ತಂಡ, ಹೆಸರಘಟ್ಟ


ರಮ್ಯಾ & ಗೆಳತಿಯರು, ಇಂದಿರಾನಗರ


ರೇಖಾ ಶೆಟ್ಟಿ & ಗೆಳತಿಯರು, ಬೆಂಗಳೂರು


ಹೇಮಾ & ಗೆಳತಿಯರು, ನಾಗರಭಾವಿ



ಲೀಲಾ & ಗೆಳತಿಯರು, ಬೆಂಗಳೂರು


ಜಲಜಾ & ಗೆಳತಿಯರು, ಶಿಡ್ಲಘಟ್ಟ


ನವಕರ್ನಾಟಕ ಸಿಬ್ಬಂದಿ, ಶಿವಾನಂದ ನಗರ

ಮುಕ್ತ ಸಂಚಾರಕ್ಕೆ ರೋಟರಿ ಮೇಲ್ಸೇತುವೆ

ಬೈಯಪ್ಪನಹಳ್ಳಿ–ಹಳೆ ಮದ್ರಾಸ್ ರಸ್ತೆಯ ಸುತ್ತಮುತ್ತ ಸುಗಮ ಸಂಚಾರಕ್ಕೆ ಬಿ–ಸ್ಮೈಲ್ ಯೋಜನೆ




● ಆರ್.ಮಂಜುನಾಥ್

ಬೆಂಗಳೂರು: ಹಳೆ ಮದ್ರಾಸ್ ರಸ್ತೆ, ಬೈಯಪ್ಪನಹಳ್ಳಿ, ಬಾಣಸವಾಡಿ ಸುತ್ತಮುತ್ತ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ (ಬಿ–ಸ್ಮೈಲ್) ₹380 ಕೋಟಿ ವೆಚ್ಚದ ಎಲಿವೇಟೆಡ್ ರೋಟರಿ ಫ್ಲೈಓವರ್ ನಿರ್ಮಿಸಲು ಮುಂದಾಗಿದೆ.

2024ರ ಫೆಬ್ರುವರಿಯಲ್ಲೇ ಈ ಯೋಜನೆಯನ್ನು ತಯಾರಿಸಲಾಗಿದ್ದು, ಬಿ–ಸ್ಮೈಲ್ ಮೂಲಕ ಅನುಷ್ಠಾನಗೊಳಿಸಲು ಟೆಂಡರ್ ಆಹ್ವಾನಿಸಲಾಗಿದೆ. ಅಕ್ಟೋಬರ್ 13ರವರೆಗೆ ಬಿಡ್ ಸಲ್ಲಿಸಲು ಅವಕಾಶ ನೀಡಲಾಗಿದ್ದು, 24 ತಿಂಗಳಲ್ಲಿ ಯೋಜನೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

‘ಟರ್ನ್ ಕೀ ಲಮ್‌ಸಮ್’ ನಿಗದಿಪಡಿಸಿದ ದರಕ್ಕೇ ಯೋಜನೆಯನ್ನು ಪೂರ್ಣಗೊಳಿಸುವ ಮಾದರಿಯ ಟೆಂಡರ್ ಇದಾಗಿದೆ. ಜಿಎಸ್‌ಟಿ ಹೊರತುಪಡಿಸಿ, ₹304 ಕೋಟಿಯ ವೆಚ್ಚಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. ಯೋಜನೆಯಿಂದ ಹೆಚ್ಚು ಪ್ರಯೋಜನ ಪಡೆಯುವ ರೈಲ್ವೆ ಇಲಾಖೆ, ಯೋಜನೆಗೆ ಅಗತ್ಯವಿರುವ ಭೂಮಿಯನ್ನು ನೀಡಲು ಈಗಾಗಲೇ ಒಪ್ಪಿದೆ. ವರ್ಗಾಯಿಸ ಬಹುದಾದ ಅಭಿವೃದ್ಧಿ ಹಕ್ಕುಗಳನ್ನು (ಟಿಡಿಆರ್) ನೀಡುವ ಮೂಲಕ ಖಾಸಗಿ ಭೂಮಿಯನ್ನು ಯೋಜನೆಗೆ ಸ್ವಾಧೀನ ಪಡಿಕೊಳ್ಳಲು ನಿರ್ಧರಿಸಲಾಗಿದೆ.



ಭೂಮಿ ಅಗತ್ಯದ ವಿವರ

32,704.81 ಚ.ಮೀ ಒಟ್ಟು ಅಗತ್ಯವಿರುವ ಭೂಮಿ	**8,636.28** ಚ.ಮೀ ಖಾಸಗಿ ಸ್ವತ್ತು (ಟಿಡಿಆರ್)
15,306.65 ಚ.ಮೀ ರೈಲ್ವೆ ಸ್ವತ್ತು	**84.33** ಚ.ಮೀ ಬಿಬಿಎಂಪಿ ಆಸ್ತಿ
3,872.77 ಚ.ಮೀ ಸರ್ಕಾರಿ ಐಸೊಲೇಷನ್ ಆಸ್ಪತ್ರೆ ಜಾಗ	**4,804.78** ಚ.ಮೀ ರಕ್ಷಣಾ ಇಲಾಖೆಯ ಆಸ್ತಿ

ಯೋಜನೆ ವಿವರ

- ಮಾರುತಿ ಸೇವಾನಗರದಿಂದ ಬಾಣಸವಾಡಿ ಮತ್ತು ಮಾರುತಿ ಸೇವಾನಗರದಿಂದ ಕಮ್ಮನಹಳ್ಳಿ, ಬಾಣಸವಾಡಿಯಿಂದ ಬೈಯಪ್ಪನಹಳ್ಳಿಗೆ ಸಂಪರ್ಕ ಕಲ್ಪಿಸುವ ಬಾಣಸವಾಡಿ ಮೇಲ್ಸೇತುವೆಯ ಎರಡು ಪಥವನ್ನು ತೆಗೆದುಹಾಕಲಾಗುತ್ತದೆ
- ಈಗಿರುವ ರೈಲ್ವೆ ಮೇಲ್ಸೇತುವೆ ಜೊತೆಗೆ ಹೆಚ್ಚುವರಿಯಾಗಿ ಎರಡು ರೈಲ್ವೆ ಮೇಲ್ಸೇತುವೆಯನ್ನು ನಿರ್ಮಿಸಲಾಗುತ್ತದೆ.
- ಐಒಸಿ ಜಂಕ್ಷನ್‌ನಲ್ಲಿ (ಬೈಯಪ್ಪನಹಳ್ಳಿ ರೈಲ್ವೆ ನಿಲ್ದಾಣ) ನಿರ್ಮಾಣವಾಗುವ ಎಲಿವೇಟೆಡ್ ರೋಟರಿ ಎಲ್ಲ 4 ಪ್ರಮುಖ ಸಂಪರ್ಕ ರಸ್ತೆಗಳನ್ನು ಸಂಪರ್ಕಿಸುತ್ತದೆ.
- ಸ್ಟೀಲ್ ಬಾಕ್ಸ್ ಗಿರ್ಡರ್‌ನ ನಾಲ್ಕು ಪಥಗಳ ‘ಯೂನಿ ಡೈರೆಕ್ಷನಲ್’ ಎಲಿವೇಟೆಡ್ ರೋಟರಿ
- 15 ಮೀಟರ್ ಅಗಲ ರೋಟರಿ, ರೈಲು ಮಾರ್ಗದಿಂದ 10 ಮೀಟರ್ ಎತ್ತರದಲ್ಲಿರುತ್ತದೆ

ಎಲ್ಲೆಲ್ಲಿ ಉಪಯೋಗ?

ರಸ್ತೆಗಳು: ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್, ಬೈಯಪ್ಪನಹಳ್ಳಿ ರೈಲ್ವೆ ನಿಲ್ದಾಣ, ಮುಕುಂದ ಥಿಯೇಟರ್, ಕಮ್ಮನಹಳ್ಳಿ ಮುಖ್ಯರಸ್ತೆ, ಬಾಣಸವಾಡಿ ಮುಖ್ಯರಸ್ತೆ, ಸ್ವಾಮಿ ವಿವೇಕಾನಂದ ಮೆಟ್ರೊ ನಿಲ್ದಾಣ, ಹಳೆ ಮದ್ರಾಸ್ ರಸ್ತೆ, ಒರೈಯನ್ ಈಸ್ಟ್ ಮಾಲ್, ಐಟಿಸಿ ಇನ್‌ಫೋಟೆಕ್ ಇಂಡಿಯಾ– ಐಟಿಸಿ ಲಿಮಿಟೆಡ್

ಹಳ್ಳಿಗಳು: ದೊಡ್ಡನೆಕ್ಕುಂದಿ, ಲಿಂಗರಾಜಪುರ, ಬ್ಯಾಟಗುಂಟೆಪಾಳ್ಯ, ಬಾಣಸವಾಡಿ, ಬೈಯಪ್ಪನಹಳ್ಳಿ ಮುನವರ್ತಿ ಕಾವಲ್, ಬೈಯಪ್ಪನಹಳ್ಳಿ, ಬಿನ್ನಮಂಗಲ.

ತಾಲ್ಲೂಕು: ಬೆಂಗಳೂರು ಉತ್ತರ– ಪೂರ್ವ

ವಿಧಾನಸಭೆ ಕ್ಷೇತ್ರ: ಸರ್ವಜ್ಞನಗರ, ಸಿ.ವಿ. ರಾಮನ್‌ನಗರ

ವಾರ್ಡ್‌ಗಳು: ಮಾರುತಿಸೇವಾನಗರ, ಕಮ್ಮನಹಳ್ಳಿ, ಬೆನ್ನಿಗಾನಹಳ್ಳಿ

ರೋಟರಿಯಿಂದ ಎಲ್ಲಿಗೆ ಸಂಪರ್ಕ?

- ರೋಟರಿಯಿಂದ ಬಾಣಸವಾಡಿ ರಸ್ತೆ ಕಡೆಗೆ ಎರಡು ಪಥದ ಮೇಲ್ಮುಖ ರ‍್ಯಾಂಪ್
- ರೋಟರಿಯಿಂದ ಕಮ್ಮನಹಳ್ಳಿ ಕಡೆಗೆ ದ್ವಿಮುಖ ರ‍್ಯಾಂಪ್
- ಬೈಯಪ್ಪನಹಳ್ಳಿ ಟರ್ಮಿನಲ್ ರೈಲ್ವೆ ನಿಲ್ದಾಣದ ಕಡೆಗೆ ಕೆಳಮುಖದ ರ‍್ಯಾಂಪ್, ರೋಟರಿಯಿಂದ ಇಂದಿರಾನಗರದ (ಹಳೆ ಮದ್ರಾಸ್ ರಸ್ತೆ) ಕಡೆಗೆ ಮೇಲ್ಮುಖದ ರ‍್ಯಾಂಪ್
- ಬೈಯಪ್ಪನಹಳ್ಳಿ ಟರ್ಮಿನಲ್ ರೈಲ್ವೆ ನಿಲ್ದಾಣದ ಹಿಂಭಾಗ ಮತ್ತು ಹಳೆ ಮದ್ರಾಸ್ ರಸ್ತೆ ಕಡೆಗೆ ರೋಟರಿ ಕೇಂದ್ರ ಭಾಗದಿಂದ ಕೆಳಮುಖ ರ‍್ಯಾಂಪ್
- ಮಾರುತಿಸೇವಾನಗರ ರಸ್ತೆ ಕಡೆಗೆ ಮೇಲ್ಮುಖ/ಕೆಳಮುಖ ರ‍್ಯಾಂಪ್
- ರೈಲ್ವೆ ನಿರ್ವಹಣಾ ಶೆಡ್ ಕಡೆಗೆ ಮೇಲ್ಮುಖ/ಕೆಳಮುಖ ರ‍್ಯಾಂಪ್

ಸುದ್ದಿ 2 ನಿಮಿಷ

ಡಿ.ಕೆ.ಶಿವಕುಮಾರ್‌ಗೆ ಹೆಚ್ಚುವರಿ 11 ನಗರ ಸ್ಥಳೀಯ ಸಂಸ್ಥೆ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪೌರಾಡಳಿತ ಸಚಿವ ರಹೀಂ ಖಾನ್ ಅವರ ಖಾತೆಗಳಲ್ಲಿ ಬದಲಾವಣೆ ಮಾಡಿ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧಿಸೂಚನೆ ಹೊರಡಿಸಿದ್ದಾರೆ.

ಶಿವಕುಮಾರ್ ಅವರು ಜಲಸಂಪನ್ಮೂಲ ಖಾತೆಯ ಜತೆಗೆ ಬೆಂಗಳೂರು ಅಭಿವೃದ್ಧಿ ಖಾತೆ ಹೊಂದಿದ್ದರು. ಬಿಬಿಎಂಪಿ ವಿಭಜಿಸಿ, ಐದು ನಗರ ಪಾಲಿಕೆ ಒಳಗೊಂಡ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿರುವುದರಿಂದ ಅವರ ಖಾತೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸೇರ್ಪಡೆ ಮಾಡಲಾಗಿದೆ. ಜತೆಗೆ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ 11 ನಗರ ಸ್ಥಳೀಯ ಸಂಸ್ಥೆಗಳನ್ನೂ ಹೆಚ್ಚುವರಿಯಾಗಿ ವಹಿಸಲಾಗಿದೆ.

ಪೌರಾಡಳಿತ ಸಚಿವ ರಹೀಂಖಾನ್ ಅವರ ಇಲಾಖೆ ಅಧೀನದಲ್ಲಿದ್ದ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳನ್ನು ಅವರ ಖಾತೆಯಿಂದ ಕೈಬಿಡಲಾಗಿದೆ.

ಏಕಬಳಕೆ ಪ್ಲಾಸ್ಟಿಕ್ ದಂಡದಿಂದ 35 ಟ್ರ್ಯಾಕ್ಟರ್‌ಗಳ ಸೌಲಭ್ಯ



ಬೆಂಗಳೂರು: ನಗರದಲ್ಲಿ ಸೆ.3ರಂದು ಏಕಬಳಕೆ ಪ್ಲಾಸ್ಟಿಕ್ ವಶಪಡಿಸಿಕೊಂಡು, ವಿಧಿಸಲಾಗಿರುವ ದಂಡದಲ್ಲಿ ಎಲ್ಲ ವಿಧಾನಸಭೆ ಕ್ಷೇತ್ರಗಳಲ್ಲಿ ತ್ಯಾಜ್ಯ ವಿಲೇವಾರಿಗೆ 35 ಟ್ರ್ಯಾಕ್ಟರ್‌ಗಳ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಸಿಇಒ ಕರೀಗೌಡ ತಿಳಿಸಿದರು.

ಏಕಬಳಕೆ ಪ್ಲಾಸ್ಟಿಕ್ ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ಇದರಿಂದ ಬರುವ ದಂಡವನ್ನು ಬಳಸಿ ವಿಧಾನಸಭೆ ಕ್ಷೇತ್ರಗಳಿಗೆ ಬಾಡಿಗೆ ಮೂಲಕ ಟ್ರ್ಯಾಕ್ಟರ್‌ಗಳನ್ನು ಒದಗಿಸಲಾಗುತ್ತಿದೆ. ಇದಕ್ಕಾಗಿ ಟೆಂಡರ್ ಕರೆಯಲಾಗುತ್ತಿದ್ದು, ಅ.3ರಿಂದ ಟ್ರ್ಯಾಕ್ಟರ್‌ಗಳು ಬಳಕೆಗೆ ಲಭ್ಯವಾಗಲಿವೆ ಎಂದು ಹೇಳಿದರು.

25 ವಿಧಾನಸಭೆ ಕ್ಷೇತ್ರಗಳಿಗೆ ತಲಾ ಒಂದು ಟ್ರ್ಯಾಕ್ಟರ್ ಅನ್ನು ನೀಡಲಾಗುತ್ತದೆ. ಮಹದೇವಪುರಕ್ಕೆ ಆರು, ಕೆ.ಆರ್.ಪುರ ಕ್ಷೇತ್ರಕ್ಕೆ 4 ಟ್ರ್ಯಾಕ್ಟರ್‌ಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸಲಾಗುತ್ತಿದೆ ಎಂದರು.

ಚಾಮರಾಜಪೇಟೆ ವ್ಯಾಪ್ತಿಯಲ್ಲಿ ಫರ್ಲ್ ಪಲಿಫಿಲಂ ಮ್ಯಾನುಫ್ಯಾಕ್ಚರರ್ ದಾಸ್ತಾನು ಘಟಕದ ಮೇಲೆ ಶುಕ್ರವಾರ ದಾಳಿ ನಡೆಸಿ, 5 ಟನ್ ಏಕಬಳಕೆ ಪ್ಲಾಸ್ಟಿಕ್ ವಶಪಡಿಸಿಕೊಂಡು ₹10 ಲಕ್ಷ ದಂಡ ವಿಧಿಸಲಾಗಿದೆ. ಮತ್ತೆ ಏಕಬಳಕೆ ಪ್ಲಾಸ್ಟಿಕ್ ಬಳಸದಂತೆ ಘಟಕದ ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ವಾರ್ಡ್ ಮರುವಿಂಗಡಣೆ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳ ವಾರ್ಡ್ ಮರುವಿಂಗಡಣೆಗೆ ನಿಗದಿಪಡಿಸಿದ್ದ ಗಡುವು ಮೀರಿದ್ದು, ಮುಂದಿನವಾರ ಕರಡು ಅಧಿಸೂಚನೆ ಪ್ರಕಟವಾಗುವ ಸಾಧ್ಯತೆ ಇದೆ.

ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳನ್ನು ರಚಿಸಿ ಸೆಪ್ಟೆಂಬರ್ 2ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ನೇತೃತ್ವದಲ್ಲಿ ‘ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗ’ವನ್ನು ರಚಿಸಿ, ಸೆಪ್ಟೆಂಬರ್ 23ರಂದು ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಲಾಗಿತ್ತು.

ಸೆ.26ರಂದು ಐದೂ ನಗರ ಪಾಲಿಕೆಗಳ ವಾರ್ಡ್‌ಗಳ ಸಂಖ್ಯೆ, ಗಡಿಯನ್ನು ಗುರುತಿಸಿ, ಕರಡು ಅಧಿಸೂಚನೆಯನ್ನು ಹೊರಡಿಸುವುದಾಗಿ ನಗರಾಭಿವೃದ್ಧಿ ಇಲಾಖೆಯ ಸೆ.2ರಂದು ಅಧಿಸೂಚನೆ ಹೊರಡಿಸಿತ್ತು. ಆದರೆ, ಗಡುವಿನಲ್ಲಿ ವಾರ್ಡ್ ಮರು ವಿಂಗಡಣೆ ಕಾರ್ಯ ಮುಗಿದಿಲ್ಲ.

ವಾರ್ಡ್‌ಗಳ ಮರು ವಿಂಗಡಣೆ ವರದಿಯನ್ನು ಸಲ್ಲಿಸಬೇಕಾದ ಅವಧಿ ಮುಗಿದು 3 ದಿನವಾದರೂ ಆಯೋಗದ ಅಧಿಕಾರಿಗಳು ಅಂತಿಮ ಹಂತದ ತಯಾರಿಯಲ್ಲಿ ತೊಡಗಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಗುರುವಾರ ಸಭೆ ನಡೆದ ನಂತರ, ಹಲವು ಬದಲಾವಣೆಗಳನ್ನು ಮಾಡಬೇಕಾಗಿರುವುದರಿಂದ ವರದಿ ಸಲ್ಲಿಕೆ ವಿಳಂಬವಾಗಿದೆ ಎಂದು ಹೇಳಲಾಗಿದೆ.

ನಗರಾಭಿವೃದ್ಧಿ ಇಲಾಖೆ ಗಡುವು

ಸೆ.23: ‘ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗ’ದಿಂದ ವಾರ್ಡ್ ರಚನಾ ವರದಿ ಸಲ್ಲಿಕೆ

ಸೆ.26: ಸರ್ಕಾರದಿಂದ ವಾರ್ಡ್‌ಗಳ ಕರಡು ಅಧಿಸೂಚನೆ ಪ್ರಕಟ

ಅ.10: ಜನರಿಂದ ಸಲಹೆ, ಆಕ್ಷೇಪಕ್ಕೆ ಅವಕಾಶ

ಅ.17: ಆಯೋಗ ಆಕ್ಷೇಪಣೆ ಪರಿಶೀಲಿಸಿ, ಅಂತಿಮ ಶಿಫಾರಸು ಸಲ್ಲಿಸುವುದು

ನ.1: ಸರ್ಕಾರದಿಂದ ವಾರ್ಡ್‌ಗಳ ಅಂತಿಮ ಅಧಿಸೂಚನೆ

ಆರೋಗ್ಯಾಧಿಕಾರಿ ಅಮಾನತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಸಂಸ್ಥೆಗೆ ಸಾಮಗ್ರಿ ವಿತರಣೆ, ವೈದ್ಯರನ್ನು ಒದಗಿಸಲು ಕಾರ್ಯಾದೇಶ ನೀಡಿ ಕರ್ತವ್ಯಲೋಪ ಎಸಗಿರುವ ಡಾ. ಎಸ್.ಕೆ. ಸವಿತಾ ಅವರನ್ನು ಕಾನೂನುಬಾಹಿರವಾಗಿ ಆರೋಗ್ಯಾಧಿಕಾರಿಯಾಗಿ ನೇಮಿಸಲಾಗಿದೆ ಎಂದು ಪೌರಕಾರ್ಮಿಕ ಅವಲಂಬಿತರ ಒಕ್ಕೂಟ ಆಕ್ರೋಶ ವ್ಯಕ್ತಪಡಿಸಿದೆ.

ಮಗನ ಒಡೆತನದ ನಕಲಿ ಸಂಸ್ಥೆಗೆ ಕಾರ್ಯಾದೇಶ ನೀಡಿ ಅಕ್ರಮ ಎಸಗಿದ್ದ ಬಿಬಿಎಂಪಿ ಪೂರ್ವ ವಲಯದ ಆರೋಗ್ಯಾಧಿಕಾರಿಯಾಗಿದ್ದ ಡಾ. ಸವಿತಾ ಅವರನ್ನು ಕರ್ತವ್ಯಲೋಪದ ಮೇರೆಗೆ 2024ರ ಮಾರ್ಚ್‌ನಲ್ಲಿ ಕೇಂದ್ರ ಕಚೇರಿಗೆ ವರ್ಗಾವಣೆ ಮಾಡಲಾಗಿತ್ತು.

‘ಡಾ.ಸವಿತಾ ಅವರು ಬೊಮ್ಮನ ಹಳ್ಳಿ ಹಾಗೂ ರಾಜರಾಜೇಶ್ವರಿ ನಗರ ವಲಯದಲ್ಲಿ ಆರೋಗ್ಯಾಧಿಕಾರಿ ಆಗಿದ್ದಾಗ ತಮ್ಮ ಮಗ ಸಿ. ಸಿದ್ದರಾಜು ಚಿರಾಗ್ ಒಡೆತನದ ಎವಿಎಸ್ ಎಂಟರ್‌ಪ್ರೈಸಸ್ ಎಂಬ ನಕಲಿ ಸಂಸ್ಥೆಗೆ ಕಾರ್ಯಾದೇಶ ನೀಡಿ ಅಕ್ರಮ ಎಸಗಿದ್ದರು. ಕಾರ್ಯಾದೇಶ ನೀಡಿರುವ ಕಡತಗಳಲ್ಲಿ ಹಲವು ನ್ಯೂನತೆಗಳಿರುವ ಬಗ್ಗೆ ಟಿವಿಸಿಸಿ ವಿಭಾಗ ವರದಿ ನೀಡಿದ್ದು, ಇದರನ್ವಯ ಸರ್ಕಾರಿ ನೌಕರರ (ನಡತೆ) ನಿಯಮಾವಳಿ ನಿಯಮ–3 ಉಲ್ಲಂಘಿಸಿ ಗಂಭೀರ ಕರ್ತವ್ಯ ಲೋಪ ಎಸಗಿದ್ದಾರೆ’ ಎಂದು ಆದೇಶದಲ್ಲಿ ಹೇಳಲಾಗಿತ್ತು.

‘ಅವರ ವಿರುದ್ಧ ನಾಗರಿಕ ಸೇವಾ ನಿಯಮಗಳಂತೆ ಇಲಾಖೆ ತನಿಖೆ ನಡೆಸಿ ಕರಡು ಆರೋಪಪಟ್ಟಿಯನ್ನು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಆದ್ದರಿಂದ ಡಾ. ಸವಿತಾ ಅವರನ್ನು ಪೂರ್ವ ವಲಯದಿಂದ ಬಿಡುಗಡೆ ಮಾಡಿ, ಕೇಂದ್ರ ಕಚೇರಿ ಯಲ್ಲಿರುವ ಆರೋಗ್ಯ ವಿಭಾಗದ ವಿಶೇಷ ಆಯುಕ್ತರ ಕಚೇರಿಗೆ ನೇಮಿಸಲಾಗಿದೆ ಎಂದು ಬಿಬಿಎಂಪಿ ಆಡಳಿತದ ಉಪ ಆಯುಕ್ತರು ಮುಖ್ಯ ಆಯುಕ್ತರ ಸೂಚನೆಯಂತೆ ಆದೇಶಿಸಿದ್ದರು. ಈ ಬಗ್ಗೆ ನಗರಾಭಿವೃದ್ಧಿ ಇಲಾಖೆ ವಿಚಾರಣೆ ನಡೆಯುತ್ತಿದ್ದರೂ, ಸವಿತಾ ಅವರನ್ನು ಬೆಂಗಳೂರು ಪೂರ್ವ ನಗರ ಪಾಲಿಕೆಯ ಆರೋಗ್ಯಾಧಿಕಾರಿಯಾಗಿ ನೇಮಿಸಿರುವುದು ಸರಿಯಲ್ಲ. ಕೂಡಲೇ ಅವರನ್ನು ಅಮಾನತು ಮಾಡಬೇಕು’ ಎಂದು ಒಕ್ಕೂಟದ ಅಧ್ಯಕ್ಷ ಕೆ. ಮೋಹನ್ ಅವರು ಹೇಳಿದರು.

‘ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಡಾ. ಸವಿತಾ ಅವರ ಕರ್ತವ್ಯಲೋಪದ ಬಗ್ಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸುತ್ತಿದ್ದಾರೆ. ವಿಚಾರಣೆ ಸಮಯದಲ್ಲಿ ಅವರಿಗೆ ‘ನಾನ್ ಎಕ್ಸಿಕ್ಯೂಟಿವ್’ ಹುದ್ದೆಗೆ ಮಾತ್ರ ನೇಮಿಸಬೇಕು ಎಂದು ಆದೇಶಿಸಲಾಗಿದೆ. ಹೀಗಿದ್ದರೂ ಅವರನ್ನು ‘ಎಕ್ಸಿಕ್ಯೂಟಿವ್’ ಹುದ್ದೆಗೆ ನೇಮಿಸಲಾಗಿದೆ. ಅಲ್ಲದೆ, ಲೋಕಾಯುಕ್ತದಲ್ಲೂ ವಿಚಾರಣೆ ನಡೆಯುತ್ತಿದೆ. ಹೀಗಾಗಿ, ಆರೋಗ್ಯಾಧಿಕಾರಿ ಡಾ. ಸವಿತಾ ಅವರನ್ನು ಅಮಾನತು ಮಾಡಬೇಕು ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅವರಿಗೆ ಪತ್ರ ಬರೆದು ಒತ್ತಾಯಿಸಲಾಗಿದೆ’ ಎಂದರು.

ಮುಖ್ಯಾಂಶಗಳು

- ಮಗನ ಒಡೆತನದ ನಕಲಿ ಸಂಸ್ಥೆಗೆ ಕಾರ್ಯಾದೇಶ ನೀಡಿದ ಆರೋಪ
- ಲೋಕಾಯುಕ್ತದಲ್ಲೂ ವಿಚಾರಣೆ

ಅಶೋಕ್ ಚಲವಾದಿ ವಿರುದ್ಧ ತನಿಖೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಎನ್.ಚಲವಾದಿ ವಿರುದ್ಧ ಬಂದಿರುವ ದೂರುಗಳ ಸತ್ಯಾಸತ್ಯತೆ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿ 30 ದಿನದೊಳಗೆ ವರದಿ ಸಲ್ಲಿಸಲು ರಾಜ್ಯ ಪತ್ರಾಗಾರ ಇಲಾಖೆ ನಿರ್ದೇಶಕ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧೀನ ಕಾರ್ಯದರ್ಶಿ ನೇತೃತ್ವದಲ್ಲಿ ಪ್ರಾಥಮಿಕ ತನಿಖಾ ಸಮಿತಿ ರಚಿಸಲಾಗಿದೆ.

ಮಹಿಳಾ ಕಲಾವಿದರಿಗೆ ಸಂಭಾವನೆ ನೀಡಲು ಹಾಗೂ ಧನ ಸಹಾಯ ಬಿಡುಗಡೆ ಮಾಡಲು ಹಣದ ಬೇಡಿಕೆ ಇಟ್ಟಿರುವ ಕುರಿತು ದಲಿತ ಸಂಘಟನೆಗಳ ಒಕ್ಕೂಟ ಮತ್ತು ಕಲಾವಿದರ ಸಂಘಟನೆಗಳ ಒಕ್ಕೂಟದ ಮಹಿಳಾ ಸದಸ್ಯರು ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದರು. ಹಾಗಾಗಿ ಅಧಿಕಾರಿ ವಿರುದ್ಧ ತನಿಖೆ ನಡೆಸಿ, ಕೈಗೊಂಡ ಕ್ರಮದ ವರದಿಯನ್ನು ಕಳುಹಿಸಬೇಕು ಎಂದು ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದರು.

ಬೆಂಗಳೂರಿನ ಕೋಗಿಲುವಿನಲ್ಲಿ ‘ಕಾಸಾಗ್ರ್ಯಾಂಡ್ ಎಸ್ಟಾನ್ಸಿಯಾ’ ಯೋಜನೆ

ಬೆಂಗಳೂರು: ನಗರದ ಕೋಗಿಲು ಬಡಾವಣೆಯಲ್ಲಿ ಐಷಾರಾಮಿ ಜೀವನದ ಹೊಸ ಆಯಾಮ ಸೃಷ್ಟಿಸುವ ‘ಕಾಸಾಗ್ರ್ಯಾಂಡ್ ಎಸ್ಟಾನ್ಸಿಯಾ’ ಯೋಜನೆ ಪ್ರಾರಂಭಿಸುವ ಮೂಲಕ ಕಾಸಾಗ್ರ್ಯಾಂಡ್ ಸಂಸ್ಥೆ ಬೆಂಗಳೂರಿನ ಘನತೆಯನ್ನು ಮತ್ತಷ್ಟು ಹೆಚ್ಚಿಸಲಿದೆ.


ದಕ್ಷಿಣ ಭಾರತದ ಪ್ರಮುಖ ರಿಯಲ್ ಎಸ್ಟೇಟ್ ಡೆವಲಪರ್ ಸಂಸ್ಥೆ ಕಾಸಾಗ್ರ್ಯಾಂಡ್, ಭಾರತದ ಸಿಲಿಕಾನ್ ವ್ಯಾಲಿಯಲ್ಲಿ ಎಸ್ಟಾನ್ಸಿಯಾ ಮೂಲಕ ಐಷಾರಾಮಿ ಜೀವನದ ದೃಷ್ಟಿಕೋನವನ್ನು ನೀಡಲಿದೆ. ಎಸ್ಟಾನ್ಸಿಯಾವು 429 ಪ್ರೀಮಿಯಂ ಶೈಲಿ ಅಪಾರ್ಟ್‌ಮೆಂಟ್‌ಗಳನ್ನು ಹೊಂದಿರುವ ಸಮುದಾಯ ವಸತಿ ಕಟ್ಟಡವಾಗಲಿದೆ. 7.32 ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಹಚ್ಚಹಸಿರಿನ ನಡುವಿನ ಈ ಕಟ್ಟಡವು ಅತ್ಯುತ್ತಮ ಜೀವನಶೈಲಿಗಾಗಿ 70ಕ್ಕೂ ಹೆಚ್ಚು ಒಳಾಂಗಣ ಮತ್ತು ಹೊರಾಂಗಣ ಸೌಲಭ್ಯಗಳನ್ನು ಹೊಂದಲಿದೆ.

ಈ ಯೋಜನೆಯು ನಗರದಲ್ಲಿ ಹಿಂದೆಂದೂ ನೋಡಿರದ 22,500 ಚದರ ಅಡಿ ಬಹುಮಹಡಿ ಕ್ಲಬ್ ಹೌಸ್ ಜೊತೆ 11,500 ಚದರ ಅಡಿ ವಿಸ್ತೀರ್ಣದ ವಿಶೇಷ ಈಜುಕೊಳಗಳನ್ನು ಹಾಗೂ ವಿಶ್ವದರ್ಜೆಯ ಸೌಕರ್ಯಗಳೊಂದಿಗೆ ನಿರ್ಮಿಸಲಾಗುವುದು. ನೈಸರ್ಗಿಕ ಬೆಳಕು, ಗಾಳಿಯ ಹರಿವು, ಗೌಪ್ಯತೆ ಮತ್ತು ಎಲ್ಲವೂ ವಾಸ್ತು ಪ್ರಕಾರ ವಿನ್ಯಾಸಗೊಳಿಸಲಾಗಿದೆ.

70ಕ್ಕೂ ಹೆಚ್ಚು ಸೌಲಭ್ಯಗಳು: ಎಸ್ಟಾನ್ಸಿಯಾ ಪ್ರೀಮಿಯಂ ವಸತಿ ಸಮುದಾಯವು B + G + 13 ಮಹಡಿಗಳಲ್ಲಿ ಎತ್ತರದಲ್ಲಿರುವ 429 ಸೂಕ್ಷ್ಮವಾಗಿ ರಚಿಸಲಾದ 3 ಮತ್ತು 4 BHK ಅಪಾರ್ಟ್‌ಮೆಂಟ್‌ಗಳನ್ನು ಹೊಂದಲಿದೆ. ಕೇವಲ ₹ 1.25 ಕೋಟಿಯಿಂದ ಪ್ರಾರಂಭವಾಗುವ ಉತ್ತರ ಬೆಂಗಳೂರಿನ ಅತ್ಯಂತ ಅಪೇಕ್ಷಿತ ವಿಳಾಸಗಳಲ್ಲಿ ಒಂದಾಗಲಿದೆ. ನಗರ ಜೀವನಕ್ಕೆ ಪೂರಕವಾಗಿ ವಿನ್ಯಾಸಗೊಳಿಸಲಿರುವ ಎಸ್ಟಾನ್ಸಿಯಾದಲ್ಲಿ ಅತ್ಯಾಧುನಿಕ 70ಕ್ಕೂ ಹೆಚ್ಚು ಸೌಲಭ್ಯಗಳಿವೆ. ಸುಸಜ್ಜಿತ ಒಳಾಂಗಣ ಮತ್ತು ಹೊರಾಂಗಣ ಸೌಲಭ್ಯಗಳೊಂದಿಗೆ 22,500 ಚ.ಅಡಿಗಳ ಬಹುಮಹಡಿ ಗ್ರ್ಯಾಂಡ್ ಕ್ಲಬ್‌ಹೌಸ್, ಆಕ್ವಾ ಜಿಮ್, ಜಕುಝಿ, ಮಕ್ಕಳ ಪೂಲ್, ರೈನ್ ಡ್ಯಾನ್ಸ್ ಡೆಕ್ ಮತ್ತು ಪೂಲ್‌ಸೈಡ್ ಪಾರ್ಟಿ ಲಾನ್‌ಗಳನ್ನು ಒಳಗೊಳ್ಳಲಿದೆ.

ಕ್ಲೈಂಬಿಂಗ್ ಗೋಡೆಗಳು, ಸ್ಕೇಟಿಂಗ್ ರಿಂಕ್‌ಗಳು, ಮರಳು ಗುಂಡಿಗಳು, ಟ್ರಾಂಪೊಲೈನ್‌ಗಳು ಮತ್ತು ಸಂವಾದಾತ್ಮಕ ಆಟದ ವಲಯಗಳ ಮೂಲಕ ಮಕ್ಕಳು ತಮ್ಮ ಪ್ರಪಂಚವನ್ನು ಅನ್ವೇಷಿಸಲಿದ್ದಾರೆ. ಕ್ರೀಡಾ ಉತ್ಸಾಹಿಗಳು ಪಿಕ್ಕಲ್‌ಬಾಲ್, ಕ್ರಿಕೆಟ್ ಪ್ರಾಕ್ಟಿಸ್ ನೆಟ್‌ಗಳು, ವಾಲಿಬಾಲ್ ಕೋರ್ಟ್‌ಗಳು ಮತ್ತು ಬಹುಪಯೋಗಿ ಆಟದ ಪ್ರದೇಶಗಳನ್ನು ಕಾಣಲಿದ್ದಾರೆ. ವಯಸ್ಕರು ಮತ್ತು ಹಿರಿಯರಿಗೆ ಧ್ಯಾನ ಮಂಟಪಗಳು, ಯೋಗ ಹುಲ್ಲುಹಾಸುಗಳು, ರಿಫ್ಲೆಕ್ಸಾಲಜಿ ವಾಕ್‌ವೇಗಳು ಮತ್ತು ಯೋಗಕ್ಷೇಮ ಪ್ರೋತ್ಸಾಹಿಸುವ ಸಾಮಾಜಿಕ ಸಭೆ ಸ್ಥಳ, ರೂಫ್‌ಟಾಪ್ ಸ್ಕೈ ಸಿನಿಮಾಗಳು, ಆಂಫಿಥಿಯೇಟರ್‌ಗಳು, ಸೈಕ್ಲಿಂಗ್ ಟ್ರ್ಯಾಕ್‌ಗಳು, ಹೊರಾಂಗಣ ಜಿಮ್‌ಗಳು ಮತ್ತು ಸೀನಿಯರ್ ಫ್ರೆಂಡ್ಲಿ ಪ್ಲಾಜಾಗಳು ಸೇರಿದಂತೆ ಮನರಂಜನೆ ಸೇರಿದಂತೆ ಎಸ್ಟಾನ್ಸಿಯಾ ಅತ್ಯಾಧುನಿಕತೆಯ ಒಂದು ಅದ್ಭುತ ದೃಶ್ಯವಾಗಲಿದೆ.

ಕಾಸಾಗ್ರ್ಯಾಂಡ್ ಎಸ್ಟಾನ್ಸಿಯಾ ಯೋಜನೆ ಅನಾವರಣ ಕುರಿತು ಮಾತನಾಡಿದ ಕಾಸಾಗ್ರ್ಯಾಂಡ್ ಡೆಪ್ಯೂಟಿ ಮ್ಯಾನೇಜಿಂಗ್ ಡೈರೆಕ್ಟರ್ ಸತೀಶ್ ಸಿಜಿ, ‘ಕಾಸಾಗ್ರ್ಯಾಂಡ್ ಸಿಲಿಕಾನ್ ವ್ಯಾಲಿಯಲ್ಲಿ ಆಧುನಿಕ ಜೀವನದ ಭವಿಷ್ಯವನ್ನು ರೂಪಿಸುತ್ತಿದೆ. ಕೋಗಿಲುವಿನಲ್ಲಿ ಆರಂಭಿಸಿರುವ ಈ ಯೋಜನೆ ಉದಯೋನ್ಮುಖ ಜೀವನಶೈಲಿ ಮತ್ತು ವಾಣಿಜ್ಯ ಕೇಂದ್ರಗಳೊಂದಿಗೆ ಅತ್ಯುತ್ತಮ ಸಂಪರ್ಕ ಹೊಂದಲಿದೆ. ಭವಿಷ್ಯದ ದೃಷ್ಟಿಕೋನ ಹೊಂದಿರುವ ಇಲ್ಲಿನ ನಿವಾಸಿಗಳಿಗೆ ಸಮುದಾಯದ ಭಾಗವಾಗುವ ಒಂದು ಅನನ್ಯ ಅವಕಾಶ ಎಸ್ಟಾನ್ಸಿಯಾ ಕಲ್ಪಿಸಲಿದೆ. ಪ್ರತಿಯೊಂದು ಮನೆಯೂ ಸೌಕರ್ಯ ಮತ್ತು ಕ್ರಿಯಾತ್ಮಕತೆಯ ಸಮತೋಲನದಿಂದ ಕೂಡಿರುತ್ತದೆ. ಇಲ್ಲಿನ ನಿವಾಸಿಗಳಲ್ಲಿ ಸಂಪರ್ಕ ಮತ್ತು ಯೋಗಕ್ಷೇಮದ ಪ್ರಜ್ಞೆ ಬೆಳೆಸುವುದಲ್ಲದೆ, ಸಮುದಾಯ ಜೀವನಕ್ಕೆ ಹೊಸ ಮಾನದಂಡವಾಗಲಿದೆ’ ಎಂದರು.



ಎಸ್ಟಾನ್ಸಿಯಾ ನಿವಾಸಿಗಳಿಗೆ ಉನ್ನತ ಶಾಲೆಗಳು, ಐಟಿ ಮತ್ತು ತಂತ್ರಜ್ಞಾನ ಉದ್ಯಾನವನಗಳು ಮತ್ತು ವಾಣಿಜ್ಯ ಕೇಂದ್ರಗಳು ಸಮೀಪದಲ್ಲಿವೆ. ಹಚ್ಚ ಹಸಿರಿನ ಉದ್ಯಾನಗಳು, ಮರಗಳಿಂದ ಕೂಡಿದ ಡ್ರೈವ್‌ವೇಗಳು ಮತ್ತು ಪಾದಚಾರಿ ಸ್ನೇಹಿ ಮಾರ್ಗಗಳಿಂದ ಆವೃತವಾಗಿದೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಕೇವಲ 20 ಕಿ.ಮೀ ದೂರದಲ್ಲಿದೆ. ಯಲಹಂಕ ರೈಲ್ವೆ ನಿಲ್ದಾಣ ಕೇವಲ 3.5 ಕಿ.ಮೀ, ಮುಂಬರುವ ಮೆಟ್ರೋ ನಿಲ್ದಾಣ ಕೇವಲ 2.8 ಕಿ.ಮೀ ದೂರದಲ್ಲಿದ್ದರೆ, ಕೋಗಿಲು ಮೆಟ್ರೋ ನಿಲ್ದಾಣ ಸಮೀಪದಲ್ಲಾಗಲಿದೆ. ಒಟ್ಟಾರೆ, ಉನ್ನತ ಮತ್ತು ಉಲ್ಲಾಸಕರ ಜೀವನಶೈಲಿ ಸೃಷ್ಟಿಸುವ ಈ ಯೋಜನೆ ಕರ್ನಾಟಕ ರೇರಾ ಅಡಿಯಲ್ಲಿ ನೋಂದಾಯಿಸಲಾಗಿದೆ.

ಬನಶಂಕರಿ ದರ್ಶನಕ್ಕೆ ಭಕ್ತರ ದಂಡು

ಪ್ರಜಾವಾಣಿ ಚಿತ್ರ



ನವರಾತ್ರಿ ಹಬ್ಬದ ಪ್ರಯುಕ್ತ ನಗರದ ಬನಶಂಕರಿ ದೇವಸ್ಥಾನಕ್ಕೆ ಶುಕ್ರವಾರ ಹೆಚ್ಚಿನ ಭಕ್ತರು ಬಂದಿದ್ದರು

ಬಿಜೆಪಿಯ 11 ಮುಖಂಡರಿಗೆ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವಂತೆ ಆಗ್ರಹಿಸಿ, ಬಿಜೆಪಿ ಮುಖಂಡರು ನಡೆಸಿದ್ದ ಪ್ರತಿಭಟನೆ ವೇಳೆ ಹೈಕೋರ್ಟ್ ಆದೇಶ ಉಲ್ಲಂಘಿಸಿದ ಆರೋಪದ ಅಡಿ 11 ಮಂದಿಗೆ ಗೋವಿಂದರಾಜನಗರ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಬರುವಂತೆ ಸೂಚಿಸಿದ್ದಾರೆ.

ವಿಜಯನಗರದ ಉಮೇಶ್ ಶೆಟ್ಟಿ, ರಂಗನಾಥಪುರದ ಮಂಜುನಾಥ್, ಬಿಡಿಎ ಲೇಔಟ್ ನಿವಾಸಿ ಗಂಗಮ್ಮ, ದಾಸರಹಳ್ಳಿಯ ಹೇಮಲತಾ, ನಾಯಂಡಹಳ್ಳಿಯ ಪಲ್ಲವಿ, ಅಗ್ರಹಾರ ದಾಸರಹಳ್ಳಿಯ ಲಕ್ಷ್ಮಿ, ಮಂಗಳಾ, ಶಾರದಾ, ಸುರೇಶ್, ಶಕ್ತಿವೀರ್ ಸೇರಿ 11 ಮಂದಿಗೆ ನೋಟಿಸ್ ಜಾರಿ ಮಾಡಲಾಗಿದೆ.

‘ಈ ಪ್ರಕರಣದಲ್ಲಿ ನೀವುಗಳು ಆರೋಪಿಗಳಾಗಿದ್ದು, ವಿಚಾರಣೆಗೆ ಒಳಪಡಿಸಲು ಪೂರಕ ಕಾರಣಗಳಿವೆ. ನೋಟಿಸ್ ತಲುಪಿದ ಮೂರು ದಿನಗಳ ಒಳಗಾಗಿ ತನಿಖಾಧಿಕಾರಿಯ ಎದುರು ವಿಚಾರಣೆಗೆ ಹಾಜರಾಗಬೇಕು’ ಎಂದು ಗೋವಿಂದರಾಜ ನಗರ ಠಾಣೆ ಪೊಲೀಸರು ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

ನೋಟಿಸ್‌ನಲ್ಲಿ ಏನಿದೆ?: ‘ವಿಜಯನಗರದ ಎಂಸಿ ಲೇಔಟ್‌ನ ನಾಗರಬಾವಿ ಮುಖ್ಯರಸ್ತೆಯಲ್ಲಿರುವ ಬಿಜೆಪಿ ಕಚೇರಿ ಎದುರು ಬಿಜೆಪಿ ಪಕ್ಷದ ಉಮೇಶ್ ಶೆಟ್ಟಿ ನೇತೃತ್ವದಲ್ಲಿ 20ರಿಂದ 25 ಮಂದಿ ಗುಂಪು ಸೇರಿಕೊಂಡು ಪ್ರತಿಭಟನೆ ನಡೆಸಿದ್ದರು. ಆ ಸ್ಥಳದಲ್ಲಿ ಪ್ರತಿಭಟನೆ ಮಾಡಲು ಅವಕಾಶ ಇಲ್ಲ. ಯಾವುದೇ ಪ್ರತಿಭಟನೆಯನ್ನು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸಬೇಕು ಎಂದು ಹೈಕೋರ್ಟ್ ಆದೇಶವಿದೆ. ಆದೇಶದ ಪ್ರತಿಯನ್ನೂ ಪ್ರತಿಭಟನಕಾರರಿಗೆ ತೋರಿಸಲಾಗಿತ್ತು. ಆದರೂ ಪ್ರತಿಭಟನೆ ನಡೆಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡಚಣೆ ಉಂಟು ಮಾಡಲಾಗಿದೆ’ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಗುಣಮಟ್ಟದ ರಸ್ತೆಗಳ ನಿರ್ಮಿಸದ ಹಿಂದಿನ ಸರ್ಕಾರ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆರೋಪ

‘ಗುಂಡಿಗಳಿಗೆ ಬಿಜೆಪಿ ಶಾಸಕರೇ ಹೊಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಸರ್ಕಾರದ ಅವಧಿಯಲ್ಲಿ ಮಾಡಿದ ಕಳಪೆ ರಸ್ತೆಗಳಿಂದ ಈಗ ಗುಂಡಿಗಳ ಸಮಸ್ಯೆ ಎದುರಾಗಿದೆ. ಇದಕ್ಕೆ ಬೆಂಗಳೂರು ನಗರ ವ್ಯಾಪ್ತಿಯ ಬಿಜೆಪಿ ಶಾಸಕರೇ ಹೊಣೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 2019–23ರ ಅವಧಿಯಲ್ಲಿ ಬಿಜೆಪಿ ಆಡಳಿತ ಇತ್ತು. ಬಿಜೆಪಿ ಶಾಸಕರು ನಗರದ ತಮ್ಮ ಕ್ಷೇತ್ರಗಳ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿ ಅನುದಾನ ಪಡೆದಿದ್ದರು. ಅಷ್ಟೊಂದು ಹಣ ಬಿಡುಗಡೆಯಾದರೂ ಗುಣಮಟ್ಟದ ರಸ್ತೆಗಳ ನಿರ್ಮಾಣ ಮಾಡಲಿಲ್ಲ. ಅವುಗಳ ನಿರ್ವಹಣೆಯಲ್ಲೂ ವಿಫಲರಾದರು ಎಂದು ದೂರಿದರು.

2019ರಲ್ಲಿ ನವನಗರೋತ್ಥಾನ ಯೋಜನೆಯಡಿ ಬಿಡುಗಡೆಗೊಂಡ ಕ್ಷೇತ್ರವಾರು ಅನುದಾನಗಳ ವಿವರವನ್ನು ಬಿಡುಗಡೆ ಮಾಡಿದ ಸಚಿವ ರೆಡ್ಡಿ, ‘ಈ ಅನುದಾನದಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಬಿಜೆಪಿ ಶಾಸಕರು ₹6,116.73 ಕೋಟಿ ಪಡೆದಿದ್ದರು. ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ನೀಡಿದ್ದು ₹1,105 ಕೋಟಿ. ಹೆಚ್ಚು ಅನುದಾನ ಪಡೆದಿದ್ದರೂ ಗುಣಮಟ್ಟವಿಲ್ಲದ ಕಾಮಗಾರಿ ಮಾಡಿದ್ದಾರೆ. ಅದೇ ಕಡಿಮೆ ಅನುದಾನ ಪಡೆದ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಲ್ಲಿ ರಸ್ತೆಗಳು ಉತ್ತಮ ಗುಣಮಟ್ಟದಿಂದ ಕೂಡಿವೆ. ರಸ್ತೆ ಅಭಿವೃದ್ಧಿಗೆ ನೀಡಿದ್ದ ಹಣವನ್ನು ಬಿಜೆಪಿ ಶಾಸಕರು ಏನು ಮಾಡಿದರು ಎಂಬ ದಾಖಲೆಗಳನ್ನು ಬಿಡುಗಡೆ ಮಾಡಬೇಕು’ ಎಂದು ಸವಾಲು ಹಾಕಿದರು.

‘ಒಮ್ಮೆ ರಸ್ತೆ ನಿರ್ಮಾಣವಾದರೆ ಕನಿಷ್ಠ ಹತ್ತು ವರ್ಷ ಬಾಳಿಕೆ ಬರಬೇಕು. ಗುಂಡಿ ಸೇರಿದಂತೆ ಮೂರು ವರ್ಷಗಳವರೆಗೆ ಗುತ್ತಿಗೆದಾರರೇ ನಿರ್ವಹಣೆ ಮಾಡಬೇಕು ಎಂಬ ನಿಯಮವಿದೆ. ಬಿಜೆಪಿ ಆಡಳಿತ ಇದ್ದಾಗ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಲಿಲ್ಲ. ನಿರ್ವಹಣೆಯನ್ನೂ ಮಾಡಲಿಲ್ಲ. ಗುಂಡಿಗಳಿಗೆ ಬಿದ್ದು 17 ಮಂದಿ ಬೈಕ್ ಸವಾರರು ಮೃತಪಟ್ಟಿದ್ದರು. ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಅವರೇ ಬಿಬಿಎಂಪಿ ಆಯುಕ್ತರನ್ನು ಕೋರ್ಟ್‌ಗೆ ಕರೆಯಿಸಿದ್ದರು. ಈಗ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮನೆಯ ಸಮೀಪ ಸೇರಿದಂತೆ ಅನೇಕ ರಸ್ತೆಗಳಲ್ಲಿ ಗುಂಡಿ ತುಂಬುವ ಕೆಲಸವನ್ನು ಬಿಜೆಪಿ ನಾಯಕರು ಮಾಡಿದ್ದಾರೆ. ಮಣ್ಣಿನಿಂದ ತುಂಬುವುದಕ್ಕಿಂತ ಕಲ್ಲು–ಜಲ್ಲಿಯಿಂದಾದರೂ ತುಂಬಲಿ. ತಮ್ಮ ಅವಧಿಯಲ್ಲಿ ಮಾಡಿದ ಕಳಪೆ ಕಾಮಗಾರಿಗಳಿಗೆ ನ್ಯಾಯ ಒದಗಿಸಲಿ’ ಎಂದು ಸಲಹೆ ನೀಡಿದರು.

ಬೆಂಗಳೂರು ನಗರದಲ್ಲಿ 1.40 ಕೋಟಿ ಜನರಿಗೆ, 1.30 ಕೋಟಿ ವಾಹನಗಳಿವೆ. ಮಳೆ ಹೆಚ್ಚಾಗಿ ಗುಂಡಿಗಳ ಸಂಖ್ಯೆಯೂ ಹೆಚ್ಚಾಗಿದೆ. ಮುಖ್ಯಮಂತ್ರಿ ಸಭೆ ನಡೆಸಿ, ಒಂದು ತಿಂಗಳ ಒಳಗೆ ಎಲ್ಲಾ ಗುಂಡಿಗಳನ್ನು ಮುಚ್ಚುವಂತೆ ಸೂಚಿಸಿದ್ದಾರೆ. ಉಪಮುಖ್ಯಮಂತ್ರಿ ನಿರಂತರವಾಗಿ ಗಮನಹರಿಸುತ್ತಿದ್ದಾರೆ. ಭೂಗತ ಒಳಚರಂಡಿ, ವಿದ್ಯುತ್ ಕಾಮಗಾರಿಗಳ ಪರಿಣಾಮ ಒಂದಷ್ಟು ಸಮಸ್ಯೆ ಎದುರಾಗಿದೆ ಎಂದರು.

ಪ್ರಧಾನಮಂತ್ರಿಗೆ ಒತ್ತಡ ಹಾಕಲು ಸಲಹೆ



ರಾಮಲಿಂಗಾ ರೆಡ್ಡಿ

ಹಿಂದೂ ದೇವಾಲಯವನ್ನು ರಾಜ್ಯ ಸರ್ಕಾರದ ಅಧೀನಕ್ಕೆ ತರಬಾರದು ಎಂಬ ಕಾನೂನು ರೂಪಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ವಿಶ್ವ ಹಿಂದೂ ಪರಿಷತ್ ಮನವಿ ಸಲ್ಲಿಸಬೇಕು ಎಂದು ಸಚಿವ ರಾಮಲಿಂಗಾರೆಡ್ಡಿ ಸಲಹೆ ನೀಡಿದರು.

ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿರುವ ವಿಶ್ವ ಹಿಂದೂ ಪರಿಷತ್ ನಿಯೋಗ ಈ ಬಗ್ಗೆ ಒತ್ತಾಯಿಸಿತ್ತು. ಈ ಕುರಿತು ಪ್ರತಿಕ್ರಿಯಿಸಿದ ರೆಡ್ಡಿ ಅವರು, ದೇಶದ ಎಲ್ಲೆಡೆ ಅನ್ವಯವಾಗುವಂತೆ ಏಕರೂಪದ ಕಾಯ್ದೆ ರೂಪಿಸಬೇಕು. ವಿಶ್ವ ಹಿಂದೂ ಪರಿಷತ್ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದು ಸಲಹೆ ನೀಡಿದರು.

ಧರ್ಮಸ್ಥಳ ಸೇರಿದಂತೆ ಯಾವುದೇ ಧಾರ್ಮಿಕ ಕೇಂದ್ರಗಳನ್ನು ಮುಜರಾಯಿ ವ್ಯಾಪ್ತಿಗೆ ತರುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. ಯಾರೂ ಒತ್ತಡ ಹಾಕಿಲ್ಲ ಎಂದು ಹೇಳಿದರು.

ಪ್ರಜಾವಾಣಿ

ನವವರ್ಣ

ಕೆಂಪು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಶನಿವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...
7338018541


ರಾಗಿಣಿ ದ್ವಿವೇದಿ, ನಟಿ


ಭಾರತಿ ಮತ್ತು ತಂಡ, ಬೆಂಗಳೂರು


ಐಇಎಸ್ ಶಾಲಾ ಸಿಬ್ಬಂದಿ, ಬಸವೇಶ್ವರ ನಗರ


ಬಂಡೆಮಠದ ಗೆಳತಿಯರು, ಕೆಂಗೇರಿ


ಬೆಸ್ಕಾಂ ಸಿಬ್ಬಂದಿ, ಆರ್‌ಆರ್ ನಗರ


ವೀಣಾ & ಗೆಳತಿಯರು


KRDCL ಸಿಬ್ಬಂದಿ


ದೇವಕಿ ಮತ್ತು ತಂಡ, ದೊಡ್ಡಬಳ್ಳಾಪುರ


ಸರ್ ಎಂವಿ ಸಹಕಾರಿ ಬ್ಯಾಂಕ್ ಸಿಬ್ಬಂದಿ, ಜೆಪಿ ನಗರ


ಜೆಸಿಂತಾ & ಡಿಂಪಲ್, ವಿಕಾಸ ಸೌಧ


ಸುಶ್ಮಿತಾ, ಹಂಪಿನಗರ


ಶಕೀಲಾ ಮತ್ತು ಗೆಳತಿಯರು, ನವನಗರ


ಎಂ ಎಸ್ ಐ ಎಲ್, ಬೆಂಗಳೂರು


ಪ್ರಧಾನ ಅಂಚೆ ಕಚೇರಿ ಸಿಬ್ಬಂದಿ, ತುಮಕೂರು


ISBR ಕಾಲೇಜು ಸಿಬ್ಬಂದಿ, ಬೆಂಗಳೂರು


ಮಂಜುಳಾ ಮತ್ತು ಚರಿಶಾ, ಹೆಬ್ಬಾಳ


ಮಧು ಸಿಆರ್, ಬೆಂಗಳೂರು


ಡಾ ಮಂಜುಳಾ ಮತ್ತು ತಂಡ, ಚಾಮರಾಜಪೇಟೆ


ಸರಕಾರಿ ಪ್ರಥಮ ದರ್ಜೆ ಕಾಲೇಜು ಸಿಬ್ಬಂದಿ, ಶಿವಾರ


ಅನಿತಾ & ಗೆಳತಿಯರು, ಬೆಂಗಳೂರು


ಅನಂತಕುಮಾರ್ ಯೋಗ ಕೇಂದ್ರ, ಬೆಂಗಳೂರು


ಹನಿ ಕೊಂಬ್ ಹೋಮ್ಸ್ ತಂಡ, ಕೆಂಗೇರಿ

ಇಂದಿನ ಬಣ್ಣ - ಕೆಂಪು


ವೆಂಕಟೇಶ ವನಜಾಕ್ಷಿ ಸೋಮನಾಥಪುರ


ಶೇಷಾದ್ರಿಪುರಂ ಕಾಲೇಜು ಸಿಬ್ಬಂದಿ, ತುಮಕೂರು


ಶಾಂತಮ್ಮ & ಗೆಳತಿಯರು, ಕೆಂಗೇರಿ


ಸಾಫಲ್ಯ ಮತ್ತು ಗೆಳತಿಯರು, ಬೆಳ್ತಂಗಡಿ


ಪಿಇಎಸ್ ವಿದ್ಯಾಕೇಂದ್ರ, ನೆಲಮಂಗಲ


ಸ್ವಾತಿ & ಅಕ್ಷತಾ, ಮತ್ತಿಕೆರೆ


ಸವಿತಾ & ಗೆಳತಿಯರು, ಜಯನಗರ


ಪರಸ್ಪರ ಮಹಿಳಾ ಸಂಘ, ಊಃಖ ಲೇಔಟ್


ಬೃಂದಾ ಆಚಾರ್ಯ

ನಮ್ಮಮ್ಮ ಸವದತ್ತಿ ಎಲ್ಲಮ್ಮ ಎಂದ 'ಮಾರುತ'

ಎಸ್.ನಾರಾಯಣ್ ನಿರ್ದೇಶಿಸಿ, ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಮಾರುತ' ಚಿತ್ರದ 'ನಮ್ಮಮ್ಮ ಸವದತ್ತಿ ಎಲ್ಲಮ್ಮ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಎಸ್.ನಾರಾಯಣ್ ಅವರೇ ಸಂಗೀತ ನೀಡಿದ್ದು, ಅನನ್ಯ ಭಟ್ ಅವರ ಗಾಯನದಲ್ಲಿ ಮೂಡಿ ಬಂದಿರುವ ಈ ಹಾಡಿನಲ್ಲಿ ನಾಯಕಿ ಬೃಂದಾ ಆಚಾರ್ಯ ಅಭಿನಯಿಸಿದ್ದಾರೆ. ಚಿತ್ರವನ್ನು ಕೆ.ಮಂಜು, ರಮೇಶ್ ಯಾದವ್ ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಿಸಿದ್ದಾರೆ.

'ರೈಲಿಗೆ ಎಂಜಿನ್ ಹೇಗೆ ಮುಖ್ಯವೊ ಹಾಗೆ ನಮ್ಮ ಚಿತ್ರದ ಬಹುಮುಖ್ಯ ಪಾತ್ರಕ್ಕೆ ಪ್ರಮುಖ ಕಲಾವಿದರೊಬ್ಬರು ಬೇಕಾಗಿತ್ತು. ಆ ಪಾತ್ರದಲ್ಲಿ ದುನಿಯಾ ವಿಜಯ್ ಅಭಿನಯಿಸಿದ್ದಾರೆ. ನೋಡುಗರಿಗೆ ಬೇಕಾಗಿರುವ ಎಲ್ಲಾ ಅಂಶಗಳನ್ನೊಳಗೊಂಡ ಒಂದು ಕೌಟುಂಬಿಕ ಚಿತ್ರ. ಯುವಜನತೆಗೆ ಎಚ್ಚರಿಕೆ ನೀಡುವ ಉತ್ತಮ ಸಂದೇಶ ಕೂಡ ಇದೆ. ಸಾಮಾಜಿಕ ಜಾಲತಾಣಗಳಿಂದ ಎಷ್ಟು ಉಪಯೋಗವಿದೆಯೋ, ಅದಕ್ಕಿಂತ ಹೆಚ್ಚು ಅಪಾಯವಿದೆ. ಈ ನಿಟ್ಟಿನಲ್ಲಿ ಪೋಷಕರು ಯುವಜನತೆಯ ಮೇಲೆ ಹೆಚ್ಚು ಗಮನ ನೀಡಬೇಕು ಎಂಬ ಸಂದೇಶವಿದೆ. ಅಕ್ಟೋಬರ್ 31ಕ್ಕೆ ಚಿತ್ರ ತೆರೆಗೆ ಬರಲಿದೆ' ಎಂದು ನಿರ್ದೇಶಕ ಎಸ್ ನಾರಾಯಣ್ ತಿಳಿಸಿದರು.

ಶ್ರೇಯಸ್ ಮಂಜುಗೆ ಬೃಂದಾ ಆಚಾರ್ಯ ಜೋಡಿಯಾಗಿದ್ದಾರೆ. ಇನ್ನೂ ನಮ್ಮ ಚಿತ್ರದಲ್ಲಿ ತಾರಾ, ರಂಗಾಯಣ ರಘು, ಸಾಧು ಕೋಕಿಲ, ಕಲ್ಯಾಣಿ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಸುಜಯ್ ಶಾಸ್ತ್ರಿ ಹೀಗೆ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಇದೆ. ಕ್ರೇಜಿಸ್ಟಾರ್ ರವಿಚಂದ್ರನ್ ಅವರು ಅತಿಥಿಪಾತ್ರದಲ್ಲಿ ಅಭಿನಯಿಸಿದ್ದಾರೆ.

ಐತಿಹಾಸಿಕ ಚಿತ್ರದಲ್ಲಿ ಶ್ರೀಮುರಳಿ


ಶ್ರೀಮುರಳಿ

'ಬಘೀರ' ನಂತರ ನಟ ಶ್ರೀಮುರಳಿ ಯಾವ ಸಿನಿಮಾ ಮಾಡುತ್ತಾರೆಂಬ ಕುತೂಹಲವಿತ್ತು. ಇದೀಗ ಅದಕ್ಕೆ ತೆರೆ ಬಿದ್ದಿದ್ದು ಐತಿಹಾಸಿಕ ಚಿತ್ರವೊಂದರಲ್ಲಿ ಅವರು ಬಣ್ಣ ಹಚ್ಚಲಿದ್ದಾರೆ. 500 ವರ್ಷಗಳ ಹಿಂದಿನ ಕಥೆಗೆ ಪುನೀತ್ ರುದ್ರನಾಗ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಪುನೀತ್ ರುದ್ರನಾಗ್ ಈಗಾಗಲೇ ನಟನಾಗಿ ಗುರುತಿಸಿಕೊಂಡಿದ್ದಾರೆ. 'ಕೆಜಿಫ್ ಚಾಪ್ಟರ್ 1', 'ಎಕ್ಕ', 'ವೀರ ಚಂದ್ರಹಾಸ' ಮುಂತಾದ ಸಿನಿಮಾಗಳಲ್ಲಿ ನಟಿಸಿದ್ದಾರೆ. ಶ್ರೀಮುರುಳಿ ಸ್ನೇಹಿತನಾಗಿರುವ ಪುನೀತ್‌ಗಿದು ನಿರ್ದೇಶಕನಾಗಿ ಚೊಚ್ಚಲ ಸಿನಿಮಾ. ಸುರಮ್ ಮೂವೀಸ್ ಮೂಲಕ ಜಯರಾಮ್ ದೇವಸಮುದ್ರ ಬೃಹತ್ ಬಜೆಟ್‌ನಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

'ಐತಿಹಾಸಿಕ ಕಥೆ ಹೊಂದಿರುವ ಸಾಹಸಮಯ ಚಿತ್ರ. ಇತಿಹಾಸದ ಗತವೈಭವ ಸಾರುವ ಕಥೆ. ಈಗಾಗಲೇ ಈ ಕಥೆಯ ವಿಚಾರವಾಗಿ ಬಹಳಷ್ಟು ಕೆಲಸಗಳು ನಡೆಯುತ್ತಿದ್ದು, ಚಿತ್ರ ಪ್ರೀಪ್ರೊಡಕ್ಷನ್ ಹಂತದಲ್ಲಿದೆ. ಹಲವು ಕಾಲಘಟ್ಟಗಳಲ್ಲಿ ಕಥೆ ಸಾಗಲಿದೆ. ನವೆಂಬರ್‌ನಲ್ಲಿ ಚಿತ್ರ ಸೆಟ್ಟೇರುವ ನಿರೀಕ್ಷೆಯಿದೆ' ಎಂದು ನಿರ್ದೇಶಕ ತಿಳಿಸಿದ್ದಾರೆ.

ಮೈಸೂರಿನ ಸಂಕೇತ್ ಈ ಚಿತ್ರಕ್ಕೆ ಛಾಯಾಚಿತ್ರಗ್ರಾಹಕರಾಗಿ ಕೆಲಸ ಮಾಡಲಿದ್ದು, ವಿಜಯ್ ರಾಜ್ ಸಂಕಲನ, ಅಮರ್ ಕಲಾ ನಿರ್ದೇಶನವಿದೆ. ಸಂಗೀತ ನಿರ್ದೇಶಕರು ಇನ್ನಷ್ಟೇ ಆಯ್ಕೆಯಾಗಬೇಕಿದೆ ಎಂದಿದೆ ಚಿತ್ರತಂಡ.

'ಪ್ರೇಮಿ' ಚಿತ್ರೀಕರಣ ಪೂರ್ಣ


ಅದ್ವಿಕ್, ಸಾತ್ವಿಕ

ಪ್ರದೀಪ್ ವರ್ಮಾ ನಿರ್ದೇಶನದ 'ಪ್ರೇಮಿ' ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಅನಾವರಣಗೊಂಡಿದೆ. ಇದು ವರ್ಮಾ ನಿರ್ದೇಶನದ ಮೂರನೇ ಚಿತ್ರ.

'ಕನ್ನಡದಲ್ಲಿ ಪ್ರೇಮ ಕಥೆಯುಳ್ಳ ಚಿತ್ರಗಳು ಸಾಕಷ್ಟು ಬಂದಿವೆ. ಆದರೆ, ಜ್ಯೋತಿಷ್ಯದ ಮೂಲಕ ಪ್ರೀತಿಯನ್ನು ಹುಡುಕುವ ವಿಭಿನ್ನ ಪ್ರೇಮ ಕಥಾಹಂದರ ಹೊಂದಿರುವ ಚಿತ್ರವಿದು. ಈಗಾಗಲೇ ಚಿತ್ರೀಕರಣ ಮುಕ್ತಾಯವಾಗಿದ್ದು, ಮಾತಿನ ಜೋಡಣೆ ನಡೆಯುತ್ತಿದೆ. ದಾವಣಗೆರೆ, ದೇವರಬೆಳಕೆರೆ, ಗೋಕರ್ಣ, ಕನಕಪುರ, ಚಿಕ್ಕಮಗಳೂರು ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆದಿದೆ' ಎಂದು ಮಾಹಿತಿ ನೀಡಿದರು ನಿರ್ದೇಶಕ.

ಐದು ಹಾಡುಗಳಿರುವ ಈ ಚಿತ್ರಕ್ಕೆ ಪ್ರದೀಪ್ ವರ್ಮ ಅವರೆ ಸಂಗೀತ ಸಂಯೋಜನೆಯನ್ನೂ ಮಾಡಿದ್ದಾರೆ. ಗೌತಮ್ ಮಟ್ಟಿ ಛಾಯಾಚಿತ್ರಗ್ರಹಣ, ಸಂಜೀವ್ ರೆಡ್ಡಿ ಸಂಕಲನವಿದೆ.

ನಾಯಕನಾಗಿ ಅದ್ವಿಕ್ ನಟಿಸಿದ್ದಾರೆ. ಸಾತ್ವಿಕ, ಶೋಭಿತ, ಎಸ್ ಪ್ರದೀಪ್ ವರ್ಮ, ಹರೀಶ್ ಉಕ್ಕಡಗಾತ್ರಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಪಿಬಿಜಿ ಪಾಲಾದ ಗುಕೇಶ್, ಅರ್ಜುನ್

ಮುಂಬೈ (ಪಿಟಿಐ): ಭಾರತದ ಅಗ್ರ ಗ್ರ್ಯಾಂಡ್‌ಮಾಸ್ಟರ್‌ಗಳಾದ ಡಿ.ಗುಕೇಶ್ ಮತ್ತು ಅರ್ಜುನ್ ಇರಿಗೇಶಿ ಅವರು ಮುಂಬರುವ ಗ್ಲೋಬಲ್ ಚೆಸ್ ಲೀಗ್‌ನಲ್ಲಿ ಪಿಬಿಜಿ ಅಲಾಸ್ಕನ್ ನೈಟ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ. ಮೂರನೇ ಆವೃತ್ತಿಗೆ ಆಟಗಾರರನ್ನು ವಿವಿಧ ಫ್ರಾಂಚೈಸಿಗಳು ಸೆಳೆದುಕೊಂಡವು.

ಟೆಕ್ ಮಹೀಂದ್ರ ಮತ್ತು ಫಿಡೆ ಸೇರಿಕೊಂಡು ಗ್ಲೋಬಲ್ ಚೆಸ್ ಲೀಗ್ (ಜಿಸಿಎಲ್) ನಡೆಸುತ್ತಿವೆ. ಡಿಸೆಂಬರ್ 13 ರಿಂದ 24ರವರೆಗೆ ನಡೆಯಲಿರುವ ಲೀಗ್‌ನಲ್ಲಿ ಆರು ತಂಡಗಳು ಭಾಗವಹಿಸುತ್ತಿವೆ.

ಐಕಾನ್ ಸುತ್ತಿನಲ್ಲಿ ಅಲ್ಪೈನ್ ಎಸ್‌ಜಿ ಪೈಪರ್ಸ್ ತಂಡ, ಅಮೆರಿಕದ ಜಿಎಂ ಫ್ಯಾಬಿಯಾನೊ ಕರುವಾನ ಅವರನ್ನು ಪಡೆಯಿತು. ಅನಿಶ್ ಗಿರಿ ಅವರನ್ನು ತಂಡ ಉಳಿಸಿಕೊಂಡಿತು.

ಅಲಾಸ್ಕನ್ ನೈಟ್ಸ್, ಇತರ ಫ್ರಾಂಚೈಸಿಗಳನ್ನು ಹಿಮ್ಮೆಟ್ಟಿಸಿ ಗುಕೇಶ್ ಅವರನ್ನು ಪಡೆಯುವಲ್ಲಿ ಯಶಸ್ವಿ ಆಯಿತು.

ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಗ್ಯಾಂಜೆಸ್ ಗ್ರ್ಯಾಂಡ್‌ಮಾಸ್ಟರ್ಸ್ ತಂಡದಲ್ಲಿ ಮುಂದುವರಿಯಲಿದ್ದಾರೆ. 20 ವರ್ಷ ವಯಸ್ಸಿನ ವಿನ್ಸೆಂಟ್ ಕೀಮರ್ ಸಹ ಇದೇ ತಂಡದ ಪಾಲಾದರು.


ಗುಕೇಶ್

ಇರಿಗೇಶಿ ಅವರನ್ನು ಪಡೆಯಲು ಮೂರು ತಂಡಗಳು ಪೈಪೋಟಿಯಲ್ಲಿದ್ದು, ಅಂತಿಮವಾಗಿ ಪಿಬಿಜಿ ಅಲಾಸ್ಕ್ ನೈಟ್ಸ್ ತಂಡದ ಪಾಲಾದರು.

ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ವೆಸ್ಲಿ ಸೊ ಅವರಿಗೂ ಬೇಡಿಕೆಯಿದ್ದು, ಅಪ್‌ಗ್ರಾಡ್ ಮುಂಬಾ ಮಾಸ್ಟರ್ಸ್ ಅವರನ್ನು ಸೇರ್ಪಡೆ ಮಾಡಿಕೊಂಡಿತು.

ಅಲ್ಪೈನ್ ಎಸ್‌ಜಿ ತಂಡ ಹೌ ಇಫಾನ್ ಮತ್ತು ಪ್ರಜ್ಞಾನಂದ ಅವರನ್ನು ರೀಟೇನ್ ಮಾಡಿಕೊಂಡಿತು. ಅಮೆರಿಕನ್ ಗ್ಯಾಂಬಿಟ್ಸ್ ತಂಡವು ಹಿಕಾರು ನಕಾಮುರ ಮತ್ತು ಬಿಬಿಸಾರಾ ಅಸೌಬಯೇವಾ ಅವರನ್ನು ತನ್ನ ಪಾಲು ಮಾಡಿಕೊಂಡಿತು.

ಪ್ರತಿ ತಂಡದಲ್ಲಿ ಒಬ್ಬ ಐಕಾನ್ ಆಟಗಾರ, ಒಬ್ಬ ಆಟಗಾರ್ತಿ, ಒಬ್ಬ ಆಟಗಾರ, 21 ವರ್ಷದೊಳಗಿನ ಒಬ್ಬ ಆಟಗಾರರಿರುವುದು ಕಡ್ಡಾಯ.

ಮುಂಬಾ ಮಾಸ್ಟರ್ಸ್ ತಂಡವು ಜಿಎಂ ಕೋನೇರು ಹಂಪಿ, ದ್ರೋಣವಲ್ಲಿ ಹಾರಿಕಾ, ಮ್ಯಾಕ್ಸಿಮ್ ವೇಷಿಯರ್ ಲಗ್ರಾವ್ ಅವರನ್ನು ಉಳಿಸಿಕೊಂಡಿದೆ.

ವಿಶ್ವದ ಶ್ರೇಷ್ಠ ಅಥ್ಲೀಟುಗಳು ಕಣಕ್ಕೆ

ನವದೆಹಲಿಯಲ್ಲಿ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಇಂದಿನಿಂದ

ನವದೆಹಲಿ (ಪಿಟಿಐ): ವಿಶ್ವದ ಶ್ರೇಷ್ಠ ಪ್ಯಾರಾ ಅಥ್ಲೀಟುಗಳು, ಶನಿವಾರ ಇಲ್ಲಿ ಆರಂಭವಾಗುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. ಬತ್ತದ ಸ್ಫೂರ್ತಿ, ಉತ್ಸಾಹ ಮತ್ತು ಸಂಕಲ್ಪಶಕ್ತಿ ಪ್ರದರ್ಶಿಸಲು ಸಜ್ಜಾಗಿದ್ದಾರೆ.

ಪ್ಯಾರಾ ಅಥ್ಲೆಟಿಕ್ಸ್ ಸೇರಿದಂತೆ ಪ್ಯಾರಾ ಕ್ರೀಡೆಗಳಲ್ಲಿ ಪ್ರಬಲ ಶಕ್ತಿಯಾಗುತ್ತಿರುವ ಭಾರತವು 12ನೇ ಆವೃತ್ತಿಯ ಈ ಕೂಟವನ್ನು ದೊಡ್ಡ ಪ್ರಮಾಣದಲ್ಲಿ ನಡೆಸುತ್ತಿದೆ. ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ವಿಶ್ವ ದರ್ಜೆಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. 27 ರಂದು ಆರಂಭವಾಗುವ ಈ ಚಾಂಪಿಯನ್‌ಷಿಪ್ ಅಕ್ಟೋಬರ್ 5ರವರೆಗೆ ನಡೆಯಲಿದೆ.

104 ದೇಶಗಳ 2,200 ಅಥ್ಲೀಟುಗಳು, ತರಬೇತುದಾರರು ಮತ್ತು 104 ಅಧಿಕಾರಿಗಳು ಒಂಬತ್ತು ದಿನಗಳ ಈ ಕೂಟದಲ್ಲಿ ಭಾಗಿಯಾಗಲಿದ್ದಾರೆ. ಈ ಹಿಂದೆ ಏಷ್ಯಾದಲ್ಲಿ ಕತಾರ್ (2015), ಯುಎಇ (2019) ಮತ್ತು ಜಪಾನ್ (2024) ಈ ಕೂಟದ ಆತಿಥ್ಯ ವಹಿಸಿವೆ.

1500 ಅಥ್ಲೀಟುಗಳು 186 ಪದಕ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ.

ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಒಟ್ಟು 308 ಪದಕಗಳನ್ನು (112 ಚಿನ್ನ, 96 ಬೆಳ್ಳಿ, 100 ಕಂಚು) ಗೆದ್ದ ಅಥ್ಲೀಟುಗಳು ಇಲ್ಲಿ ಕಣಕ್ಕಿಳಿಯುವುದರಿಂದ ಈ ಕೂಟದ ಗುಣಮಟ್ಟ ಹೆಚ್ಚಲಿದೆ.

ಪುರುಷರಿಗೆ 101 ಸ್ಪರ್ಧೆಗಳು, ಮಹಿಳೆಯರಿಗೆ 84 ಸ್ಪರ್ಧೆಗಳು ನಡೆಯಲಿವೆ. ಒಂದು ಮಿಶ್ರ ವಿಭಾಗದ ಸ್ಪರ್ಧೆ ಇದೆ.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಅಧ್ಯಕ್ಷ ಪಾಲ್ ಫಿಟ್ಜೆರಾಲ್ಡ್ ಅವರು ಇಲ್ಲಿ ವಿಶ್ವದರ್ಜೆಯ ಸೌಲಭ್ಯಗಳನ್ನು ವ್ಯವಸ್ಥೆ ಮಾಡಿದ್ದಕ್ಕೆ ಭಾರತವನ್ನು ಶ್ಲಾಘಿಸಿದರು.

ವಾರ್ಮ್‌ಅಪ್ ಪ್ರದೇಶಕ್ಕೂ ಎಲ್‌ಇಡಿ ಹೊನಲು ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಉತ್ಕೃಷ್ಟ ದರ್ಜೆಯ ಫಿಟ್ನೆಸ್ ಸೆಂಟರ್ ಸಹ ನಿರ್ಮಾಣವಾಗಿದೆ.

ಅಗ್ರ 5ರ ಗುರಿ: ಭಾರತ ಈ ಕೂಟದಲ್ಲಿ 74 ಅಥ್ಲೀಟುಗಳನ್ನು ಕಣಕ್ಕಿಳಿಸಿದೆ. ಇದು ಈವರೆಗಿನ ಅತಿ ದೊಡ್ಡ ತಂಡ. 20ಕ್ಕೂ ಅಧಿಕ ಪದಕಗಳನ್ನು ಗೆಲ್ಲುವ ವಿಶ್ವಾಸ ಭಾರತ ಪ್ಯಾರಾಲಿಂಪಿಕ್ಸ್ ಸಮಿತಿಗಿದೆ.



ಭಾರತದ ಪ್ಯಾರಾ ಅಥ್ಲೀಟ್ ದೀಪ್ತಿ ಜಿವಾಂಜಿ

ಪದಕ ಪಟ್ಟಿಯಲ್ಲಿ ಭಾರತ ಐದರೊಳಗೆ ಸ್ಥಾನ ಪಡೆಯುವ ಗುರಿ ಹೊಂದಿದೆ.

2019ರಲ್ಲಿ ದುಬೈನಲ್ಲಿ ಭಾರತ 9 (2ಚಿನ್ನ, 2ಬೆಳ್ಳಿ, 5ಕಂಚು) ಪದಕ, 2023ರಲ್ಲಿ ಪ್ಯಾರಿಸ್‌ನಲ್ಲಿ 10 (3 ಚಿನ್ನ, 4 ಬೆಳ್ಳಿ, 3 ಕಂಚು), 2024ರಲ್ಲಿ ಕೋಬೆಯಲ್ಲಿ 17 ಪದಕ (6 ಚಿನ್ನ, 5 ಬೆಳ್ಳಿ, 6 ಕಂಚು) ಗೆದ್ದುಕೊಂಡಿತ್ತು. ಕೋಬೆ (ಜಪಾನ್) ಕೂಟದಲ್ಲಿ ಭಾರತ ಆರನೇ ಸ್ಥಾನ ಗಳಿಸಿತ್ತು.

ದೀಪ್ತಿ ಜಿವಾಂಜಿ (ಮಹಿಳೆಯರ 400 ಮೀ. ಟಿ20), ಸಚಿನ್ ಖಿಲಾರಿ (ಪುರುಷರ ಷಾಟ್‌ಪಟ್ ಎಫ್46), ಸುಮಿತ್, ಏಕ್ತಾ ಭಯಾನ್ (ಮಹಿಳೆಯರ ಕ್ಲಬ್ ಥ್ರೊ ಎಫ್51), ಸಿಮ್ರಾನ್ ಶರ್ಮಾ (ಮಹಿಳೆಯರ 200 ಮೀ, ಟಿ12) ಚಿನ್ನ ಉಳಿಸಿಕೊಳ್ಳುವ ವಿಶ್ವಾಸದಲ್ಲಿದ್ದಾರೆ.

24x7 ತ್ರಿವಳಿ ತಜ್ಞ ವೈದ್ಯರ ಲಭ್ಯತೆ

ಒಂದನೇ ಪುಟದಿಂದ...

ಹೊಸದಾಗಿ 223 ವೈದ್ಯರ ನೇಮಕದ ಜತೆಗೆ, 114 ರೇಡಿಯಾಲಾಜಿಸ್ಟ್ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲಾಗುವುದು. ಪ್ರತಿ ತಾಲ್ಲೂಕು ಆಸ್ಪತ್ರೆಗಳ ಪ್ರಸೂತಿ ವಿಭಾಗಕ್ಕೆ ಹೆಚ್ಚುವರಿಯಾಗಿ ನರ್ಸಿಂಗ್ ಸಿಬ್ಬಂದಿಯನ್ನು ನೀಡಲಾಗುವುದು. ತಾಲ್ಲೂಕು ಆಸ್ಪತ್ರೆಗಳಲ್ಲಿ ವೈದ್ಯ ಸಿಬ್ಬಂದಿಯನ್ನು ಹೆಚ್ಚಿಸುವುದರಿಂದ ಜಿಲ್ಲಾ ಆಸ್ಪತ್ರೆಗಳ ಮೇಲಿನ ಹೊರೆಯೂ ತಗ್ಗಲಿದೆ ಎಂದು ಅವರು ವಿವರಿಸಿದರು.

ತಜ್ಞರ ಹಂಚಿಕೆ	ತಜ್ಞರ ವಿಧ		
	ಸ್ತ್ರೀರೋಗ	ಅರಿವಳಿಕೆ	ಮಕ್ಕಳು
ಜಿಲ್ಲಾ ಆಸ್ಪತ್ರೆ	4	4	2
ತಾಲ್ಲೂಕು ಆಸ್ಪತ್ರೆ	2	2	2

- ಹೆಚ್ಚುವರಿ ಹೆರಿಗೆ ಪ್ರಕರಣಗಳ ಪ್ರತಿ 100 ಕ್ಕೆ ತಜ್ಞರ ಸಂಖ್ಯೆ ಹೆಚ್ಚಿಸಲಾಗುವುದು


ಏನೆಲ್ಲ ಬದಲಾವಣೆ ಆಗಲಿದೆ:

- ಎಲ್ಲಾ ತಾಲ್ಲೂಕು ಆಸ್ಪತ್ರೆಗಳು ಸಿಇಎಂಒಎನ್‌ಸಿ ಆಸ್ಪತ್ರೆಗಳಾಗಿ (ಕ್ಲಿಷ್ಟಕರ ಹೆರಿಗೆ ಮತ್ತು ಸಿಸೇರಿಯನ್ ಶಸ್ತ್ರ ಚಿಕಿತ್ಸೆ ನಡೆಸುವ ಆಸ್ಪತ್ರೆ) ಕಾರ್ಯ ನಿರ್ವಹಿಸಲಿವೆ.
- ತಿಂಗಳಿಗೆ ಸರಾಸರಿ 30 ಅಥವಾ ಅದಕ್ಕಿಂತ ಹೆಚ್ಚಿನ ಹೆರಿಗೆ ಹೊರೆ ಹೊಂದಿರುವ 41 ಸಮುದಾಯ ಆರೋಗ್ಯ ಕೇಂದ್ರಗಳನ್ನು ತ್ರಿವಳಿ ತಜ್ಞರ ಸೇವೆಗಳಾಗಿ ಉಳಿಸಿಕೊಳ್ಳಲಾಗುವುದು
- 230ಕ್ಕೂ ಕಡಿಮೆ ಕಾರ್ಯ ನಿರ್ವಹಿಸುವ ಸಮುದಾಯ ಆರೋಗ್ಯ ಕೇಂದ್ರಗಳಿಂದ ತಜ್ಞರನ್ನು ತಾಲ್ಲೂಕು ಆಸ್ಪತ್ರೆಗೆ ಮರು ನಿಯೋಜಿಸಲಾಗುವುದು
- ಮಲೆ ಮಹದೇಶ್ವರ ಬೆಟ್ಟ, ಸಂತೆಮರಹಳ್ಳಿ, ತಲಕಾಡು, ಬನ್ನೂರು ಮುಂತಾದ ದೂರದ ಪ್ರದೇಶಗಳ ಸಿಎಚ್‌ಸಿಗಳನ್ನು ತಜ್ಞರೊಂದಿಗೆ ಉಳಿಸಿಕೊಳ್ಳಲಾಗುವುದು
- ಮರು ನಿಯೋಜನೆಯಾದ ಸ್ಥಳಗಳಲ್ಲಿ ಸಿಬ್ಬಂದಿ ವೈದ್ಯಾಧಿಕಾರಿಗಳು, ಹಿರಿಯ ವೈದ್ಯಾಧಿಕಾರಿಗಳು, ದಂತ ವೈದ್ಯರು ಮತ್ತು ಸಿಬ್ಬಂದಿ ನರ್ಸ್‌ಗಳನ್ನು ಹೆಚ್ಚಿಸಲಾಗುವುದು

ಬಲವರ್ಧನೆ ಕ್ರಮಗಳೇನು?:

- ಕಡಿಮೆ ಕಾರ್ಯ ನಿರ್ವಹಿಸುವ 24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಶುಶ್ರೂಷಾಧಿಕಾರಿ ಮರು ನಿಯೋಜಿಸಿ 189 ಸಿಇಎಂಒಎನ್‌ಸಿ ಆಸ್ಪತ್ರೆಗಳನ್ನು ಬಲಪಡಿಸಲಾಗುವುದು.
- ಪ್ರತಿ ಸಿಇಎಂಒಎನ್‌ಸಿ ಆಸ್ಪತ್ರೆಯಲ್ಲಿ 3 ಹೆಚ್ಚುವರಿ ನರ್ಸ್‌ಗಳ ನಿಯೋಜನೆ.
- ಗರ್ಭಿಣಿಯರಿಗೆ ಜನಜಾಗೃತಿ ತರಬೇತಿ–ಸಾಮಾನ್ಯ/ಸಿಸೇರಿಯನ್ ಹೆರಿಗೆಗಳ ಮಾಹಿತಿ ಮತ್ತು ಪೋಷಣೆ, ರೋಗ ನಿರೋಧಕ ಮತ್ತು ರಕ್ತಹೀನತೆ ತಡೆಗಟ್ಟುವ ಚುಚ್ಚುಮದ್ದು ನೀಡಲಾಗುವುದು. ಕುಟುಂಬ ಕಲ್ಯಾಣಗಳ ಅರಿವು ಮೂಡಿಸಲಾಗುವುದು.

ಅರುಣ್ ಮಾಚಯ್ಯ ನೇಮಕ



ಬೆಂಗಳೂರು: ಅಂತರ ರಾಷ್ಟ್ರೀಯ ಕರಾಟೆಪಟು ಸಿ.ಎಸ್. ಅರುಣ್ ಮಾಚಯ್ಯ ಅವರು ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ.

ಭಾರತ ವಿರುದ್ಧ ಸರಣಿಗೆ ಶಮರ್ ಜೋಸೆಫ್ ಅಲಭ್ಯ

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್‌ನ ಪ್ರಮುಖ ವೇಗಿ ಶಮರ್ ಜೋಸೆಫ್ ಗಾಯಾಳಾಗಿರುವ ಕಾರಣ ಭಾರತ ವಿರುದ್ಧ ಎರಡು ಟೆಸ್ಟ್‌ಗಳ ಸರಣಿಗೆ ಅಲಭ್ಯರಾಗಿದ್ದಾರೆ. ಸರಣಿಯ ಮೊದಲ ಪಂದ್ಯ ಅಹಮದಾಬಾದಿನಲ್ಲಿ ಅಕ್ಟೋಬರ್ 2ರಂದು ಆರಂಭವಾಗಲಿದೆ.

26 ವರ್ಷ ವಯಸ್ಸಿನ ಶಮರ್ ಜೋಸೆಫ್ ಅವರಿಗಾದ ಗಾಯವೇನೆಂಬುದನ್ನು ಕ್ರಿಕೆಟ್ ವೆಸ್ಟ್ ಇಂಡೀಸ್ ನಿರ್ದಿಷ್ಟಪಡಿಸಿಲ್ಲ. ಗಯಾನಾದ ಬೌಲರ್‌ನ ಅಲಭ್ಯತೆ ತಂಡಕ್ಕೆ ಹಿನ್ನಡೆಯಾಗುವ ಸಾಧ್ಯತೆಯಿದೆ. 11 ಟೆಸ್ಟ್ ಪಂದ್ಯಗಳನ್ನು ಆಡಿರುವ ಅವರು ಕೇವಲ 21.66 ಸರಾಸರಿಯಲ್ಲಿ 51 ವಿಕೆಟ್‌ಗಳನ್ನು ಪಡೆದಿದ್ದಾರೆ.

ಶಮರ್ ಬದಲು ಜೊಹಾನ್ ಲೇಯ್ನ್ ಅವರನ್ನು ತಂಡಕ್ಕೆ ಸೇರ್ಪಡೆಗೊಳಿಸಲಾಗಿದೆ. ಬಾರ್ಬಡೋಸ್‌ನ 22 ವರ್ಷ ವಯಸ್ಸಿನ ವೇಗದ ಬೌಲಿಂಗ್ ಆಲ್‌ರೌಂಡರ್ ಆಗಿರುವ ಜೊಹಾನ್ ಅವರು ಮೊದಲ ಬಾರಿ ತಂಡಕ್ಕೆ ಆಯ್ಕೆಯಾಗಿದ್ದಾರೆ ಎಂದು ವೆಸ್ಟ್ ಇಂಡೀಸ್ ಕ್ರಿಕೆಟ್ ತಿಳಿಸಿದೆ.

ಚೊಚ್ಚಲ ಬಿಎಫ್‌ಐ ಕಪ್ ಅ.1ರಿಂದ

ನವದೆಹಲಿ (ಪಿಟಿಐ): ಭಾರತ ಬಾಕ್ಸಿಂಗ್ ಸಂಸ್ಥೆಯು (ಬಿಎಫ್‌ಐ) ಅಕ್ಟೋಬರ್ 1ರಿಂದ 7ರ ವರೆಗೆ ಚೊಚ್ಚಲ ಬಿಎಫ್‌ಐ ಕಪ್ ಟೂರ್ನಿಯನ್ನು ಚೆನ್ನೈನಲ್ಲಿ ಆಯೋಜಿಸುತ್ತಿದೆ.

ಚಿನ್ನ ಹಾಗೂ ಬೆಳ್ಳಿ ಪದಕ ಗೆದ್ದ ಸ್ಪರ್ಧಿಗಳನ್ನು ರಾಷ್ಟ್ರೀಯ ತರಬೇತಿ ಶಿಬಿರಗಳಿಗೆ ಆಯ್ಕೆ ಮಾಡಲಾಗುತ್ತದೆ.

ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್: ವೆಂಕಟೇಶ್, ಬಜಾಜ್‌ಗೆ ತಲಾ ಎರಡು ವಿಕೆಟ್

ಮಂತ್ರಿ, ಶುಭಂ ಚೆಂದದ ಅರ್ಧಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಮಾಂಶು ಮಂತ್ರಿ ಮತ್ತು ಶುಭಂ ಶರ್ಮಾ ಅವರ ಅರ್ಧಶತಕಗಳ ಬಲದಿಂದ ಮಧ್ಯಪ್ರದೇಶ ತಂಡವು ಶುಕ್ರವಾರ ಆರಂಭವಾದ ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮೊದಲ ದಿನದಾಟದಲ್ಲಿ ಉತ್ತಮ ಮೊತ್ತ ಗಳಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕರ್ನಾಟಕ ಕಾರ್ಯದರ್ಶಿ ಇಲೆವನ್ ತಂಡದ ಎದುರು ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಮಧ್ಯಪ್ರದೇಶ ತಂಡವು 86.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 287 ರನ್ ಗಳಿಸಿತು. ವೆಂಕಟೇಶ್ ಅಯ್ಯರ್ (ಬ್ಯಾಟಿಂಗ್ 22) ಕ್ರೀಸ್‌ನಲ್ಲಿದ್ದಾರೆ.

ಹರ್ಷ ಗವಳಿ (17 ರನ್) ಮತ್ತು ಯಶ್ ದುಬೆ (34 ರನ್) ಮೊದಲ ವಿಕೆಟ್ ಜೊತೆಯಾಟದಲ್ಲಿ 51 (111ಎಸೆತ) ಸೇರಿಸಿ ಉತ್ತಮ ಆರಂಭ ನೀಡಿದರು.

ಕರ್ನಾಟಕ ಕಾರ್ಯದರ್ಶಿ ತಂಡದ ವೇಗಿ ಎಂ. ವೆಂಕಟೇಶ್ (42ಕ್ಕೆ2) ಅವರು ಮಧ್ಯಪ್ರದೇಶ ತಂಡಕ್ಕೆ ಮೊದಲ ಆಘಾತ ನೀಡಿದರು. ಯಶ್ ದುಬೆ ವಿಕೆಟ್ ಪಡೆದು ಜೊತೆಯಾಟ ಮುರಿದರು. 22ನೇ ಓವರ್‌ನಲ್ಲಿ ಹರ್ಷ ಗವಳಿ ಅವರ ವಿಕೆಟ್ ಗಳಿಸಿದ ಮಾಧವ್ ಬಜಾಜ್ ಆತಿಥೇಯ ತಂಡದಲ್ಲಿ ಹುರುಪು ಮೂಡಿಸಿದರು. ಆದರೆ ಈ ಹಂತದಲ್ಲಿ ಜೊತೆಯಾದ ಮಂತ್ರಿ ಮತ್ತು ನಾಯಕ ಶುಭಂ ಅವರು ಅಮೋಘ ಜೊತೆಯಾಟ ಬೆಳೆಸಿದರು.


ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ ವಿರುದ್ಧ ಮಧ್ಯಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ತಂಡದ ಹಿಮಾಂಶು ಮಂತ್ರಿ ಅರ್ಧಶತಕ ಗಳಿಸಿದರು
ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಮಂತ್ರಿ (83; 110ಎ, 4X10) ಹಾಗೂ ಶುಭಂ (66; 177ಎ,4X5, 6X1) ಅವರು ಮೂರನೇ ವಿಕೆಟ್ ಜತೆಯಾಟದಲ್ಲಿ 122 ರನ್ ಸೇರಿಸಿದರು. ಸಂಜೆಯವರೆಗೂ ಬೌಲರ್‌ಗಳನ್ನು ಕಾಡಿದರು. 57ನೇ ಓವರ್‌ನಲ್ಲಿ ವೆಂಕಟೇಶ್ ಎಸೆತದಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದ ಮಂತ್ರಿ ನಿರ್ಗಮಿಸಿದರು. ಇದರೊಂದಿಗೆ ಜೊತೆಯಾಟ ಮುರಿಯಿತು.

ಶುಭಂ ಅವರೊಂದಿಗೆ ಸೇರಿದ ರಿಷಭ್ ಚೌಹಾಣ್ (34 ರನ್) ಜೊತೆಯಾಟದಲ್ಲಿ 61 ರನ್ ಸೇರಿಸಿದರು. ಅಭಿಷೇಕ್ ಅಹ್ಲಾವತ್ ಅವರ ಬೌಲಿಂಗ್‌ನಲ್ಲಿ ಶುಭಂ ಔಟಾದರು. ಇದರೊಂದಿಗೆ ಜೊತೆಯಾಟಕ್ಕೆ ತೆರೆಬಿತ್ತು. ರಿಷಭ್ ಕೂಡ ಸ್ವಲ್ಪ ಹೊತ್ತಿನ ನಂತರ ಬಜಾಜ್ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ ಕ್ರಿಕೆಟ್ ಸಂಸ್ಥೆ: 86.5 ಓವರ್‌ಗಳಲ್ಲಿ 6ಕ್ಕೆ287 (ಯಶ್ ದುಬೆ 34, ಹಿಮಾಂಶು ಮಂತ್ರಿ 83, ಶುಭಂ ಶರ್ಮಾ 66, ರಿಷಬ್ ಚೌಹಾಣ್ 34, ವೆಂಕಟೇಶ್ ಅಯ್ಯರ್ ಬ್ಯಾಟಿಂಗ್ 22, ಅರ್ಷದ್ ಖಾನ್ 24, ಎಂ. ವೆಂಕಟೇಶ್ 42ಕ್ಕೆ2, ಮಾಧವ್ ಪಿ ಬಜಾಜ್ 103ಕ್ಕೆ2) ವಿರುದ್ಧ ಕರ್ನಾಟಕ ಕಾರ್ಯದರ್ಶಿ ಇಲೆವನ್.

ಮಕ್ಕಳ ಕಾಡುತ್ತಿದೆ ಹೃದ್ರೋಗ

ಒಂದನೇ ಪುಟದಿಂದ...

ಗರ್ಭದಲ್ಲಿ ಮಗುವಿನ ಹೃದಯವು ಸರಿಯಾಗಿ ಬೆಳವಣಿಗೆ ಹೊಂದದಿರುವುದರಿಂದ ಉಂಟಾಗುವ ಹುಟ್ಟಿನ ದೋಷ ಇದಾಗಿದೆ. ಈ ಸಮಸ್ಯೆಯು ಹೃದಯದ ಕವಾಟಗಳು, ಕೋಣೆಗಳು ಅಥವಾ ರಕ್ತನಾಳಗಳಲ್ಲಿ ಬದಲಾವಣೆಗಳನ್ನು ಉಂಟುಮಾಡಿ, ರಕ್ತದ ಹರಿವು ಮತ್ತು ಹೃದಯದ ಕಾರ್ಯಚಟುವಟಿಕೆಗೆ ಅಡ್ಡಿಯಾಗುತ್ತದೆ. ಆರಂಭಿಕ ಹಂತದಲ್ಲಿಯೇ ಸಮಸ್ಯೆ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭ ಸಾಧ್ಯ. ಇಲ್ಲವಾದಲ್ಲಿ ಹೃದಯ ಶಸ್ತ್ರಚಿಕಿತ್ಸೆ ಅನಿವಾರ್ಯವಾಗುತ್ತದೆ. ಆದ್ದರಿಂದಲೇ ಆರ್‌ಬಿಎಸ್‌ಕೆ ಕಾರ್ಯಕ್ರಮದಡಿ ಅಂಗನವಾಡಿ ಹಾಗೂ ಶಾಲಾ ಹಂತದಲ್ಲಿಯೇ ತಪಾಸಣೆ ನಡೆಸಿ, ಚಿಕಿತ್ಸೆ ಒದಗಿಸಲಾಗುತ್ತಿದೆ.

ಈ ಕಾರ್ಯಕ್ರಮದಡಿ 18 ವರ್ಷದೊಳಗಿನವರಿಗೆ ತಪಾಸಣೆ ನಡೆಸಲಾಗುತ್ತಿದೆ. ಹುಟ್ಟಿನ ದೋಷಗಳು, ರೋಗಗಳು ಮತ್ತು ಬೆಳವಣಿಗೆ ಕುಂಠಿತವನ್ನು ಗುರುತಿಸುವುದು ಹಾಗೂ ಚಿಕಿತ್ಸೆ ಒದಗಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶ. 2024–25ನೇ ಸಾಲಿನಲ್ಲಿ 1.23 ಕೋಟಿ ಮಕ್ಕಳನ್ನು ಆರ್‌ಬಿಎಸ್‌ಕೆ ತಂಡ ತಪಾಸಣೆ ನಡೆಸಿದೆ. ಈ ಮಕ್ಕಳಿಗೆ ಹೃದಯ ತಪಾಸಣೆಯನ್ನೂ ನಡೆಸಿದ್ದು, ಜನ್ಮಜಾತ ಹೃದಯ ಕಾಯಿಲೆ ಪ್ರಕರಣ ಏರಿಕೆಯಾಗಿರುವುದು ದೃಢಪಟ್ಟಿದೆ. 2023–24ನೇ ಸಾಲಿನಲ್ಲಿ ನಡೆಸಲಾದ ಈ ತಪಾಸಣೆಯಲ್ಲಿ, 14,255 ಮಕ್ಕಳಲ್ಲಿ ಜನ್ಮಜಾತ ಹೃದಯ ಸಮಸ್ಯೆ ಖಚಿತಪಟ್ಟಿತ್ತು. 2022–23ರಲ್ಲಿ 13,491 ಮಕ್ಕಳಲ್ಲಿ ಈ ಕಾಯಿಲೆ ಪತ್ತೆಯಾಗಿತ್ತು.

ಚಿಕಿತ್ಸೆಗೆ ವ್ಯವಸ್ಥೆ: ಈ ಜನ್ಮಜಾತ ಹೃದಯ ಕಾಯಿಲೆ ಎದುರಿಸುತ್ತಿರುವ ಮಕ್ಕಳಿಗೆ ಚಿಕಿತ್ಸೆ ಒದಗಿಸದಿದ್ದಲ್ಲಿ ಜೀವಕ್ಕೆ ಅಪಾಯವಾಗಲಿದೆ. ಕೆಲ ಮಕ್ಕಳು ಹೃದಯ ರಂಧ್ರದೊಂದಿಗೆ ಜನಿಸಲಿದ್ದು, ಅಂತಹವರಿಗೆ ಶಸ್ತ್ರಚಿಕಿತ್ಸೆ ಅತ್ಯಗತ್ಯ. ಆದ್ದರಿಂದ ಕಾಯಿಲೆ ಎದುರಿಸುತ್ತಿರುವವರಿಗೆ ಕಾರ್ಯಕ್ರಮದಡಿ ಉಚಿತವಾಗಿ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಯನ್ನೂ ಒದಗಿಸಲಾಗುತ್ತಿದೆ. ಸುವರ್ಣ ಆರೋಗ್ಯ ಸುರಕ್ಷಾ ಅಡಿ ಖಾಸಗಿ ಆಸ್ಪತ್ರೆಗಳು ಸೇರಿ 254 ಆಸ್ಪತ್ರೆಗಳು ನೋಂದಣಿಯಾಗಿದ್ದು, ಸಮಸ್ಯೆಯ ತೀವ್ರತೆ ಅನುಸಾರ ಈ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗುತ್ತಿದೆ.

'ಜನ್ಮಜಾತ ಹೃದ್ರೋಗ ಕಾಯಿಲೆಗೆ ನಿರ್ದಿಷ್ಟ ಚಿಕಿತ್ಸೆಗಳಿವೆ. ಭ್ರೂಣದ ಹಂತದಲ್ಲಿಯೇ ಹೃದ್ರೋಗವನ್ನು ನಿರ್ದಿಷ್ಟವಾಗಿ ಪತ್ತೆ ಮಾಡಬಹುದಾದ ತಂತ್ರಜ್ಞಾನವೂ ಇದೆ. ಮಕ್ಕಳಲ್ಲಿ ಕಂಡುಬರುವ ಹೃದಯದ ಸಮಸ್ಯೆಗಳು ಹಿರಿಯರಲ್ಲಿನ ಹೃದ್ರೋಗಗಳಿಗಿಂತ ಸಂಪೂರ್ಣ ಭಿನ್ನ' ಎಂದು ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯರು ತಿಳಿಸಿದರು.

ಜೂನಿಯರ್ ಹಾಕಿ: ಆಸ್ಟ್ರೇಲಿಯಕ್ಕೆ ಮಣಿದ ಭಾರತ

ಕೆನ್‌ಬೆರಾ (ಪಿಟಿಐ): ಭಾರತ ಜೂನಿಯರ್ ಮಹಿಳಾ ತಂಡದವರು ಹಾಕಿ ಸರಣಿಯ ಮೊದಲ ಪಂದ್ಯದಲ್ಲಿ ಶುಕ್ರವಾರ 2–3 ಗೋಲುಗಳಿಂದ ಆಸ್ಟ್ರೇಲಿಯಾ 21 ವರ್ಷದೊಳಗಿನವರ ತಂಡಕ್ಕೆ ಮಣಿದರು.

ನ್ಯಾಷನಲ್ ಹಾಕಿ ಸೆಂಟರ್‌ನಲ್ಲಿ ನಡೆದ ಈ ಪಂದ್ಯದ ಎಲ್ಲ ಗೋಲುಗಳು ಮಧ್ಯಂತರದ ನಂತರ ಬಂದವು.

ಆಸ್ಟ್ರೇಲಿಯಾ ತಂಡದ ಪರ ಬಿಯಾಂಕಾ ಝುರೆರ್ (36ನೇ ನಿಮಿಷ), ಇವೀ ಸ್ಟ್ರಾನ್ಸ್‌ಬಿ (45ನೇ) ಮತ್ತು ಸ್ಯಾಮಿ ಲೋವ್ (59ನೇ ನಿಮಿಷ) ಗೋಲು ಗಳಿಸಿದರು. ಭಾರತ ತಂಡದ ಪರ ಲಾಲ್ತಂತ್‌ಲುವಾಂಗಿ (47ನೇ ನಿಮಿಷ) ಮತ್ತು ಸೋನಮ್ (54ನೇ ನಿಮಿಷ) ಗೋಲು ಗಳಿಸಿದರು.


ಬೆಂಗಳೂರು ಪಯನಿಯರ್ಸ್ ತಂಡವು ಮೈಸೂರಿನಲ್ಲಿ ನಡೆದ 'ಸಿ.ಎಂ. ಕಪ್' ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಕೊಕ್ಕೊ ಸ್ಪರ್ಧೆಯಲ್ಲಿ ಚಾಂಪಿಯನ್ ಆಯಿತು. (ನಿಂತವರು) ಎಡದಿಂದ; ಆಟಗಾರರಾದ ಡೈಮಂಡ್ ರಾಜು, ವಿಜಯ್, ಜೀವನ್ , ಶಶಿ ಕುಮಾರ್ (ನಾಯಕ) ಉಜ್ವಲ್, ಸುನಿಲ್ ಕುಮಾರ್. (ಮಂಡಿಯೂರಿದವರು) ಆನಂದ್, ಮೊನೇಶ್, ಜಶ್ವಂತ್, ಐಮಾನ್ , ಇಬ್ರಾಹಿಂ, ಪವನ್ ಕುಮಾರ್ ಚಿತ್ರದಲ್ಲಿದ್ದಾರೆ

ರಾಹುಲ್ ಶತಕ: ಎ ತಂಡಕ್ಕೆ ಜಯ

ಲಖನೌ (ಪಿಟಿಐ): ಕೆ.ಎಲ್.ರಾಹುಲ್ (ಅಜೇಯ 176) ಹಾಗೂ ಸಾಯಿ ಸುದರ್ಶನ್ (100) ಅವರ ಶತಕಗಳ ಬಲದಿಂದ ಭಾರತ ಎ ತಂಡವು ಎರಡನೇ 'ಟೆಸ್ಟ್' ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ಎ ತಂಡವನ್ನು ಸುಲಭವಾಗಿ ಮಣಿಸಿತು. ಅದರೊಂದಿಗೆ, ಎರಡು ಪಂದ್ಯಗಳ ಸರಣಿಯನ್ನು 1–0ಯಿಂದ ಜಯಿಸಿತು.

ಮೊದಲ ಇನಿಂಗ್ಸ್‌ನಲ್ಲಿ 226 ರನ್ ಹಿನ್ನಡೆ ಅನುಭವಿಸಿದ್ದ ಧ್ರುವ್ ಜುರೇಲ್ ಪಡೆಯು ರಾಹುಲ್ ಹಾಗೂ ಸುದರ್ಶನ್ ಅವರ ಬ್ಯಾಟಿಂಗ್ ಬಲದಿಂದ ಎರಡನೇ ಇನಿಂಗ್ಸ್‌ನಲ್ಲಿ ಪಾರಮ್ಯ ಮೆರೆಯಿತು. ಆಸ್ಟ್ರೇಲಿಯಾ ಎ ತಂಡ ನೀಡಿದ್ದ 413 ರನ್‌ಗಳ ಬೃಹತ್ ಗುರಿಯನ್ನು ನಾಲ್ಕನೇ ಹಾಗೂ ಅಂತಿಮ ದಿನವಾದ ಶುಕ್ರವಾರ ನಿರಾಯಾಸವಾಗಿ ತಲುಪಿತು.

ಗುರುವಾರ 2 ವಿಕೆಟ್‌ಗೆ 169 ರನ್ ಗಳಿಸಿದ್ದ ಭಾರತ ತಂಡವು ಶುಕ್ರವಾರ ಮಾನವ್ ಸುತಾರ್ (5) ಅವರ ವಿಕೆಟ್ ಬೇಗ ಕಳೆದುಕೊಂಡಿತು. ಆಗ, ಸುದರ್ಶನ್ ಅವರು ನಾಯಕ ಜುರೇಲ್ (56) ಜೊತೆಗೂಡಿ ನಾಲ್ಕನೇ ವಿಕೆಟ್‌ಗೆ 78 ರನ್‌ಗಳ ಉಪಯುಕ್ತ ಕಾಣಿಕೆ ನೀಡಿದರು.

ಶತಕ ಸಿಡಿಸಿದ ಬೆನ್ನಲ್ಲೇ ಸುದರ್ಶನ್ ಅವರು ಸ್ಪಿನ್ನರ್ ಕೊರಿ ರೊಚಿಚಿಯೊಲಿ ಬೌಲಿಂಗ್‌ನಲ್ಲಿ ಜಾಕ್ ಎಡ್ವರ್ಡ್ಸ್ ಅವರಿಗೆ ಕ್ಯಾಚಿತ್ತು ನಿರ್ಗಮಿಸಿದರು. ಗುರುವಾರ ಗಾಯಗೊಂಡು ನಿವೃತ್ತರಾಗಿದ್ದ ರಾಹುಲ್ ಮತ್ತೆ ಬ್ಯಾಟಿಂಗ್‌ಗೆ ಇಳಿದರು. ಐದನೇ ವಿಕೆಟ್‌ಗೆ ಜುರೇಲ್ ಅವರೊಂದಿಗೆ 115 ರನ್ ಜೊತೆಯಾಟವಾಡಿದರು.

ಸಮಯೋಚಿತವಾಗಿ ಆಡಿದ ರಾಹುಲ್ 136 ಎಸೆತಗಳಲ್ಲಿ ಶತಕ ದಾಖಲಿಸಿದರು. ಮುಂದಿನ 74 ಎಸೆತಗಳಲ್ಲಿ 76 ರನ್ ದೋಚಿದರು. ಜುರೇಲ್ ನಿರ್ಗಮಿಸಿದ ಬಳಿಕ ನಿತೀಶ್ ಕುಮಾರ್ ರೆಡ್ಡಿ (ಔಟಾಗದೇ 16) ಜೊತೆಗೂಡಿ ಚಹಾ ವಿರಾಮಕ್ಕೂ ಮೊದಲೇ ತಂಡವನ್ನು ಗೆಲುವಿನ ದಡ ಸೇರಿಸಿದರು.

ರಾಹುಲ್ ಅವರ ಸೊಗಸಾದ ಇನಿಂಗ್ಸ್‌ನಲ್ಲಿ 16 ಬೌಂಡರಿ ಹಾಗೂ ನಾಲ್ಕು ಸಿಕ್ಸರ್‌ಗಳಿದ್ದವು. ಅದರೊಂದಿಗೆ, ರಾಹುಲ್ ಅವರು ಮುಂಬರುವ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿಗೆ ಭರ್ಜರಿ ಸಿದ್ಧತೆ ಮಾಡಿಕೊಂಡರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ ಎ: 92.7 ಓವರ್‌ಗಳಲ್ಲಿ 420. ಭಾರತ ಎ: 52.5 ಓವರುಗಳಲ್ಲಿ 194. ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ ಎ: 46.5 ಓವರ್‌ಗಳಲ್ಲಿ 185. ಭಾರತ ಎ: 91.3 ಓವರ್‌ಗಳಲ್ಲಿ 5 ವಿಕೆಟ್‌ಗೆ 413 (ಸಾಯಿ ಸುದರ್ಶನ್ 100, ಕೆ.ಎಲ್.ರಾಹುಲ್ ಔಟಾಗದೇ 176, ಧ್ರುವ್ ಜುರೇಲ್ 56, ಟಾಡ್ ಮುರ್ಫಿ 114ಕ್ಕೆ3, ಕೊರಿ ರೊಚಿಚಿಯೊಲಿ 84ಕ್ಕೆ2).

ಚೆಸ್: ಐಎಂ ಆಟಗಾರನಿಗೆ ಸೋಲುಣಿಸಿದ ಆದಿತ್ಯ

ಪ್ರಜಾವಾಣಿ ವಾರ್ತೆ

ಮಂಗಳೂರು: ತಮಿಳುನಾಡಿನ ಇಬ್ಬರು ಆಟಗಾರರ ನಡುವಿನ ಪೈಪೋಟಿಯಲ್ಲಿ ಇಂಟರ್ ನ್ಯಾಷನಲ್ ಮಾಸ್ಟರ್ ಸರವಣ ಕೃಷ್ಣನ್ ಸೋಲುಂಡರು. ಅವರ ವಿರುದ್ಧ ಕೆಚ್ಚೆದೆಯ ಆಟವಾಡಿ ಗೆದ್ದ ಆದಿತ್ಯ ಎಸ್. ಇತರ 13 ಆಟಗಾರರೊಂದಿಗೆ ಅಗ್ರಸ್ಥಾನ ಹಂಚಿಕೊಂಡರು.

ರಾವ್ಸ್ ಚೆಸ್ ಕಾರ್ನರ್, ನಗರದಲ್ಲಿ ಆಯೋಜಿಸಿರುವ ಫಿಡೆ ರೇಟೆಡ್ ಅಂತರರಾಷ್ಟ್ರೀಯ ಚೆಸ್ ಟೂರ್ನಿಯಲ್ಲಿ ಶುಕ್ರವಾರ ನಾಲ್ಕುಸುತ್ತುಗಳ ಮುಕ್ತಾಯಕ್ಕೆ 14 ಮಂದಿ ತಲಾ 4 ಪಾಯಿಂಟ್‌ಗಳೊಂದಿಗೆ ಮುನ್ನಡೆಯಲ್ಲಿದ್ದಾರೆ. ಅಗ್ರ ಶ್ರೇಯಾಂಕದ ಐಎಂ ಎಂ.ಡಿ.ಇಮ್ರಾನ್ ಆಂಧ್ರಪ್ರದೇಶ) ಮತ್ತು ತಮಿಳುನಾಡಿನ ಮುರಳಿಕೃಷ್ಣ ಈ ಪಟ್ಟಿಯಲ್ಲಿದ್ದಾರೆ.

ಆದಿತ್ಯ ಮತ್ತು ಸರವಣ ನಾಲ್ಕನೇ ಸುತ್ತಿನಲ್ಲಿ ತುರುಸಿನ ಪೈಪೋಟಿ ನಡೆಸಿದರು. ಮೂರನೇ ಶ್ರೇಯಾಂಕದ ಸರವಣನ್ (ರೇಟಿಂಗ್: 2307) ಅವರನ್ನು ಅದಿತ್ಯ (ರೇಟಿಂಗ್: 1841) ಚಾಕಚಕ್ಯತೆಯ ಆಟವಾಡಿ ದಂಗುಬಡಿಸಿದರು.

ರೆಜಿತ್ ರಂಜಿತ್, ಐದನೇ ಶ್ರೇಯಾಂಕದ ನಿಮಯ್ ಅಗರವಾಲ್ (ಹರಿಯಾಣ) ಅವರನ್ನು ಸೋಲಿಸಿದರು.

ಏಳನೇ ಶ್ರೇಯಾಂಕದ ಮುರಳಿಕೃಷ್ಣ ನಾಲ್ಕನೇ ಸುತ್ತಿನಲ್ಲಿ ದಕ್ಷಿಣ ಕನ್ನಡದ ಧನುಷ್ ರಾಮ್ ವಿರುದ್ಧ ಜಯ ಗಳಿಸಿದರು. ಎರಡನೇ ಶ್ರೇಯಾಂಕದ ಲಾಡ್ ಮಂದಾರ್ ಪ್ರದೀಪ್ (3.5), ತಮಿಳುನಾಡಿನ ಕನಿಷ್ಕ ಜೊತೆ ಡ್ರಾ ಮಾಡಿಕೊಳ್ಳಬೇಕಾಯಿತು.

ಕರ್ನಾಟಕದ ಪಂಕಜ್ ಭಟ್, ಅದ್ವೈತ್ ರತ್ನಾಕರ್ ವಿಭೂತೆ, ಪ್ರಣವ್ ಎ.ಜೆ ಮತ್ತು ನಂದಕುಮಾರ್ ಎಸ್, ಮಣಿಪುರದ ವಿಕ್ರಮಜೀತ್ ಸಿಂಗ್, ರೈಲ್ವೆಯ ಅರ್ಜುನ್ ತಿವಾರಿ, ಕೇರಳದ ನಿತಿನ್ ಬಾಬು, ತಮಿಳುನಾಡಿನ ನಿಖಿಲ್ ಟಿ.ಎಲ್, ಕೇರಳದ ಸಂದೀಪ್ ಸಂತೋಷ್ ಮತ್ತು ತಮಿಳುನಾಡಿನ ಕಿಶೋರ್ ವಿ ಅವರೂ ನಾಲ್ಕು ಪಾಯಿಂಟ್ಸ್ ಗಳಿಸಿದ್ದಾರೆ.

ಹಿಂದೆ ಸರಿದ ಇಮ್ರಾನ್: ಅಗ್ರ ಶ್ರೇಯಾಂಕಿತ ಆಟಗಾರ ಎಂ.ಡಿ ಇಮ್ರಾನ್ ಅವರು ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. 'ದಿನದ ಎರಡೂ ಸುತ್ತುಗಳನ್ನು ಆಡಿ ವೈಯಕ್ತಿಕ ಕಾರಣಗಳಿಂದ ಅವರು ವಾಪಸ್ ಹೋಗಿದ್ದಾರೆ' ಎಂದು ಸಂಘಟಕರು ಹೇಳಿದ್ದಾರೆ. ಇಮ್ರಾನ್ 2476 ರೇಟಿಂಗ್ ಹೊಂದಿದ್ದಾರೆ.

ಸೂರ್ಯ ಬಳಗಕ್ಕೆ ‘ಸೂಪರ್’ ಜಯ

ಅಭಿಷೇಕ್ ಶರ್ಮಾ– ತಿಲಕ್ ವರ್ಮಾ ಬ್ಯಾಟಿಂಗ್ ಅಬ್ಬರ

• ನಿಸಾಂಕ ಶತಕ • ಸಮಬಲ ಹೋರಾಟ ತೋರಿದ ಶ್ರೀಲಂಕಾ

ದುಬೈ (ಪಿಟಿಐ): ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡವು ಏಷ್ಯಾ ಕಪ್ ಕ್ರಿಕೆಟ್ ಸೂಪರ್ ಫೋರ್ ಹಂತದ ಕೊನೆಯ ಪಂದ್ಯದಲ್ಲಿ ‘ಸೂಪರ್ ಓವರ್’ನಲ್ಲಿ ಜಯ ಸಾಧಿಸಿತು. ಅದರೊಂದಿಗೆ ಟೂರ್ನಿಯುದ್ದಕ್ಕೂ ಅಜೇಯವಾಗುಳಿಯಿತು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯವು ರೋಚಕ ರಸದೌತಣ ನೀಡಿತು. ಟಾಸ್ ಗೆದ್ದ ಶ್ರೀಲಂಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಭಿಷೇಕ್ ಶರ್ಮಾ ಅವರ ಮಿಂಚಿನ ಅರ್ಧಶತಕ ಮತ್ತು ತಿಲಕ್ ವರ್ಮಾ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಶ್ರೀಲಂಕಾ ಎದುರು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 202 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಶ್ರೀಲಂಕಾ ತಂಡವು ಟೂರ್ನಿಯಲ್ಲಿ ಮೊದಲ ಸಲ ಭಾರತಕ್ಕೆ ಕಠಿಣ ಸವಾಲೊಡ್ಡಿತು. ಆರಂಭಿಕ ಬ್ಯಾಟರ್ ಪಥುಮ್ ನಿಸಾಂಕ (107; 58ಎ, 4X7, 6X6) ಅಮೋಘ ಶತಕ ಹೊಡೆದರು. ಕುಸಾಲ್ ಪೆರೆರಾ (58; 32ಎ) ಅರ್ಧಶತಕ ಗಳಿಸಿದರು. ಆದರೂ ಭಾರತದ ಬೌಲರ್‌ಗಳು ಪಂದ್ಯ ‘ಟೈ’ ಆಗಲು ಕಾರಣರಾದರು. ಉಭಯ ತಂಡಗಳು ಸಮಬಲ ಸಾಧಿಸಿದವು. ಲಂಕಾ 5 ವಿಕೆಟ್‌ಗಳಿಗೆ 202 ರನ್ ಗಳಿಸಿತು.

ಅದರಿಂದಾಗಿ ಸೂಪರ್ ಓವರ್ ನೀಡಲಾಯಿತು. ಮೊದಲು ಬ್ಯಾಟಿಂಗ್ ಮಾಡಿದ ಲಂಕಾ ತಂಡಕ್ಕೆ ಎಡಗೈ ವೇಗಿ ಅರ್ಷದೀಪ್ ಸಿಂಗ್ ಕೇವಲ 2 ರನ್ ಬಿಟ್ಟುಕೊಟ್ಟರು. ಸೂರ್ಯಕುಮಾರ್ ಯಾದವ್ ತಾವೆದುರಿಸಿದ ಮೊದಲ ಎಸೆತದಲ್ಲಿ 3 ರನ್ ಗಳಿಸಿ ಜಯದ ಸಂಭ್ರಮ ಆಚರಿಸಿದರು.

ಭಾರತ ಈಗಾಗಲೇ ಫೈನಲ್ ಪ್ರವೇಶಿಸಿದೆ. ಭಾನುವಾರ ಪಾಕಿಸ್ತಾನ ತಂಡವನ್ನು ಎದುರಿಸಲಿದೆ. ಶ್ರೀಲಂಕಾ ತಂಡವು ಜಯದ ಸಿಹಿಯೊಂದಿಗೆ ಅಭಿಯಾನ ಮುಗಿಸುವ ಛಲದಲ್ಲಿತ್ತು.

ಶರ್ಮಾ–ವರ್ಮಾ ಬ್ಯಾಟಿಂಗ್: ಅಭಿಷೇಕ್ ಶರ್ಮಾ (61; 31ಎ, 4X8, 6X2) ಮತ್ತು ತಿಲಕ್ ವರ್ಮಾ (ಔಟಾಗದೇ 49, 34ಎ, 4X4, 6X1) ತಂಡಕ್ಕೆ ಬಲ ತುಂಬಿದರು. ಅವರೊಂದಿಗೆ ಅನುಭವಿ ಸಂಜು ಸ್ಯಾಮ್ಸನ್ (39; 23ಎ, 4X1, 6X3) ಕೂಡ ಸೇರಿಕೊಂಡರು. 15 ಎಸೆತಗಳಲ್ಲಿ 21 ರನ್‌ಗಳನ್ನು ಹೊಡೆದ ಅಕ್ಷರ್ ಪಟೇಲ್ ಕೂಡ ಕಾಣಿಕೆ ನೀಡಿದರು.

ಲಂಕಾದ ಆರಂಭಿಕ ಆಟಗಾರ ನಿಸಾಂಕ ಅವರು ಭಾರತದ ಎಲ್ಲ ಬೌಲರ್‌ಗಳನ್ನೂ ದಂಡಿಸಿದರು. ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ಹಾರ್ದಿಕ್ ಎಸೆತವನ್ನು ಆಡುವಾಗ ಕುಸಾಲ್ ಮೆಂಡಿಸ್ ಔಟಾದರು. ನಿಸಾಂಕ ಅವರಿಗೆ ಕುಸಾಲ್ ಪೆರೆರಾ ಉತ್ತಮ ಜೊತೆ ನೀಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 127 ರನ್ ಸೇರಿಸಿದರು. 13ನೇ ಓವರ್‌ನಲ್ಲಿ ಪೆರೆರಾ ಅವರನ್ನು ಸ್ಪಿನ್ನರ್ ವರುಣ್ ಚಕ್ರವರ್ತಿ ಔಟ್ ಮಾಡಿದರು. ನಿಸಾಂಕ ಕೊನೆಯ ಓವರ್‌ನಲ್ಲಿ ಔಟಾದರು.



ಶ್ರೀಲಂಕಾ ಪರ ಶತಕ ದಾಖಲಿಸಿದ ಪಥುಮ್ ನಿಸಾಂಕ

ಎಎಫ್‌ಪಿ ಚಿತ್ರಗಳು



ಭಾರತ ತಂಡದ ಅಭಿಷೇಕ್ ಶರ್ಮಾ

ಏಷ್ಯಾ ಕಪ್ 2025

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5ಕ್ಕೆ202 (ಅಭಿಷೇಕ್ ಶರ್ಮಾ 61, ತಿಲಕ್ ವರ್ಮಾ ಔಟಾಗದೇ 49, ಸಂಜು ಸ್ಯಾಮ್ಸನ್ 39, ಅಕ್ಷರ್ ಪಟೇಲ್ ಔಟಾಗದೇ 21, ಮಹೀಷ ತೀಕ್ಷಣ 36ಕ್ಕೆ1, ದುಷ್ಮಂತಾ ಚಾಮೀರ 40ಕ್ಕೆ1, ವನಿಂದು ಹಸರಂಗಾ 37ಕ್ಕೆ1). ಶ್ರೀಲಂಕಾ: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 202 (ಪಥುಮ್ ನಿಸಾಂಕ 107, ಕುಶಾಲ್ ಪೆರೆರಾ 58, ದಸುನ್ ಶನಾಕಾ ಔಟಾಗದೇ 22; ಹಾರ್ದಿಕ್ ಪಾಂಡ್ಯ 7ಕ್ಕೆ 1, ಕುಲದೀಪ್ ಯಾದವ್ 31ಕ್ಕೆ 1, ವರುಣ್ ಚಕ್ರವರ್ತಿ 31ಕ್ಕೆ 1). ಫಲಿತಾಂಶ: ಭಾರತಕ್ಕೆ ಸೂಪರ್ ಓವರ್‌ನಲ್ಲಿ ಗೆಲುವು. ಪಂದ್ಯದ ಆಟಗಾರ: ಪಥುಮ್ ನಿಸಾಂಕ

ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್

ತವರು ತಂಡದ ನಾಯಕತ್ವ ಆಸ್ವಾದಿಸುವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹನ್ನೆರಡು ವರ್ಷಗಳ ನಂತರ ಭಾರತವು ಐಸಿಸಿ ಏಕದಿನ ಕ್ರಿಕೆಟ್ ಮಹಿಳಾ ವಿಶ್ವಕಪ್ ಟೂರ್ನಿಯನ್ನು ಆಯೋಜಿಸುತ್ತಿದೆ. ಇದರಿಂದಾಗಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡದ ಮೇಲೆ ನಿರೀಕ್ಷೆಯ ಭಾರವೇ ಇದೆ. ಚೊಚ್ಚಲ ಪ್ರಶಸ್ತಿ ಗೆಲುವಿನ ಕನಸು ಗರಿಗೆದರಿದೆ. ಇನ್ನೊಂದೆಡೆ ಇದು ಭಾರತ ತಂಡದ ಆಟಗಾರ್ತಿಯರ ಮೇಲೆ ಒತ್ತಡ ಹೆಚ್ಚಿಸಿದೆಯೇ?

‘ಒತ್ತಡಕ್ಕೆ ಒಳಗಾಗುವುದನ್ನು ತಪ್ಪಿಸಿಕೊಂಡು ಟೂರ್ನಿಯ ಪ್ರತಿಯೊಂದು ಕ್ಷಣವನ್ನೂ ಆಸ್ವಾದಿಸುತ್ತೇವೆ. ಎಲ್ಲವನ್ನೂ ಕಲಿಕೆ ಮತ್ತು ಬೆಳವಣಿಗೆಯ ಭಾಗವಾಗಿ ಸ್ವೀಕರಿಸುತ್ತೇವೆ’ ಎಂದು ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಹೇಳಿದರು.

ಗುವಾಹಟಿಯಲ್ಲಿ ಇದೇ 30ರಂದು ಆರಂಭವಾಗುವ ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ಶ್ರೀಲಂಕಾ ಎದುರು ಕಣಕ್ಕಿಳಿಯಲಿದೆ. ಲಂಕಾ ಕ್ರಿಕೆಟ್ ಮಂಡಳಿಯು ಟೂರ್ನಿಯ ಜಂಟಿ ಆತಿಥ್ಯ ವಹಿಸಿದೆ.

‘ದೇಶದ ತಂಡವನ್ನು ಮುನ್ನಡೆಸುವುದು ವಿಶೇಷವಾದ ಸಂಗತಿ. ಆದರೆ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ತಂಡದ ನಾಯಕತ್ವ ವಹಿಸುವುದು ಇನ್ನೂ ಹೆಮ್ಮೆಯ ವಿಷಯ. ಅದರಲ್ಲೂ ತವರಿನಲ್ಲಿ ವಿಶ್ವಕಪ್ ಟೂರ್ನಿ ನಡೆಯುತ್ತಿದ್ದು, ಅಭಿಮಾನಿಗಳ ಮುಂದೆ ಆಡುವ ಅನುಭವವೇ ಚೆಂದ’ ಎಂದು ಹರ್ಮನ್ ಶುಕ್ರವಾರ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಆಯೋಜಿಸಿದ್ದ ಎಲ್ಲ ತಂಡಗಳ ನಾಯಕಿಯರ ಜಂಟಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.


‘ನಾನು ಕ್ರಿಕೆಟ್ ಆಡಲು ಆರಂಭಿಸಿದ ಸಂದರ್ಭದಲ್ಲಿ ಇಷ್ಟು ದೊಡ್ಡ ಟೂರ್ನಿಯವರೆಗೂ ಬೆಳೆಯುತ್ತೇನೆ ಎಂದು ಊಹಿಸಿರಲೂ ಇಲ್ಲ. ದೇಶದ ತಂಡದಲ್ಲಿ ಆಡಲು ಅವಕಾಶ ಸಿಗಬಹುದು ಅಂದುಕೊಂಡಿರಲೂ ಇಲ್ಲ. ಆದರೆ ಇವತ್ತು ದೇಶದ ತಂಡದ ನಾಯಕತ್ವ ವಹಿಸುತ್ತಿರುವುದು ಖುಷಿಯ ಸಂಗತಿ’ ಎಂದರು.

ಭಾರತ ತಂಡವು ಅಕ್ಟೋಬರ್ 5ರಂದು ಕೊಲಂಬೊದಲ್ಲಿ ನಡೆಯಲಿರುವ ಪಂದ್ಯದಲ್ಲಿ ಪಾಕಿಸ್ತಾನವನ್ನು ಎದುರಿಸಲಿದೆ.

ದುಬೈನಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯದಲ್ಲಿ ಆಟಗಾರರ ನಡುವೆ ಮಾತಿನ ಚಕಮಕಿ ಮತ್ತು ಕೆಲವು ಪ್ರಚೋದನಾತ್ಮಕ ಸಂಭ್ರಮಾಚರಣೆಗಳು ನಡೆದವು. ಇವು ವಿವಾದದ ತಿರುವು ಪಡೆದವು.

ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಹರ್ಮನ್, ‘ಮೈದಾನದಲ್ಲಿ ಕ್ರಿಕೆಟ್ ಆಡುವುದಷ್ಟೇ ನಮ್ಮ ನಿಯಂತ್ರಣದಲ್ಲಿರುವ ಸಂಗತಿ. ಅದರ ಆಚೆ ನಾವು ಏನೂ ಯೋಚಿಸುವುದಿಲ್ಲ ಮತ್ತು ಅಂತಹ ವಿಷಯ ಕುರಿತು ಮಾತನಾಡುವುದೂ ಇಲ್ಲ. ನಮ್ಮ ಕೈಯಲ್ಲಿರುವುದನ್ನಷ್ಟೇ ನಿಯಂತ್ರಿಸುವುದು ಮಾತ್ರ ನಮಗೆ ಸಾಧ್ಯ. ಅಂತಹ ಸಂಗತಿಗಳನ್ನು ಡ್ರೆಸಿಂಗ್ ಕೋಣೆಯಲ್ಲಿಯೂ ಮಾತನಾಡುವುದಿಲ್ಲ. ಯಾವ ವಿಷಯದ ಮೇಲೆ ನಮಗೆ ನಿಯಂತ್ರಣವಿಲ್ಲವೋ ಅಂತಹದರ ಕುರಿತು ಯೋಚಿಸುವುದೂ ಇಲ್ಲ’ ಎಂದರು.

ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ತಂಡಗಳ ನಾಯಕಿಯರು ಮಾತ್ರ ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾಗ ವಹಿಸಿದ್ದರು. ಶ್ರೀಲಂಕಾ, ದಕ್ಷಿಣ ಆಫ್ರಿಕಾ, ಬಾಂಗ್ಲಾದೇಶ ಹಾಗೂ ಪಾಕಿಸ್ತಾನ ತಂಡಗಳ ನಾಯಕಿಯರು ಕೊಲಂಬೊದಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ಹಾಜರಿದ್ದರು.



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಮಾಧ್ಯಮ ಸಂವಾದದಲ್ಲಿ ಭಾಗವಹಿಸಿದ್ದ ಐಸಿಸಿ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ತಂಡಗಳ ನಾಯಕಿಯ (ಎಡದಿಂದ); ಹರ್ಮನ್ ಪ್ರೀತ್ ಕೌರ್ (ಭಾರತ), ಅಲಿಸಾ ಹೀಲಿ (ಆಸ್ಟ್ರೇಲಿಯಾ), ನ್ಯಾಟ್ ಸಿವರ್ ಬ್ರಂಟ್ (ಇಂಗ್ಲೆಂಡ್) ಮತ್ತು ಸೋಫಿ ಡಿವೈನ್ (ನ್ಯೂಜಿಲೆಂಡ್)

ಪ್ರಶಸ್ತಿ ಉಳಿಸಿಕೊಳ್ಳುವುದು ಸುಲಭವಲ್ಲ. ಈ ವಿಶ್ವಕಪ್‌ನಲ್ಲಿ ಕಣಕ್ಕಿಳಿಯುತ್ತಿರುವ ಪ್ರತಿ ತಂಡದ ಎದುರು ಮೇಲುಗೈ ಸಾಧಿದರೆ ಮಾತ್ರ ಕಪ್ ಉಳಿಸಿಕೊಳ್ಳಲು ಸಾಧ್ಯ

ಅಲೀಸಾ ಹೀಲಿ, ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ತಂಡದ ನಾಯಕಿ

ವಿಶ್ವಕಪ್ ಜಯಿಸಲೆಂದೇ ನಾವು ಇಲ್ಲಿಗೆ ಬಂದಿದ್ದೇವೆ. ಸಂಪೂರ್ಣವಾಗಿ ಉತ್ತಮವಾದ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಭಾರತದಲ್ಲಿ ಕ್ರಿಕೆಟ್ ಆಡುವುದು ಒಂದು ವಿಶಿಷ್ಟ ಅನುಭವ

ಸೋಫಿ ಡಿವೈನ್, ನ್ಯೂಜಿಲೆಂಡ್ ತಂಡದ ನಾಯಕಿ

ಕೊಲಂಬೊದಲ್ಲಿ ಪಂದ್ಯಗಳನ್ನು ಆಡುತ್ತಿರುವುದು ನಮಗೆ ಹೆಚ್ಚು ಅನುಕೂಲಕರವಾಗಿದೆ. ನಮ್ಮ ಎಲ್ಲ ಪಂದ್ಯಗಳೂ ಒಂದೇ ತಾಣದಲ್ಲಿ ನಡೆಯುತ್ತಿವೆ. ಉತ್ತಮ ಪ್ರದರ್ಶನ ನೀಡಲು ನಮಗೆ ಸಾಧ್ಯವಾಗಲಿದೆ

ಫಾತಿಮಾ ಸನಾ, ಪಾಕ್ ತಂಡದ ನಾಯಕಿ

ಸೂರ್ಯಕುಮಾರ್‌ಗೆ ದಂಡ; ಮೇಲ್ಮನವಿ

ದುಬೈ (ಪಿಟಿಐ): ಪಾಕಿಸ್ತಾನ ವಿರುದ್ಧ ನಡೆದ ಗುಂಪು ಹಂತದ ಪಂದ್ಯದ ಬಳಿಕ ಸೇನಾ ಸಂಘರ್ಷವನ್ನು ಪ್ರಸ್ತಾಪಿಸಿದ್ದಕ್ಕೆ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರಿಗೆ ಪಂದ್ಯ ಸಂಭಾವನೆಯ ಶೇ 30ರಷ್ಟು ದಂಡ ವಿಧಿಸಲಾಗಿದೆ.



ಸೂರ್ಯ ಕುಮಾರ್

ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ಈ ಕ್ರಮದ ವಿರುದ್ಧ ಭಾರತ ಮೇಲ್ಮನವಿ ಸಲ್ಲಿಸಿದೆ ಎಂದು ತಿಳಿದುಬಂದಿದೆ. ಆದರೆ, ಟೂರ್ನಿ ಮುಗಿಯುವವರೆಗೂ ಐಸಿಸಿಯು ಯಾವುದೇ ಅಧಿಕೃತ ಹೇಳಿಕೆ ಬಿಡುಗಡೆ ಮಾಡುವುದಿಲ್ಲ ಎಂದು ಮೂಲಗಳು ತಿಳಿಸಿವೆ. ಭಾನುವಾರ ಫೈನಲ್ ಪಂದ್ಯ ನಡೆಯಲಿದೆ.



ಸಾಹಿಬ್‌ಝಾದಾ ಫರ್ಹಾನ್

ರವೂಫ್‌ಗೆ ದಂಡ, ಫರ್ಹಾನ್‌ಗೆ ಎಚ್ಚರಿಕೆ

ಭಾರತ ವಿರುದ್ಧ ಭಾನುವಾರ ನಡೆದ ಏಷ್ಯಾ ಕಪ್ ಕ್ರಿಕೆಟ್ ಸೂಪರ್ ಫೋರ್ ಪಂದ್ಯದ ವೇಳೆ ಅನುಚಿತವಾಗಿ ಮತ್ತು ಪ್ರಚೋದನಕಾರಿಯಾಗಿ ವರ್ತಿಸಿದ್ದಕ್ಕೆ ಪಾಕಿಸ್ತಾನ ತಂಡದ ವೇಗದ ಬೌಲರ್ ಹ್ಯಾರಿಸ್ ರವೂಫ್ ಅವರಿಗೆ ಪಂದ್ಯ ಸಂಭಾವನೆಯ ಶೇ 30ರಷ್ಟು ದಂಡ ವಿಧಿಸಲಾಗಿದೆ.

ಸಹ ಆಟಗಾರ ಸಾಹಿಬ್‌ಝಾದಾ ಫರ್ಹಾನ್ ಎಚ್ಚರಿಕೆಯನ್ನಷ್ಟೇ ಪಡೆದು ದಂಡದಿಂದ ಪಾರಾದರು. ಆ ಪಂದ್ಯದಲ್ಲಿ ಅರ್ಧ ಶತಕ ಪೂರೈಸಿದ ತಕ್ಷಣ ಫರ್ಹಾನ್ ಅವರು ಗಾಳಿಯಲ್ಲಿ ಗುಂಡು ಹಾರಿಸುವ ರೀತಿ ಬ್ಯಾಟನ್ನು ಗನ್ನಿನಂತೆ ಹಿಡಿದಿದ್ದರು.

ಸೆ.14ರಂದು ಪಾಕಿಸ್ತಾನ ವಿರುದ್ಧದ ಪಂದ್ಯವನ್ನು ಭಾರತ ಗೆದ್ದಿತ್ತು. ಪಂದ್ಯದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಸೂರ್ಯಕುಮಾರ್ ಪ್ರತಿಕ್ರಿಯಿಸಿ, ‘ಗೆಲುವನ್ನು ಪಹಲ್ಗಾಮ್ ಭಯೋತ್ಪಾದಕ ದಾಳಿಯ ಸಂತ್ರಸ್ತ ಕುಟುಂಬಗಳಿಗೆ ಮತ್ತು ಭಾರತ ಸಶಸ್ತ್ರ ಪಡೆಗಳಿಗೆ ಅರ್ಪಿಸುತ್ತೇನೆ’ ಎಂದು ಹೇಳಿದ್ದರು. ಇದರ ವಿರುದ್ಧ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಐಸಿಸಿಯಲ್ಲಿ ದೂರು ದಾಖಲಿಸಿತ್ತು.

ಜೂನಿಯರ್ ಶೂಟಿಂಗ್: ಜೊನಾಥನ್‌ಗೆ ಸ್ವರ್ಣ

ನವದೆಹಲಿ (ಪಿಟಿಐ): ಭಾರತದ ಉದಯೋನ್ಮುಖ ಶೂಟರ್ ಜೊನಾಥನ್ ಗ್ಯಾವಿನ್ ಆ್ಯಂಟನಿ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಟೂರ್ನಿಯ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನಕ್ಕೆ ಗುರಿ ಇಟ್ಟರು.

ಟೂರ್ನಿಯ ಎರಡನೇ ದಿನವಾದ ಶುಕ್ರವಾರ ನಡೆದ ಫೈನಲ್ ಸುತ್ತಿನಲ್ಲಿ ಜೊನಾಥನ್ ಅವರು 244.8 ಪಾಯಿಂಟ್ಸ್ ಸಂಪಾದಿಸಿದರು. ಇಟಲಿಯ ಲ್ಯೂಕಾ ಅರಿಘಿ (236.3) ಹಾಗೂ ಸ್ಪೇನ್‌ನ ಲ್ಯೂಕಾಸ್ ಸ್ಯಾಂಚೆಝ್ ಟೋಮ್ (215.1) ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದರು.

ಕ್ವಾಲಿಫಿಕೇಷನ್ ಸುತ್ತಿನಲ್ಲಿ ಎರಡನೇ ಸ್ಥಾನ ಪಡೆದಿದ್ದ ಭಾರತದ ಚಿರಾಗ್ ಶರ್ಮಾ ಅವರು, ಫೈನಲ್ ಹಣಾಹಣಿಯಲ್ಲಿ ನೀರಸ ಪ್ರದರ್ಶನದೊಂದಿಗೆ (115.6) ಎಂಟನೇ ಹಾಗೂ ಕೊನೆಯ ಸ್ಥಾನ ಪಡೆದರು.



ರಶ್ಮಿಕಾ ಸಹಗಲ್

ರಜತ ಗೆದ್ದ ರಶ್ಮಿಕಾ: ಜೂನಿಯರ್ ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತದ ರಶ್ಮಿಕಾ ಸೆಹಗಲ್ ಅವರು 236.1 ಪಾಯಿಂಟ್ಸ್‌ಗಳೊಡನೆ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ಸ್ವತಂತ್ರ ತಟಸ್ಥ ಸ್ಪರ್ಧಿ (ಎಎನ್‌ಎ) ಎವಿಲಿನಾ ಶೀನಾ (240.9) ಸ್ವರ್ಣ ಗೆದ್ದರೆ, ಇರಾನ್‌ನ ಫಾತಿಮಾ ಶೆಕರಿ (213.8) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಆದರೆ, ಕ್ವಾಲಿಫಿಕೇಶನ್ ಸ್ಪರ್ಧೆಯಲ್ಲಿ ಕ್ರಮವಾಗಿ ಮೊದಲೆರಡು ಸ್ಥಾನ ಪಡೆದಿದ್ದ ವಂಶಿಕಾ ಚೌಧರಿ ಹಾಗೂ ಮೋಹಿನಿ ಸಿಂಗ್ ಅವರು ಪ್ರಶಸ್ತಿ ಸುತ್ತಿನಲ್ಲಿ ನಿರಾಸೆ ಅನುಭವಿಸಿದರು. ವಂಶಿಕಾ (174.2) ಅವರು 5ನೇ ಸ್ಥಾನ ಪಡೆದರೆ, ಮೋಹಿನಿ (153.2) ಅವರು 6ನೇ ಸ್ಥಾನ ಪಡೆಯಲಷ್ಟೇ ಶಕ್ತರಾದರು.



ಜೂನಿಯರ್ ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಜೊನಾಥನ್ ಗ್ಯಾವಿನ್ ಆ್ಯಂಟನಿ (ಮಧ್ಯ), ಬೆಳ್ಳಿ ಗೆದ್ದ ಇಟಲಿಯ ಲ್ಯೂಕಾ ಅರಿಘಿ (ಎಡ) ಹಾಗೂ ಕಂಚಿನ ಪದಕ ಗೆದ್ದ ಸ್ಪೇನ್‌ನ ಲ್ಯೂಕಾಸ್ ಸ್ಯಾಂಚೆಝ್ ಟೋಮ್

ಶನಿವಾರ, ಸೆಪ್ಟೆಂಬರ್ 27, 2025 | ₹ 7.00
prajavani.net prajavani
www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶ್ವಾನ ಪ್ರದರ್ಶನ
ದಸರಾ ಉತ್ಸವದ ಅಂಗವಾಗಿ ಮಡಿಕೇರಿಯ ಗಾಂಧಿ ಮೈದಾನದಲ್ಲಿ ಶುಕ್ರವಾರ ನಡೆದ ಯುವ ದಸರೆಯಲ್ಲಿ ಗಮನ ಸೆಳೆದ ಪುಟ್ಟಶ್ವಾನಗಳು...

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

5,000 ಮಾಂಟೆಸ್ಸರಿ ಆರಂಭಕ್ಕೆ ಸಿದ್ಧತೆ

ಬೆಂಗಳೂರಿನಲ್ಲಿ ಉತ್ತಮ ಸ್ಪಂದನ ● ಈಗ ರಾಜ್ಯದಾದ್ಯಂತ ವಿಸ್ತರಣೆಗೆ ಕ್ರಮ ● ಕಲಿಕಾ ಸಾಮಗ್ರಿ ಸಿದ್ಧ

● ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ರಾಜ್ಯದ 5,000 ಅಂಗನವಾಡಿ ಕೇಂದ್ರಗಳಲ್ಲಿಇದೇ ನವೆಂಬರ್ ತಿಂಗಳಿಂದ ಮಾಂಟೆಸ್ಸರಿ ಆರಂಭಿಸಲು ಸರ್ಕಾರ ಸಿದ್ಧತೆ ನಡೆಸಿದೆ. ಬೆಂಗಳೂರಿನಲ್ಲಿ ಕಳೆದ ವರ್ಷ ಆರಂಭಿಸಿದ್ದ ಮಾಂಟೆಸ್ಸರಿಗೆ ಸಿಕ್ಕ ಪ್ರತಿಕ್ರಿಯೆ ಕಾರಣದಿಂದ ಈ ಕ್ರಮಕ್ಕೆ ಮುಂದಾಗಿದೆ.

ಪ್ರಾಯೋಗಿಕವಾಗಿ ಬೆಂಗಳೂರಿನಲ್ಲಿ 250 ಅಂಗನವಾಡಿ ಕೇಂದ್ರಗಳಲ್ಲಿ ಮಾಂಟೆಸ್ಸರಿ ಆರಂಭಿಸಿ, 2,550 ಮಕ್ಕಳಿಗೆ ಪ್ರವೇಶ ಕಲ್ಪಿಸಲಾಗಿತ್ತು.ಈಗ ಮಕ್ಕಳ ಸಂಖ್ಯೆ 3,950ಕ್ಕೆ ಏರಿದೆ.

ಸರ್ಕಾರಿ ಮಾಂಟೆಸ್ಸರಿಗೆ (ಎಲ್‌ಕೆಜಿ, ಯುಕೆಜಿ ತರಗತಿಗೆ) ಸಿಕ್ಕ ಸ್ಪಂದನ ಆಧರಿಸಿ ರಾಜ್ಯವ್ಯಾಪಿ ಯೋಜನೆ ವಿಸ್ತರಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ಧರಿಸಿದೆ.

ರಾಜ್ಯದಲ್ಲಿ ಒಟ್ಟು 69,922 ಅಂಗನವಾಡಿ ಕೇಂದ್ರಗಳಿವೆ. 3 ರಿಂದ 6 ವರ್ಷದ 16 ಲಕ್ಷ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ.

'ನವೆಂಬರ್ ತಿಂಗಳಿಂದ 5 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಮಾಂಟೆಸ್ಸರಿ ಆರಂಭಕ್ಕೆ ತಯಾರಿ ನಡೆದಿದೆ. ಕಟ್ಟಡ ಸೇರಿ ಅಗತ್ಯ ಮೂಲಸೌಲಭ್ಯ ಸಿಕ್ಕರೆ, 7 ಸಾವಿರ ಮಾಂಟೆಸ್ಸರಿ ಆರಂಭಿಸುವ ಚಿಂತನೆಯೂ ಇದೆ' ಎಂದು ಮೂಲಗಳು ತಿಳಿಸಿವೆ.

ಈಗ ಪ್ರತಿ ಜಿಲ್ಲೆಯಲ್ಲಿ ಮಾಂಟೆಸ್ಸರಿಗಳ ಆರಂಭಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಕ್ರಮ ವಹಿಸಿದ್ದಾರೆ. ಅವುಗಳಿಗೆ ಪೂರೈಸಲು ಕಲಿಕಾ ಸಾಮಗ್ರಿ ಸಿದ್ಧವಾಗಿವೆ. ಸಕ್ಷಮ್ ಯೋಜನೆಯಡಿ ಎಲ್‌ಇಡಿ ಟಿ.ವಿಗಳನ್ನು ಒದಗಿಸಲಾಗಿದೆ.

ಕನ್ನಡ ಮತ್ತು ಇಂಗ್ಲಿಷ್ ಎರಡೂ ಮಾಧ್ಯಮಗಳಲ್ಲಿ ಚಿಣ್ಣರಿಗೆ ಶಿಕ್ಷಣ ನೀಡಲು ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯುಳ್ಳ ಅಂಗನವಾಡಿ ಕಾರ್ಯಕರ್ತೆಯರಿಗೆ ಪೂರಕ ತರಬೇತಿಯನ್ನು ನೀಡಲಾಗುತ್ತಿದೆ.

'ಪಟ್ಟಣ, ಗ್ರಾಮಗಳ ಆಯ್ದ ಅಂಗನವಾಡಿ ಕೇಂದ್ರಗಳಲ್ಲಿ ಮಾಂಟೆಸ್ಸರಿಗಳ ಆರಂಭಕ್ಕೆ ಸಿದ್ಧತೆ ನಡೆದಿದೆ. ಇವು ಆರಂಭವಾದರೆ 1 ಲಕ್ಷಕ್ಕೂ ಅಧಿಕ ಮಕ್ಕಳಿಗೆ ಎಲ್‌ಕೆಜಿ, ಯುಕೆಜಿ ಶಿಕ್ಷಣ ಸಿಗಲಿದೆ. ಜತೆಗೆ ದಾಖಲಾತಿ ಪ್ರಮಾಣವೂ ಹೆಚ್ಚಲಿದೆ. ಹೆಚ್ಚಿನ ಶುಲ್ಕವುಳ್ಳ ಖಾಸಗಿ ನರ್ಸರಿಗಳತ್ತ ಬಡ ಕುಟುಂಬಗಳು ಮುಖ ಮಾಡುವುದು ತಪ್ಪುತ್ತದೆ' ಎಂದು ಮೂಲಗಳು ತಿಳಿಸಿವೆ.



ಬೆಳಗಾವಿಯ ನ್ಯೂ ಗಾಂಧಿ ನಗರದ ಅಂಗನವಾಡಿ ಕೇಂದ್ರದಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳ ಆರಂಭಕ್ಕಾಗಿ ಎಲ್‌ಇಡಿ ಟಿ.ವಿ ಅಳವಡಿಸಲಾಗಿದೆ



ರಾಜ್ಯದಲ್ಲಿ ಅಂಗನವಾಡಿ ಕೇಂದ್ರ ಆರಂಭವಾಗಿ 50 ವರ್ಷವಾಗಲಿದೆ. ಈ ಅಂಗವಾಗಿ 5 ಸಾವಿರ ಮಾಂಟೆಸ್ಸರಿಗಳಿಗೆ ಚಾಲನೆ ಕೊಡುತ್ತೇವೆ

ಲಕ್ಷ್ಮೀ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ



ಬೆಳಗಾವಿ ಜಿಲ್ಲೆಯಲ್ಲಿ 750 ಸರ್ಕಾರಿ ಮಾಂಟೆಸ್ಸರಿಗಳ ಆರಂಭಕ್ಕೆ ಅಂಗನವಾಡಿ ಕೇಂದ್ರ ಗುರುತಿಸಿದ್ದೇವೆ.

ಎಂ.ಎನ್.ಚೇತನಕುಮಾರ, ಉಪನಿರ್ದೇಶಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ

ಚಿಟಿಕೆ ಸುದ್ದಿ

ಫೈಜ್ನಟ್ರಾಜ್‌ಗೆ ವಿಭಾ ಸಾಹಿತ್ಯ ಪ್ರಶಸ್ತಿ



ಸಂತೆಬೆನ್ನೂರು ಫೈಜ್ನಟ್ರಾಜ್

ಹುಬ್ಬಳ್ಳಿ: 2025ನೇ ಸಾಲಿನ ವಿಭಾ ಸಾಹಿತ್ಯ ಪ್ರಶಸ್ತಿಗೆ ಸಂತೆಬೆನ್ನೂರು ಫೈಜ್ನಟ್ರಾಜ್ ಅವರ 'ಮಡಿಲ ಕೂಸಿಗೆ ಮಣ್ಣಿನ ಸೆರಗು' ಎಂಬ ಕವನ ಸಂಕಲನದ ಹಸ್ತಪ್ರತಿ ಆಯ್ಕೆಯಾಗಿದೆ. ಪ್ರಶಸ್ತಿ ₹ 10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ವಿಮರ್ಶಕರಾದ ಸಿರಾಜ್ ಅಹಮದ್ ಮತ್ತು ವಿಜಯಾ ಗುತ್ತಲ ಅವರು ತೀರ್ಪುಗಾರರಾಗಿದ್ದರು.

ದಾವಣಗೆರೆ ಜಿಲ್ಲೆ ಸಂತೆಬೆನ್ನೂರಿನ ಫೈಜ್ನಟ್ರಾಜ್ ಅವರು ಡಯಟ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಸೇರಿ ಹಲವು ಪ್ರಶಸ್ತಿಗಳು ಸಂದಿವೆ ಎಂದು ವಿಭಾ ಸಾಹಿತ್ಯ ಪ್ರಶಸ್ತಿಯ ಸಂಚಾಲಕಿ ಸುನಂದಾ ಪ್ರಕಾಶ ಕಡಮೆ ತಿಳಿಸಿದ್ದಾರೆ.

'ರಾಜಕೀಯ ಲಾಭಕ್ಕೆ ತರಾತುರಿ ಸಮೀಕ್ಷೆ'



ವಿ.ಸುನಿಲ್ ಕುಮಾರ

ಶಿರಸಿ: 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆ ತ್ಯಜಿಸುವ ಕಾಲ ಸನ್ನಿಹಿತವಾಗಿದೆ. ಅದಕ್ಕೆ ರಾಜಕೀಯ ಲಾಭಕ್ಕಾಗಿ ತರಾತುರಿಯಲ್ಲಿ ಜಾತಿವಾರು ಸಮೀಕ್ಷೆ ಜಾರಿಗೊಳಿಸಿದ್ದಾರೆ. ಆದರೆ, ಅದು ವಿಫಲವಾಗಿದೆ' ಎಂದು ಶಾಸಕ ವಿ.ಸುನಿಲ್ ಕುಮಾರ ಆರೋಪಿಸಿದರು.

'ಸಮೀಕ್ಷೆ ಸರಿಯಾಗಿ ನಡೆಸುವ ಉದ್ದೇಶ ಇದ್ದಿದ್ದರೆ, ಪೂರ್ವ ತಯಾರಿ ಮಾಡಿಕೊಳ್ಳಬೇಕಿತ್ತು. ಕಾಂತರಾಜ ಆಯೋಗದ ವರದಿಯನ್ನು ಸ್ವೀಕರಿಸದ ಅವರು, ₹ 420 ಕೋಟಿ ಬಳಸಿಕೊಂಡು ಪೂರ್ವ ಸಿದ್ಧತೆ ಮಾಡಿಕೊಳ್ಳದೇ ಸಮೀಕ್ಷೆ ಆರಂಭಿಸಿದ್ದು ಸರಿಯಲ್ಲ' ಎಂದರು. ಪ್ರಕ್ರಿಯೆ ಕೈಗೊಂಡಿರುವುದು ಸರಿಯಲ್ಲ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು

ಕಟ್ಟಡ ಕುಸಿದು ಐವರ ಸಾವು

ರಾಯಪುರ (ಪಿಟಿಐ): ಛತ್ತೀಸಗಢದ ರಾಜಧಾನಿ ರಾಯಪುರದ ಸಿಲತರಾ ಹೊರವಲಯದಲ್ಲಿರುವ ಗೋದಾವರಿ ಇಸ್ಪಾತ್ ಲಿಮಿಟೆಡ್‌ನ ಉಕ್ಕಿನ ಕಾರ್ಖಾನೆಯಲ್ಲಿ ಶುಕ್ರವಾರ ಕಟ್ಟಡ ಕುಸಿದು ಐವರು ಕಾರ್ಮಿಕರು ಮೃತಪಟ್ಟಿದ್ದು, ಐವರು ಗಾಯಗೊಂಡಿದ್ದಾರೆ.

ಪೊಲೀಸರ ತಂಡವು ರಕ್ಷಣಾ ಕಾರ್ಯಾಚರಣೆ ಕೈಗೊಂಡಿದೆ. ಕಟ್ಟಡದ ಅವಶೇಷಗಳಡಿ ಇನ್ನೂ ಕೆಲವರು ಸಿಲುಕಿರುವ ಸಾಧ್ಯತೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಸಾಲಮನ್ನಾ: ಕೆಲವರಿಗಷ್ಟೇ ಲಾಭ'

ಮೈಸೂರು: 'ಕೃಷಿ ಸಾಲಮನ್ನಾದಿಂದ ಊರಿನ 10 ಜನರಿಗೆ ಲಾಭವಾದರೆ, ಗ್ಯಾರಂಟಿ ಯೋಜನೆ ಸೌಲಭ್ಯ 98 ಮನೆಗಳಿಗೆ ತಲುಪುತ್ತಿದೆ' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಶುಕ್ರವಾರ ಇಲ್ಲಿ ಪ್ರತಿಪಾದಿಸಿದರು.

'ರೈತ ದಸರಾ' ಉದ್ಘಾಟಿಸಿದ ಅವರು, 'ಹಾದಿ ತಪ್ಪಿಸುವವರ ಮಾತು ಕೇಳದೇ ತಾಳ್ಮೆಯಿಂದ ಆಲೋಚಿಸಬೇಕು. ರೈತರ ಅಭಿವೃದ್ಧಿಯೇ ಪಂಚ ಗ್ಯಾರಂಟಿಯ ಉದ್ದೇಶ' ಎಂದರು.

'ಎಲ್ಲ ಕೃಷಿ ಸಾಲಗಳು ಬೆಂಬಲ ಯೋಗ್ಯವಾಗಿರುತ್ತದೆಯೇ? ಹಿಂದಿನ ಸರ್ಕಾರಗಳು ಕೃಷಿಸಾಲ ಮನ್ನಾಕ್ಕೆ ₹5 ರಿಂದ ₹12 ಸಾವಿರ ಕೋಟಿ ವ್ಯಯಿಸಿರಬಹುದು. ನಾವು ಗ್ಯಾರಂಟಿ ಯೋಜನೆಗಳಿಗೆ 5 ವರ್ಷದಲ್ಲಿ ₹3 ಲಕ್ಷ ಕೋಟಿ ವ್ಯಯಿಸುತ್ತಿದ್ದೇವೆ' ಎಂದು ಹೇಳಿದರು.



'ಕೃಷಿ ಭಾಗ್ಯ ಯೋಜನೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಂಸೆ ವ್ಯಕ್ತವಾಗಿದೆ. ಪೆನ್‌ಡ್ರೈವ್ ತೋರುವವರು, ಅಭಿವೃದ್ಧಿ ಮಾಡದೇ ಹಿಂದುತ್ವದ ಹೆಸರಿನಲ್ಲಿ ವಿಭಜಿಸುವವರು ಬೇಕೇ? ಸದಾ ರೈತರ ಕುರಿತು ಆಲೋಚಿಸುವ ನಾವು ಬೇಕೇ? ತೀರ್ಮಾನ ನಿಮ್ಮದು' ಎಂದರು.

'ಇಡೀ ರಾಷ್ಟ್ರದಲ್ಲಿ ರಸಗೊಬ್ಬರದ ಕೊರತೆಗೆ ಕಾರಣವಾದ ಕೇಂದ್ರ ಸರ್ಕಾರವನ್ನು ಟೀಕಿಸದೆ, ರೈತರನ್ನು ರಾಜ್ಯ ಸರ್ಕಾರದ ವಿರುದ್ಧ ಎತ್ತಿ ಕಟ್ಟಲಾಯಿತು' ಎಂದು ಬೇಸರ ವ್ಯಕ್ತಪಡಿಸಿದರು.

'ನಾರಾಯಣ ಹೆಲ್ತ್: ಲಕ್ಷ ದಾಟಿದ ನರರೋಗ ಪ್ರಕರಣ'

ಬೆಂಗಳೂರು: 'ನರವಿಜ್ಞಾನ ವಿಭಾಗವು 20 ವರ್ಷಗಳ ಅವಧಿಯಲ್ಲಿ ಲಕ್ಷಕ್ಕೂ ಅಧಿಕ ನರರೋಗ ಪ್ರಕರಣಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ' ಎಂದು ನಾರಾಯಣ ಹೆಲ್ತ್ ಸಿಟಿ ತಿಳಿಸಿದೆ.

ನಗರದಲ್ಲಿ ಆಸ್ಪತ್ರೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಬಗ್ಗೆ ಮಾತನಾಡಿದ ಸಂಸ್ಥೆಯ ವೈದ್ಯರು, 'ನಿಯಮಿತವಾಗಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು, ಚಿಕಿತ್ಸೆ ಒದಗಿಸಲಾಗುತ್ತಿದೆ. ಇದರಿಂದಾಗಿ ರೋಗಿಗಳಿಗೂ ಇಲ್ಲಿನ ವೈದ್ಯಕೀಯ ವ್ಯವಸ್ಥೆ ಮೇಲೆ ವಿಶ್ವಾಸ ಮೂಡಿದೆ. ಪರಿಣಾಮ ಎರಡು ದಶಕಗಳ ಅವಧಿಯಲ್ಲಿ ಇಷ್ಟೊಂದು ಪ್ರಕರಣಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಪಾರ್ಶ್ವವಾಯು ಸೇರಿ ವಿವಿಧ ಸಂಕೀರ್ಣ ಸಮಸ್ಯೆಗಳನ್ನು ಎದುರಿಸುತ್ತಿರುವವರಿಗೂ ನಮ್ಮ ವೈದ್ಯಕೀಯ ತಂಡವು ಹೊಸ ಬದುಕು ನೀಡಿದೆ' ಎಂದರು.

ಸಂಸ್ಥೆಯ ನರವಿಜ್ಞಾನ ವಿಭಾಗದ ಹಿರಿಯ ಸಲಹೆಗಾರ ಡಾ. ವಿಕ್ರಮ್ ಹುಡೇದ್, 'ಸರಾಸರಿ ನಾಲ್ಕು ಜನರಲ್ಲಿ ಒಬ್ಬರಿಗೆ ತಮ್ಮ ಜೀವನದಲ್ಲಿ ಪಾರ್ಶ್ವವಾಯು (ಸ್ಟ್ರೋಕ್) ಅಪಾಯ ಉಂಟಾಗುವ ಸಾಧ್ಯತೆ ಇರುತ್ತದೆ. ಐವತ್ತು ಜನರಲ್ಲಿ ಒಬ್ಬರಿಗೆ ಮಿದುಳಿನಲ್ಲಿ ಕಂಡುಬರುವ 'ಅನ್ಯೂರಿಸಮ್' ಎಂಬ ಸಮಸ್ಯೆ ಇರುತ್ತದೆ. ಇದರ ಸೌಮ್ಯ ಲಕ್ಷಣಗಳು ಕಾಣಿಸಿಕೊಂಡರೂ, ತಕ್ಷಣ ಸಿಟಿ ಅಥವಾ ಎಂಆರ್ ಆಂಜಿಯೋಗ್ರಫಿ ಮಾಡಿಸುವುದು ಸೂಕ್ತ. ನಮ್ಮಲ್ಲಿನ ತಜ್ಞ ವೈದ್ಯರ ತಂಡವು ಸಂಕೀರ್ಣ ಪ್ರಕರಣಗಳನ್ನೂ ಸಮರ್ಥವಾಗಿ ನಿರ್ವಹಣೆ ಮಾಡುತ್ತಿದೆ' ಎಂದು ಹೇಳಿದರು.

ವಿವಿಧ ನರ ಸಂಬಂಧಿ ಅನಾರೋಗ್ಯ ಸಮಸ್ಯೆಗಳಿಗೆ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡವರು ತಮ್ಮ ಅನುಭವವನ್ನು ಇದೇ ವೇಳೆ ಹಂಚಿಕೊಂಡರು.

'ತಪ್ಪು ಮಾಡದ ನನ್ನ ಮೇಲೇಕೆ ದ್ವೇಷ?'

ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಪ್ರಶ್ನೆ ● ಊರ ಜನರಿಂದ ವಿಶೇಷ ಪ್ರಾರ್ಥನೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): 'ಯಾವ ತಪ್ಪು ಮಾಡದೆ, ಯಾರನ್ನೂ ನೋಯಿಸದೆ ಕರ್ತವ್ಯ ನಿಭಾಯಿಸುತ್ತ ಬಂದಿದ್ದೇನೆ. ನನ್ನ ಮೇಲೆ ಕೆಲವರು ಏಕೆ ದ್ವೇಷ ಕಾರುತ್ತಿದ್ದಾರೆ? ಏಕೆ ನಿಷ್ಠುರವಾಗಿ ವರ್ತಿಸುತ್ತಿದ್ದಾರೆ ಎಂದು ಗೊತ್ತಾಗುತ್ತಿಲ್ಲ' ಎಂದು ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ಧರ್ಮಸ್ಥಳ ಹಿತರಕ್ಷಣಾ ವೇದಿಕೆ ಆಶ್ರಯದಲ್ಲಿ ಧರ್ಮಸ್ಥಳದಲ್ಲಿ ಊರ ಜನರು ಹಾಗೂ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಶ್ರೀ ಮಂಜುನಾಥಸ್ವಾಮಿ ಸನ್ನಿಧಿ ಹಾಗೂ ಅಣ್ಣಪ್ಪಸ್ವಾಮಿ ಬೆಟ್ಟದ ಎದುರು ಶುಕ್ರವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಂತರ ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಧರ್ಮಾಧಿಕಾರಿ ಅವರು ಮಾತನಾಡಿದರು.

'ಕೆಲ ವಿಷಯಗಳ ಹಿಂದೆ ಏನೆಲ್ಲ ಇದೆ, ಯಾಕೆ ಏಕೆ ಇದೆ ಎಂಬುದು ತಿಳಿದಿದೆ. ಆದರೆ ಕೋಪ ಯಾಕೆ ಎಂಬುದು ತಿಳಿದಿಲ್ಲ. ಬೆಂಬಿಡದೆ ಕಾಡುವ ಬೇತಾಳನಂತೆ ಅಪಚಾರಗಳು ಬಂದಾಗ ಊರ ಜನರು, ಕ್ಷೇತ್ರದ ಭಕ್ತರು ತೋರಿದ ಪ್ರೀತಿ, ವಿಶ್ವಾಸ ನನ್ನ ಜೀವಂತವಾಗಿರಿಸಿದೆ' ಎಂದರು.

'ಬಹಳ ಮಂದಿ ನಿರಂತರವಾಗಿ ಬೈದರು. ಆದರೆ ಯಾಕೆ ಬೈಯುತ್ತಿದ್ದಾರೆ ಎಂದು ಹೇಳಲೇ ಇಲ್ಲ. ತಪ್ಪು ಮಾಡಲಿಲ್ಲ, ಯಾರನ್ನೂ ಹೀಯಾಳಿಸಿಲ್ಲ ಎಂಬ ಆತ್ಮವಿಶ್ವಾಸ ಮತ್ತು ಊರವರು ಇರಿಸಿದ ನಂಬಿಕೆಯಿಂದ ನಿಶ್ಚಿಂತನಾಗಿದ್ದೇನೆ' ಎಂದೂ ಹೇಳಿದರು.



ಎಸ್‌ಐಟಿ ತನಿಖೆಯ ಕಾರ್ಯ ಅರ್ಧ ಮುಗಿದಿದೆ. ಎತ್ತರದಲ್ಲಿ ನಿಂತ ನೀರು ಹೇಗೆ ಕೆಳಗೆ ಹರಿದು ಹೋಗುತ್ತದೆಯೋ ಅದೇ ರೀತಿ ಅಪವಾದಗಳು ಇಳಿದುಹೋಗುತ್ತಿವೆ

ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿ, ಧರ್ಮಸ್ಥಳ ಕ್ಷೇತ್ರ

ವಿಶೇಷ ಪೂಜೆ, ಪ್ರಾರ್ಥನೆ: ಕ್ಷೇತ್ರದ ವಿರುದ್ಧದ ಅಪಪ್ರಚಾರ ಇಲ್ಲದಾಗಬೇಕು ಎಂದು ನಾಗರಿಕರು ದೇವಸ್ಥಾನದ ಎದುರು ತೆಂಗಿನಕಾಯಿ ಒಡೆದು ಪ್ರಾರ್ಥನೆ ಸಲ್ಲಿಸಿದರು. ಬಳಿಕ ಅಣ್ಣಪ್ಪ ಸ್ವಾಮಿ ಬೆಟ್ಟದ ಬಳಿಯೂ ಪ್ರಾರ್ಥಿಸಿದರು. ಅಮೃತವರ್ಷಿಣಿ ಸಭಾಭವನಕ್ಕೆ ಮೆರವಣಿಗೆಯಲ್ಲಿ ತೆರಳಿ ಸಾಮೂಹಿಕ ಲಲಿತಾ ಪಂಚಾಕ್ಷರಿ ಪಠಣ ಮಾಡಿದರು. ಮಹಿಳೆಯರಿಗೆ ಬಾಗಿನ ನೀಡಿ ಗೌರವಿಸಲಾಯಿತು.

ಜಮಾ ಉಗ್ರಾಣದ ಬಿ. ಭುಜಬಲಿ ಕಾರ್ಯಕ್ರಮ ಉದ್ಘಾಟಿಸಿದರು. ಹೇಮಾವತಿ ವೀ.ಹೆಗ್ಗಡೆ, ಡಿ.ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಶ್ರದ್ಧಾ ಅಮಿತ್, ನಂದೀಶ್, ಮೈತ್ರಿ ನಂದೀಶ್, ಧರ್ಮಸ್ಥಳ ಗ್ರಾಮ ಪಂಚಾಯಿತಿ ಅಧ್ಯಕ್ಷೆ ವಿಮಲಾ, ಧರ್ಮಸ್ಥಳ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಶ್ರೀನಿವಾಸ ರಾವ್ ಹಾಗೂ ಸ್ಥಳೀಯ ಮುಖಂಡರು ಭಾಗವಹಿಸಿದ್ದರು.



ಧರ್ಮಸ್ಥಳ ಕ್ಷೇತ್ರ ವಿರುದ್ಧದ ಅಪಪ್ರಚಾರ ಇಲ್ಲದಾಗಬೇಕು ಎಂದು ಪ್ರಾರ್ಥನೆ ಸಲ್ಲಿಸಲಾಯಿತು

'ಸರ್ಕಾರಕ್ಕೆ ಕೃತಜ್ಞ...'

'ಎಸ್‌ಐಟಿ ತನಿಖೆ ಪ್ರಗತಿಯಲ್ಲಿರುವಾಗ ಯಾವ ಬಗೆಯ ಹೇಳಿಕೆಯನ್ನೂ ನೀಡಬೇಡಿ ಎಂದು ವಕೀಲರು ತಿಳಿಸಿದ್ದರು. ಈಗ ನಿರ್ಭಯನಾಗಿರುವುದರಿಂದ ಮಾತನಾಡುತ್ತಿದ್ದೇನೆ. ಎಸ್‌ಐಟಿ ರಚಿಸಿದ ಸರ್ಕಾರಕ್ಕೆ ಕೃತಜ್ಞನಾಗಿದ್ದೇನೆ' ಎಂದು ವೀರೇಂದ್ರ ಹೆಗ್ಗಡೆ ಅವರು ಹೇಳಿದರು.

'ಧರ್ಮಸ್ಥಳದಲ್ಲಿ ಕೆಟ್ಟ ಕೆಲಸಗಳು ನಡೆಯಲು ಸಾಧ್ಯವೇ ಇಲ್ಲ ಎಂದು ಭಕ್ತರು, ಸ್ವಾಮೀಜಿಗಳು ಹೇಳಿದ್ದಾರೆ. ತಪ್ಪು ಮಾಡಿದವರನ್ನು ಮಂಜುನಾಥಸ್ವಾಮಿ ಮತ್ತು ಅಣ್ಣಪ್ಪಸ್ವಾಮಿ ನೋಡಿಕೊಳ್ಳುತ್ತಾರೆ' ಎಂದು ಹೇಳಿದರು.

'ಧರ್ಮಸ್ಥಳದಲ್ಲಿ ನಡೆಯುತ್ತಿರುವ ಸೇವೆಯಲ್ಲಿ ಪ್ರಚಾರದ ಉದ್ದೇಶ ಇಲ್ಲ. ನಿಸ್ವಾರ್ಥ ಸೇವೆ ಸಲ್ಲಿಸಿದ್ದು, ನನ್ನ ಆರೋಗ್ಯ ಚೆನ್ನಾಗಿದೆ. ಕ್ಷೇತ್ರದಿಂದ ನಡೆಯುವ ಎಲ್ಲ ಕಾರ್ಯಗಳು ಸಮಾಜದ ಗಮನ ಸೆಳೆದಿವೆ. ಎಲ್ಲರೂ ಸೇರಿ ಮಾಡಿದ ಕಾರ್ಯಗಳಿಗೆ ನಾನು ನೆಪ ಮಾತ್ರ. ಇಲ್ಲಿ ಊರವರು ಬೇರೆ, ಧರ್ಮಸ್ಥಳ ಬೇರೆ ಎಂಬ ಬೇಧವಿಲ್ಲ. ಎಲ್ಲವೂ ನಮ್ಮದು ಎಂಬ ಭಾವನೆ ಎಲ್ಲರಲ್ಲೂ ಇದೆ. ಇಂಥ ವಾತಾವರಣದಲ್ಲಿ ಮಾಡಿದ ಕರ್ತವ್ಯವೇ ಕೈಲಾಸ' ಎಂದು ಅವರು ಭಾವುಕರಾದರು.

ತಿಮರೋಡಿಗೆ 3ನೇ ನೋಟಿಸ್ ಜಾರಿ

ಮಂಗಳೂರು: ಸೌಜನ್ಯಾ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಅವರ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆಯಡಿ ದಾಖಲಾಗಿರುವ ಪ್ರಕರಣದ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಬೆಳ್ತಂಗಡಿ ಠಾಣೆ ಪೊಲೀಸರು ಶುಕ್ರವಾರ ಮೂರನೇ ನೋಟಿಸ್ ಜಾರಿಗೊಳಿಸಿದ್ದಾರೆ.

ಶೋಧ ಕಾರ್ಯಾಚರಣೆ ವೇಳೆ ತಿಮರೋಡಿ ಅವರ ಮನೆಯಲ್ಲಿ ಬಂದೂಕು ಮತ್ತು ಎರಡು ಖಡ್ಗ ಪತ್ತೆಯಾಗಿದ್ದು, ಈ ಬಗ್ಗೆ ಎಸ್‌ಐಟಿ ಅಧಿಕಾರಿಗಳು ದೂರು ನೀಡಿದ್ದರು.

ಹಿಂದೆ ಸೆ.21ರಂದು ವಿಚಾರಣೆಗೆ ಬರಲು ಸೂಚಿಸಿದ್ದರು. ಅಂದು ಹಾಜ ರಾಗದ ಕಾರಣ ಮತ್ತೊಂದು ನೋಟಿಸ್ ಅಂಟಿಸಿ, ಸೆ.25ಕ್ಕೆ ವಿಚಾರಣೆಗೆ ಬರಲು ಸೂಚಿಸಿದ್ದರು. ಆಗಲೂ ಹಾಜರಾಗದ ಕಾರಣ ಈಗ ಮೂರನೇ ನೋಟಿಸ್ ನೀಡಲಾಗಿದೆ. ಸೆಪ್ಟೆಂಬರ್ 29ಕ್ಕೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಂಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ತಿಮರೋಡಿ ಅವರು ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದು, ಅದರ ವಿಚಾರಣೆ ಸೆ.27ಕ್ಕೆ ನಿಗದಿಯಾಗಿದೆ.

ಬಂಡೂರು ತಳಿ...

ಪ್ರಜಾವಾಣಿ ಚಿತ್ರ: **ಅನೂಪ್‌ರಾಘ ಟಿ.**



ಮೈಸೂರಿನಲ್ಲಿ ಶುಕ್ರವಾರ ನಡೆದ ರೈತ ದಸರಾ ಮೆರವಣಿಗೆಯಲ್ಲಿ ರೈತರೊಬ್ಬರು ತಮ್ಮ ಬಂಡೂರು ತಳಿಯ ಕುರಿಗಳೊಂದಿಗೆ ಪಾಲ್ಗೊಂಡು ಗಮನಸೆಳೆದರು

ಸರ್ಕಾರಿ ಗೌರವದಿಂದ ಭೈರಪ್ಪಗೆ ವಿದಾಯ



ಕಾದಂಬರಿಕಾರ ಎಸ್‌.ಎಲ್‌.ಭೈರಪ್ಪ ಅವರ ಮಕ್ಕಳಾದ ರವಿಶಂಕರ್, ಉದಯ್ ಶಂಕರ್ ಅವರೊಂದಿಗೆ ಲೇಖಕಿ ಸಹನಾ ವಿಜಯ್ ಕುಮಾರ್ ಅವರು ಚಿತೆಗೆ ಅಗ್ನಿಸ್ಪರ್ಶ ಮಾಡಿದರು– ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಮೈಸೂರು: ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ ಅಂತ್ಯಕ್ರಿಯೆಯು ಸಕಲ ಸರ್ಕಾರಿ ಗೌರವದೊಂದಿಗೆ ಇಲ್ಲಿನ ಚಾಮುಂಡಿ ಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಶುಕ್ರವಾರ ನಡೆಯಿತು.

ಮಕ್ಕಳಾದ ರವಿಶಂಕರ್, ಉದಯ್ ಶಂಕರ್ ಅವರೊಂದಿಗೆ ಲೇಖಕಿ ಸಹನಾ ವಿಜಯ್ ಕುಮಾರ್ ಅವರು ನೂರಾರು ಜನರ ಅಶ್ರುತರ್ಪಣದ ಮಧ್ಯೆ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಇದರೊಂದಿಗೆ ಕನ್ನಡ ಸಾರಸ್ವತ ಲೋಕದ ದಿಗ್ಗಜನ 'ಪರ್ವ' ಅಂತ್ಯಗೊಂಡಿತು.

ಪಾರ್ಥಿವ ಶರೀರವನ್ನು ಗುರುವಾರ ಕಲಾಮಂದಿರದಲ್ಲಿ ಸಾರ್ವಜನಿಕ ದರ್ಶನಕ್ಕಾಗಿ ಇಡಲಾಗಿತ್ತು. ಶುಕ್ರವಾರ ಬೆಳಿಗ್ಗೆ ಜೆಎಸ್‌ಎಸ್ ಆಸ್ಪತ್ರೆಯಿಂದ ಕುವೆಂಪುನಗರದ ಉದಯರವಿ ರಸ್ತೆಯಲ್ಲಿರುವ ಅವರ ನಿವಾಸಕ್ಕೆ ತರಲಾಯಿತು. ಅಲ್ಲಿ ಕುಟುಂಬಸ್ಥರು ಹಾಗೂ ಅಭಿಮಾನಿಗಳು ಅಂತಿಮ ದರ್ಶನ ಪಡೆದರು.

ಸ್ಮಶಾನದಲ್ಲಿ ಪೊಲೀಸ್ ಅಧಿಕಾರಿ ಶಿವಾನಂದ ನೇತೃತ್ವದ ತಂಡವು 3 ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಗೌರವ ಸಲ್ಲಿಸಿತು. ಪೊಲೀಸ್ ಬ್ಯಾಂಡ್ ರಾಷ್ಟ್ರಗೀತೆ ನುಡಿಸಿತು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಎಚ್‌.ಸಿ.ಮಹದೇವಪ್ಪ, ಸಚಿವ ಕೆ.ವೆಂಕಟೇಶ್ ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಶಿವಕುಮಾರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅಂತಿಮ ನಮನ ಸಲ್ಲಿಸಿದರು. ಪ್ರಲ್ಹಾದ ಜೋಶಿ ಹಾಗೂ ಮಹದೇವಪ್ಪ ಅವರು ಭೈರಪ್ಪ ಅವರ ಪುತ್ರರಿಗೆ ರಾಷ್ಟ್ರಧ್ವಜವನ್ನು ಹಸ್ತಾಂತರಿಸಿದರು.

ಅರಮನೆ ಪುರೋಹಿತರಾದ ಚಂದ್ರಶೇಖರ ಶಾಸ್ತ್ರಿ ನೇತೃತ್ವದ ತಂಡವು ಧಾರ್ಮಿಕ ಕಾರ್ಯ ನಡೆಸಿತು. ಅಸ್ಮಾರ್ಥ ಹೊಯ್ಸಳ ಬ್ರಾಹ್ಮಣ ಸಂಪ್ರದಾಯದ ಪ್ರಕಾರ ಪುತ್ರರಿಬ್ಬರು ಅಂತಿಮ ವಿಧಾನ ನಡೆಸಿದರು. ಭೈರಪ್ಪ ಹುಟ್ಟೂರು, ಹಾಸನ ಜಿಲ್ಲೆ ಸಂತೇಶಿವರ ಗ್ರಾಮದ ನೂರಾರು ಮಂದಿ ಪಾಲ್ಗೊಂಡಿದ್ದರು. 'ಅಮರ್ ರಹೇ, ಅಮರ್ ರಹೇ ಭೈರಪ್ಪಾಜಿ ಅಮರ್ ರಹೇ' ಘೋಷಣೆ ಕೂಗಿದರು.

ಸಮೀಕ್ಷೆ ಅರಾಜಕತೆ ಸೃಷ್ಟಿಸುವ ಯತ್ನ: ಕಾಗೇರಿ

ಯಲ್ಲಾಪುರ: 'ಸರ್ಕಾರ ಕೈಗೊಂಡಿರುವ ಜಾತಿ ಸಮೀಕ್ಷೆ ಸಮಾಜದಲ್ಲಿ ಅಶಾಂತಿ, ಅರಾಜಕತೆ ಸೃಷ್ಟಿಸುವ ಪ್ರಯತ್ನವಾಗಿದೆ' ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ದೂರಿದರು.

'ಈ ಜಾತಿ ಸಮೀಕ್ಷೆ ಗೊಂದಲದ ಗೂಡಾಗಿದೆ. ಆಡಳಿತದಲ್ಲಿ ಅರಾಜಕತೆ, ಜನರಲ್ಲಿ ಅಶಾಂತಿ ಮತ್ತು ಅಸ್ಥಿರತೆ ಸೃಷ್ಟಿಸುವುದೇ ಅವರ ಗುರಿ' ಎಂದು ಅವರು ಶುಕ್ರವಾರ ತಿಳಿಸಿದರು.

'ಧರ್ಮಸ್ಥಳ ಕ್ಷೇತ್ರದ ಬುರುಡೆ ಪ್ರಕರಣ ಇದರ ಒಂದು ಭಾಗ. ಅರಾಜಕತೆ ಸೃಷ್ಟಿಸಲು ನಿರಂತರ ಪ್ರಯತ್ನ ನಡೆಸಿವೆ. ಇದು ಅಂತರರಾಷ್ಟ್ರೀಯ ಪಿತೂರಿ. ವಿದೇಶಿ ಶಕ್ತಿಗಳ ಕೈಗೊಂಬೆಯಾದ ಕಾಂಗ್ರೆಸ್, ದೇಶದ ವಿರುದ್ಧ ಕೆಲಸ ಮಾಡುತ್ತಿದೆ. ಎಲ್ಲರೂ ದೇಶ ಮೊದಲು ಎನ್ನುವ ಭಾವದಲ್ಲಿರುವಾಗ ಅವರದ್ದೇ ಒಂದು ಬೇರೆ ದಾರಿಯಾಗಿದೆ' ಎಂದರು.

ಬಾಲಕಿಯ ಅತ್ಯಾಚಾರ, ಕೊಲೆ ಅಪರಾಧಿಗೆ ದಂಡ, ಗಲ್ಲುಶಿಕ್ಷೆ

ಪ್ರಜಾವಾಣಿ ವಾರ್ತೆ



ಭರತೇಶ

ಬೆಳಗಾವಿ: ರಾಯಬಾಗ ತಾಲ್ಲೂಕಿನ ಗ್ರಾಮವೊಂದರಲ್ಲಿ ಎಂಟು ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಕೊಲೆ ಮಾಡಿದ ಭರತೇಶ ರಾವಸಾಬ್ ಮಿರ್ಜಿ (28) ಎಂಬಾತನಿಗೆ ಇಲ್ಲಿನ ಜಿಲ್ಲಾ ಪೋಕ್ಸೊ ನ್ಯಾಯಾಲಯ ಗಲ್ಲು ಶಿಕ್ಷೆ ಮತ್ತು ₹45 ಸಾವಿರ ದಂಡ ವಿಧಿಸಿ ಆದೇಶಿಸಿದೆ.

ಬಾಲಕಿಯ ಪಾಲಕರಿಗೆ ₹10 ಲಕ್ಷ ಪರಿಹಾರ ನೀಡುವಂತೆ ಶುಕ್ರವಾರ ಆದೇಶಿಸಿದೆ. 2019ರ ಅಕ್ಟೋಬರ್ 15ರಂದು ಬಾಲಕಿ ಚಾಕೊಲೇಟ್ ತರಲು ಅಂಗಡಿಗೆ ಹೋಗಿದ್ದಳು. ಮರಳುವಾಗ ಭರತೇಶ ತನ್ನ ಮನೆಗೆ ಕರೆದೊಯ್ದು ಅತ್ಯಾಚಾರವೆಸಗಿದ್ದ.

ರಕ್ಷಣೆಗಾಗಿ ಬಾಲಕಿ ಕಿರುಚಾಡಿದಾಗ ಕುತ್ತಿಗೆ ಹಿಸುಕಿ ಸಾಯಿಸಿದ್ದ. ಸಾಕ್ಷ್ಯ ನಾಶಪಡಿಸಲು 20 ಕೆಜಿ ತೂಕದ ಕಲ್ಲನ್ನು ಬಾಲಕಿ ದೇಹಕ್ಕೆ ಕಟ್ಟಿ, ತನ್ನ ಮನೆ ಬಳಿಯ ತೆರೆದ ಬಾವಿಗೆ ಎಸೆದಿದ್ದ. ಬಾಲಕಿ ಕಾಣೆಯಾದ ಬಗ್ಗೆ ಪಾಲಕರು ದೂರು ದಾಖಲಿಸಿದ್ದರು.

ತನಿಖೆ ನಡೆಸಿದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಜೆ.ಎಸ್.ಉಪ್ಪಾರ, ಬೆಳಗಾವಿಯಿಂದ ಶ್ವಾನದಳ ಕರೆಯಿಸಿ ಬಾಲಕಿ ಚಲನ–ವಲನ ಪತ್ತೆ ಮಾಡಿದ್ದರು. ಶ್ವಾನದಳದ ನೆರವಿನಿಂದ ಶವ ಪತ್ತೆ ಮಾಡಲಾಗಿತ್ತು. ಬಾಲಕಿ ಸೊಂಟಕ್ಕೆ ಸೀರೆಯಿಂದ ಕಲ್ಲು ಕಟ್ಟಿ ಎಸೆದಿದ್ದು ಗೊತ್ತಾಗಿತ್ತು.

ಡಾ. ಕೆ. ಎಸ್. ಗುರುದತ್ ಮರಣೋತ್ತರ ಪರೀಕ್ಷೆ ನಡೆಸಿದ್ದರು. ತನಿಖಾಧಿಕಾರಿಗಳಾದ ಎನ್.ಮಹೇಶ ಮತ್ತು ಕೆ.ಎಸ್.ಹಟ್ಟಿ ಅವರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಸಿ.ಎಂ. ಪುಷ್ಪಲತಾ ತೀರ್ಪು ಪ್ರಕಟಿಸಿದ್ದಾರೆ.

ವಿವಿಧ ಸೆಕ್ಷನ್‌ಗಳಡಿ ದಂಡ, ಸಜೆ ವಿಧಿಸಿ ಆದೇಶ ನೀಡಿದ್ದಾರೆ. ದಂಡ ಪಾವತಿಗೆ ತಪ್ಪಿದ್ದಲ್ಲಿ ಒಂದು ವರ್ಷ ಜೈಲು ಶಿಕ್ಷೆ ಅನುಭವಿಸಬೇಕು. ಜಿಲ್ಲಾ ಕಾನೂನು ಪ್ರಾಧಿಕಾರದಿಂದ ಸಂತ್ರಸ್ತೆ ಪೋಷಕರಿಗೆ ₹10 ಲಕ್ಷ ಪರಿಹಾರ ಒದಗಿಸುವಂತೆ ಆದೇಶ ನೀಡಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಎಲ್‌.ವಿ.ಪಾಟೀಲ ವಾದ ಮಂಡಿಸಿದ್ದರು.

ದಸರಾ: ಪ್ರತಿಭಾ ಕವಿಗೋಷ್ಠಿಯಲ್ಲಿ ವಿವಿಧ 'ಪದಗಳ' ಮೆರವಣಿಗೆ

ಮಣ್ಣಿನ ಮಕ್ಕಳಿಂದ 'ಜಾನಪದ ರಸದೌತಣ'

● ಎಂ.ಮಹೇಶ್

ಮೈಸೂರು: ನೆಲದ ಮಕ್ಕಳು ಗದ್ದೆಯಲ್ಲಿ, ಮನೆಯಲ್ಲಿ ದುಡಿಯುವಾಗ, ಒಕ್ಕಣೆ ಮಾಡುವಾಗ, ಮದುವೆ ಇನ್ನಿತರ ಕಾರ್ಯಕ್ರಮಗಳಲ್ಲಿ ಹಾಡುತ್ತಾ ಕಟ್ಟಿದ ಗೀತೆಗಳನ್ನು ಕಲಾವಿದರು ಇಲ್ಲಿ ಉಣಬಡಿಸಿದರು. ವಿವಿಧ 'ಪದಗಳ' ಮೆರವಣಿಗೆ ನಡೆಯಿತು. ಜಾನಪದ ಗೀತ–ಗಾಯನದ ರಸದೌತಣ ಸಭಿಕರಿಗೆ ದಕ್ಕಿತು.

ದಸರಾ ಅಂಗವಾಗಿ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಪ್ರತಿಭಾ ಕವಿಗೋಷ್ಠಿ' ವಿಶೇಷತೆಯಿಂದ ಗಮನಸೆಳೆಯಿತು.

ಕವಿಗೋಷ್ಠಿಯ ಬದಲಿಗೆ ಪದಗಳನ್ನು ಪ್ರಸ್ತುತಪಡಿಸಿದ 'ಗೋಷ್ಠಿ'ಯು ನಾಡಿನ ಜಾನಪದ ಕಥಾನಾಯಕರನ್ನು ಕಣ್ಮುಂದೆ ತಂದಿತು. ಕಲಾವಿದರು ತಮ್ಮೂರಿನ ಜಾನಪದ ಕಲಾವೈಭವವನ್ನು ಕಂಚಿನ ಕಂಠಗಳಿಂದ ಪರಿಚಯಿಸಿದರು.



ಬಿಎಂಶ್ರೀ ಸಭಾಂಗಣದಲ್ಲಿ ಶುಕ್ರವಾರ ನಡೆದ 'ಪ್ರತಿಭಾ ಕವಿಗೋಷ್ಠಿ'ಯನ್ನು ಪ್ರೊ. ನಂಜಯ್ಯ ಹೊಂಗನೂರು ಉದ್ಘಾಟಿಸಿದರು

ಹದಪಾಕದ ರುಚಿ: ಜನಪದ, ತತ್ವಪದ ಕಾವ್ಯ ವಾಚನ ಮತ್ತು ಗಾಯನ, ಕಂಸಾಳೆ, ತಂಬೂರಿ, ಬಸುರಿ ಬಯಕೆ ಪದ, ಜರಿವ ಪದ, ಸರಸ–ಸಲ್ಲಾಪ ಒಗಟು ಪದಗಳು, ಗಾದೆಗಳು, ಗೀಗಿ ಪದ, ಸೋಬಾನೆ ಪದ, ಅಣಕು ಪದ, ಪಾಡ್ದನ ಪ್ರಸ್ತುತಗೊಂಡವು. ಮಲೆ ಮಹದೇಶ್ವರ, ಮಂಟೇಸ್ವಾಮಿ, ಬಿಳಿಗಿರಿ ರಂಗ, ಬೆಳವಡಿ ಮಲ್ಲಮ್ಮ, ಬಸವಣ್ಣ ಅವರಿಗೆ ಜೈಕಾರಗಳು ಮೊಳಗಿದವು.

ಚಿನ್ಮಾದು ಅವರ 'ತಾಯಿ ಹಾಡು' ನಾಂದಿ ಹಾಡಿದ ಕಾರ್ಯಕ್ರಮದಲ್ಲಿ, ಕುಮಾರ ಅವರು ತತ್ವಪದ ಗಾಯನ ವಿಶೇಷವಾಗಿತ್ತು. ಕೆಂಪಮ್ಮ ತಮ್ಮ ವಿದ್ಯಾರ್ಥಿಯೊಂದಿಗೆ ಹಾಡಿದ ಸರಸ ಸಲ್ಲಾಪ ಪದ, ಸೋಬಾನೆ ಪದ ರಂಜಿಸಿತು. ಮಂಡ್ಯದ ಕೆ.ಎಂ. ಕೃಷ್ಣೇಗೌಡ ಕೀಲಾರ 'ಬಸುರಿ ಬಯಕೆ'ಯನ್ನು ಮಂಡಿಸಿದರು.

ಜಾನಪದ ಎಲ್ಲದರ ಮೂಲ: ನಂಜಯ್ಯ

ಕವಿಗೋಷ್ಠಿ ಉದ್ಘಾಟಿಸಿದ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, 'ಜಾನಪದವು ಎಲ್ಲ ಜ್ಞಾನ, ವಿಜ್ಞಾನ, ತಂತ್ರಜ್ಞಾನದ ಮೂಲ. ಹಾಡುಗಳ ಮೂಲಕ ಸಮಾಜ ತಿದ್ದುವ ಕೆಲಸವನ್ನು ಜನಪದರು ಮಾಡಿಕೊಂಡು ಬಂದಿದ್ದಾರೆ' ಎಂದರು.

'ಇತ್ತೀಚಿನ ವರ್ಷಗಳಲ್ಲಿ ಜಾನಪದ ಗಾಯಕರಿಗೆ ಹತ್ತಾರು ವೇದಿಕೆಗಳಲ್ಲಿ, ವಿದೇಶಗಳಲ್ಲಿ ಅವಕಾಶಗಳು ಸಿಗುತ್ತಿವೆ. ನಮ್ಮ ನೆಲದ ಜಾನಪದ ಕಲೆಗಳನ್ನು ಮುಂದುವರಿಸಿಕೊಂಡು ಹೋಗುವುದು ಮುಖ್ಯವಾಗಿದೆ' ಎಂದರು.

ಜಾನಪದ ತಜ್ಞರಾದ ಡಿ.ಕೆ. ರಾಜೇಂದ್ರ ಅಧ್ಯಕ್ಷತೆ ವಹಿಸಿದ್ದರು ಹಾಗೂ ಶೈಲಜಾ ಹಿರೇಮಠ ಮುಖ್ಯ ಅತಿಥಿಯಾಗಿದ್ದರು. ಕವಿಗೋಷ್ಠಿ ಉಪ ಸಮಿತಿಯ ಅಧ್ಯಕ್ಷ ಸುರೇಶ್, ಉಪ ವಿಶೇಷಾಧಿಕಾರಿ ಜಿ.ಸೋಮಶೇಖರ್, ಕಾರ್ಯಾಧ್ಯಕ್ಷೆ ಪ್ರೊ.ಎನ್.ಕೆ. ಲೋಲಾಕ್ಷಿ, ಉಪಾಧ್ಯಕ್ಷ ಮಹೇಶ್ ದಳಪತಿ ಭಾಗವಹಿಸಿದ್ದರು.

ಪಾಡ್ದನದ ಮೂಲಕ ತುಳುನಾಡಿನ ದೈವಗಳ ಕುರಿತ ದಕ್ಷಿಣ ಕನ್ನಡದ ಜಯಂತಿ ಜಯಗುಜರನ್ ಅವರ ಗಾಯನ, ಹಾಸನದ ದೇವಾನಂದ ವರಪ್ರಸಾದ್ ಜಾನಪದ ಗಾದೆಗಳ 'ಪದ'ಹಾಡಿದಾಗ 'ಉಘೇ ಮಾದಪ್ಪ' ಘೋಷಣೆ ಮೊಳಗಿತು. ಚಾಮರಾಜನಗರದ ಗಾಯಕ ಸಿ.ಎಂ. ನರಸಿಂಹಮೂರ್ತಿ, ಮಲೆಮಹದೇಶ್ವರ, ಬಿಳಿಗಿರಿ ರಂಗಯ್ಯನನ್ನು ವರ್ತಮಾನಕ್ಕೆ ತಂದರು. ಕೊಪ್ಪಳದ ಜೀವನಸಾಬ ವಾಲೀಕಾರ ಲಾವಣಿ ಪದ ಹಾಗೂ ಬಸವಣ್ಣನ ಕುರಿತು ತ್ರಿಪದಿ ಪ್ರಸ್ತುತಪಡಿಸಿದರು.

ಬಿಇಒ, ಬಿಸಿಎಂ ಅಧಿಕಾರಿಗಳಿಗೆ ನೋಟಿಸ್

ಕೋಲಾರ: ಸಮೀಕ್ಷೆ ಆ್ಯಪ್‌ಗೆ ಲಾಗಿನ್ ಆಗದಿರುವ ಜಿಲ್ಲೆಯ ಆರೂ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಹಾಗೂ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ (ಬಿಸಿಎಂ) ಜಿಲ್ಲಾಧಿಕಾರಿ ಎಂ.ಆರ್.ರವಿ ನೋಟಿಸ್ ನೀಡಿದ್ದಾರೆ.

ವಿಳಂಬ ಪ್ರಕ್ರಿಯೆ, ಕರ್ತವ್ಯ ಲೋಪ ಹಾಗೂ ಬೇಜವಾಬ್ದಾರಿ ಸಂಬಂಧ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ. 'ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಸೆ.22ರಂದು ಆರಂಭ ಆಗಿದ್ದು, ಗಣತಿದಾರರು ಮೊಬೈಲ್ ಆ್ಯಪ್‌ನಲ್ಲಿ ಕಡ್ಡಾಯವಾಗಿ ಲಾಗಿನ್ ಆಗಿ ಕರ್ತವ್ಯ ನಿರ್ವಹಿಸುವಂತೆ ಸೂಚಿಸಲಾಗಿತ್ತು. ಹಲವು ಗಣತಿದಾರರು ತಮ್ಮ ತಾಲ್ಲೂಕು ವ್ಯಾಪ್ತಿಯಲ್ಲಿ ಲಾಗಿನ್ ಆಗದೆ ಇರುವುದು ಕಂಡು ಬಂದಿದೆ' ಎಂದಿದ್ದಾರೆ.

ಆರು ತಾಲ್ಲೂಕುಗಳ ಒಟ್ಟು 645 ಗಣತಿದಾರರು ತಮಗೆ ವಹಿಸಿದ ಸಮೀಕ್ಷೆ ವ್ಯಾಪ್ತಿಯಲ್ಲಿ ಸೆ.25ರ ಸಂಜೆ 4.30ರವರೆಗೆ ಮೊಬೈಲ್ ಆ್ಯಪ್‌ನಲ್ಲಿ ಲಾಗಿನ್ ಆಗಿಲ್ಲ. ಹೀಗಾಗಿ, ಈ ಅವಧಿವರೆಗೆ ಸಮೀಕ್ಷೆ ಕಾರ್ಯದಲ್ಲಿ ಕುಂಠಿತವಾಗಿರುತ್ತದೆ ಎಂದು ತಿಳಿಸಿದ್ದಾರೆ.

ಶನಿವಾರ, ಸೆಪ್ಟೆಂಬರ್ 27, 2025 | ₹ 7.00

prajavani.net prajavani • www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಶಸ್ತಿಯ ಗರಿ



ಜಿಎಸ್‌ಐ ಭೂ ವಿಜ್ಞಾನಿ ಶ್ರದ್ಧಾಂಜಲಿ ಶುಭದರ್ಶಿನಿ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರೀಯ ಜಿಯೋಸೈನ್ಸ್ ಪ್ರಶಸ್ತಿ 2024 ಪ್ರದಾನ ಮಾಡಿದರು

ಕಡಲಾಮೆಯ ಕಳೇಬರ



ಕೇರಳದ ತಿರುವನಂತಪುರ ಸಮೀಪದ ಶಂಖುಮುಗಂ ಕಡಲ ತೀರದಲ್ಲಿ ಕಡಲಾಮೆಯ ಕಳೇಬರ ಶುಕ್ರವಾರ ಕಂಡು ಬಂತು

ಗಾಂಜಾ ವಶ: ಬೆಂಗಳೂರು ವಿಭಾಗದಲ್ಲೇ ಹೆಚ್ಚು 8 | ಕರ್ನಾಟಕ ಖಾದಿ ಬ್ರಾಂಡ್‌ಗೆ ಉತ್ತೇಜನ 3

ಅ.7ಕ್ಕೆ ಸಮೀಕ್ಷೆ ಮುಗಿಸಿ: ಸಿ.ಎಂ

ಜಿಲ್ಲಾಧಿಕಾರಿಗಳು, ಜಿ.ಪಂ, ಸಿಇಒಗಳ ಸಭೆಯಲ್ಲಿ ನಿತ್ಯ ಪ್ರಗತಿಯ ಮೇಲೆ ನಿಗಾಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಕಾರಣಕ್ಕೂ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅವಧಿಯನ್ನು ವಿಸ್ತರಿಸುವುದಿಲ್ಲ. ಅಕ್ಟೋಬರ್ 7ರ ಒಳಗೆ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು ಮಾಡಿದ್ದಾರೆ.

ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ (ಸಿಇಒ) ಜತೆಗೆ ಶುಕ್ರವಾರ ನಡೆಸಿದ ವಿಡಿಯೊ ಸಂವಾದದಲ್ಲಿ ಸಮೀಕ್ಷೆಯ ಪ್ರಗತಿ ಕುರಿತು ಮಾಹಿತಿ ಪಡೆದ ಸಿದ್ದರಾಮಯ್ಯ, ನಿಗದಿತ ಅವಧಿಯೊಳಗೆ ಸಮೀಕ್ಷೆ ಪೂರ್ಣಗೊಳಿಸಲೇಬೇಕು ಎಂದು ನಿರ್ದೇಶನ ನೀಡಿದರು.



ಸಿದ್ದರಾಮಯ್ಯ



1.43 ಕೋಟಿ ಮನೆಗಳ ಸಮೀಕ್ಷೆ ನಡೆಸಬೇಕಿದೆ. ಆದರೆ ಈವರೆಗೆ 2.76 ಲಕ್ಷ ಮನೆಗಳ ಸಮೀಕ್ಷೆ ಮಾತ್ರ ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದಾಗ, ಮುಖ್ಯಮಂತ್ರಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

‘ಸಮೀಕ್ಷೆಗೆ ಬಳಸುತ್ತಿರುವ ಆ್ಯಪ್‌ನಲ್ಲಿ ಸಮಸ್ಯೆ ಇದೆ, ನೆಟ್‌ವರ್ಕ್ ಸಿಗುತ್ತಿಲ್ಲ, ಸಮೀಕ್ಷೆ ನಡೆಸುವುದು ಕಷ್ಟವಾಗಿದೆ. ಸೂಚಿತ ಅವಧಿಯಲ್ಲಿ ಸಮೀಕ್ಷೆ ಪೂರ್ಣಗೊಳಿಸಲು ಸಾಧ್ಯವಿಲ್ಲ’ ಎಂದು ಶಿಕ್ಷಕರು ದೂರುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳಿದರು. ‘ಅವೆಲ್ಲವನ್ನೂ ಬಗೆಹರಿಸಲು ಅಗತ್ಯ ಕ್ರಮ ತೆಗೆದುಕೊಳ್ಳಿ’ ಎಂದು ಸಿದ್ದರಾಮಯ್ಯ ಸೂಚಿಸಿದರು ಎಂದು ಮಾಹಿತಿ ನೀಡಿವೆ.

‘ಇದು ಕೇವಲ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಮೀಕ್ಷೆಯಲ್ಲ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಸಿಇಒಗಳು ಪ್ರಗತಿ ಬಗ್ಗೆ ಪ್ರತಿ ದಿನ ಪರಿಶೀಲನೆ ನಡೆಸಬೇಕು. ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು’ ಎಂದು ಸೂಚಿಸಿದ್ದಾರೆ.

‘ಸಮೀಕ್ಷೆ ಕಾರ್ಯಕ್ಕೆ ನಿಯೋಜಿಸಿರುವ ಎಲ್ಲ ಶಿಕ್ಷಕರು ತಮಗೆ ವಹಿಸಲಾಗಿರುವ ಕಾರ್ಯವನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸಬೇಕು. ಯಾವುದೇ ಶಿಕ್ಷಕರು ಸಮೀಕ್ಷೆ ಕಾರ್ಯಕ್ಕೆ ಅಸಹಕಾರ ತೋರಿಸಬಾರದು. ಇದು ಸರ್ಕಾರಿ ಕೆಲಸವಾಗಿದ್ದು, ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಬಾರದು. ನಿರ್ಲಕ್ಷ್ಯ ವಹಿಸುವ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ. ‘ಶಿಕ್ಷಕರಿಗೆ ಗೌರವಧನದ ಬಗ್ಗೆ ಯಾವುದೇ ಅನುಮಾನ ಬೇಡ. ಈಗಾಗಲೇ ಗೌರವಧನ ಬಿಡುಗಡೆ ಮಾಡಿದ್ದೇವೆ. ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಸಮೀಕ್ಷಾ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು’ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ವಿಡಿಯೊ ಸಂವಾದದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ, ಶಿವರಾಜ ತಂಗಡಗಿ, ಕೃಷ್ಣ ಬೈರೇಗೌಡ, ರಹೀಂ ಖಾನ್, ಬೈರತಿ ಸುರೇಶ್, ಮಧು ಬಂಗಾರಪ್ಪ, ಎನ್.ಎಸ್. ಬೋಸರಾಜು, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ ಆರ್. ನಾಯ್ಕ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಭಾಗಿಯಾಗಿದ್ದರು.

ಜಿಲ್ಲಾಧಿಕಾರಿಗಳಿಗೆ ಸೂಚನೆ

- ತಾಂತ್ರಿಕ ಸಮಸ್ಯೆಗಳು ಎದುರಾದರೆ, ಸ್ಥಳೀಯ ಮಟ್ಟದಲ್ಲಿಯೇ ಇತರ ಇಲಾಖೆಗಳ ತಾಂತ್ರಿಕ ಸಿಬ್ಬಂದಿಯ ನೆರವು ಪಡೆದು ಬಗೆಹರಿಸಿಕೊಳ್ಳಬೇಕು
- ಕೆಲವು ಜಿಲ್ಲೆಗಳಲ್ಲಿ ಸಮೀಕ್ಷೆ ನಿಧಾನಗತಿಯಲ್ಲಿದ್ದು, ಚುರುಕುಗೊಳಿಸಬೇಕು. ಅಗತ್ಯವಿರುವಲ್ಲಿ ಅನುದಾನಿತ ಶಾಲೆಗಳ ಶಿಕ್ಷಕರನ್ನೂ ಸಮೀಕ್ಷಕರಾಗಿ ನಿಯೋಜಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರೊಂದಿಗೂ ಈ ಕುರಿತು ಸಂಪರ್ಕದಲ್ಲಿರಬೇಕು
- ಸಮೀಕ್ಷಾ ಕಾರ್ಯದ ಮೇಲ್ವಿಚಾರಣೆಗಾಗಿ ಪ್ರತಿ ತಾಲ್ಲೂಕಿಗೂ ಜಿಲ್ಲಾ ಮಟ್ಟದ ಅಧಿಕಾರಿಯೊಬ್ಬರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಬೇಕು
- ಸಮೀಕ್ಷೆ ಸಂದರ್ಭದಲ್ಲಿ ಮನೆಗಳಿಗೆ ಬೀಗ ಹಾಕಿದ್ದರೆ, ಅಂತಹ ಮನೆಗಳಿಗೆ ಪುನಃ ಭೇಟಿ ನೀಡಿ ಸಮೀಕ್ಷೆ ಪೂರ್ಣಗೊಳಿಸಬೇಕು
- ಪ್ರತಿದಿನ ಜಿಲ್ಲಾವಾರು ಶೇ 10ರಷ್ಟು ಗುರಿ ಸಾಧಿಸಬೇಕು. ಪ್ರಾದೇಶಿಕ ಆಯುಕ್ತರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಮೀಕ್ಷೆ ಪ್ರಗತಿಯ ಪರಿಶೀಲನೆ ನಡೆಸಬೇಕು

‘ಸಮೀಕ್ಷೆಗೆ ಮಾಹಿತಿ ಕಡ್ಡಾಯವಲ್ಲ’

‘ರಾಜ್ಯದ ಎಲ್ಲ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲು ಉದ್ದೇಶಿಸಲಾಗಿದ್ದರೂ, ಸಮೀಕ್ಷೆಯಲ್ಲಿ ಭಾಗವಹಿಸುವುದು ಜನರ/ಕುಟುಂಬಗಳ ಸ್ವಯಂ ಇಚ್ಛೆಗೆ ಬಿಡಲಾಗಿದೆ’ ಎಂದು ಹಿಂದುಳಿದ ವರ್ಗಗಳ ಆಯೋಗ ಹೇಳಿದೆ.

ಸಮೀಕ್ಷೆಗೆ ತಡೆ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ನ್ಯಾಯಪೀಠ, ಮಾಹಿತಿ ನೀಡುವುದು ಕಡ್ಡಾಯವಲ್ಲ ಎಂದು ಸ್ಪಷ್ಟಪಡಿಸುವಂತೆ ಆಯೋಗಕ್ಕೆ ನಿರ್ದೇಶನ ನೀಡಿತ್ತು.

ಈ ಬೆನ್ನಲ್ಲೇ, ಸುತ್ತೋಲೆ ಹೊರಡಿಸಿರುವ ಆಯೋಗವು, ‘ಸಮೀಕ್ಷೆಗೆ ಮಾಹಿತಿ ನೀಡಿ ಎಂದು ಆಯೋಗವು ಒತ್ತಾಯ ಮಾಡುತ್ತಿಲ್ಲ’ ಎಂದು ಹೇಳಿದೆ.

‘ಮಿಗ್–21’ಕ್ಕೆ ವಿದಾಯ...

ಪಿಟಿಐ ಚಿತ್ರ



‘ಮಿಗ್–21’ ಯುದ್ಧ ವಿಮಾನದ ಬಳಕೆಗೆ ವಿದಾಯ ಹೇಳುವ ಯಾನಕ್ಕೆ ಚಂಡೀಗಢ ವಾಯುನೆಲೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಾಯುಪಡೆ ಅಧಿಕಾರಿಗಳು ಹಾರಾಟಕ್ಕೆ ಸನ್ನದ್ಧರಾಗಿದ್ದರು

ವಿವರ ಪುಟ 3

ಪರಿಸರ ಹೋರಾಟಗಾರ ವಾಂಗ್ಚುಕ್ ಬಂಧನ

ಲೇಹ್ (ಪಿಟಿಐ): ಲೇಹ್‌ನಲ್ಲಿ ಬುಧವಾರ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರನ್ನು ಪೊಲೀಸರು ಶುಕ್ರವಾರ ಇಲ್ಲಿ ಬಂಧಿಸಿದ್ದಾರೆ.



ಸೋನಮ್ ವಾಂಗ್ಚುಕ್

ಲಡಾಖ್ ಡಿಜಿಪಿ ಎಸ್.ಡಿ.ಸಿಂಗ್ ಜಮ್ವಾಲ್ ನೇತೃತ್ವದಲ್ಲಿ ಪೊಲೀಸರ ತಂಡವು ಮಧ್ಯಾಹ್ನ 2.30ಕ್ಕೆ ವಾಂಗ್ಚುಕ್ ಅವರನ್ನು ವಶಕ್ಕೆ ಪಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅವರ ವಿರುದ್ಧ ಯಾವ ಆರೋಪ ಹೊರಿಸಲಾಗಿದೆ ಎಂಬುದನ್ನು ಸ್ಪಷ್ಟಪಡಿಸಲಾಗಿಲ್ಲ.

ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಬೆಂಬಲಿಸಿ ಲೇಹ್ ಅಪೆಕ್ಸ್ ಬಾಡಿ (ಎಲ್‌ಎಬಿ) ಬುಧವಾರ ಬಂದ್‌ಗೆ ಕರೆ ನೀಡಿತ್ತು. ಈ ವೇಳೆ ಪೊಲೀಸರು ಮತ್ತು ಪ್ರತಿಭಟನಕಾರರ ಮಧ್ಯೆ ಸಂಘರ್ಷ ಉಲ್ಬಣಗೊಂಡು, ನಾಲ್ವರು ಮೃತಪಟ್ಟು, 80ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.

3



ಲೇಹ್ ಪಟ್ಟಣದಲ್ಲಿ ಶುಕ್ರವಾರ ಗಸ್ತು ಕಾಯುತ್ತಿದ್ದ ಅರೆಸೇನಾ ಪಡೆಯ ಯೋಧರು —ಪಿಟಿಐ ಚಿತ್ರ



ಸೋನಮ್ ವಾಂಗ್ಚುಕ್ ಅವರ ಬಂಧನವು ದುರದೃಷ್ಟಕರ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ತಾನು ನೀಡಿದ್ದ ಭರವಸೆಗಳಿಂದ ಹಿಂದೆ ಸರಿಯುತ್ತಿದೆ

ಒಮರ್ ಅಬ್ದುಲ್ಲಾ, ಮುಖ್ಯಮಂತ್ರಿ ಜಮ್ಮು ಮತ್ತು ಕಾಶ್ಮೀರ



ವಾಂಗ್ಚುಕ್ ಅವರನ್ನು ಅಪರಾಧಿಯಂತೆ ನಡೆಸಿಕೊಳ್ಳಲಾಯಿತು. ಪೊಲೀಸರು ಮನೆಯನ್ನು ಲೂಟಿ ಮಾಡಿದ್ದು, ಅವರನ್ನು (ವಾಂಗ್ಚುಕ್) ದೇಶದ್ರೋಹಿ ಎಂಬಂತೆ ಬಿಂಬಿಸಲಾಗುತ್ತಿದೆ

ಗೀತಾಂಜಲಿ ಅಂಗ್ಮೊ, ಸೋನಮ್ ವಾಂಗ್ಚುಕ್ ಪತ್ನಿ

ರೈತರ ಖಾತೆಗೆ ‘ಸೈಬರ್’ ಕನ್ನ

‘ಪಿಎಂ ಕಿಸಾನ್ ಸಮ್ಮಾನ್ ನಿಧಿ’ ಪಡೆಯುವ ರೈತರಿಗೆ ವಂಚನೆ

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ವಂಚಕರು ಹಣ ದೋಚಲು ದಿನಕ್ಕೊಂದು ತಂತ್ರ ರೂಪಿಸುತ್ತಿದ್ದು, ಸರ್ಕಾರಿ ಯೋಜನೆಗಳ ಹೆಸರಿನಲ್ಲಿ ರೈತರ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕಲು ಆರಂಭಿಸಿದ್ದಾರೆ.

ಕೇಂದ್ರ ಸರ್ಕಾರದ ‘ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ’ ಪಡೆಯುವ ರೈತರ ವಾಟ್ಸ್‌ಆ್ಯಪ್‌ಗೆ ಸೈಬರ್ ಕಳ್ಳರು ‘ಎಪಿಕೆ ಕುತಂತ್ರಾಂಶ’ ಕಳುಹಿಸಿ, ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನೂ ಖಾಲಿ ಮಾಡುತ್ತಿದ್ದಾರೆ.

ವಾಟ್ಸ್‌ಆ್ಯಪ್‌ಗೆ ಬಂದ ಎಪಿಕೆ ಫೈಲ್‌ಗಳನ್ನು ತೆರೆದು ಹಣ ಕಳೆದುಕೊಂಡ ಕೃಷಿಕರು, ತಮ್ಮ ವ್ಯಾಪ್ತಿಯ ಸೈಬರ್ ಅಪರಾಧ ಠಾಣೆಗಳಲ್ಲಿ ದೂರು ನೀಡುತ್ತಿದ್ದಾರೆ. ರಾಜ್ಯದ ವಿವಿಧ ಸೈಬರ್ ಅಪರಾಧ ಠಾಣೆಗಳಲ್ಲಿ ಈ ರೀತಿಯ ಹಲವು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಇಲಾಖೆಯ ಮೂಲಗಳು ಹೇಳಿವೆ.

3

ಏಳು ತಿಂಗಳಲ್ಲಿ 8,620 ಪ್ರಕರಣ

ರಾಜ್ಯದಲ್ಲಿ ಆನ್‌ಲೈನ್ ವಂಚನೆ ಪ್ರಕರಣಗಳು ಕಡಿಮೆ ಆಗಿಲ್ಲ. ಕಳೆದ ಏಳು ತಿಂಗಳಲ್ಲಿ 8,620 ಪ್ರಕರಣಗಳು ದಾಖಲಾಗಿವೆ (ಜನವರಿಯಿಂದ ಜುಲೈ ಅಂತ್ಯದವರೆಗೆ). ಈ ಪೈಕಿ ಬೆಂಗಳೂರು ನಗರದಲ್ಲಿಯೇ 6,311 ಪ್ರಕರಣ ಗಳು ದಾಖಲಾಗಿವೆ. ಬೆಂಗಳೂರು ಗ್ರಾಮಾಂತರ, ಮೈಸೂರು, ವಿಜಯಪುರ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಹೆಚ್ಚಿನ ವಂಚನೆ ಪ್ರಕರಣಗಳು ವರದಿ ಆಗುತ್ತಿವೆ.



ರಾಜ್ಯದಲ್ಲಿ 2023ರಲ್ಲಿ 22,253 ಪ್ರಕರಣಗಳು, 2024ರಲ್ಲಿ 22,472 ಸೈಬರ್ ಪ್ರಕರಣಗಳು ದಾಖಲಾಗಿದ್ದವು.

ಎಪಿಕೆ ಅಪಾಯ: ಇರಲಿ ಎಚ್ಚರ

- ಎಪಿಕೆ ಫೈಲ್ ಡೌನ್‌ಲೋಡ್ ಮಾಡಿಕೊಂಡರೆ ಹಣ ಕಳೆದುಕೊಳ್ಳುವ ಸಾಧ್ಯತೆ ಇದೆ. ಎಪಿಕೆ ಫೈಲ್ ಬಂದ ತಕ್ಷಣವೇ ಡಿಲೀಟ್ ಮಾಡಬೇಕು
- ಅನಾಮಧೇಯ ಕರೆಗಳು ಬಂದಾಗ ತಾಳ್ಮೆಯಿಂದ ಪ್ರತಿಕ್ರಿಯಿಸಬೇಕು. ಕನ್ನಡದಲ್ಲೇ ಮಾತನಾಡಿದರೆ ಅನಾಹುತ ಕಡಿಮೆ
- ಫಲಾನುಭವಿಗಳು ಸರ್ಕಾರಿ ಇಲಾಖೆಗೇ ತೆರಳಿ ಸಂಬಂಧಿಸಿದ ಯೋಜನೆಗಳ ಮಾಹಿತಿ ಪಡೆದುಕೊಳ್ಳಬೇಕು
- ಮೊಬೈಲ್ ಫೋನ್ ಅಥವಾ ಸಾಮಾಜಿಕ ಮಾಧ್ಯಮಗಳ ಮೂಲಕ ವೈಯಕ್ತಿಕ ಮಾಹಿತಿ, ಬ್ಯಾಂಕ್ ಖಾತೆಯ ವಿವರ ಹಂಚಿಕೊಳ್ಳಬಾರದು
- ಆನ್‌ಲೈನ್ ವಂಚನೆಯ ಅನುಮಾನ ಬಂದರೆ 1930ಕ್ಕೆ (ಸೈಬರ್ ಸಹಾಯವಾಣಿ) ಕರೆ ಮಾಡಿ ಮಾಹಿತಿ ನೀಡಬೇಕು

ನವತಾರೆಯರ ನವೋಲ್ಲಾಸ

ನವರಾತ್ರಿ ಎನ್ನುವುದು ನಮ್ಮೊಳಗಿನ ಶಕ್ತಿಯ ಉದ್ದೀಪನವೇ ಆಗಿದೆ. 'ಲೋಕದ ಅಪನಂಬಿಕೆಯ ನೋಟವನ್ನು ಕ್ಷುಲ್ಲಕವಾಗಿಸಿ, ಅಂತರಂಗದಲ್ಲಿ ಅಡಗಿರುವ ಶಕ್ತಿಗೆ ಓಗೊಡು. ಆತ್ಮವಿಶ್ವಾಸದ ನಡೆಯಿದ್ದರೆ ಅಂದುಕೊಂಡಿದ್ದನ್ನು ಸಾಧಿಸಿಯೇ ತೀರಬಹುದು' ಎಂದು ಸಾರುತ್ತದೆ ಒಂಬತ್ತು ದಿನಗಳ ಸಂಭ್ರಮ. ಅಸಾಮಾನ್ಯ ಎನಿಸುವ ಒಂಬತ್ತು ವೃತ್ತಿಗಳಲ್ಲಿರುವ ಹೆಣ್ಣುಮಕ್ಕಳ ಬದುಕಿನ ಇನಿದನಿ ಈ ಬಾರಿಯ 'ಭೂಮಿಕಾ' ವಿಶೇಷ. 'ಅಯ್ಯಬ್ಬ ಹೆಣ್ಣುಮಕ್ಕಳು ಈ ಕೆಲಸ ಮಾಡೋದಾ' ಎನ್ನುವವರ ವಾರೆನೋಟವನ್ನು ಲೆಕ್ಕಿಸದೆ, ಸವಾಲುಗಳನ್ನೇ ಸಾಮರ್ಥ್ಯವಾಗಿಸಿಕೊಂಡು ವೃತ್ತಿಬದ್ಧತೆ ತೋರಿರುವ ನಮ್ಮ ನಡುವಿನ ಈ ನವದುರ್ಗೆಯರು ರೂಪಾ ಕೆ.ಎಂ. ಅವರಿಗೆ ನೀಡಿರುವ ಸ್ವವಿವರ ಇಲ್ಲಿದೆ..



ಪೌರೋಹಿತ್ಯ– ನಮ್ಮದೂ ಇರಲಿ ಪಾರುಪತ್ಯ


37 ವರ್ಷಗಳಿಂದ ಪೌರೋಹಿತ್ಯ ಮಾಡುತ್ತಾ ಬಂದಿದ್ದೇನೆ. ಆದರೆ ಉದ್ದೇಶಪೂರ್ವಕವಾಗಿ ಈ ವೃತ್ತಿಗೆ ಬಂದವಳಲ್ಲ. ಟಿ. ನರಸೀಪುರದಲ್ಲಿ ದೊಡ್ಡ ಜಮೀನ್ದಾರರಾಗಿದ್ದ ತಂದೆಯ ಮಗಳು ನಾನು. ಸಂಪ್ರದಾಯಸ್ಥ ಕುಟುಂಬವಾಗಿತ್ತು. ಮನೆಯಲ್ಲಿ ಪೂಜೆ–ಪುನಸ್ಕಾರ ಮಾಡುವಾಗೆಲ್ಲ ಪುರೋಹಿತರು ಬರುತ್ತಿದ್ದರು. ಅಲ್ಲಿಯವರೆಗೆ ಮನೆಯ ಯಜಮಾನಿಯರಂತಿದ್ದ ಹೆಣ್ಣುಮಕ್ಕಳು ಪುರೋಹಿತರು ಬಂದ ಕೂಡಲೇ ತೆರೆಮರೆಗೆ ಸರಿಯುತ್ತಿದ್ದರು. ನನಗೆ ಹದಿನಾರು ವರ್ಷಕ್ಕೆ ಮದುವೆಯಾಯಿತು. ನನ್ನ ತಂದೆ 52 ವರ್ಷಕ್ಕೆ ಕಾಲವಾದರು. ಆ ನಂತರ ಬದುಕಿನ ಬಗ್ಗೆ ಪ್ರಶ್ನೆಗಳು ಎದ್ದವು.

ದೇವರು ಯಾರು? ಗಂಡೋ–ಹೆಣ್ಣೋ?, ಪೂಜೆ ಮಾಡುವವರೆಲ್ಲ ನೆಮ್ಮದಿಯಿಂದ ಇರುವರೇ? ಯಾಕೆ ಈ ಪ್ರಪಂಚ ಒಂದೇ ತರಹ ಇಲ್ಲ ಎನ್ನುವಂಥ ಹಲವು ಜಿಜ್ಞಾಸೆಗಳು ಹುಟ್ಟಿಕೊಂಡವು. ಸುಶ್ರಾವ್ಯವಾಗಿ ಹಾಡುತ್ತಿದ್ದೆ. ಆ ಕಾರಣಕ್ಕೆ ಸತ್ಸಂಗಗಳಿಗೆ ಹೋಗುತ್ತಿದ್ದೆ. ಅಲ್ಲಿ ವಿಶ್ವಶಾಂತಿನಿಕೇತನದ ಸ್ವಾಮೀಜಿ ಬ್ರಹ್ಮದೇವ್‌ಜೀ ಸಿಕ್ಕರು. ಅವರು ಆಗಲೇ ವೇದಾಧ್ಯಯನದಲ್ಲಿ ದೊಡ್ಡ ಹೆಸರು ಮಾಡಿದ್ದರು. ಅವರೇ ನನ್ನ ಗುರುಗಳು. ಅವರಿಗೆ ಒಂದು ಪ್ರಶ್ನೆ ಮುಂದಿಟ್ಟೆ: 'ಈ ಸಾವು–ನೋವು ಯಾವ ಮಾನದಂಡದ ಮೇಲೆ ಬರುತ್ತವೆ?' ಎಂದು. ಅದಕ್ಕೆ ಉತ್ತರವೇನೋ ಸಿಕ್ಕಿತು. ಆದರೆ, ಉಳಿದ ಜಿಜ್ಞಾಸೆಗಳಿಗೆ ಹೇಗೆ ಉತ್ತರ ಕಂಡುಕೊಳ್ಳುವೆ ಎಂದು ಕೇಳಿದ ಸ್ವಾಮೀಜಿ, 'ವೇದ ಅಧ್ಯಯನ ಮಾಡು' ಎಂದು ಸಲಹೆ ಕೊಟ್ಟರು. ಸಂಸ್ಕೃತ ಜ್ಞಾನಕ್ಕಾಗಿ ಪರೀಕ್ಷೆಗಳನ್ನು ಬರೆದೆ.

ದೇವರು ಅಂದರೆ ಏನು ಎಂದು ವೇದದಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದೆ. ಜೀವನ ಎಂದರೇನು ಎಂಬುದನ್ನೂ ಅಷ್ಟೇ ಸ್ಪಷ್ಟವಾಗಿ ತಿಳಿಸಿಕೊಟ್ಟಿದೆ. ಜೀವನದಲ್ಲಿ ಇರುವುದು ಹದಿನಾರು ಸಂಸ್ಕಾರಗಳು, ಪಂಚ ಮಹಾಯಜ್ಞಗಳು. ವೇದಗಳಲ್ಲಿ ಶ್ರಾದ್ಧಮಂತ್ರಗಳಿಲ್ಲ. ಇನ್ನು ಹೆಣ್ಣು ಶ್ರಾದ್ಧ ಮಾಡಬಹುದೇ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಇದನ್ನೆಲ್ಲ ಕಲಿತ ಮೇಲೆ ಪಂಚ ಮಹಾಯಜ್ಞಗಳನ್ನು ಮನೆಯಲ್ಲಿಯೇ ಮಾಡಲು ಆರಂಭಿಸಿದೆ. ಸಂಧ್ಯಾವಂದನೆ ಮಾಡಬೇಕಿತ್ತು. ಉಪನಯನ ಮಾಡಿಸಿಕೊಂಡೆ. ಆಗ ದೊಡ್ಡ ವಿರೋಧವೇ ವ್ಯಕ್ತವಾಯಿತು. ಶಿವದಾರದವಳಿಗೆ ಜನಿವಾರ ಯಾಕೆ ಎಂಬ ಪ್ರಶ್ನೆ ಬಂತು. ಜನಿವಾರವೆಂಬುದು ಜಾತಿಯ ಸಂಕೇತವಲ್ಲ, ಅದು ಜ್ಞಾನದ ಸಂಕೇತ.

ಘನಪಾಠಿ ಕೃಷ್ಣಭಟ್ಟರು ನನಗೆ 16 ವರ್ಷ ಋಗ್ವೇದ ಪಾಠ ಮಾಡಿದರು. ಗುರುಗಳ ಮುಖೇನವೇ ಎಲ್ಲವನ್ನೂ ಕಲಿತೆ. ದರ್ಶನ, ಉಪನಿಷತ್ತುಗಳನ್ನು ಕಲಿತೆ. ವೇದ ಕಲಿತ ಮೇಲೆ ವೇದೋಕ್ತ ಜೀವನವನ್ನೇ ಮಾಡಬೇಕು. ಮನೆಯಲ್ಲಿಯೇ ಅಗ್ನಿಹೋತ್ರ ಮಾಡಲು ಶುರು ಮಾಡಿದೆ. ಸ್ವಾಮೀಜಿಯ ಮಾರ್ಗದರ್ಶನದಲ್ಲಿ 1995ರಲ್ಲಿ ಮೊದಲ ಬಾರಿಗೆ ಮಹಿಳೆಯರ ಪೌರೋಹಿತ್ಯದಲ್ಲೇ ಹುಡುಗಿಯೊಬ್ಬಳಿಗೆ ಉಪನಯನ ಮಾಡಿಸಲಾಯಿತು. ಅದೇ ಹುಡುಗಿಯ ಮದುವೆಯ ಪೌರೋಹಿತ್ಯವನ್ನು ನಾನೇ ವಹಿಸಿದ್ದೆ. ನೂರಾರು ಮದುವೆಗಳ ಪೌರೋಹಿತ್ಯ ವಹಿಸಿದ್ದೇನೆ. 28 ವರ್ಷಕ್ಕೆ ಯಜ್ಞ ಮಾಡಲು ಶುರು ಮಾಡಿದೆ. ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪೌರೋಹಿತ್ಯ ಕ್ಷೇತ್ರಕ್ಕೆ ಬರಬೇಕು. ಈವರೆಗೆ ನೂರಾರು ಹೆಣ್ಣುಮಕ್ಕಳಿಗೆ ಅವರ ಜಾತಿ ಯಾವುದು ಎಂದು ಸಹ ಕೇಳದೆ ಪೌರೋಹಿತ್ಯ ಕಲಿಸಿದ್ದೇನೆ. ಹೆಣ್ಣುಮಕ್ಕಳು ಹಬ್ಬ, ಹರಿದಿನ, ಪೂಜೆ, ಉಪವಾಸ ಎಲ್ಲವನ್ನೂ ಹೇಗೆ ಮಾಡುವುದು ಎನ್ನುವ ಗೊಂದಲದಲ್ಲಿಯೇ ಕಳೆದುಹೋಗುತ್ತಾರೆ. ದೇಹವನ್ನು ಹೈರಾಣಾಗಿಸಿಕೊಳ್ಳುತ್ತಾರೆ. ಒತ್ತಡದಿಂದ ಬದುಕುತ್ತಾರೆ. ಒತ್ತಡಮುಕ್ತರಾಗಲು ಅವರು ವೇದಗಳನ್ನು ಅಧ್ಯಯನ ಮಾಡಬೇಕು.

ಡಾ. ಪಿ. ಭ್ರಮರಾಂಬ ಮಹೇಶ್ವರಿ, ಪುರೋಹಿತೆ



ಹೆಸರಿಗೆ ಕ್ರೂರ, ಪ್ರೀತಿ ಅಪಾರ

ಬನ್ನೇರುಘಟ್ಟದಿಂದ ಮೂರು ಕಿ.ಮೀ ವ್ಯಾಪ್ತಿಯಲ್ಲಿರುವ ಚಲ್ಲೇಂದ್ರದೊಡ್ಡಿಯೇ ನನ್ನೂರು. ಮೊದಲಿನಿಂದಲೂ ಪ್ರಾಣಿಗಳೆಂದರೆ ಬಲು ಇಷ್ಟ. ಚಿಕ್ಕವಳಿದ್ದಾಗಿನಿಂದ ಕೋಳಿ, ಕುರಿ, ಮೇಕೆ, ಹಸು, ಎಮ್ಮೆ ಹೀಗೆ ಎಲ್ಲವನ್ನೂ ಚೆನ್ನಾಗಿ ಸಾಕಿ ಗೊತ್ತಿತ್ತು. ಗಂಡ ರಾಜು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿಯೇ ಕೆಲಸ ಮಾಡುತ್ತಿದ್ದರು. ಅವರ ಆಕಸ್ಮಿಕ ಅಗಲಿಕೆಯಿಂದಾಗಿ ಆ ಕೆಲಸ ನನಗೆ ಸಿಕ್ಕಿತು. ಆರಂಭದಲ್ಲಿ ಪ್ರಾಣಿಗಳ ಆಸ್ಪತ್ರೆಯಲ್ಲಿ ಸ್ವಚ್ಛ ಮಾಡುವ ಕೆಲಸ ಮಾಡುತ್ತಿದ್ದೆ. ಅಲ್ಲಿ ಶುಶ್ರೂಷೆಗಾಗಿ ಎಲ್ಲ ಬಗೆಯ ಪ್ರಾಣಿಗಳು, ಅವುಗಳ ಮರಿಗಳು ಬರುತ್ತಿದ್ದವು. ನನ್ನೊಳಗೆ ಸಹಜವಾಗಿ ಇದ್ದ ಪ್ರಾಣಿಪ್ರೀತಿಯಿಂದಾಗಿ 'ಅನಿಮಲ್ ಕೀಪರ್' ಹುದ್ದೆ ಸಿಕ್ಕಿತು. ಈವರೆಗೆ ಹುಲಿ, ಚಿರತೆ, ಜಿಂಕೆ, ಕೋತಿ ಮರಿಗಳನ್ನು ಶುಶ್ರೂಷೆ ಮಾಡಿ, ಒಂದು ವರ್ಷದವರೆಗೆ ಮಕ್ಕಳ ಹಾಗೆ ಸಾಕಿದ್ದೇನೆ. ಪ್ರಾಣಿಗಳು ಮಕ್ಕಳಂತೆ. ಕಚ್ಚುತ್ತವೆ, ಪರಚುತ್ತವೆ. ಅವುಗಳ ವರ್ತನೆಯನ್ನು ಸಹಿಸಿಕೊಳ್ಳಬೇಕು. ತಾಳ್ಮೆಯಿಂದ ನಾಜೂಕಾಗಿ ಹೇಳಿದರೆ ಅವು ಕೇಳುತ್ತವೆ. ಕೆಲವೊಮ್ಮೆ ಅವುಗಳಿಗೆ ಅನಾರೋಗ್ಯವಾದಾಗ ಭಯಪಟ್ಟಿದ್ದಿದೆ. ಅವು ಗುಣಮುಖವಾಗುವವರೆಗೂ ಚಡಪಡಿಕೆ ಇದ್ದೇ ಇರುತ್ತದೆ. ನನಗೆ 24 ವರ್ಷ ಇರುವಾಗ ಈ ವೃತ್ತಿಯನ್ನು ಆಯ್ಕೆ ಮಾಡಿಕೊಂಡೆ. ಇಬ್ಬರು ಗಂಡುಮಕ್ಕಳ ಬದುಕನ್ನು ರೂಪಿಸಲು ಈ ಉದ್ಯೋಗ ನೆರವಾಗಿದೆ.

ನಾವು ಅವುಗಳಿಗೆ ಕ್ರೂರಪ್ರಾಣಿಗಳೆಂದು ಹೇಳುತ್ತೇವೆ ಅಷ್ಟೆ. ಅವುಗಳ ನಿಜವಾದ ಭಾಷೆ ಪ್ರೀತಿಯೊಂದೇ. ನಾವು ಅವುಗಳ ಜೊತೆ ಹೇಗೆ ನಡೆದುಕೊಳ್ಳುತ್ತೇವೆ ಎನ್ನುವುದರ ಮೇಲೆ ಅವುಗಳ ವರ್ತನೆ ಇರುತ್ತದೆ.

ಸಾವಿತ್ರಮ್ಮ, ಅನಿಮಲ್ ಕೀಪರ್, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ

ಬದುಕು ರೂಪಿಸಿದ ಬಂದಿಖಾನೆ



ಜೈಲು ಎಂದರೆ ದೂರ ಸರಿಯುವವರೇ ಹೆಚ್ಚು. ಜೈಲಿಗೆ ಹೋಗಿ ಬಂದಿದ್ದಾರೆ ಎಂದರೆ ಅಂಥವರನ್ನು ಮಾತನಾಡಿಸಲು ಜನ ಹಿಂದೆ–ಮುಂದೆ ನೋಡುತ್ತಾರೆ. ಆದರೆ, ನಿತ್ಯ ನೂರಾರು ಕೈದಿಗಳ ಮಧ್ಯೆಯೇ ಇದ್ದು, ಅವರ ಸುಧಾರಣೆಗಾಗಿ ಶ್ರಮಿಸುತ್ತಿರುವುದಕ್ಕೆ ಖುಷಿ ಇದೆ. ವೃತ್ತಿಬದ್ಧತೆಗೆ ಹೆಸರಾಗಿರುವ, ಶತಮಾನದ ಇತಿಹಾಸ ಹೊಂದಿರುವ ಕಲಬುರಗಿ ಕೇಂದ್ರ ಕಾರಾಗೃಹದ ಪ್ರಥಮ ಮಹಿಳಾ ಮುಖ್ಯ ಅಧೀಕ್ಷಕಿ ಎಂದು ಹೆಸರಿಸಿದಾಗಲೆಲ್ಲ ಸಂತೋಷ ಇಮ್ಮಡಿಯಾಗುತ್ತದೆ. ಮೂಲತಃ ಕೋಲಾರ ಜಿಲ್ಲೆಯ ಚಿಂತಾಮಣಿ ನನ್ನೂರು. 2006ರಿಂದ ಕಾರಾಗೃಹ ಸೇವೆಯಲ್ಲಿ ಇದ್ದೇನೆ. ಮೈಸೂರು, ಮಡಿಕೇರಿ, ಬೆಂಗಳೂರಿನ ದೇವನಹಳ್ಳಿ ಬಳಿ ಇರುವ ಬಯಲು ಬಂದಿಖಾನೆ, ಪರಪ್ಪನ ಅಗ್ರಹಾರ, ವಿಜಯಪುರ, ಧಾರವಾಡ, ಶಿವಮೊಗ್ಗದಲ್ಲಿ ಸೇವೆ ಸಲ್ಲಿಸಿದ್ದೇನೆ.

ನಮ್ಮ ತಂದೆ–ತಾಯಿಗೆ ನಾವು ಮೂವರೂ ಹೆಣ್ಣುಮಕ್ಕಳೇ ಇದ್ದು, ನಾನು ವೈದ್ಯೆಯಾಗಬೇಕು ಎಂಬುದು ತಂದೆಯವರ ಕನಸಾಗಿತ್ತು. ಹಾಗಾಗಿ, ಪಿಯುಸಿಯಲ್ಲಿ ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಂಡಿದ್ದೆ. ಆದರೆ ನಾನು ಆಡಳಿತಾಧಿಕಾರಿ ಆಗಬೇಕು ಎಂಬ ಆಸೆಯನ್ನು ಬಿಟ್ಟಿರಲಿಲ್ಲ. ಅಪ್ಪನ ಆಸೆಯಂತೆ ಮೊದಲು ವೈದ್ಯಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಬಿಡಿಎಸ್ (ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿ) ಅಭ್ಯಾಸ ಮಾಡಿ ಅಪ್ಪನ ಆಸೆಯನ್ನು ಈಡೇರಿಸಿದೆ. ಬಳಿಕ 2004ರಲ್ಲಿ ಕೆಎಸ್‌ಪಿಎಸ್ (ಕರ್ನಾಟಕ ಸ್ಟೇಟ್ ಪ್ರಿಸನ್ ಸರ್ವಿಸ್) ಪರೀಕ್ಷೆ ಎದುರಿಸಿ, ತಮಿಳುನಾಡಿನ ವೆಲ್ಲೂರಿನಲ್ಲಿ ತರಬೇತಿ ಮುಗಿಸಿಬಂದೆ. ಯಾವುದೋ ಅಪರಾಧಕ್ಕೆ ಸೆರೆಮನೆ ಸೇರುವ ತಾಯಿಯ ಜೊತೆಗೆ ಆಕೆಯ ಪುಟ್ಟ ಮಗುವೂ ಬಂದಿರುತ್ತದೆ. ಅಂಥ ಪ್ರಕರಣಗಳು ನನ್ನನ್ನು ಹೆಚ್ಚು ಭಾವನಾತ್ಮಕವಾಗಿಸುತ್ತವೆ. ಆದರೆ, ಆ ಮಗುವಿಗೆ ಜೈಲಿನಲ್ಲಿಯೂ ಒಳ್ಳೆಯ ವಾತಾವರಣ ಕಲ್ಪಿಸಬೇಕು ಎಂಬುದು ನೆನಪಿಗೆ ಬರುತ್ತಿದ್ದಂತೆಯೇ ಮತ್ತೆ ಉತ್ಸಾಹದಿಂದ ಪುಟಿದೇಳುತ್ತೇನೆ.

ಡಾ. ಅನಿತಾ ಆರ್., ಮುಖ್ಯ ಅಧೀಕ್ಷಕಿ, ಕಲಬುರಗಿ ಕೇಂದ್ರ ಕಾರಾಗೃಹ

ಗೇರ್‌ಗೆ ರೈಟ್ ಗೇಲಿಗೆ ಬ್ರೇಕ್



ನನ್ನನ್ನು ನೋಡಿಕೊಳ್ಳುವವರು ಯಾರೂ ಇರಲಿಲ್ಲ. ನನಗೆ ನಾನೇ. 'ಏನಾದರೂ ಮಾಡು ನಿಯತ್ತಾಗಿ ಮಾಡು. ಕಷ್ಟಪಟ್ಟು ದುಡಿದು ತಿನ್ನುವುದಕ್ಕೆ ವೃತ್ತಿ ಮುಖ್ಯ. ಅದರಲ್ಲಿ ಮೇಲು–ಕೀಳು ಎಂಬುದೆಲ್ಲ ಇಲ್ಲ' ಎಂಬ ಮಾತನ್ನು ನಾನು ಕುಸಿದಾಗಲೆಲ್ಲ ಹೇಳಿಕೊಳ್ಳುತ್ತೇನೆ. ಹಾಗೆ ಹೇಳಿಕೊಳ್ಳುತ್ತಲೇ ಆಟೊ ಓಡಿಸಲು ಕಲಿತೆ. ಬೆಂಗಳೂರಿನ ಟ್ರಾಫಿಕ್‌ನಲ್ಲಿ ಹೆಣ್ಣುಮಗಳೊಬ್ಬಳು ಆಟೊ ಓಡಿಸುವುದು ಅಷ್ಟು ಸುಲಭದ ಮಾತಲ್ಲ. ಗೇರ್ ಎಲ್ಲಿದೆ ಗೊತ್ತಾ, ಬ್ರೇಕ್, ಹಾಕೋಕೆ ಬರುತ್ತಾ ಎಂದೆಲ್ಲ ವ್ಯಂಗ್ಯವಾಡಿದವರ ಮುಂದೆ, ದಾರಿ ಯಾವುದೇ ಇರಲಿ, ಸರಾಗವಾಗಿ ಆಟೊ ಓಡಿಸಬಲ್ಲೆ.

ಮೂರು ವರ್ಷಗಳ ಹಿಂದೆ ಹೋಟೆಲ್‌ನಲ್ಲಿ ಮುಸುರೆ ತಿಕ್ಕುತ್ತಿದ್ದೆ. ಹುಡುಗಿಯೊಬ್ಬಳು ಆಟೊ ಓಡಿಸುತ್ತಿದ್ದುದನ್ನು ನೋಡಿದೆ. ಆಗ ನಾನೂ ಹೀಗೆ ಆಟೊ ಓಡಿಸಿದರೆ ಎಷ್ಟು ಚೆನ್ನಾಗಿರುತ್ತದೆ ಅಲ್ಲವೇ ಅಂದುಕೊಂಡಿದ್ದೆ. ಅಷ್ಟರಲ್ಲಿ ನನ್ನ ಗೆಳತಿಯೊಬ್ಬಳು ಆ್ಯಪ್ ಆಧಾರಿತ ಕ್ಯಾಬ್ ಸೇವೆಯಾದ 'ನಮ್ಮ ಯಾತ್ರಿ'ಯಲ್ಲಿ ಹೆಣ್ಣುಮಕ್ಕಳಿಗೆ ಆಟೊ ಓಡಿಸಲು ತರಬೇತಿ ನೀಡುತ್ತಿರುವುದಾಗಿ ಹೇಳಿದಳು. ಆರಂಭದಲ್ಲಿ ತುಂಬಾ ಹೆದರಿದ್ದೆ. ಸೈಕಲ್ ಕೂಡ ಓಡಿಸಿ ಗೊತ್ತಿರಲಿಲ್ಲ. 'ನಿನ್ನ ಕೈಲಿ ಆಗುತ್ತೆ. ನೀನು ಕಲಿತೀಯ' ಎಂದು ಗೆಳತಿ ಹುರಿದುಂಬಿಸಿದಳು. ನಾನು ಓದಿದ್ದು 7ನೇ ತರಗತಿವರೆಗಷ್ಟೆ. ಆಗ ನನಗೆ 37 ವರ್ಷ. ನನಗೆ ಇದೆಲ್ಲ ಸಾಧ್ಯವೇ ಎಂಬ ಅಪನಂಬಿಕೆಯಿಂದಲೇ ಡ್ರೈವಿಂಗ್ ಸೀಟ್ ಮೇಲೆ ಕುಳಿತೆ. ಕಲಿಯುತ್ತಾ ಹೋದೆ. ಕಲಿಕೆ ಎಂಬುದು ದೃಢವಾಗುತ್ತಾ ಬಂದಂತೆ ಆತಂಕ ಕಡಿಮೆಯಾಗುತ್ತಾ ಬಂತು.

ಬೆಳಿಗ್ಗೆ 6ರಿಂದ 11ರವರೆಗೆ ಆಟೊ ಓಡಿಸುತ್ತೇನೆ. ಮೂವರು ಮಕ್ಕಳು. ಗಂಡ ತೀರಿಕೊಂಡು 10 ವರ್ಷಗಳಾಗಿವೆ. ಇದೇ ಆಟೊ ಓಡಿಸಿ ಮಗಳಿಗೆ ಮದುವೆ ಮಾಡಿದ್ದೇನೆ. ಒಬ್ಬ ಮಗ ಮೆಕ್ಯಾನಿಕ್ ಆಗಿದ್ದಾನೆ, ಮತ್ತೊಬ್ಬ ಎಸ್ಸೆಸ್ಸೆಲ್ಸಿ ಓದುತ್ತಿದ್ದಾನೆ. ಎಲ್ಲರಂತೆ ಚಂದದ ಬದುಕು ಕಟ್ಟಿಕೊಳ್ಳಬೇಕು ಎಂಬ ಛಲದ ಮುಂದೆ ಎಲ್ಲ ಸಮಸ್ಯೆಗಳೂ ಗೌಣವಾದವು. ಈಗಲೂ ಹೆಣ್ಣುಮಕ್ಕಳ ಚಾಲನಾ ಪ್ರತಿಭೆಯ ಬಗ್ಗೆ ಉಳಿದ ಚಾಲಕರು ಅನುಮಾನ ವ್ಯಕ್ತಪಡಿಸುತ್ತಾರೆ. ಸುಮ್ಮನೆ ಹಾರ್ನ್ ಮಾಡೋದು, ಜಾಗ ಬಿಡದೇ ಸತಾಯಿಸುವುದೆಲ್ಲ ಮಾಡುತ್ತಾರೆ. ಇದಕ್ಕೆಲ್ಲ ತಲೆಕೆಡಿಸಿಕೊಳ್ಳುವುದುಂಟೇ?

ತಮಿಳ್ ಸೆಲ್ವಿ, ಆಟೊ ಚಾಲಕಿ

ಬುಸ್‌ಬುಸ್ ಹಾವು ಕೊಟ್ಟಿದೆ ತಾವು



ಮೈಸೂರಿನ 'ದಿ ಲಿಯಾನ ಟ್ರಸ್ಟ್'ನಲ್ಲಿ ಸರೀಸೃಪಗಳ ಮೇಲ್ವಿಚಾರಕಿಯಾಗಿ 2018ರಲ್ಲಿ ವೃತ್ತಿ ಆರಂಭಿಸಿದೆ. ಆರಂಭದಲ್ಲಿ ಸ್ವಯಂಸೇವಕಿಯಂತೆ ಕೆಲಸ ಮಾಡಿದೆ. ಮೊದಲಿನಿಂದಲೂ ನನಗೆ ಪ್ರಾಣಿಗಳೆಂದರೆ ಪ್ರೀತಿ. ಹಾಗಾಗಿ ಇದನ್ನೇ ವೃತ್ತಿಯನ್ನಾಗಿ ಆಯ್ದುಕೊಂಡೆ. ಹಾವುಗಳೆಂದರೆ ತುಂಬಾ ಅಪಾಯಕಾರಿ ಎಂದು ಭಾವಿಸಲಾಗುತ್ತದೆ. ಆದರೆ, ಅದು ನಿಜವಲ್ಲ. ಅವುಗಳ ವಾಸಕ್ಕೆ ಲಿಯಾನದಲ್ಲಿ ನಾವು ಸೂಕ್ತ ವ್ಯವಸ್ಥೆ ಮಾಡಿದ್ದೇವೆ. ಸಂಶೋಧನೆಗಾಗಿ ಅವುಗಳ ವಿಷ ಸಂಗ್ರಹಿಸುವ ಕೆಲಸ ಮಾಡುತ್ತೇನೆ. ಜತೆಗೆ ನೈಸರ್ಗಿಕ ನಡವಳಿಕೆ ಪ್ರದರ್ಶಿಸಲು ಅನುವಾಗುವಂತೆ ಅವುಗಳಿಗೆ ಶುದ್ಧ ನೀರು ಹಾಗೂ ಆಹಾರವನ್ನು ಪೂರೈಸುತ್ತೇವೆ.

ಹಾವುಗಳ ಒಡನಾಟದಿಂದ ನನ್ನೊಳಗಿನ ತಾಳ್ಮೆ ಹೆಚ್ಚಿತು. ಹಾವುಗಳು ಸಾಮಾನ್ಯವಾಗಿ ದೀರ್ಘಕಾಲದವರೆಗೆ ಅಡಗಿಕೊಳ್ಳುತ್ತವೆ. ತಿಂಗಳುಗಟ್ಟಲೆ ಆಹಾರವನ್ನು ಬಿಟ್ಟು ಹೋಗುತ್ತವೆ. ಅವು ಇತರ ಪ್ರಾಣಿಗಳಂತೆ ಹೆಚ್ಚು ಅಭಿವ್ಯಕ್ತಿ ಮಾಡದೇ ಇರುವುದರಿಂದ ಅವುಗಳ ನಡವಳಿಕೆಯನ್ನು ಅರ್ಥ ಮಾಡಿಕೊಂಡು, ಭಾವನೆಗಳಿಗೆ ಸ್ಪಂದಿಸಲು ತಾಳ್ಮೆ ಬೇಕು.

ವಿಶೇಷ ಎನಿಸುವ ವೃತ್ತಿ ಆಯ್ಕೆಯನ್ನು ನನ್ನ ಕುಟುಂಬ ಮೊದಲಿನಿಂದಲೂ ಬೆಂಬಲಿಸಿಕೊಂಡು ಬಂದಿದೆ. ಆರಂಭದಲ್ಲಿ ಹಾವುಗಳ ಕಾರಣಕ್ಕೆ ಅವರಿಗೆ ಭಯ ಇತ್ತು. ನಂತರ ಅವರು ಅರ್ಥ ಮಾಡಿಕೊಂಡರು. ಈಗ ನನ್ನ ತಂದೆ–ತಾಯಿ ಮನೆಯಲ್ಲಿ ಒಟ್ಟಿಗೆ ವಾಸಿಸುವ ಇಲಿ ಮತ್ತು ಹಾವನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಹಾವಿಗೆ ರಾಬರ್ಟ್ ಎಂದು ಹೆಸರಿಟ್ಟಿದ್ದಾರೆ.

ಲಿಸಾ ಗೊನ್ಸಾಲ್ವಿಸ್, ಸರೀಸೃಪ ಮೇಲ್ವಿಚಾರಕಿ




ನನ್ನ ಮುದ್ದುಮರಿ ತುಂಟಾಟವೆ ಬರೀ

ಕಾಡಿನಲ್ಲಿಯೇ ಹುಟ್ಟಿ ಬೆಳೆದಿರುವುದರಿಂದ ಆನೆಗಳ ಬಗ್ಗೆ ಭಯ, ಅಂಜಿಕೆ ಯಾವತ್ತೂ ಇಲ್ಲ. ಮತ್ತೆ ನಾನು ಸಾಕಿರುವುದೆಲ್ಲ ಮರಿ ಆನೆಗಳನ್ನು. ಮಕ್ಕಳಂತೆ ರಚ್ಚೆ ಮಾಡುವ, ಮುದ್ದು ಬಂದರೆ ಗುದ್ದಾಡುವ ಪುಟ್ಟಪುಟ್ಟ ಮರಿ ಆನೆಗಳನ್ನು ಸಾಕಿ ಅವುಗಳನ್ನು ದೊಡ್ಡದು ಮಾಡುವುದರಲ್ಲಿ ಇರುವಷ್ಟು ಖುಷಿ ಬೇರೆ ಯಾವುದರಲ್ಲಿಯೂ ಈವರೆಗೆ ಸಿಕ್ಕಿಲ್ಲ. ಕರ್ನಾಟಕ– ತಮಿಳುನಾಡು ಗಡಿಯಲ್ಲಿರುವ ಮದುಮಲೆ ರಾಷ್ಟ್ರೀಯ ಉದ್ಯಾನವೇ ನಮಗೂ ಆನೆಗಳಿಗೂ ಆಶ್ರಯ ತಾಣ. ನನ್ನ ಗಂಡನ ಊರು ಬಂಡೀಪುರ ಸಮೀಪದಲ್ಲಿದೆ. ನನ್ನ ತಂದೆಯ ಊರು ಕೇರಳ. ಬೆಳೆದಿದ್ದೆಲ್ಲ ಕರ್ನಾಟಕದಲ್ಲಿ. ಆನೆಗಳಿಂದಲೇ ಬದುಕಿಗೊಂದು ಅರ್ಥ ಹಾಗೂ ಅಸ್ತಿತ್ವ ದೊರಕಿದೆ. ಆನೆ ಪಳಗಿಸುವುದನ್ನು ನನ್ನ ಗಂಡ ಬೊಮ್ಮನ್ ಕಲಿತಿದ್ದಾರೆ. ನನ್ನದೇನಿದ್ದರೂ ಮರಿ ಆನೆಗಳ ದೇಖರೇಖಿ. ಕೆಲವೊಮ್ಮೆ ಅವುಗಳಿಗೆ ಜ್ವರ, ಶೀತ ಬಂದುಬಿಡುತ್ತದೆ. ಹೊಟ್ಟೆಗೆ ಏನನ್ನೂ ತಿನ್ನುವುದಿಲ್ಲ. ಆಗೆಲ್ಲ ಜೀವಕ್ಕೆ ತೀರಾ ಸಂಕಟವಾಗಿ ಊಟ ಬಿಟ್ಟುಬಿಡುತ್ತೇನೆ. ಅವು ಹುಷಾರಾದ ಮೇಲೆ ನನಗೇ ಜೀವ ಬಂದಂತೆ ಆಗುತ್ತದೆ. ಆನೆ ನೋಡಿಕೊಳ್ಳುವ ಕೆಲಸಕ್ಕೆ ಸರ್ಕಾರದ ವತಿಯಿಂದ ಒಂದು ವರ್ಷದ ಹಿಂದೆ ಅಧಿಕೃತವಾಗಿ ನೇಮಕವಾಗಿರುವುದಕ್ಕೆ ಖುಷಿ ಇದೆ. ಸದ್ಯಕ್ಕೆ ಈ ಕ್ಯಾಂಪ್‌ನಲ್ಲಿ 27 ಆನೆಗಳಿವೆ. ಪ್ರತಿಯೊಂದಕ್ಕೂ ಹೆಸರಿಟ್ಟಿದ್ದೇನೆ. ರಘು, ಬೊಮ್ಮಿ, ಇಂದ್ರ, ಕಾಮಾಕ್ಷಿ, ಬಾಮಾ, ಕೃಷ್ಣ, ಸ್ಯಾನ್‌ಗೋನ್ ಹೀಗೆ. ಅವುಗಳೊಂದಿಗೆ ಬೆಸೆದುಕೊಂಡಿರುವ ನನ್ನ ಮತ್ತು ನನ್ನ ಗಂಡನ ಬದುಕು ತುಂಬಾ ಚಂದವಾಗಿದೆ ಎಂದು ಅನ್ನಿಸುತ್ತದೆ. ಆನೆಗಳು ನೀಡುವಷ್ಟು ಪ್ರೀತಿಯನ್ನು ಮನುಷ್ಯರು ನೀಡಲು ಸಾಧ್ಯವೇ ಇಲ್ಲ.

ಬೆಳ್ಳಿ, ಕಾವಾಡಿಗರು, ಮದುಮಲೆ ರಾಷ್ಟ್ರೀಯ ಉದ್ಯಾನ

ನೀರಿಗಿಳಿಸಿದೆ ಬದುಕು



ದೋಣಿಗೆ ಹುಟ್ಟು ಹಾಕುವುದನ್ನು ಅಪ್ಪ ನನಗೆ ಕಲಿಸಿದ್ದರು. ನನ್ನ ಅಪ್ಪನಿಗೆ ಅವರ ಅವ್ವ ಹೇಗೆ ದೋಣಿ ನಡೆಸಬೇಕು ಎಂಬುದನ್ನು ಹೇಳಿಕೊಟ್ಟಿದ್ದಳು. ಹೀಗೆ ವಂಶಪಾರಂಪರ್ಯವಾಗಿ ಬಂದ ಈ ವೃತ್ತಿಯನ್ನು ಎಂಟು ವರ್ಷಗಳಿಂದಲೂ ಆಸ್ಥೆಯಿಂದ ನಡೆಸಿಕೊಂಡು ಬರುತ್ತಿದ್ದೇನೆ. ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಮೊಳವಾಡ ಗ್ರಾಮ ಹಾಗೂ ರಾಯಬಾಗ ತಾಲ್ಲೂಕಿನ ಚಿಂಚಲಿ ಗ್ರಾಮದ ಮಧ್ಯೆ ಸಂಚಾರ. ಕೃಷ್ಣಾನದಿ ಈ ಎರಡೂ ತಾಲ್ಲೂಕುಗಳನ್ನು ವಿಭಜಿಸಿದೆ.

ಈ ನದಿಯಲ್ಲಿ ಹುಟ್ಟುಹಾಕಿ ದೋಣಿ ನಡೆಸುವುದು ನನಗೆ ಒಂದು ಬಗೆಯ ಖುಷಿ ಕೊಡುವ ಕೆಲಸ. ಸದ್ಯಕ್ಕೆ ಹೊಟ್ಟೆ ತುಂಬಿಸುತ್ತಿದೆ. ಶಾಲೆಗೆ ಹೋಗುವವರು, ಕೆಲಸಕ್ಕೆ ಹೋಗುವವರು ಸೇರಿದಂತೆ ಬೇರೆ ಬೇರೆ ಊರುಗಳಿಗೆ ಹೋಗಬೇಕಾದವರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ದೋಣಿಯಲ್ಲಿ ಕರೆದೊಯ್ದು ತಲುಪಿಸುತ್ತೇನೆ. ಮೊದಲಿನಿಂದಲೂ ನೀರೆಂದರೆ ಬಲು ಇಷ್ಟ. ನೀರಿನ ಮಧ್ಯೆಯೇ ಬೆಳೆದವಳು ನಾನು. ಹಾಗಾಗಿ, ಯಾವ ರೀತಿಯಲ್ಲಿಯೂ ಅಂಜಿಕೆ ಆಗಲಿಲ್ಲ. ದೋಣಿ ಊರಿನದ್ದು. ಪಂಚಾಯಿತಿಯಿಂದ ಟೆಂಡರ್ ಕರೆಯಲಾಗುತ್ತದೆ. ಜುಲೈ, ಆಗಸ್ಟ್‌ನಲ್ಲಿ ನದಿಯ ಹರಿವು ಜೋರಾಗಿರುತ್ತದೆ. ಆಮೇಲೆ ನದಿ ತಟಸ್ಥವಾಗಿ ಉಳಿಯುತ್ತದೆ. ಒಬ್ಬರಿಗೆ ₹ 10ರಂತೆ ಟಿಕೆಟ್ ತೆಗೆದುಕೊಳ್ಳುತ್ತೇನೆ.

ಆರಂಭದಲ್ಲಿ ಕೈಯಲ್ಲಿಯೇ ಹುಟ್ಟು ಹಾಕಿ ದೋಣಿಯನ್ನು ನಡೆಸುತ್ತಿದ್ದೆ. ಈಗ 30 ಮಂದಿ ಹೋಗುವ ಸಾಮರ್ಥ್ಯವಿರುವ ದೊಡ್ಡದಾದ ಯಂತ್ರಚಾಲಿತ ದೋಣಿಯನ್ನು ಚಾಲನೆ ಮಾಡುತ್ತೇನೆ. 20 ವರ್ಷದವಳಿದ್ದಾಗಿನಿಂದ ಈ ಕೆಲಸ ಮಾಡುತ್ತಿದ್ದೇನೆ. ಖುಷಿ ಇದೆ. ಮುಂದೆ ಸೇತುವೆ ನಿರ್ಮಾಣವಾಗಬಹುದು. ವರ್ಷವಿಡೀ ದೋಣಿ ನಡೆಸಿಯೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೇನೆ. ನದಿಯೊಳಗೆ ದೋಣಿ ಇಳಿಯುವಾಗ ಆಗುವ ಖುಷಿಯ ಮುಂದೆ ಉಳಿದೆಲ್ಲವೂ ಗೌಣ.

ರೇಖಾ ಮಾರುತಿ ಅಂಬಿ, ದೋಣಿ ಚಾಲಕಿ

ಒಂದು ಸೆಲ್ಫಿ ಪ್ಲೀಸ್...

ನಾನು ಕೊಡಗು ಮೂಲದವಳು. ಮದುವೆಯಾದ ಮೇಲೆ ಬೆಂಗಳೂರಿಗೆ ಬಂದೆ. ಸದ್ಯಕ್ಕೆ ದೊಮ್ಮಲೂರಿನಲ್ಲಿ ವಾಸಿಸುತ್ತಿದ್ದೇನೆ. ಮೊದಲು ಚಪ್ಪಲಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ಕೊರೊನಾ ಲಾಕ್‌ಡೌನ್ ವೇಳೆ ಆ ಅಂಗಡಿಯನ್ನು ಮುಚ್ಚಲಾಯಿತು. ಹಾಗಾಗಿ, ಬೇರೆ ಕೆಲಸ ನೋಡಿಕೊಳ್ಳುವುದು ಅನಿವಾರ್ಯವಾಯಿತು. ಕೆಲಸಕ್ಕಾಗಿ ಹಲವು ಕಡೆ ಅಲೆದೆ. ಎಲ್ಲಿಯೂ ಸಿಗಲಿಲ್ಲ. ಆಗ ಆರಂಭದಲ್ಲಿ ಡಂಜೊದಲ್ಲಿ ಡೆಲಿವರಿ ಸರ್ವಿಸ್ ಮಾಡಿದೆ. ಈಗ ರ್‍ಯಾಪಿಡೊದಲ್ಲಿ ಊಟ, ತಿಂಡಿಯ ಪಾರ್ಸೆಲ್ ಡೆಲಿವರಿ ಮಾಡುತ್ತೇನೆ.

ಆರಂಭದಲ್ಲಿ ಕೆಲಸ ಹೇಗೋ ಏನೋ ಎಂಬ ಆತಂಕ ಇತ್ತು. ಆದರೆ, ಬರಬರುತ್ತಾ ಆತ್ಮವಿಶ್ವಾಸ ಬಂದಿತು. ಆರಂಭದಲ್ಲಿ, ಈ ಡೆಲಿವರಿ ಸರ್ವಿಸ್‌ನಲ್ಲಿ ಹಣ ಗಳಿಕೆ ಕಷ್ಟ ಅನ್ನಿಸಿತ್ತು. ಹೆಣ್ಣುಮಕ್ಕಳು ಡೆಲಿವರಿ ಸರ್ವಿಸ್ ಕೊಡುತ್ತಿದ್ದಾರೆ ಎಂದರೆ ಹಲವು ಗ್ರಾಹಕರು ಬಹಳ ಚೆನ್ನುಡಿಗಳನ್ನಾಡಿ, ಹುರಿದುಂಬಿಸುತ್ತಾರೆ. ಕೆಲವರು ಸೆಲ್ಫಿ ತೆಗೆದುಕೊಳ್ಳುತ್ತಾರೆ. ಅದನ್ನೆಲ್ಲ ನೋಡುವಾಗ ಖುಷಿಯಾಗುತ್ತದೆ. ಅಲ್ಲದೆ, ಈ ಕೆಲಸಕ್ಕೆ ಬಂದಿದ್ದು ಸಾರ್ಥಕವಾಯಿತು ಎಂಬ ಭಾವ ಮೂಡುತ್ತದೆ.

ಸರಿತಾ ಎಂ.ಆರ್., ಡೆಲಿವರಿ ಸೇವಾದಾತೆ



ಜೀವನ ನೀಡುವ ನಿರ್ಜೀವ

40 ವರ್ಷ ಆಸುಪಾಸಿನ ಗಂಡಸಿನ ಹೆಣವನ್ನು ಒಂದು ಟೇಬಲ್ ಮೇಲೆ ಮಲಗಿಸಿದ್ದರು. ಅದನ್ನು ನೋಡಿದಾಗ ನಡುಗಿಹೋದೆ. ಒಳಗಿನಿಂದ ದುಃಖ ಒತ್ತರಿಸಿಕೊಂಡು ಬಂತು. ಆದರೆ ಅಳುತ್ತಾ ಕುಳಿತರೆ ಮನೆಯಲ್ಲಿ ಇರುವ ಒಬ್ಬಳೇ ಪುಟ್ಟ ಮಗಳನ್ನು ಸಾಕುವುದು ಹೇಗೆ ಎಂಬ ಪ್ರಶ್ನೆ ಎದುರಾಯಿತು. ಮೊದಲೇ ನಾನು ಸಿಂಗಲ್ ಮದರ್. ಆಗ ಮರುಯೋಚನೆ ಮಾಡಲಿಲ್ಲ. ವೈದ್ಯರ ಆಣತಿಯಂತೆ ಶವವನ್ನು ಕೊಯ್ಯಲು ಶುರು ಮಾಡಿದೆ. ಅವರು ಕೊಟ್ಟ ಪ್ರತಿ ಆಜ್ಞೆಯನ್ನೂ ನಿಷ್ಠೆಯಿಂದ ಪಾಲಿಸಿದೆ. ಅದು ಲೋಕದ ಕಣ್ಣಿಗೆ ಹೆಣ ಕೊಯ್ಯುವ ಕೆಲಸವೇ ಆಗಿರಬಹುದು. ಆದರೆ, ನನಗೆ ಹೊಟ್ಟೆ ತುಂಬಿಸುವ ಕಾಯಕವಾಗಿತ್ತು.

ಆಸ್ಪತ್ರೆಯಲ್ಲಿ ಸ್ವಚ್ಛ ಮಾಡುವ ಕೆಲಸದಲ್ಲಿದ್ದೆ. ರವಿಕುಮಾರ್ ಎನ್ನುವ ವೈದ್ಯರು ಪೋಸ್ಟ್‌ಮಾರ್ಟಂನಲ್ಲಿ ಸಹಾಯಕಳಾಗಿ ಹೇಗೆ ಕೆಲಸ ಮಾಡಬೇಕು ಎಂಬುದನ್ನು ಕಲಿಸಿಕೊಟ್ಟರು. ಆರಂಭದಲ್ಲಿ ಹೆಣಗಳನ್ನು ನೋಡಿ ಮೂರು ಸಲ ಜೋರು ಜ್ವರವೇ ಬಂದುಬಿಟ್ಟಿತ್ತು. ಪದೇ ಪದೇ ನೋಡುತ್ತಿದ್ದರೆ ಭಯವೆಲ್ಲ ಮಾಯವಾಗುತ್ತದೆ ಎಂದು ವೈದ್ಯರೊಬ್ಬರು ಹೇಳಿದ್ದು ನಿಜವಾಯಿತು. ಆಮೇಲೆ ತಿರುಗಿ ನೋಡಿದ್ದೇ ಇಲ್ಲ. ಈಗ ಈ ವೃತ್ತಿ ಆರಂಭಿಸಿ 18 ವರ್ಷಗಳೇ ಆಗಿವೆ. ಇಡೀ ಏಷ್ಯಾದಲ್ಲಿ ಪೋಸ್ಟ್‌ಮಾರ್ಟಂ ಕೆಲಸ ಮಾಡುತ್ತಿರುವ ಏಕೈಕ ಮಹಿಳೆಯೆಂದು ಹಲವು ಸಂಘ ಸಂಸ್ಥೆಗಳು ಸನ್ಮಾನ ಮಾಡಿವೆ. ಆದರೆ, ನನ್ನ ಕೆಲಸ ಮಾತ್ರ ಇನ್ನೂ ಕಾಯಂ ಆಗಿಲ್ಲ. ಸದ್ಯಕ್ಕೆ ಎಚ್‌.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆಯ ಸರಗೂರು ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಕೆಲಸ ಮಾಡುತ್ತಿದ್ದೇನೆ. ಕೊಲೆ ಪ್ರಕರಣದ ಶವಗಳಿದ್ದರೂ ಹೋಗಿ ಪೋಸ್ಟ್‌ಮಾರ್ಟಂ ಮಾಡಿ ಬರುತ್ತೇನೆ. ಇದಲ್ಲದೇ ಗುಂಡ್ಲುಪೇಟೆ, ನಂಜನಗೂಡಿನ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಪೋಸ್ಟ್‌ಮಾರ್ಟಂಗೆ ಸಹಾಯ ಮಾಡಲು ಕರೆದರೆ, ಅಲ್ಲಿಗೂ ಹೋಗಿ ಕೆಲಸ ಹೇಳಿಕೊಟ್ಟು ಬರುತ್ತೇನೆ. ಇದೇ ಕೆಲಸದಿಂದ ಜನ ಗುರುತು ಹಿಡಿಯುವಂತಾಗಿದೆ.

ರಾಜಮ್ಮ, ಪೋಸ್ಟ್‌ಮಾರ್ಟಂ ಸಹಾಯಕಿ





ಅಮ್ಮ ಹೇಳ್ತಾಳೆ

ಬಳಸಿ ಉಳಿದ ತೆಂಗಿನಕಾಯಿ ಕೆಡದಂತೆ ಮಾಡಲು, ಚಿಪ್ಪಿನ ಒಳಭಾಗದಲ್ಲಿ ಉಪ್ಪು ಸವರಿ ಇಡಬೇಕು. ಉಪ್ಪಿನಲ್ಲಿ ನೈಸರ್ಗಿಕ ಸಂರಕ್ಷಣಾ ಧಾತುಗಳು ಇರುವುದರಿಂದ, ತೆಂಗಿನಕಾಯಿ ದೀರ್ಘಕಾಲದವರೆಗೆ ಕೆಡುವುದಿಲ್ಲ. ಅಲ್ಲದೆ ಅದರ ಬಣ್ಣವೂ ಹಾಳಾಗದೆ ತಾಜಾತನದಿಂದ ಕೂಡಿರುತ್ತದೆ.

ವಿಮಲಾ ಶೇಷಾದ್ರಿ
ಮಂಗಳೂರು

ಅತ್ಯಾಧುನಿಕ ಯಂತ್ರ ಬಳಕೆ, ಕಸುಬುದಾರರಿಗೆ ತರಬೇತಿ, ವಹಿವಾಟು ವೃದ್ಧಿಗೆ ಯೋಜನೆ

ಕರ್ನಾಟಕ ಖಾದಿ ಬ್ರ್ಯಾಂಡ್‌ಗೆ ಉತ್ತೇಜನ

• ಉಮೇಶಭಟ್ಟ ಪಿ.ಎಚ್



ಎಲ್ಲಾ ವಯೋಮಾನದವರು ಖಾದಿ ಉಡುಪುಗಳನ್ನು ಬಳಸಲು ಕರ್ನಾಟಕ ಖಾದಿಬ್ರ್ಯಾಂಡ್‌ನಡಿ ಹೆಚ್ಚು ಮಾರುಕಟ್ಟೆ ಪರಿಚಯಿಸುತ್ತಲೇ ಉತ್ಪಾದಕರಿಗೂ ಆಧುನಿಕ ತರಬೇತಿ ನೀಡಲು ಮಂಡಳಿ ಕಾರ್ಯೋನ್ಮುಖವಾಗಿದೆ

ಡಿ.ಬಿ.ನಟೇಶ, ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಬೆಂಗಳೂರು: ಕರ್ನಾಟಕ ಖಾದಿಯೆಂದರೆ ಇನ್ನು ಮುಂದೆ ಬರೀ ಸೀರೆ, ಪಂಚೆಗಳಷ್ಟೇ ಇರುವುದಿಲ್ಲ. ಬದಲಿಗೆ ಯುವಜನರು, ಮಹಿಳೆಯರು, ಮಕ್ಕಳೂ ಇಷ್ಟ ಪಡುವ ಟ್ರೆಂಡಿ ಉಡುಪುಗಳೂ ಜನರನ್ನು ಆಕರ್ಷಿಸಲಿವೆ. ಇವುಗಳನ್ನು ಖಾದಿಗೆ ಆಧುನಿಕ ಸ್ಪರ್ಶ ನೀಡಿ ಮಾರುಕಟ್ಟೆಗೆ ಪರಿಚಯಿಸಿ ವಹಿವಾಟು ವಿಸ್ತರಿಸಲು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮುಂದಾಗಿದೆ.

ಗಾಂಧೀಜಿಯಿಂದ ಪ್ರೇರಿತವಾಗಿ ಏಳು ದಶಕದಿಂದಲೂ ಖಾದಿ ಮಂಡಳಿ ಕಸುಬುದಾರರು, ದೇಸಿ ಉತ್ಪನ್ನಗಳ ಬಳಕೆಗೆ ಪ್ರೋತ್ಸಾಹಿಸುತ್ತಾ ಬಂದಿದೆ. ಆದರೂ ಖಾದಿ ಎನ್ನುವುದು ರಾಜಕೀಯ ನೇತಾರರು ಹಾಗೂ ಆಸಕ್ತರ ಉಡುಪು ಎನ್ನುವಂತಾಗಿದೆ. ಇದನ್ನು ಬದಲಾಯಿಸಿ ಎಲ್ಲ ವಯಸ್ಸಿನವರೂ ಹೆಚ್ಚೆಚ್ಚು ಬಳಸುವಂತೆ ಮಾಡುವ ಪ್ರಯತ್ನಗಳು ನಡೆದಿವೆ.

ಖಾದಿ ಉಡುಪುಗಳು ನೈಸರ್ಗಿಕ ಬಣ್ಣದಿಂದ ತಯಾರಿಸುವಂತವು. ಪರಿಸರ ಸುಸ್ಥಿರತೆ ಜತೆಗೆ ಆರೋಗ್ಯದ ದೃಷ್ಟಿಯಿಂದಲೂ ಖಾದಿ ಬಳಕೆ ಎಲ್ಲಾ ಕಾಲಕ್ಕೂ ಉತ್ತಮ ಎನ್ನುವ ಅಂಶಕ್ಕೆ ಒತ್ತು ನೀಡಿ ಉತ್ತೇಜಿಸಲಾಗುತ್ತಿದೆ.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಸೂಚನೆ ಮೇರೆಗೆ ಭಾರತ ಸರ್ಕಾರದ 'ಖಾದಿ ಇಂಡಿಯಾ' ಮಾದರಿಯಲ್ಲಿಯೇ ವಿಧಾನಸೌಧದ ಆವರಣದಲ್ಲಿಯೇ ಕರ್ನಾಟಕ ಖಾದಿ ಪ್ರದರ್ಶನ ಆಯೋಜಿಸುವ ತಯಾರಿಯೂ ನಡೆಯುತ್ತಿದೆ.

ಖಾದಿ ಉತ್ಪಾದನೆಗೆ ಚರಕ ಹಾಗೂ ಕೈಮಗ್ಗವನ್ನು ಕಸುಬುದಾರರು ಬಳಸುತ್ತಿದ್ದರೂ ಗುಜರಾತ್, ಪಶ್ಚಿಮ ಬಂಗಾಳ ಸಹಿತ ಹಲವು ರಾಜ್ಯಗಳಲ್ಲಿ ಆಧುನಿಕ ಯಂತ್ರ ಬಳಕೆಯಿದೆ. ಕರ್ನಾಟಕದಲ್ಲೂ ಇದನ್ನು ಹಂತಹಂತವಾಗಿ ಹೆಚ್ಚಿಸಲು ಮಂಡಳಿ ಯೋಜಿಸುತ್ತಿದೆ.

ಯಂತ್ರಗಳ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸಿ ವರದಿ ನೀಡುವಂತೆ ಮೂರು ಎಂಜಿನಿಯರಿಂಗ್ ಕಾಲೇಜುಗಳ ಜತೆಯಲ್ಲಿ ಒಪ್ಪಂದವೂ ಆಗಿದೆ. ಬೆಂಗಳೂರಿನ ಸಿಲ್ವರ್ ಜುಬಿಲಿ ಚಾಮರಾಜೇಂದ್ರ ತಂತ್ರಜ್ಞಾನ ಕಾಲೇಜು, ದಾವಣಗೆರೆಗೆ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಗದಗ ಜಿಲ್ಲೆ ಹುಲಕೋಟಿ ಪಾಟೀಲ ತಂತ್ರಜ್ಞಾನ ಸಂಸ್ಥೆಗಳು ಯಂತ್ರಗಳ ಆಧುನೀಕರಣಕ್ಕೆ ಪೂರಕವಾಗಿ ಕೆಲಸ ಮಾಡಲಿವೆ.

ಜವಳಿ ಕ್ಷೇತ್ರದಲ್ಲಿನ ಬದಲಾವಣೆಗಳು, ಜವಳಿ ಉತ್ಪನ್ನಗಳ ಮೌಲ್ಯವರ್ಧನೆಗೆ ಪೂರಕವಾದ ಮಾರುಕಟ್ಟೆ ಆಧರಿತ ಮಾಹಿತಿಯನ್ನೂ ವರದಿಯಲ್ಲಿ ನೀಡಲಿವೆ. ತರಕಾರಿ, ಹಣ್ಣುಗಳಿಂದ ಸಾವಯವ ಬಣ್ಣಗಳನ್ನು ತೆಗೆಯುವ ತರಬೇತಿ ಯೋಜನೆ ರೂಪಿಸಲಿವೆ.

ಖಾದಿ ಉತ್ಪಾದನೆ ಮಾಡುವವರು ಹಾಗೂ ಮಂಡಳಿ ನೌಕರರಿಗೂ ಆಧುನಿಕ ಮಾರ್ಗಗಳ ತರಬೇತಿ ನೀಡಲು ಮುಂದಿನ ವಾರ ಗುಜರಾತ್‌ಗೆ ಕಳುಹಿಸಲಾಗುತ್ತಿದೆ. ಅಕ್ಟೋಬರ್ ಮೊದಲ ವಾರ 50 ಮಂದಿಯ ಮೊದಲ ತಂಡ ತೆರಳಿ ನೂಲು ತೆಗೆಯುವಿಕೆಯ ತಂತ್ರಜ್ಞಾನ, ಯಂತ್ರೋಪಕರಣಗಳ ಬಳಕೆ, ಮೌಲ್ಯವರ್ಧನ ಕ್ರಮಗಳ ಮಾಹಿತಿ ಪಡೆದುಕೊಳ್ಳಲಿದ್ದಾರೆ.

ಖಾದಿಯಿಂದ ಸದ್ಯ ಸೀರೆ, ಲುಂಗಿ, ಅಂಗಿ, ಕರವಸ್ತ್ರ ಸಹಿತ ಹಲವು ಉತ್ಪನ್ನಗಳು ಬಳಕೆಯಲ್ಲಿವೆ. ಇವು ಎಲ್ಲರನ್ನೂ ತಲುಪುತ್ತಿಲ್ಲ. ಇದನ್ನು ಗುರಿಯಾಗಿಟ್ಟುಕೊಂಡೇ ಬೆಂಗಳೂರಿನ ಎರಡು ಮೂರು ಜವಳಿ ಉದ್ಯಮ ಸಂಸ್ಥೆಗಳಿಗೆ ಖಾದಿ ಬಳಸಿ ಹೊಸ ಮಾದರಿ ಉಡುಪು ಸಿದ್ದಪಡಿಸುವ ಜವಾಬ್ದಾರಿ ವಹಿಸಲಾಗಿದೆ. ಈ ನಿಟ್ಟಿನಲ್ಲೂ ಕೆಲಸಗಳು ನಡೆದಿವೆ.

'ಎರಡು ವರ್ಷದಿಂದ ಜವಳಿ ವಲಯದಲ್ಲಿದ್ದೇನೆ. ಕರ್ನಾಟಕ ಖಾದಿ ಬಳಸಿ ವಿವಿಧ ಉತ್ಪನ್ನಗಳನ್ನು ಸಿದ್ದಪಡಿಸಿ ಜಾಗತಿಕವಾಗಿ ಮಾರುಕಟ್ಟೆ ಬಲಪಡಿಸುವ ಉದ್ದೇಶದಿಂದ ಮಂಡಳಿ ಸಹಯೋಗದೊಂದಿಗೆ ಚಟುವಟಿಕೆ ನಡೆದಿದೆ. ಖಾದಿ ಬಳಕೆ ಉತ್ತೇಜನ, ಕುಶಲಕರ್ಮಿಗಳಿಗೂ ಹೆಚ್ಚಿನ ಬೇಡಿಕೆ ಸಿಗಲಿ ಎನ್ನುವ ಉದ್ದೇಶವೂ ಇದರ ಹಿಂದೆ ಇದೆ' ಎಂದು ಬೆಂಗಳೂರಿನ ವಸ್ತ್ರ ವಿನ್ಯಾಸಕಿ ರಜನಿ ರೇಖಾ ತಿಳಿಸಿದರು.

ಖಾದಿ ಬಳಕೆ ಹೇಗಿದೆ

14,000
ಕರ್ನಾಟಕದ ಕಸುಬುದಾರರು

₹250 ಕೋಟಿ
ವಹಿವಾಟು

175
ಖಾದಿ ಗ್ರಾಮೋದ್ಯೋಗ ಸಂಸ್ಥೆಗಳು





ಖಾದಿ ನೀತಿ, ವಹಿವಾಟು ಹೆಚ್ಚಳ

'ಕರ್ನಾಟಕ ಖಾದಿ ನೀತಿಯನ್ನು ರೂಪಿಸಿ ವಿದ್ಯಾರ್ಥಿಗಳು, ಸರ್ಕಾರಿ ನೌಕರರು ಒಂದು ದಿನವಾದರೂ ಖಾದಿ ಉಡುಪು ಬಳಸುವಂತೆ ಮಾಡುವುದು. ಹೊಸ ಮಾದರಿಯ ಉಡುಪುಗಳಿಂದ ವಹಿವಾಟನ್ನು ಕನಿಷ್ಠ ₹ 1,000 ಕೋಟಿಗಾದರೂ ವಿಸ್ತರಿಸಿ ಹಂತ ಹಂತವಾಗಿ ₹3,000 ಕೋಟಿಗೆ ತಲುಪುವುದು. ಅದರ ಲಾಭ ಕಸುಬುದಾರರಿಗೆ ಸಿಗುವಂತೆ ಮಾಡುವ ಉದ್ದೇಶ ಹೊಂದಲಾಗಿದೆ'ಎಂದು ಮಂಡಳಿ ಅಧಿಕಾರಿಯೊಬ್ಬರು ತಿಳಿಸಿದರು.

ಯುಪಿಎಸ್‌ಸಿ ಮುಖ್ಯಸ್ಥರಿಂದ ಸಂವಾದ 1ಕ್ಕೆ

ನವದೆಹಲಿ (ಪಿಟಿಐ): ಇದೇ ಮೊದಲ ಬಾರಿಗೆ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಮುಖ್ಯಸ್ಥರು ದೇಶದಾದ್ಯಂತ ಇರುವ ಸರ್ಕಾರಿ ಉದ್ಯೋಗಾಕಾಂಕ್ಷಿಗಳೊಂದಿಗೆ ವರ್ಚುವಲ್ ವೇದಿಕೆಯ ಮೂಲಕ ಸಂವಾದ ನಡೆಸಲಿದ್ದಾರೆ.

ಯುಪಿಎಸ್‌ಸಿ ಅಧ್ಯಕ್ಷ ಅಜಯ್ ಕುಮಾರ್ ಅವರು ದೂರದರ್ಶನದ ಯೂಟ್ಯೂಬ್ ಚಾನೆಲ್ ಮೂಲಕ ಅಕ್ಟೋಬರ್ 1ರಂದು ಮಧ್ಯಾಹ್ನ 12ರಿಂದ 1 ಗಂಟೆವರೆಗೆ ಸಂವಾದ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಇದೇ ಅ. 1ರಿಂದ 2026ನೇ ಅ. 1ರವರೆಗೆ ನಡೆಯಲಿರುವ ಯುಪಿಎಸ್‌ಸಿ ಶತಮಾನೋತ್ಸವ ಆಚರಣೆಯ ಭಾಗವಾಗಿ ಈ ಸಂವಾದ ಆಯೋಜಿಸಲಾಗಿದೆ' ಎಂದು ಅಜಯ್‌ಕುಮಾರ್ ಅವರು 'ಲಿಂಕ್‌ಡಿನ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಸಂವಾದದಲ್ಲಿ ಭಾಗಿ ಆಗುವವರ ಸಂಖ್ಯೆಯನ್ನು ಅಂದಾಜಿಸುವ ಸಲುವಾಗಿ ಇದೇ 28ರಿಂದ 30ರ ಬೆಳಿಗ್ಗೆಯವರೆಗೆ ಪ್ರಶ್ನೆಗಳನ್ನು ಕಳುಹಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಶ್ನೆಗಳನ್ನು ವಿಡಿಯೊ ಮತ್ತು ಲಿಖಿತವಾಗಿ interactwithupsc@gmail.com ಎಂಬ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು' ಎಂದು ತಿಳಿಸಿದ್ದಾರೆ.

ಸಂವಾದ ನಡೆಯುವ ವೇಳೆಯಲ್ಲಿ ಸಾಮಾಜಿಕ ಜಾಲತಾಣಗಳಾದ 'ಎಕ್ಸ್', ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂಗಳಲ್ಲಿ ಅಧಿಕೃತ ಹ್ಯಾಶ್‌ಟ್ಯಾಗ್ #AskChairmanUPSC ಮೂಲಕ ಪ್ರಶ್ನೆಗಳನ್ನು ಕೇಳಬಹುದು ಎಂದು ಅಜಯ್‌ಕುಮಾರ್ ತಿಳಿಸಿದ್ದಾರೆ.

ಗಡಿಪಾರು: ವಾಪಸ್ ಕರೆತರಲು ಆದೇಶ

ಕೋಲ್ಕತ್ತ (ಪಿಟಿಐ): ಇಬ್ಬರು ಮಹಿಳೆಯರು ಮತ್ತು ಅವರ ಕುಟುಂಬಸ್ಥರನ್ನು 'ಅಕ್ರಮ ವಲಸಿಗರು' ಎಂದು ತೀರ್ಮಾನಿಸಿ ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಿರುವ ಕೇಂದ್ರದ ವಿರುದ್ಧ ಕಲ್ಕತ್ತ ಹೈಕೋರ್ಟ್ ಅಸಮಾಧಾನ ಹೊರಹಾಕಿದೆ.

ಸೋನಾಲ್ ಬೀಬಿ, ಸ್ವೀಟಿ ಬೀಬಿ ಮತ್ತು ಕುಟುಂಬದ ಇತರ ನಾಲ್ವರು ಸದಸ್ಯರನ್ನು ಒಂದು ತಿಂಗಳ ಒಳಗಾಗಿ ಭಾರತಕ್ಕೆ ಮರಳಿ ಕರೆತರಬೇಕು ಎಂದು ನಿರ್ದೇಶನ ನೀಡಿದೆ.

'ಮಿಗ್–21'ಕ್ಕೆ ಅವಿಸ್ಮರಣೀಯ ವಿದಾಯ

ಚಂಡೀಗಢ (ಪಿಟಿಐ): ಆರು ದಶಕ ಭಾರತೀಯ ವಾಯುಪಡೆಯ ಮುಖ್ಯ ಅಸ್ತ್ರವಾಗಿದ್ದ ದೇಶದ ಮೊದಲ ಸೂಪರ್‌ಸಾನಿಕ್ ಯುದ್ಧ ವಿಮಾನ 'ಮಿಕೊಯಾನ್ ಗುರೊವಿಚ್–21 ಅಲಿಯಾಸ್ ಮಿಗ್– 21' ಶುಕ್ರವಾರ ಕೊನೆಯ ಬಾರಿ ವಿದಾಯದ ಹಾರಾಟ ನಡೆಸುವುದರೊಂದಿಗೆ ದೇಶದ ಇತಿಹಾಸದ ಪುಟ ಸೇರಿತು.

ರಷ್ಯಾ ನಿರ್ಮಿತ ಮಿಗ್– 21ರ ಮೊದಲ ಆವೃತ್ತಿ ಮೊದಲ ಬಾರಿಗೆ ಕಾರ್ಯಾಚರಣೆ ಆರಂಭಿಸಿದ್ದು 1960ರಲ್ಲಿ. 1963ರಲ್ಲಿ ಭಾರತೀಯ ವಾಯುಪಡೆ ಸೇರಿ ಪ್ರಮುಖ ಅಸ್ತ್ರವಾಯಿತು. ಈ ಯುದ್ಧ ವಿಮಾನದ ಅವಿಸ್ಮರಣೀಯ ವಿದಾಯಕ್ಕೆ ಪ್ರಕಾಶಮಾನವಾಗಿ ಹೊಳೆಯುತ್ತಿದ್ದ ಸೂರ್ಯ, ಮೋಡ ರಹಿತವಾಗಿದ್ದ ನೀಲಿ ಆಕಾಶವು ಸಾಕ್ಷಿಯಾಯಿತು.

ಚಂಡೀಗಢದ ವಾಯುನೆಲೆಯಲ್ಲಿ 23 ಸ್ಕ್ವಾಡ್ರನ್‌ಗೆ ಸೇರಿದ 'ಪ್ಯಾಂಥರ್ಸ್' ಹೆಸರಿನ ಮಿಗ್–21 ಯುದ್ಧ ವಿಮಾನಕ್ಕೆ ಬೀಳ್ಕೊಡುಗೆ ಸಮಾರಂಭ ಆಯೋಜಿಸಲಾಗಿತ್ತು.

'ಭಾರತೀಯರ ಆತ್ಮವಿಶ್ವಾಸವನ್ನು ರೂಪಿಸಿದ ಮಿಗ್–21 ಯುದ್ಧ ವಿಮಾನವು ನಮ್ಮ ರಾಷ್ಟ್ರೀಯ ಹೆಮ್ಮೆ. ಭಾರತ–ರಷ್ಯಾ ನಡುವಿನ ಆಳವಾದ ಬಾಂಧವ್ಯದ ಪುರಾವೆಯೂ ಆಗಿದೆ' ಎಂದು ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ಹೇಳಿದರು.

ರೈತರ ಖಾತೆಗೆ 'ಸೈಬರ್' ಕನ್ನ

ಒಂದನೇ ಪುಟದಿಂದ...

ವಾರಾಣಸಿಯಲ್ಲಿ ಆಗಸ್ಟ್ ತಿಂಗಳಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಪಿಎಂ ಕಿಸಾನ್' ಯೋಜನೆಯ 20ನೇ ಕಂತಿನ ಹಣ ಬಿಡುಗಡೆ ಮಾಡಿದ್ದರು. ಹಣ ಬಿಡುಗಡೆಯಾದ ಬಳಿಕ ರೈತರ ಬ್ಯಾಂಕ್ ಖಾತೆಗಳಿಗೆ ಹಣ ಜಮೆ ಮಾಡಲಾಗುತ್ತಿದ್ದು, ಇದೇ ಸಂದರ್ಭದಲ್ಲಿ ಸಕ್ರಿಯಗೊಂಡಿರುವ ವಂಚಕರು ಕೃಷಿಕರ ಖಾತೆಯಿಂದ ಹಣ ದೋಚುತ್ತಿದ್ದಾರೆ.

ಕಿಸಾನ್ ಸಮ್ಮಾನ್ ನಿಧಿಗೆ ಹೆಸರು ನೋಂದಣಿ ಮಾಡಿಕೊಂಡಿರುವ ರೈತರನ್ನು ಪತ್ತೆ ಹಚ್ಚುತ್ತಿರುವ ಕಳ್ಳರು, ಅವರ ವಾಟ್ಸ್ಆ್ಯಪ್‌ಗೆ 'ಪಿಎಂ ಕಿಸಾನ್ ಎಪಿಕೆ ಫೈಲ್' ರವಾನೆ ಮಾಡುತ್ತಿದ್ದಾರೆ. ಎಪಿಕೆ ಫೈಲ್ ತೆರೆದವರು ಹಣ ಕಳೆದುಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಹಣಕಾಸು ಹಾಗೂ ವೈಯಕ್ತಿಕ ವಿವರದ ದತ್ತಾಂಶ ಕಳವು ಮಾಡಲು ನೆರವಾಗುವಂತೆ ಈ ಕುತಂತ್ರಾಂಶ ರೂಪಿಸಲಾಗಿದೆ.

'ಈ ಹಿಂದೆಯೂ ವಿವಿಧ ಬ್ಯಾಂಕ್‌ಗಳ ಹೆಸರಿನಲ್ಲಿ ಸೈಬರ್ ಕಳ್ಳರು ಎಪಿಕೆ ಫೈಲ್‌ಗಳನ್ನು ಕಳುಹಿಸಿ, ಕೆವೈಸಿ ಅಪ್‌ಡೇಟ್ ಮಾಡಿಕೊಳ್ಳುವಂತೆ ಗ್ರಾಹಕರಿಗೆ ಸೂಚಿಸುತ್ತಿದ್ದರು. ಆ ಫೈಲ್ ತೆರೆದ ಮೇಲೆ ಯಾವುದೇ ಅನುಮತಿಯಿಲ್ಲದೇ ಕುತಂತ್ರಾಂಶ ಮೊಬೈಲ್‌ಗೆ ಸೇರ್ಪಡೆ ಆಗುತ್ತಿತ್ತು. ಮೊಬೈಲ್‌ನಲ್ಲಿರುವ ವೈಯಕ್ತಿಕ ಮಾಹಿತಿ, ಬ್ಯಾಂಕ್ ವಿವರ, ಪಾಸ್‌ವರ್ಡ್, ಒಟಿಪಿ ಪಡೆದುಕೊಳ್ಳುತ್ತಿದ್ದರು. ಇದಕ್ಕೆ ವಾಟ್ಸ್ಆ್ಯಪ್ ಗ್ರೂಪ್‌ಗಳನ್ನು ವಂಚಕರು ಬಳಸುತ್ತಿದ್ದರು. ಆದರೆ, ಇದೀಗ ಸರ್ಕಾರಿ ಯೋಜನೆಗಳ ಫಲಾನುಭವಿಗಳನ್ನೇ ಗುರಿಯಾಗಿಸಿ ಕೃತ್ಯ ಎಸಗುತ್ತಿದ್ದಾರೆ. ತಮ್ಮ ಖಾತೆಗೆ ಪಿಎಂ ಕಿಸಾನ್, ಗೃಹಲಕ್ಷ್ಮಿ ಸೇರಿ ಬೇರೆ ಬೇರೆ ಯೋಜನೆಗಳ ಹಣ ಬಂದಿದೆ. ವಾಟ್ಸ್ಆ್ಯಪ್‌ಗೆ ಬಂದಿರುವ ಫೈಲ್ ಮೇಲೆ ಕ್ಲಿಕ್ ಮಾಡುವಂತೆ ಸೂಚಿಸುತ್ತಿದ್ದಾರೆ' ಎಂದು ಮೂಲಗಳು ಹೇಳಿವೆ.

ಕಿಸಾನ್ ಸಮ್ಮಾನ್ ನಿಧಿ ಯೋಜನೆ ಮಾರ್ಗಸೂಚಿ ಅನ್ವಯ ಅರ್ಹ ಸದಸ್ಯರಿಗೆ ₹2 ಸಾವಿರದಂತೆ ಮೂರು ಕಂತುಗಳಲ್ಲಿ ವಾರ್ಷಿಕವಾಗಿ ₹6 ಸಾವಿರ ಆರ್ಥಿಕ ನೆರವನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಇಂತಹ ಅರ್ಹ ರೈತರಿಗೆ ರಾಜ್ಯ ಸರ್ಕಾರದಿಂದಲೂ ವಾರ್ಷಿಕವಾಗಿ ಎರಡು ಕಂತುಗಳಲ್ಲಿ ₹4 ಸಾವಿರ ಲಭಿಸುತ್ತಿದೆ.

ಇದನ್ನೇ ಬಂಡವಾಳ ಮಾಡಿಕೊಂಡಿರುವ ವಂಚಕರು, ವಾಟ್ಸ್ಆ್ಯಪ್ ಬಳಸುವ ಕೃಷಿಕರ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕುತ್ತಿದ್ದಾರೆ. ಬ್ಯಾಂಕ್ ಹಾಗೂ ಇಲಾಖೆಯ ಅಧಿಕಾರಿಗಳ ಸೋಗಿನಲ್ಲಿ ಸೈಬರ್ ಕಳ್ಳರು ರೈತರಿಗೆ ಕರೆ ಮಾಡಿ ವೈಯಕ್ತಿಕ ಮಾಹಿತಿ ಕೇಳುತ್ತಿದ್ದಾರೆ. ಮಾಹಿತಿ ನೀಡಿದ ಕೃಷಿಕರ ಬ್ಯಾಂಕ್ ಖಾತೆಯಲ್ಲಿದ್ದ ಹಣ ಖಾಲಿ ಆಗುತ್ತಿದೆ. ಆದ್ದರಿಂದ, ರೈತರು ಎಚ್ಚರ ವಹಿಸಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

'ಇಕೆವೈಸಿ, ಹೊಸದಾಗಿ ಹೆಸರು ನೋಂದಣಿ, ಮೊಬೈಲ್ ಸಂಖ್ಯೆ ಅಪ್‌ಡೇಟ್ ಮಾಡುವುದಾಗಿ ಹೇಳಿ ಕರೆಗಳು ಬರುತ್ತಿವೆ. ಮಾಹಿತಿ ನೀಡಬಾರದು. ಇಲಾಖೆಯ ಕಚೇರಿಗೇ ತೆರಳಿ ವಿಚಾರಣೆ ನಡೆಸಬೇಕು' ಎಂದು ಮೂಲಗಳು ಹೇಳಿವೆ.

'ನಿಮ್ಮ ಮನೆಯನ್ನು ನವೀಕರಿಸಲು ವೈಯಕ್ತಿಕ ಸಾಲ ನೀಡಲಾಗುವುದು. ತಕ್ಷಣವೇ ₹10 ಲಕ್ಷ ನೀಡುತ್ತೇವೆ. ಈಗಲೇ ಅರ್ಜಿ ಸಲ್ಲಿಸಿ. ನಿಮ್ಮ ಖಾತೆಗೆ ಮರು ಕೆವೈಸಿ ಇದೆ ಎಂಬ ಸಂದೇಶಗಳು ಇತ್ತೀಚೆಗೆ ಬರಲು ಆರಂಭಿಸಿವೆ. ಅಂತಹ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಬಾರದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪರಿಸರ ಹೋರಾಟಗಾರ ವಾಂಗ್ಚುಕ್ ಬಂಧನ

ಒಂದನೇ ಪುಟದಿಂದ...

ಬುಧವಾರ ಲೇಹ್‌ನಲ್ಲಿ ನಡೆದ ಹಿಂಸಾಚಾರಕ್ಕೆ ಸೋನಮ್ ವಾಂಗ್ಚುಕ್, ಎಲ್‌ಎಬಿ ಹಾಗೂ ಕೆಡಿಎನ ಹಿರಿಯ ಸದಸ್ಯರು ಪ್ರಚೋದಿಸಿದ್ದೇ ಕಾರಣ ಎಂದು ಗೃಹ ಸಚಿವಾಲಯವು ಆರೋಪಿಸಿತ್ತು.

ತಮ್ಮ ಮೇಲಿನ ಆರೋಪವನ್ನು ತಳ್ಳಿಹಾಕಿದ್ದ ವಾಂಗ್ಚುಕ್ ಹಿಂಸಾಚಾರವನ್ನು ಖಂಡಿಸಿದ್ದರು. ಅಲ್ಲದೇ, ಹದಿನೈದು ದಿನಗಳಿಂದ ನಡೆಸುತ್ತಿದ್ದ ಉಪವಾಸವನ್ನು ಬುಧವಾರ ಕೊನೆಗೊಳಿಸಿದ್ದರು.

ಮೂರನೇ ದಿನವೂ ಕರ್ಫ್ಯೂ ಮುಂದುವರಿಕೆ: ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಲೇಹ್‌ನಲ್ಲಿ ನಡೆದ ಪ್ರತಿಭಟನೆಯೂ ಹಿಂಸಾಚಾರಕ್ಕೆ ತಿರುಗಿದ ಬೆನ್ನಲ್ಲೇ, ಪಟ್ಟಣದಲ್ಲಿ ಜಾರಿಗೊಳಿಸಲಾಗಿದ್ದ ಕರ್ಫ್ಯೂ ಶುಕ್ರವಾರ ಮೂರನೇ ದಿನಕ್ಕೆ ಕಾಲಿಟ್ಟಿತು. ಇದರ ಬೆನ್ನಲ್ಲೇ, ಗೃಹ ಸಚಿವಾಲಯದ ಹಿರಿಯ ಅಧಿಕಾರಿಗಳ ತಂಡವು ಒಟ್ಟಾರೆ ಭದ್ರತಾ ಪರಿಸ್ಥಿತಿ ಕುರಿತಂತೆ ನಿರಂತರ ಸಭೆಗಳನ್ನು ನಡೆಸಿತು.

'ಲಡಾಖ್‌ನಲ್ಲಿ ಒಟ್ಟಾರೆ ಪರಿಸ್ಥಿತಿಯೂ ಶಾಂತಿಯುತವಾಗಿದೆ. ಅಗತ್ಯ ವಸ್ತುಗಳ ಖರೀದಿಸಲು ನಿರ್ಬಂಧವನ್ನು ಸಡಿಲಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಇದುವರೆಗೂ 50 ಮಂದಿಯನ್ನು ವಶಕ್ಕೆ ಪಡೆಯಲಾಗಿದ್ದು, ಕಾರ್ಗಿಲ್ ಸೇರಿದಂತೆ ಪ್ರಮುಖ ಪಟ್ಟಣಗಳಲ್ಲಿ ಐದಕ್ಕಿಂತಲೂ ಹೆಚ್ಚು ಮಂದಿ ಸೇರುವುದಕ್ಕೆ ನಿಷೇಧ ಮುಂದುವರಿಸಲಾಗಿದೆ. ಪೊಲೀಸರು ಹಾಗೂ ಅರೆಸೇನಾ ಪಡೆಯ ಯೋಧರು ನಗರದ ಪ್ರಮುಖ ಸ್ಥಳಗಳಲ್ಲಿ ಗಸ್ತು ಕಾಯುತ್ತಿದ್ದು, ಪ್ರಮುಖ ರಸ್ತೆಗಳಲ್ಲಿ ವಾಹನಗಳ ಸಂಚಾರವಿಲ್ಲದೇ ಖಾಲಿ ಖಾಲಿಯಾಗಿತ್ತು.

ಶಾಲಾ– ಕಾಲೇಜುಗಳು ಬಂದ್: ಶುಕ್ರವಾರದಿಂದ ಮುಂದಿನ ಎರಡು ದಿನಗಳವರೆಗೂ ಸರ್ಕಾರಿ, ಖಾಸಗಿ ಶಾಲೆಗಳು, ಕಾಲೇಜುಗಳು ಹಾಗೂ ಇತರೆ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವಂತೆ ಲೇಹ್ ಜಿಲ್ಲಾ ಮ್ಯಾಜಿಸ್ಟ್ರೇಟ್ ರೊಮಿಲ್ ಸಿಂಗ್ ಡೊಂಕ್ ಆದೇಶ ಹೊರಡಿಸಿದ್ದಾರೆ. ಅಂಗನವಾಡಿ ಕೇಂದ್ರಗಳು ಕೂಡ ತೆರೆಯುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಉನ್ನತ ಮಟ್ಟದ ಸಭೆ: ಜಿಲ್ಲೆಯ ಭದ್ರತಾ ಸ್ಥಿತಿಗತಿ ಕುರಿತಂತೆ ಕೇಂದ್ರ ಗೃಹ ಸಚಿವಾಲಯದ ಉನ್ನತ ಮಟ್ಟದ ಅಧಿಕಾರಿಗಳು ತಂಡವು ಗುರುವಾರವೇ ಲೇಹ್‌ಗೆ ತಲುಪಿದೆ. ಈ ತಂಡವು ಲೆಫ್ಟಿನೆಂಟ್ ಗವರ್ನರ್, ಪೊಲೀಸ್ ಅಧಿಕಾರಿಗಳು ಎಲ್‌ಎಬಿ ಪ್ರತಿನಿಧಿಗಳ ಜೊತೆ ಸಭೆ ನಡೆಸಿತು.

ಸೆ.27 ಅಥವಾ 28ರಂದು ನವದೆಹಲಿಯಲ್ಲಿ ಗೃಹ ಸಚಿವಾಲಯದ ಪೂರ್ವಸಿದ್ಧತಾ ಸಭೆ ನಡೆಸಲು ಶುಕ್ರವಾರ ತೀರ್ಮಾನಿಸಿತು. ಈ ಸಭೆಗೆ ಎಲ್‌ಎಬಿ, ಕಾರ್ಗಿಲ್ ಡೆಮಾಕ್ರಟಿಕ್ ಅಲಯನ್ಸ್ (ಕೆಡಿಎ) ಪ್ರತಿನಿಧಿಗಳು ಹಾಗೂ ಲಡಾಖ್ ಸಂಸದ ಮೊಹಮ್ಮದ್ ಹನೀಫಾ ಜಾನ್ ಕೂಡ ಭಾಗವಹಿಸಲು ತೀರ್ಮಾನ ತೆಗೆದುಕೊಂಡಿದೆ.

ಬೇಡಿಕೆಗಳು ಏನು?

ಲಡಾಖ್‌ಗೆ ಪ್ರತ್ಯೇಕ ರಾಜ್ಯದ ಸ್ಥಾನಮಾನ, ಸಂವಿಧಾನದ 6ನೇ ಪರಿಚ್ಛೇದಕ್ಕೆ ಸೇರಿಸಲು ಒತ್ತಾಯ, ಲೇಹ್, ಕಾರ್ಗಿಲ್‌ಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ, ರಾಜ್ಯ ಲೋಕಸೇವಾ ಆಯೋಗ ಸ್ಥಾಪನೆಯೇ ಪ್ರಮುಖ ಬೇಡಿಕೆಗಳಾಗಿವೆ ಎಂದು ಎಲ್‌ಎಬಿ ಹಾಗೂ ಕೆಡಿಎ ಪ್ರತಿಪಾದಿಸಿವೆ.

ಮುಖ್ಯಾಂಶಗಳು

- ಅ.6ರಂದು ಕೇಂದ್ರ ಸರ್ಕಾರದ ಜೊತೆಗೆ ಮುಂದಿನ ಮಾತುಕತೆ
- ಬೇಡಿಕೆ ಈಡೇರಿಕೆಗೆ ಒತ್ತಡ ಮುಂದುವರಿಸಲು ನಿರ್ಧಾರ
- ಲೇಹ್, ಕಾರ್ಗಿಲ್‌ನಲ್ಲಿ ಬೆಳಿಗ್ಗೆ ತೆರೆದ ಅಂಗಡಿ ಮುಂಗಟ್ಟುಗಳು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಾವು ಅನುಸರಿಸಬೇಕಾದುದು ಸಂತರ ಚಾರಿತ್ರ್ಯವನ್ನೇ ಹೊರತು, ಅವರ ಚರಿತ್ರೆಯನ್ನಲ್ಲ. –ವಿನೋಬಾ ಭಾವೆ

ಸಂಪಾದಕೀಯ

ಅತಂತ್ರ ಸ್ಥಿತಿಯಲ್ಲಿ 'ಅತಿಥಿ'ಗಳು ಹಿತರಕ್ಷಣೆ ಸರ್ಕಾರದ ಕರ್ತವ್ಯ

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆ ಮಾಡುವವರಿಗೆ 'ವಿಶ್ವವಿದ್ಯಾಲಯ ಅನುದಾನ ಆಯೋಗ' (ಯುಜಿಸಿ) ರೂಪಿಸಿರುವ ನಿಯಮ, ರಾಜ್ಯದ ಸುಮಾರು 5,000 ಅತಿಥಿ ಉಪನ್ಯಾಸಕರ ಭವಿಷ್ಯವನ್ನು ಅತಂತ್ರಸ್ಥಿತಿಗೆ ಸಿಲುಕಿಸಿದೆ. ಸಹಾಯಕ ಪ್ರಾಧ್ಯಾಪಕರಾಗಿ ನೇಮಕ ಹೊಂದುವವರು ಸ್ನಾತಕೋತ್ತರ ಪದವಿಯೊಂದಿಗೆ, ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಇಲ್ಲವೇ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ–ಸೆಟ್) ತೇರ್ಗಡೆಯಾಗಿರಬೇಕು ಅಥವಾ ಪಿಎಚ್‌.ಡಿ ಪಡೆದಿರಬೇಕು ಎನ್ನುವುದು ಯುಜಿಸಿ ಗೊತ್ತುಪಡಿಸಿರುವ ಮಾನದಂಡ. ಆದರೆ, ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿರುವವರಲ್ಲಿ ಬಹುತೇಕರು ಸ್ನಾತಕೋತ್ತರ ಪದವಿಯನ್ನಷ್ಟೇ ಹೊಂದಿದ್ದು, ಅವರೀಗ ಕೆಲಸ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಯುಜಿಸಿ ಸೂಚಿಸಿರುವ ಮಾನದಂಡಗಳನ್ನೇ ಅತಿಥಿ ಉಪನ್ಯಾಸಕರ ಆಯ್ಕೆಗೂ ಅನ್ವಯಿಸಬೇಕು ಎಂದು ಹೈಕೋರ್ಟ್ ನೀಡಿರುವ ಮಧ್ಯಂತರ ತೀರ್ಪು ಸಮಸ್ಯೆ ಕಗ್ಗಂಟಾಗಲು ಕಾರಣವಾಗಿದೆ. ಲಭ್ಯವಿರುವ ಅತಿಥಿ ಉಪನ್ಯಾಸಕ ಸ್ಥಾನಗಳ ಸಂಖ್ಯೆಗಿಂತಲೂ ಯುಜಿಸಿ ಅರ್ಹತೆ ಪಡೆದ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ, ಅತಿಥಿ ಉಪನ್ಯಾಸಕರ ಹುದ್ದೆ ಪಡೆದುಕೊಳ್ಳಲು ತೀವ್ರ ಪೈಪೋಟಿಯೂ ಇದೆ. ಅನುಭವ ಮತ್ತು ಅರ್ಹತೆಯ ನಡುವಿನ ಕಾನೂನು ಹೋರಾಟದಲ್ಲಿ ವಿದ್ಯಾರ್ಥಿಗಳ ಹಿತಾಸಕ್ತಿಯನ್ನೂ ಗಮನಿಸಬೇಕಾಗಿದೆ.



ಗೌರವ ಸಂಭಾವನೆ ಪಡೆದು ಹಲವು ವರ್ಷಗಳಿಂದ ದುಡಿದಿರುವ ಅತಿಥಿ ಉಪನ್ಯಾಸಕರು ಬೀದಿಗೆ ಬೀಳದಂತೆ ನೋಡಿಕೊಳ್ಳಬೇಕಾದುದು ಸರ್ಕಾರದ ನೈತಿಕ ಹೊಣೆಗಾರಿಕೆ.

ಹೈಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಮೂಲಕ, ದೀರ್ಘ ಕಾಲದಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವವರ ಹಿತಾಸಕ್ತಿ ರಕ್ಷಣೆಗೆ ಸರ್ಕಾರ ಮುಂದಾಗಿದೆ. 2024–25ನೇ ಸಾಲಿನಲ್ಲಿ ಯುಜಿಸಿ ನಿಗದಿ ಮಾಡಿರುವ ಅರ್ಹತೆ ಹೊಂದಿಲ್ಲದ ಅತಿಥಿ ಉಪನ್ಯಾಸಕರ ಸೇವೆಯನ್ನು ಸರ್ಕಾರ ಮುಂದುವರಿಸಿತ್ತು. ಆದರೆ, ಈ ನಿರ್ಧಾರವನ್ನು ಪ್ರಶ್ನಿಸಿ ಹೊಸದಾಗಿ ಯುಜಿಸಿ ಅರ್ಹತೆ ಪಡೆದಿರುವ ಉದ್ಯೋಗಾಕಾಂಕ್ಷಿಗಳು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಎರಡು ದಶಕಗಳಿಗೂ ಹೆಚ್ಚು ಅವಧಿಯಿಂದ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರನ್ನು ಮಾನವೀಯ ದೃಷ್ಟಿಯಿಂದ ಮುಂದುವರಿಸಲು ಅವಕಾಶ ನೀಡುವಂತೆ ಮನವಿ ಮಾಡಿ ಕೊಂಡಿರುವ ಸರ್ಕಾರ, 2025–26ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಮುಂದೂಡಿದೆ. ಆದರೆ, ಕಾನೂನು ಹೋರಾಟದಿಂದ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿರುವುದು ಶೈಕ್ಷಣಿಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ; ವಿದ್ಯಾರ್ಥಿಗಳ ಕಲಿಕೆಗೆ ಅಡಚಣೆ ಎದುರಾಗಿದೆ. ಅತಿಥಿ ಉಪನ್ಯಾಸಕರ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಪರಿಹಾರ ಸೂತ್ರವೊಂದನ್ನು ಸರ್ಕಾರ ಆದಷ್ಟು ಬೇಗ ಕಂಡುಕೊಳ್ಳಬೇಕಾಗಿದೆ. ರಾಜ್ಯದ ಶೇ 50ಕ್ಕೂ ಹೆಚ್ಚು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳು ಅತಿಥಿ ಉಪನ್ಯಾಸಕರಿಂದಲೇ ಕಾರ್ಯ ನಿರ್ವಹಿಸುತ್ತಿವೆ. ಗೌರವ ಸಂಭಾವನೆಯನ್ನಷ್ಟೇ ನೀಡಿ ಹತ್ತಾರು ವರ್ಷಗಳಿಂದ ದುಡಿಸಿಕೊಂಡಿರುವ ಈ ಉಪನ್ಯಾಸಕರು ಬೀದಿಪಾಲಾಗದಂತೆ ನೋಡಿಕೊಳ್ಳುವುದು ಸರ್ಕಾರದ ನೈತಿಕ ಹೊಣೆಗಾರಿಕೆಯೂ ಆಗಿದೆ.

ಕರ್ನಾಟಕ ಮಾತ್ರವಲ್ಲದೆ, ಬಹುತೇಕ ರಾಜ್ಯಗಳಲ್ಲಿನ ಉನ್ನತ ಶಿಕ್ಷಣ ಕ್ಷೇತ್ರ ಅತಿಥಿ ಉಪನ್ಯಾಸಕರನ್ನೇ ನೆಚ್ಚಿಕೊಂಡಿದೆ. ಹತ್ತಾರು ವರ್ಷಗಳಿಂದ 'ಅತಿಥಿ'ಗಳಾಗಿಯೇ ದುಡಿಯುತ್ತಿರುವ ಈ ಅನುಭವಿಗಳನ್ನು ಹೊಸ ನಿಯಮಗಳ ಚೌಕಟ್ಟಿಗೆ ಒಳಪಡಿಸುವುದರಿಂದ ಎದುರಾಗುವ ಸಮಸ್ಯೆಗಳ ಅರಿವು 'ಯುಜಿಸಿ'ಗೆ ಇದ್ದಂತಿಲ್ಲ. ವಸ್ತುಸ್ಥಿತಿಯ ಅರಿವಿಲ್ಲದೆ ರೂಪುಗೊಳ್ಳುವ ನಿಯಮಗಳಿಂದ ಎದುರಾಗಬಹುದಾದ ಸಮಸ್ಯೆಗಳಿಗೆ, ಅತಿಥಿ ಉಪನ್ಯಾಸಕರ ಇಂದಿನ ಅತಂತ್ರ ಸ್ಥಿತಿ ಉದಾಹರಣೆಯಂತಿದೆ. ಯುಜಿಸಿ ನಿಯಮಗಳು ಹಾಗೂ ಕೋರ್ಟ್‌ನ ನಿರ್ದೇಶನವನ್ನು ಮೀರಲಾಗದ ಹಾಗೂ ಅತಿಥಿ ಉಪನ್ಯಾಸಕರ ಹಿತಾಸಕ್ತಿಯನ್ನೂ ಕೈಬಿಡಲಾಗದ ಧರ್ಮಸಂಕಟ ಸರ್ಕಾರದ್ದಾಗಿದೆ. ಯುಜಿಸಿ ನಿಯಮ ಪೂರ್ವಾನ್ವಯ ಮಾಡದೆ, ಅನುಭವದ ಆಧಾರದ ಮೇಲೆ ನಮ್ಮನ್ನು ಮುಂದುವರಿಸಬೇಕು ಎನ್ನುವ ಅತಿಥಿ ಉಪನ್ಯಾಸಕರ ಕೋರಿಕೆಯನ್ನು ಮಾನವೀಯತೆಯ ದೃಷ್ಟಿಯಿಂದ ಪರಿಗಣಿಸಬೇಕಾದ ಅನಿವಾರ್ಯತೆಯನ್ನು ಸರ್ಕಾರ ಕೋರ್ಟ್‌ಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಕಾನೂನು ತಜ್ಞರ ಸಲಹೆ ಪಡೆದು ತ್ವರಿತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದ್ದಾರೆ. ಕಾನೂನು ಪ್ರಯತ್ನಗಳ ಜೊತೆಗೆ, ದೇಶದ ವಿವಿಧ ರಾಜ್ಯಗಳಲ್ಲಿನ ಅತಿಥಿ ಉಪನ್ಯಾಸಕರ ಸ್ಥಿತಿ–ಗತಿಯ ಬಗ್ಗೆ ಸರ್ಕಾರ ನಿರ್ದಿಷ್ಟ ಕಾಲಮಿತಿಯೊಳಗೆ ಅಧ್ಯಯನ ನಡೆಸುವುದು ಅಗತ್ಯ. ಕೆಲವು ರಾಜ್ಯಗಳಲ್ಲಿ ಅತಿಥಿ ಉಪನ್ಯಾಸಕರಿಗೆ, ವರ್ಷ ಪೂರ್ತಿ ಕರ್ತವ್ಯ ನಿರ್ವಹಣೆಯ ಅವಕಾಶ ಕಲ್ಪಿಸುವ ಸೇವಾಭದ್ರತೆ ಇದೆ ಎನ್ನಲಾಗಿದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 'ಅತಿಥಿ' ಬೋಧಕರ ಸಮಸ್ಯೆಗಳನ್ನು ರಾಜ್ಯ ಸರ್ಕಾರಗಳು ಹೇಗೆ ನಿರ್ವಹಿಸಿವೆ ಎನ್ನುವ ಅಧ್ಯಯನ, ಅತಿಥಿ ಉಪನ್ಯಾಸಕರ ವಾಸ್ತವಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬಹುದು; ವಾಸ್ತವಿಕ ನೆಲೆಗಟ್ಟಿನಲ್ಲಿ ಹೊಸನೀತಿಯೊಂದನ್ನು ರೂಪಿಸುವಂತೆ ಯುಜಿಸಿ ಮೇಲೆ ಒತ್ತಡ ಹೇರಲಿಕ್ಕೆ ಅಗತ್ಯವಾದ ದತ್ತಾಂಶಗಳನ್ನು ದೊರಕಿಸಿಕೊಡಬಹುದು.

ಚಾಟಿ

ಇದ್ಯಾವ ವಿಧಾನ?



ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವಾಗ ಕೆಲವು ಕಡೆ ಇಂಟರ್‌ನೆಟ್ ಸಂಪರ್ಕ ದೊರೆಯುತ್ತಿಲ್ಲ ಅನ್ನುವ ದೂರುಗಳಿವೆ. ಕೆಲವು ಕಡೆ ಸರ್ವರ್ ಡೌನ್ ಆಗಿ ಕೆಲಸ ಸಾಗ್ತಾ ಇಲ್ಲ. ಕೆಲವು ಮೇಷ್ಟ್ರುಗಳಿಗೆ ಆ್ಯಪ್ ಬಳಸುವ ಬಗ್ಗೆ ಪೂರ್ಣ ತರಬೇತಿ ಇಲ್ಲ. ಮೇಷ್ಟ್ರುಗಳ ರಜಾ ಕಿತ್ತುಕೊಂಡಿದ್ದೀರಿ. ಏನ್ರಯ್ಯ ನಿಮ್ಮ ದೌರ್ಜನ್ಯ? ಮೊದಲಿನಂತೆ ಪೇಪರ್ ಫಾರ್ಮ್ಯಾಟ್‌ನಲ್ಲಿ ಮಾಹಿತಿ ತುಂಬಿ ನಂತರ ಡಿಜಿಟೈಸ್ ಮಾಡಿದ್ದಿದ್ದರೆ ಕೆಲಸ ಸಾಗುತ್ತಿತ್ತು.

ಕೆ.ಪಿ. ನಟರಾಜ, ಕವಿ, 'ಫೇಸ್‌ಬುಕ್‌'ನಿಂದ

ಕಿಡಿನುಡಿ



ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಿಂದ ಜನರಿಗೆ ಉಪಯೋಗ ಆಗಬೇಕು ಎನ್ನುವ ಉದ್ದೇಶ ಸಿದ್ದರಾಮಯ್ಯ ಅವರಿಗೆ ಇಲ್ಲ. ರಾಜಕೀಯ ಲಾಭ ಆಗಬೇಕು ಎನ್ನುವುದೇ ಅವರ ಉದ್ದೇಶ. ಪೂರ್ವತಯಾರಿ ಇಲ್ಲದೆ ಸಮೀಕ್ಷೆ ಆರಂಭಿಸಿರುವುದೇ ಇದಕ್ಕೆ ಸಾಕ್ಷಿ.

ವಿ. ಸುನಿಲ್‌ಕುಮಾರ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಬುಧವಾರ, 27-9-2000

• ಗದ್ದುಗೆ ಪೂಜೆಗೆ ರುದ್ರಮುನಿ ಸ್ವಾಮೀಜಿಗೆ ಅವಕಾಶ

ಬೆಂಗಳೂರು, ಸೆ. 26– ಹುಬ್ಬಳ್ಳಿಯ ಮೂರು ಸಾವಿರ ಮಠದ ಅತಿಥಿ ಗೃಹದಲ್ಲಿರುವ ರುದ್ರಮುನಿ ದೇವರು ಅವರು, ಅಲ್ಲೇ ಇರಲು ಮತ್ತು ಅವರು ಪ್ರತಿದಿನ ಕರ್ತರು ಸಿದ್ದರಾಮೇಶ್ವರ ಗದ್ದುಗೆಗೆ ಪೂಜೆ ಸಲ್ಲಿಸಲು ಅಡ್ಡಿಪಡಿಸಬಾರದು ಎಂದು ಹೈಕೋರ್ಟ್ ಇಂದು ಆದೇಶಿಸಿತು.

ರುದ್ರಮುನಿ ದೇವರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿಗಳಾದ ಆರ್.ವಿ. ರವೀಂದ್ರನ್ ಮತ್ತು ವಿ.ಜಿ. ಸಭಾಹಿತ್ ಅವರು ಇರುವ ವಿಭಾಗೀಯ ನ್ಯಾಯಪೀಠ, ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ ಮಧ್ಯಂತರ ಆಜ್ಞೆ ನೀಡಿತು.

75 ವರ್ಷಗಳ ಹಿಂದೆ

ಬುಧವಾರ, 27-9-1950

• ಕಲ್ಲಿದ್ದಲು ಗಣಿಯಲ್ಲಿ ಅಗ್ನಿ ಅವಘಡ: 80 ಸಾವು

ನಾಟಿಂಗ್‌ಹ್ಯಾಮ್‌ಶೈರ್ (ಯು.ಕೆ), ಸೆ. 26– ಇಲ್ಲಿನ ಕಲ್ಲಿದ್ದಲು ಗಣಿಯಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ 80 ಗಣಿ ಕಾರ್ಮಿಕರು ಮೃತಪಟ್ಟಿದ್ದಾರೆ.

ಬೆಂಕಿಯ ಜ್ವಾಲೆ ಆವರಿಸಿರುವ ಗಣಿಯಲ್ಲಿ ಸತತ ಏಳು ಗಂಟೆಯಿಂದ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಆದರೆ, ಗಣಿಯಲ್ಲಿ ಕೆಲಸ ಮಾಡುತ್ತಿದ್ದವರು ಬದುಕುಳಿದಿರುವ ಸಾಧ್ಯತೆ ಇಲ್ಲ ಎಂದು ಹೇಳಲಾಗಿದೆ.

ಸೆಪ್ಟೆಂಬರ್‌ನಲ್ಲಿ ನಡೆದಿರುವ ಎರಡನೇ ಗಣಿ ದುರಂತ ಇದಾಗಿದೆ. ಸೆಪ್ಟೆಂಬರ್ 7ರಂದು ಆರಿಶೇರ್ ಸ್ಕಾಟ್ಲೆಂಡ್ ಪ್ರದೇಶದ ಗಣಿಯಲ್ಲಿ ಸಂಭವಿಸಿದ್ದ ಅವಘಡದಲ್ಲಿ 129 ಮಂದಿ ಸಿಲುಕಿದ್ದರು. ಅವರಲ್ಲಿ 116 ಮಂದಿಯನ್ನು ರಕ್ಷಿಸಲಾಗಿತ್ತು. ಉಳಿದವರು ಅಸುನೀಗಿದ್ದರು.

ನಮಗೆ ಬೇಕಾದ 'ಎಡ'ಪಂಥ



ವಿಶ್ಲೇಷಣೆ

ಯೋಗೇಂದ್ರ ಯಾದವ್

> ಸಮಾಜವಾದ ಸಿದ್ಧಾಂತದ ಅವಶ್ಯಕತೆ ಹಿಂದೆಂದಿಗಿಂತಲೂ ಈಗ ಹೆಚ್ಚು ಅಗತ್ಯವಾಗಿದೆ. ಆದರೆ, ಆ ಶ್ರೀಮಂತ ಪರಂಪರೆಗೀಗ ಮಬ್ಬು ಆವರಿಸಿದೆ. ತೊಂಬತ್ತು ವರ್ಷಗಳ ಸಮಾಜವಾದದ ಮೌಲ್ಯ ಪರಂಪರೆಯಲ್ಲಿ ವರ್ತಮಾನದ ಅನೇಕ ಸಂಕಟಗಳಿಗೆ ಉತ್ತರವಿದೆ.

'ಸಮಾಜವಾದಿಗಳಲ್ಲಿ 60 ವರ್ಷಕ್ಕಿಂತ ಕಡಿಮೆ ವಯಸ್ಸಿನವರೆಲ್ಲ ಯುವಜನರೇ! ಗಾಂಧಿವಾದಿಗಳಿಗೆ ಈ ಮಾನದಂಡ 75 ವರ್ಷ!'

'ನನಗೀಗ 55 ವರ್ಷ. ಯುವಕನೆಂದು ಹೇಳುವುದು ಕಷ್ಟ' ಎನ್ನುವ ಅವಿನಾಶ್ ಪಾಟೀಲ್‌ರ ಮಾತಿಗೆ ತಮಾಷೆಯಾಗಿ ಹೀಗೆ ಹೇಳಿದೆ. ಪುಣೆಯಲ್ಲಿ ನಡೆದ, ದೇಶದ ವಿವಿಧ ಭಾಗಗಳ ನೂರಾರು ಕಾರ್ಯಕರ್ತರು ಭಾಗವಹಿಸಿದ್ದ 'ಸಮಾಜವಾದಿ ಏಕತಾ ಸಮ್ಮೇಳನ'ದ ಗೋಷ್ಠಿಯೊಂದರ ಸಂದರ್ಭದಲ್ಲಿ, 'ಈ ಗೋಷ್ಠಿಗೆ ನಾವು ಯುವ ಅಧ್ಯಕ್ಷರನ್ನು ಹೊಂದಿದ್ದೇವೆಂದು ಹೇಳಲು ಸಂತೋಷವಾಗುತ್ತದೆ' ಎನ್ನುವ ಸುನೀತಾ ತಾಯಿ ಅವರ ಪ್ರಕಟಣೆ ಈ ಮಾತುಕತೆಗೆ ಕಾರಣವಾಯಿತು.

ಇಂಥ ಬಹುತೇಕ ಹಾಸ್ಯದ ಮಾತುಗಳು ನೋವಿನ ಲೇಪವನ್ನೊಳಗೊಂಡಿರುವಂತೆ, ನನ್ನ ಮಾತಿನಲ್ಲೂ ಕಹಿಸತ್ಯವಿತ್ತು. ಸಮಾಜವಾದ ಈಗ ಹಿಂದೆಂದಿಗಿಂತಲೂ ಹೆಚ್ಚು ಅವಶ್ಯಕ; ಆದರೆ, 'ಭಾರತದ ಸಮಾಜವಾದ ಪರಂಪರೆ'ಗೆ ಮಬ್ಬು ಆವರಿಸಿಕೊಂಡಿದೆ. ಹಿಂದಿಯ ಹೃದಯಭಾಗದಲ್ಲಿ ರಾಜಕೀಯ ದ್ವೇಷವನ್ನು ಎದುರಿಸಿದ ರಾಜಕಾರಣದ ಚೈತನ್ಯವು ಅಂಚಿಗೆ ಬಂದುನಿಂತಿದೆ. ನಕಲಿ ರಾಷ್ಟ್ರೀಯತೆಯನ್ನು ಎದುರಿಸಲು ಯುವಜನತೆಗೆ ಅಗತ್ಯವಾದ ಪ್ರತಿರೋಧಕ್ಕೆ ಬೇಕಾದ ಚಿಂತನೆಗಳ ಚಿಲುಮೆಯು ಈಗ ಅಲಭ್ಯವಾಗಿದೆ. ಇದು ಇಳಿಮುಖ ಸಮುದಾಯವಾಗಿರುವ, ನೆನಪುಗಳನ್ನು ಚಪ್ಪರಿಸುತ್ತಿರುವ ಸಮಾಜವಾದಿಗಳ ದುರಂತವಷ್ಟೇ ಅಲ್ಲ; ದೇಶಕ್ಕಾಗಿರುವ ನಷ್ಟವೂ ಹೌದು.

ನಮ್ಮ ರಾಷ್ಟ್ರೀಯಜೀವನದ ಸಮಾಜವಾದಿ ಧಾರೆಯನ್ನು ಮರೆವು ಆವರಿಸಿಕೊಂಡಿದೆ. ಭಾರತದ ಸಮಾಜವಾದಿಗಳ ಬಗ್ಗೆ ಯುವಜನರನ್ನು ಮಾತನಾಡಿಸಿದರೆ, ನಿರ್ವಾತವನ್ನೇ ಎದುರುಗೊಳ್ಳುತ್ತೀರಿ. ಜನಸಮೂಹದ ಮೇಲೆ ಪ್ರಭಾವ ಹೊಂದಿದ್ದ ಬಹುದೊಡ್ಡ ಸಮಾಜವಾದಿ ನಾಯಕರಲ್ಲೊಬ್ಬರಾದ ಮುಲಾಯಂ ಸಿಂಗ್ ಯಾದವ್ ಹೆಸರು ನಿಮಗೆ ಕೇಳಿಸಬಹುದು; ಆದರೆ ಸಮಾಜವಾದಿ ರಾಜಕಾರಣಕ್ಕೆ ಮುಲಾಯಂ ಒಳ್ಳೆಯ ಮಾದರಿಯೇನಲ್ಲ. ಹಳೆಯ ಕಾಲದ ಪತ್ರಕರ್ತರನ್ನು ಮಾತನಾಡಿಸಿದರೆ, ವರ್ಣರಂಜಿತ ವ್ಯಕ್ತಿತ್ವದ ಜಾರ್ಜ್ ಫರ್ನಾಂಡಿಸ್ ಮತ್ತು ಸರಳರಾಗಿದ್ದೂ ವಿಚಿತ್ರವಾಗಿ ಕಾಣಿಸುತ್ತಿದ್ದ ರಾಜ್ ನಾರಾಯಣ್ ಅವರನ್ನು ನೆನಪಿಸಿಕೊಳ್ಳಬಹುದು. ಆದರೆ, ಕರ್ಪೂರಿ ಠಾಕೂರ್, ಮಧು ಲಿಮಯೆ, ಎಸ್.ಎಂ. ಜೋಶಿ, ರಬಿ ರೇ, ಮೃಣಾಲ್ ಗೋರ್ ಮತ್ತು ಕಿಶನ್ ಪಟ್ನಾಯಕ್ ಅವರಂಥ ನಾಯಕರ ಬಗ್ಗೆ ಸಮೃದ್ಧ ನೆನಪುಗಳೇನೂ ಅವರಲ್ಲಿಲ್ಲ; ಇವರಿಗೂ ಹಿಂದಿನ ತಲೆಮಾರಿನ, ಮುಂಬಯಿಯ ವರ್ಚಸ್ವೀ ಮೇಯರ್ ಆಗಿದ್ದ ಯೂಸುಫ್ ಮೆಹರಾಲಿ ಅಥವಾ ಆಧ್ಯಾತ್ಮಿಕ ಸಮಾಜವಾದಿ ಅಚ್ಯುತ್ ಪಟವರ್ಧನ್ ಅವರ ಹೆಸರುಗಳನ್ನೂ ಉಲ್ಲೇಖಿಸಲಾರರು.

ಮರೆವು ಅಲ್ಲದೆ ಹೋದಲ್ಲಿ, ನೆನಪುಗಳ ತಂತು ತಪ್ಪಿಹೋಗಿರುವುದಂತೂ ನಿಜ. ಲೋಕನಾಯಕ ಜಯಪ್ರಕಾಶ ನಾರಾಯಣ್ (ಜೇಪಿ) ಅವರನ್ನು ಗಾಂಧಿವಾದಿಯಾಗಿ, ಸರ್ವೋದಯದ ನಾಯಕರಾಗಿ, ಜನತಾ ಪಕ್ಷದ ಮಾರ್ಗದರ್ಶಕರಾಗಿ ಉಲ್ಲೇಖಿಸಲಾಗುತ್ತದೆ. ಭಾರತೀಯ ಕರಕುಶಲಕಲೆ ಹಾಗೂ ಸಂಸ್ಕೃತಿಗೆ ನೀಡಿದ ಕೊಡುಗೆಗಾಗಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರನ್ನು ನೆನಪಿಸಿಕೊಳ್ಳಲಾಗುತ್ತದೆ. ಆಚಾರ್ಯ ನರೇಂದ್ರ ದೇವ ಅವರನ್ನು ಬಹುದೊಡ್ಡ ವಿದ್ವಾಂಸರನ್ನಾಗಿಯೂ ಗುರೂಜಿಯನ್ನಾಗಿಯೂ ಮರಾಠಿಯ ಐಕಾನಿಕ್ ಬರಹಗಾರನನ್ನಾಗಿಯೂ ಸ್ಮರಿಸಲಾಗುತ್ತದೆ. ಧೈರ್ಯಶಾಲಿ ಸ್ವಾತಂತ್ರ್ಯ ಹೋರಾಟಗಾರ್ತಿಯನ್ನಾಗಿ ಉಷಾ ಮೆಹ್ತಾ ಅವರನ್ನು ಗುರ್ತಿಸಲು ಕಾರಣ ಆದುದಕ್ಕಾಗಿ 'ಏ ವತನ್ ಮೇರೇ ವತನ್' ಒಟಿಟಿ ಸಿನಿಮಾಕ್ಕೆ ಧನ್ಯವಾದ ಹೇಳಬೇಕು. ಆದರೆ, ಉಷಾ ಅವರನ್ನು ಸಮಾಜವಾದಿ ಚಳವಳಿಯ ನಾಯಕಿಯನ್ನಾಗಿ ಯಾರೂ ನೆನಪಿಸಿಕೊಳ್ಳುವುದಿಲ್ಲ. ರಾಮ್ ಮನೋಹರ್ ಲೋಹಿಯಾ ಅವರನ್ನು ಸಮಾಜವಾದಿ ಎಂದು ಗುರ್ತಿಸಲಾಗುತ್ತದೆಯಾದರೂ, ಮಂಡಲ್‌ನ ಪಿತಾಮಹನ ರೂಪದಲ್ಲಿ ಅವರನ್ನು ನೆನಪಿಸಿಕೊಳ್ಳುವುದೇ ಹೆಚ್ಚು ಹಾಗೂ ಅಸಲಿ ಸಮಾಜವಾದಿ ಚಿಂತಕ–ನಾಯಕನನ್ನಾಗಿ ನೋಡುವುದು ಕಡಿಮೆ.

ಪುಣೆಯ ಸಮಾವೇಶದಲ್ಲಿ, ಭಾರತದ ಸಮಾಜವಾದಿ ಚಳವಳಿಯ ನಾಯಕತ್ವವನ್ನು ನೆನಪಿಸುವ ಛಾಯಾಚಿತ್ರಗಳ ಪ್ರದರ್ಶನವೂ ಇತ್ತು. ಆ ಸ್ಮೃತಿಚಿತ್ರ ಕಥನ, 1934ರಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿಯ ಸ್ಥಾಪನೆಯಿಂದ ಶುರುವಾಗುತ್ತದೆ. ವಸಾಹತು ವಿರುದ್ಧದ ಹೋರಾಟದಲ್ಲಿ, ರಾಜಕೀಯ ಸ್ವಾತಂತ್ರ್ಯವನ್ನು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಜೊತೆಗೆ ಸಮೀಕರಿಸುವುದು ಆ ಪಕ್ಷದ ಪ್ರಯತ್ನವಾಗಿತ್ತು. ಜೇಪಿ ಅವರನ್ನೊಳಗೊಂಡಂತೆ ಬಹುತೇಕ ನಾಯಕರು, ಸೈದ್ಧಾಂತಿಕವಾಗಿ ಮಾರ್ಕ್ಸಿಸ್ಟ್‌ಗಳಾಗಿದ್ದರೂ, ಕಮ್ಯುನಿಸ್ಟ್‌ಗಳಿಗಿಂಥ ಭಿನ್ನವಾಗಿ, ಭಾರತೀಯ ಕಾಂಗ್ರೆಸ್ ಭಾಗವಾಗಿ ಕೆಲಸ ಮಾಡುವುದನ್ನು ಆಯ್ಕೆ ಮಾಡಿಕೊಂಡಿದ್ದರು. 'ಕ್ವಿಟ್ ಇಂಡಿಯಾ' ಚಳವಳಿ ತೀವ್ರವಾಗಿದ್ದಾಗ, ಜೇಪಿ, ಲೋಹಿಯಾ, ಮೆಹ್ತಾ ಮುಂತಾದ ನಾಯಕರು ಭೂಗತರಾಗಿದ್ದುಕೊಂಡೇ ಪ್ರತಿರೋಧ ತೋರಿದರು, ಧೀರೋದಾತ್ತ ಪಾತ್ರ ನಿರ್ವಹಿಸಿದರು. ಸ್ವಾತಂತ್ರ್ಯಾನಂತರ, ಕಾಂಗ್ರೆಸ್ ತೊರೆದ ಸಮಾಜವಾದಿಗಳು, ಆಗಾಗ ವಿರೋಧ ಪಕ್ಷವಾಗಿ ಕಾಣಿಸಿಕೊಳ್ಳುತ್ತಿದ್ದ ಭಾರತೀಯ ಕಮ್ಯುನಿಸ್ಟ್ ಪಕ್ಷಕ್ಕಿಂತ ಭಿನ್ನವಾದ ಎಡಪಂಥೀಯ ಪ್ರಜಾಪ್ರಭುತ್ವ ಪ್ರತಿರೋಧದ ಮಾದರಿಯೊಂದನ್ನು ರೂಪಿಸಿದರು. ಕಾಂಗ್ರೆಸ್ ಪ್ರಾಬಲ್ಯದಿಂದಾಗಿ ಚುನಾವಣಾ ರಾಜಕಾರಣದಲ್ಲಿ ಹಿನ್ನಡೆ ಅನುಭವಿಸಿದರೂ, ಹಿಂದುಳಿದ ಸಮುದಾಯಗಳು ಹಾಗೂ ಬಡವರ್ಗದ ರಾಜಕೀಯ ಧ್ವನಿಯಾಗಿ ಸಮಾಜವಾದಿಗಳು ಕೆಲಸ ಮಾಡಿದರು.

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪ್ರತಿರೋಧ ತೋರಿಸಿದ್ದ ಕೆಲವು ಸಮಾಜವಾದಿಗಳ ಉಪಸ್ಥಿತಿ ಭಾರತದ ಸಮಾಜವಾದಿ ಆಂದೋಲನದ ವೈಭವವನ್ನು ಮೆಲುಕು ಹಾಕಲು ಅವಕಾಶ ಕಲ್ಪಿಸಿತು. ಅವರಲ್ಲಿ ಕೆಲವರು ತುರ್ತು ಪರಿಸ್ಥಿತಿಯ 19 ತಿಂಗಳುಗಳನ್ನು ಜೈಲಿನಲ್ಲಿ ಕಳೆದಿದ್ದರು. ಮೋದಿ ಸರ್ಕಾರದ ಬಗೆಗಿನ ಪರಾಮರ್ಶೆಗೆ ಇವರಾರಿಗೂ ಕಾಂಗ್ರೆಸ್ ಜೊತೆಗಿನ ಕಹಿ ನೆನಪುಗಳು ಅಡ್ಡಿಯಾಗಲಿಲ್ಲ.

ಸಮಾವೇಶದಲ್ಲಿದ್ದ ಕೆಲವು ಪುಸ್ತಕ ಮಳಿಗೆಗಳು ಭಾರತೀಯ ಸಮಾಜವಾದದ ಶ್ರೀಮಂತ ತಾತ್ವಿಕ ಪರಂಪರೆಯ ಬಗ್ಗೆ ಗಮನಸೆಳೆಯುವಂತಿದ್ದವು. ಭಾರತೀಯ ಸಮಾಜವಾದಿಗಳ ಪಥ ಪ್ರವರ್ತಕ ಸೈದ್ಧಾಂತಿಕ ಕೊಡುಗೆಯು ಬಹುಮಟ್ಟಿಗೆ ನೇಪಥ್ಯದಲ್ಲೇ ಉಳಿದಿದೆ. ಸಮಾಜವಾದಿ ಆಂದೋಲನದ ದಾಖಲೆಗಳ ಸಂಗ್ರಹಗಳಾದ ಎರಡು ಸಂಪುಟಗಳ ಮರು ಬಿಡುಗಡೆಯೂ ಸಮಾವೇಶದಲ್ಲಿ ನಡೆಯಿತು. ಇದರಿಂದಾಗಿ ಯುವಜನರಿಗೆ ಸಮಾಜವಾದಿ ಚಳವಳಿಯನ್ನು ಪರಿಚಯಿಸುವ ಪ್ರಯತ್ನವೂ ನಡೆದಂತಾಯಿತು.

ಭಾರತೀಯ ಸಮಾಜವಾದದ ನಾಲ್ಕು ಚಿಂತನೆಗಳು ಪ್ರಸ್ತುತ ನಮಗೆ ಅತ್ಯಗತ್ಯವಾಗಿವೆ. ಮೊದಲನೆಯದು, ಜಾತಿ, ಲಿಂಗ, ವರ್ಣ ಹಾಗೂ ರಾಷ್ಟ್ರೀಯತೆಯನ್ನು ಒಳಗೊಂಡಂತೆ ಸಮಾನತೆಯ ಪರಿಕಲ್ಪನೆಯನ್ನು ಆರ್ಥಿಕ ಆಯಾಮದಾಚೆಗೂ ಭಾರತದ ಸಮಾಜವಾದ ವಿಸ್ತರಿಸಿದೆ. ಇದು ಜಾಗತಿಕವಾಗಿ ಹೆಚ್ಚುತ್ತಿರುವ ಅಸಮಾನತೆಯನ್ನು ಎದುರಿಸಲು ಅಗತ್ಯವಾದ ಚಿಂತನೆಯಾಗಿದೆ. ಮಹಿಳಾ ಮೀಸಲಾತಿ, ಜಾತಿಗಣತಿ ಅಥವಾ ಒಬಿಸಿ ಇಲ್ಲವೇ ಎಸ್‌ಸಿ ವರ್ಗದೊಳಗಿನ ಉಪವರ್ಗಗಳಿಗೆ ಸಂಬಂಧಿಸಿದ ಅಸಮಾನತೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲೂ ಈ ಚಿಂತನೆ ಸಹಕಾರಿಯಾಗಿದೆ. ಎರಡನೆಯ ಚಿಂತನೆ, ಭಾರತೀಯ ಸಮಾಜವಾದಿಗಳು ನಗರಕೇಂದ್ರಿತ ಕೈಗಾರಿಕಾ ತಾಂತ್ರಿಕ ಅಭಿವೃದ್ಧಿ ಮಾದರಿಗೆ ಮರುಚಿಂತನೆಯ ಅಡಿಪಾಯವನ್ನು ರೂಪಿಸಿರುವುದು. ಈ ಚಿಂತನೆ, ಜಾಗತಿಕ ಹವಾಮಾನ ಬದಲಾವಣೆಯ ಸವಾಲನ್ನು ಎದುರಿಸುವ ನಿಟ್ಟಿನಲ್ಲಿ ಸಹಾಯಕವಾಗಲಿದೆ. ಗಾಂಧೀಜಿಯ ಸತ್ಯಾಗ್ರಹ ಪರಿಕಲ್ಪನೆಯನ್ನು ಚುನಾವಣಾ ಬದಲಾವಣೆ ಅಥವಾ ರಾಜಕೀಯ ಹಿಂಸೆಗೆ ಪರ್ಯಾಯವಾಗಿ ಬಳಸುವುದರ ಜೊತೆಗೆ ಸಾಮಾಜಿಕ ಬದಲಾವಣೆಯ ರೂಪದಲ್ಲೂ ವಿಸ್ತರಿಸಿದ್ದು ಮೂರನೆಯ ಚಿಂತನೆ. ಕೊನೆಯದು: ನಮ್ಮ ಭಾಷೆಗಳು, ಸಾಂಸ್ಕೃತಿಕ ಸಂಕೇತಗಳು ಹಾಗೂ ರಾಷ್ಟ್ರೀಯತೆಯಲ್ಲಿ ಆಳವಾಗಿ ಬೇರೂರಿರುವ ಸಾಂಸ್ಕೃತಿಕ ರಾಜಕಾರಣದ ವ್ಯಾಕರಣವೊಂದನ್ನು ಅಭಿವೃದ್ಧಿಪಡಿಸಿದ್ದು. ಈ ವ್ಯಾಕರಣ, ಪ್ರಸಕ್ತ ಸಾಂಸ್ಕೃತಿಕ ರಾಜಕಾರಣದ ಹೆಸರಿನಲ್ಲಿ ನಡೆಯುತ್ತಿರುವ ದಾಳಿ ಹಾಗೂ ವಿಶ್ವಮಟ್ಟದಲ್ಲಿ ಹೆಚ್ಚಾಗುತ್ತಿರುವ ಜನಾಂಗೀಯ ರಾಷ್ಟ್ರೀಯತೆಯನ್ನು ಎದುರಿಸಲು ಅಗತ್ಯವಾದ ತಾತ್ವಿಕ ಸಂಪನ್ಮೂಲವಾಗಿದೆ.

ಕೆಲವು ದಶಕಗಳ ಹಿಂದೆ, ಸಮಾಜವಾದದ ಮಸೂರವಿಲ್ಲದೆ ಭವಿಷ್ಯದ ಬಗ್ಗೆ ಯೋಚಿಸುವುದು ಸಾಧ್ಯವಿರಲಿಲ್ಲ. ಈಗ ಗಡಿಯಾರದಲ್ಲಿನ ಲೋಲಕ ಮತ್ತೊಂದು ತುದಿಯಲ್ಲಿದೆ. ಸಮಾಜವಾದ ಎನ್ನುವುದು ಶಾಪಗ್ರಸ್ತ ಪದವಾಗಿದೆ. ಆದರೂ, ಮಾನವೀಯ ಜಗತ್ತಿನ ಹಂಬಲ, ಹೆಚ್ಚಿನ ಅಸಮಾನತೆಗಳಿಲ್ಲದ ವಿಶ್ವದ ಹಂಬಲ, ಎಲ್ಲರ ಶ್ರೇಯಸ್ಸನ್ನು ಬಯಸುವ ವಿಶ್ವದ ಹಂಬಲ ಈಗಲೂ ತನ್ನ ಆಕರ್ಷಣೆಯನ್ನು ಕಳೆದುಕೊಂಡಿಲ್ಲ. ಈ ಹುಡುಕಾಟವು ಸಮಾಜವಾದಕ್ಕೆ ಪರ್ಯಾಯವಾಗಿ ಬೇರೆ ಹಣೆಪಟ್ಟಿಯನ್ನು ಆಯ್ದುಕೊಳ್ಳಬಹುದು, ಹೊಸ ರಾಜಕೀಯ ವಾಹಕಗಳನ್ನು ಕಂಡುಕೊಳ್ಳಬಹುದು. ಹೊಸ ರಾಜಕೀಯ ಸಂರಚನೆಯನ್ನೂ ಕಂಡುಕೊಳ್ಳುವ ಸಾಧ್ಯತೆಯೂ ಇದೆ. ಆದರೆ, ಸಮಾಜವಾದದ ಚಿಂತನೆಯು ಭವಿಷ್ಯಕ್ಕೆ ಸಂಪನ್ಮೂಲವಾಗಿ ಒದಗಿಬರುವುದು ಮುಂದುವರಿಯುತ್ತದೆ; ಸಮಾಜವಾದವನ್ನು ಹೇಗೆ ನೆನಪಿಸಿಕೊಳ್ಳಬಹುದು, ಹೇಗೆ ನವೀಕರಿಸಬಹುದು ಮತ್ತು ನಮ್ಮ ಅಗತ್ಯಗಳಿಗಾಗಿ ಹೇಗೆ ಮರು ಹೊಂದಾಣಿಕೆ ಮಾಡಿಕೊಳ್ಳಬಹುದು ಎನ್ನುವುದು ನಮಗೆ ತಿಳಿದಿರಬೇಕಷ್ಟೇ.

ನೂರು ವರ್ಷಗಳ ಸಂಭ್ರಮದಲ್ಲಿರುವ 'ಆರ್‌ಎಸ್‌ಎಸ್' ಪರಂಪರೆಯನ್ನು ಎದುರಿಸಲು ಅಗತ್ಯವಾದ ರಾಜಕೀಯ ಹಾಗೂ ಬೌದ್ಧಿಕ ಸಂಪನ್ಮೂಲಗಳು ತೊಂಬತ್ತು ವರ್ಷಗಳ ಸಮಾಜವಾದಿ ಚಳವಳಿಯಿಂದ ದೊರೆಯಬಹುದು ಎನ್ನುವ ಆಶಯದೊಂದಿಗೆ ನಾನು ಪುಣೆಯಿಂದ ಬೀಳ್ಕೊಂಡೆ.



ವಾಚಕರ ವಾಣಿ

ಸಮೀಕ್ಷೆಯಲ್ಲಿ ಮಾನವೀಯತೆ ಇರಲಿ

ರಾಜ್ಯ ಸರ್ಕಾರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದೆ. ಸಮೀಕ್ಷಕರಲ್ಲಿ ಬಹುತೇಕ ಶಿಕ್ಷಕರನ್ನು ಬಳಸಿಕೊಂಡಿದೆ. ಪರೀಕ್ಷೆಯಲ್ಲಿ ಫಲಿತಾಂಶ ಕಡಿಮೆಯಾದರೆ ಶಿಕ್ಷಕರು ಶಿಕ್ಷೆ ಅನುಭವಿಸಬೇಕಾದ ಪರಿಸ್ಥಿತಿ ಇದೆ. ಶಿಕ್ಷಕರ ಪ್ರಥಮ ಕಾಯಕವೆಂದರೆ, ವಿದ್ಯಾರ್ಥಿಗಳಿಗೆ ಪಾಠ ಮಾಡುವುದು. ಈ ರೀತಿ ಶಿಕ್ಷಕರನ್ನು ಬಳಸಿಕೊಳ್ಳುವುದು ನೈತಿಕವಾಗಿ ಸರಿಕಾಣದು.

'ಸರ್ಕಾರಿ ಕೆಲಸ ದೇವರ ಕೆಲಸ' ಎಂಬ ಧ್ಯೇಯ ವಾಕ್ಯದ ಅಡಿ ಶಿಕ್ಷಕರನ್ನು ಬಳಸಿಕೊಂಡರೂ ಮಾನವೀಯತೆ ನೆಲೆಗಟ್ಟಿನಲ್ಲಿ ಬಳಸಿಕೊಳ್ಳುವಂತಾಗಲಿ. ಬಾಣಂತಿಯರು, ಅಂಗವಿಕಲರು, ಶಸ್ತ್ರಚಿಕಿತ್ಸೆಗೆ ಒಳಗಾದವರು, ಗರ್ಭಿಣಿಯರು ಮತ್ತು ನಿವೃತ್ತಿಗೆ ಒಂದು ತಿಂಗಳು ಇರುವವರನ್ನು ಸಮೀಕ್ಷೆಗೆ ಬಳಸಿಕೊಂಡಿರುವುದನ್ನು ಮಾನವೀಯತೆ ನೆಲೆಯಲ್ಲಿ ನೋಡಿದಾಗ ಸಮಂಜಸವಾಗಿ ಕಾಣದು.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

ಗುಂಡಿ ಮುಚ್ಚುವ ವಾರ್ಷಿಕ ಪ್ರಹಸನ

ಪ್ರತಿ ವರ್ಷ ಮಳೆಗಾಲದಲ್ಲಿ ನಾಗರಿಕರು, ಉದ್ಯಮಿಗಳು ಹಾಗೂ ಮಾಧ್ಯಮಗಳು ಸೇರಿ 'ರಸ್ತೆ ಗುಂಡಿಗಳನ್ನು ಮುಚ್ಚಿ' ಎಂದು ರಾಜ್ಯ ಸರ್ಕಾರವನ್ನು ಎಚ್ಚರಿಸುವ ಅಲಿಖಿತ ನಿಯಮ ಜಾರಿಯಲ್ಲಿದೆ. ರಸ್ತೆ ಬೇಕೆಂದರೆ ಮಳೆ ಬೇಡ; ಮಳೆ ಬೇಕೆಂದರೆ ರಸ್ತೆ ಬೇಡ ಎನ್ನುವಂತಾಗಿದೆ. ರಸ್ತೆ ಗುಂಡಿ ಸಮಸ್ಯೆ ನಿಯಂತ್ರಣ ಮೀರಿ ಮಾಧ್ಯಮಗಳಲ್ಲಿ ಸುದ್ದಿಯಾಗುವವರೆಗೂ ಸಂಬಂಧಪಟ್ಟ ಮಂತ್ರಿಗಳಾಗಲಿ, ಆಯಾ ಕ್ಷೇತ್ರದ ಜನಪ್ರತಿನಿಧಿಗಳಾಗಲಿ ಹಾಗೂ ಅಧಿಕಾರಿಗಳಾಗಲಿ ಸ್ಪಂದಿಸುವುದಿಲ್ಲ. ಒಂದು ಸಮರ್ಥ ಸರ್ಕಾರಕ್ಕೆ ಗುಂಡಿ ಮುಚ್ಚಿ ಎಂದು ಪದೇ ಪದೇ ಎಚ್ಚರಿಸುವ ಅನಿವಾರ್ಯ ಏಕೆ?

ಜಿ. ಬೈರೇಗೌಡ, ಕೊಡಿಗೇಹಳ್ಳಿ

ಭೈರಪ್ಪರ ದೈತ್ಯ ಪ್ರತಿಭೆಗೆ ಶರಣು

ಎಸ್.ಎಲ್. ಭೈರಪ್ಪನವರ ಕುರಿತು ಎರಡು ಮಾತು ಹೇಳಲೂ ಅರ್ಹತೆ ಇರಬೇಕು ಮತ್ತು ಆ ಅರ್ಹತೆ ಅವರ ಕೃತಿಗಳನ್ನು ಓದಿ ಸಂಪಾದಿಸಬೇಕು ಎನ್ನುವುದಾದರೆ ನನ್ನದು ಸೊನ್ನೆ ಅರ್ಹತೆ. ಆದರೆ, ಕನ್ನಡವನ್ನು ಅವರು ದೇಶದ ಇತರ ಪ್ರಮುಖ ಭಾಷೆಗಳ ಹೊಸ್ತಿಲನ್ನು ದಾಟಿಸಿದ್ದನ್ನು ಬಲ್ಲೆ. ದೇಶದ ಸಾರಸ್ವತ ಲೋಕ ನಮ್ಮ ರಾಜ್ಯಭಾಷೆಯ ಕಡೆ ಕಿವಿ ನಿಮಿರಿ ನಿಲ್ಲುವಂತೆ ಮಾಡಿದ್ದನ್ನೂ ಬಲ್ಲೆ.

ಒಂದು ಸಾಧಾರಣ ಹಳ್ಳಿ ಕುಟುಂಬದಿಂದ ಧಿಗ್ಗನೆ ಮೇಲ್ಚಿಮ್ಮಿ ಬಯಲಾಕಾಶಕ್ಕೆ ಲಗ್ಗೆ ಹಾಕಿದ್ದು ಕನ್ನಡದ ಮಟ್ಟಿಗಂತೂ ಸುವರ್ಣಾಕ್ಷರದ ದಾಖಲೆಯೇ! ನಮ್ಮಂಥವರು ಹೀಗೆಯೂ ಅಭಿಮಾನ ಹೊಂದಲು, ಧನ್ಯತೆ ಅನುಭವಿಸಲು, 'ನಮ್ಮ ಭೈರಪ್ಪ' ಎಂದು ಎದೆಯುಬ್ಬಿಸಿ ಹೇಳಲು ಯಾವ ಅಡ್ಡಿಯೂ ಇರಲು ಸಾಧ್ಯವಿಲ್ಲ. ಶರಣು ಭೈರಪ್ಪನವರ ದೈತ್ಯ ಪ್ರತಿಭೆಗೆ!

ರವೀಂದ್ರ ವೀ. ಮುನ್ನೋಳಿಮಠ, ನವಲೂರು

ಅಂಪೈರಿಂಗ್ ಲೋಕದ ದಂತಕಥೆ

ಕ್ರಿಕೆಟ್ ಲೋಕ ಕಂಡ ಸಜ್ಜನ ಅಂಪೈರ್ ಡಿಕೀ ಬರ್ಡ್ ಅವರ ನಿಧನದ ಸುದ್ದಿ ಓದಿ ಕಣ್ಣಾಲಿಗಳು ಮಂಜಾದವು. ಭಾರತ ತಂಡ ಆಡುವ ಪಂದ್ಯಗಳಲ್ಲಿ ಅವರು ತೀರ್ಪುಗಾರರಾಗಿ ಇದ್ದರೆಂದರೆ ಪಂದ್ಯ ನೋಡಲು ನಮಗೆಲ್ಲಾ ಧೈರ್ಯ ಇರುತ್ತಿತ್ತು.

ಭಾರತ ಬ್ಯಾಟಿಂಗ್ ಮಾಡುವಾಗ ಎದುರಾಳಿ ಬೌಲರ್‌ಗಳು ಎಲ್‌ಬಿಡಬ್ಲ್ಯುಗೆ ಮನವಿ ಮಾಡಿದಾಗ ಎಷ್ಟೋ ಬಾರಿ ಡಿಕೀ ಬರ್ಡ್ ಇರುವ ಕಾರಣ ಔಟ್ ನೀಡುವುದಿಲ್ಲ ಎಂದು ಟಿ.ವಿ. ನೋಡುವಾಗ ನಾವು ಮಾತಾಡಿಕೊಳ್ಳುತ್ತಿದ್ದ ನೆನಪು ಸ್ಮೃತಿಪಟಲದಲ್ಲಿ ಹಾದುಹೋಯಿತು.

ಯಲುವಹಳ್ಳಿ ಸೊಣ್ಣೇಗೌಡ, ಚಿಕ್ಕಬಳ್ಳಾಪುರ

ಸಮೀಕ್ಷೆ ವಿವರ ಕುಟುಂಬಕ್ಕೂ ನೀಡಿ

ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಯುತ್ತಿದೆ. ಈ ವಿಷಯದಲ್ಲಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ವಿನಂತಿ: ಮೊದಲನೆಯದು, ಸಮೀಕ್ಷೆದಾರರು ಮನೆಗೆ ಬಂದು ಸಮೀಕ್ಷೆ ನಡೆಸಿ, ಮಾಹಿತಿ ಸಂಗ್ರಹಿಸುವರಷ್ಟೆ. ಅವರು ತಮ್ಮ ದಾಖಲೆಯಲ್ಲಿ ಏನನ್ನು ನಮೂದಿಸಿಕೊಂಡರು ಎಂಬುದನ್ನು ಮನೆಯವರಿಗೆ ತೋರಿಸಿ, ಮನೆಯಾತನಿಂದ ಒಪ್ಪಿಗೆ–ರುಜು ಪಡೆಯತಕ್ಕದ್ದು.

ಎರಡನೆಯದಾಗಿ, ಸಮೀಕ್ಷಕರು ದಾಖಲಿಸಿಕೊಳ್ಳುವ ಮಾಹಿತಿಯ ಒಂದು 'ಪ್ರತಿ'ಯನ್ನು ಮನೆಯವರಿಗೆ ನೀಡಬೇಕು. ಆಯೋಗವು ಈ ಬಗ್ಗೆ ಸಮೀಕ್ಷೆದಾರರಿಗೆ ಸೂಕ್ತ ಏರ್ಪಾಡು ಮತ್ತು ತರಬೇತಿ ನೀಡಬೇಕಿದೆ.

ಡಿ.ವಿ. ಮೋಹನ ಪ್ರಕಾಶ್, ಮೈಸೂರು


ನೇಪಥ್ಯಕ್ಕೆ ಸರಿಯಿತೆ ಕ್ರೀಡಾಸ್ಫೂರ್ತಿ?

'ಸಜ್ಜನಿಕೆ ನೇಪಥ್ಯಕ್ಕೆ, ತುಡುಗುತನ ಮುನ್ನಲೆಗೆ!' ಲೇಖನ ಓದಿದಾಗ (ಲೇ: ವಿಶಾಖ ಎನ್., ಪ್ರ.ವಾ., ಸೆ. 25) ಕ್ರೀಡಾಪಟುಗಳಲ್ಲಿ ಕ್ರೀಡಾಸ್ಫೂರ್ತಿಯ ಮೌಲ್ಯಗಳು ಇಲ್ಲವೇ ಎನ್ನುವುದು ನನ್ನ ಅಂತರ್ಯದ ಪ್ರಶ್ನೆ. ಯುವಪೀಳಿಗೆಯನ್ನು ಹಾಳು ಮಾಡುವ ಇಲ್ಲವೇ ಉದ್ಧರಿಸುವ ಮೂರು ಕ್ಷೇತ್ರಗಳೆಂದರೆ: ಕ್ರೀಡೆ, ರಾಜಕೀಯ ಮತ್ತು ಸಿನಿಮಾ. ಇಲ್ಲಿರುವ ಪ್ರಭಾವಿಗಳ ಅನುಕರಣೆಯೇ ಯುವಜನರ ನಿತ್ಯದ ಗೀಳಾಗಿದೆ.

ಒಬ್ಬ ಕ್ರೀಡಾಪಟು ಇನ್ನೊಬ್ಬ ಕ್ರೀಡಾಪಟುವಿಗೆ ಹಸ್ತಲಾಘವ ಮಾಡಲು ಹಿಂಜರಿಯುವುದು ಅಥವಾ ಯಾವುದೇ ಕ್ರೀಡಾಪಟು ಎದುರಾಳಿಯ ವ್ಯಕ್ತಿತ್ವದ ಅಥವಾ ಪ್ರಾದೇಶಿಕತೆ ಮೇಲೆ ಪ್ರಭಾವ ಬೀರುವ ಕಳಪೆಯ ನಡವಳಿಕೆಯನ್ನು ನೋಡಿದಾಗ, ಅಂತಹ ಕ್ರೀಡಾಪಟುಗಳಿಗೆ ನಿಜವಾಗಿ ಮನೋವೈದ್ಯರ ಅವಶ್ಯಕತೆ ಇದೆ ಅನಿಸುತ್ತದೆ.

ಗುಂಡಪ್ಪ ರಾಠೋಡ್, ರಾಯಚೂರು

ಚುರುಮುರಿ



ವೆ'ಪನ್' ಪೂಜೆ!

• ತುರುವೇಕೆರೆ ಪ್ರಸಾದ್

'ಆಯುಧಪೂಜೆ ಹತ್ರ ಬರ್‍ತಾ ಐತೆ... ನಿಮ್ ಮನೆಗಳಲ್ಲಿ ಎಂಗೈತೆ ತಯಾರಿ?' ಕೇಳಿದ ಗುದ್ಲಿಂಗ.

'ನಮ್ಮನೇಲಿ ತಾತನ ಕಾಲದಿಂದ್ಲೂ ಕುಡ್ಲು, ಹಾರೆ, ಕತ್ರಿ, ಚಾಕು ಇದ್ದೆಲ್ಲಾ ಇಟ್ಟೇ ಆಯುಧಪೂಜೆ ಮಾಡಾದು?' ಎಂದ ಮಾಲಿಂಗ

'ಅಯ್ಯೋ! ಚಾಕು, ಕತ್ರಿ ಇಡೋ ಕಾಲ ಹೋಯ್ತು... ಈಗೇನಿದ್ರೂ ಮಚ್ಚು, ಲಾಂಗು ಇಟ್ಟು ಪೂಜೆ ಮಾಡೋ ಕಾಲ ಕಣ್ಲಾ'.

'ಏ ನಿಮ್ಮನೇಲಿ ನಿನ್ ಎಂಡ್ರು ಲಟ್ಟಣಿಗೆ, ಸೌಟು, ಡಬರೀನೆ ಪೂಜೆ ಮಾಡೋದು ಅಲ್ವಾ?' ಕಿಚಾಯಿಸಿದ ಪರ್ಮೇಶಿ.

'ಅವೆಲ್ಲಾ ಪಾಣಿಗ್ರಹಣ ಮಾಡಿಕೊಂಡ ಗೃಹಸ್ಥರ ಕ್ಷಿಪಣಿಗಳು. ನಿಮ್ ಮನೇಲಿ ಧೂಮಕೇತು ಅಂದ್ರೆ ಪೊರಕೆ, ಫ್ಲೈಯಿಂಗ್ ಸಾಸರ್ ಅಂದ್ರೆ ಊಟದ ತಟ್ಟೇನೂ ಇಟ್ಟು ನಿನ್ ಎಂಡ್ರು ಪೂಜೆ ಮಾಡಲ್ವಾ?' ಟಾಂಗ್ ಕೊಟ್ಟ ಕಲ್ಲೇಶಿ.

'ಪಾಂಡವರು ಅಜ್ಞಾತವಾಸಕ್ಕೆ ಮುಂಚೆ ಶಮೀ ವೃಕ್ಷದಲ್ಲಿ ಆಯುಧಗಳನ್ನ ಅಡಗಿಸಿಟ್ಟಿದ್ರಲ್ಲ ಹಾಗೆ ಕೆಲವರು ಮನೇಲಿ ಬಂದೂಕು, ಬಾಂಬು ಇಟ್ಟಿರ್ತಾರೆ'.

'ಅದೂ ನಿಜನೇ. ಅದಕ್ಕೆ ಪೊಲೀಸರೇ ಪೂಜೆ ಮಾಡ್ತಾರೆ. ಹಿಂದೆ ವೆಪನ್ನು ಪೆನ್ನೂ ಆಗ್ಬಹುದಿತ್ತು, ಗನ್ನೂ ಆಗ್ಬಹುದಿತ್ತು. ಈಗ 'ಪನ್'ಆಗಿ ನಗೆಪಾಟಲಾಗೋಗಿದೆ...'

'ಅಂಗಂದ್ರೆ ಏನ್ಲಾ?'

'ಮುಂಚೆ ಕೆಲಸಕ್ಕೆ ಬಳಸೋ ವಸ್ತುಗಳನ್ನ ಆಯುಧ ಅಂತಿದ್ರು. ಈಗ ಕೆಲಸಕ್ಕೆ ಬಾರದ ವಸ್ತುಗಳೂ ಆಯುಧ ಆಗವಲ್ಲ'.

'ಕೆಲಸಕ್ಕೆ ಬಾರದವು ಅಂದ್ರೆ ಏನ್ಲಾ?'

'ಬುರುಡೆ ಕಣ್ಲಾ ಬುರುಡೆ. ದಧೀಚಿ ಬೆನ್ಮೂಳೆ ತರ ಕೆಲವರು ಇದ್ದ ಬದ್ದ ಮೂಳೆನೆಲ್ಲಾ ಬಿಲ್ ಮಾಡಿ ಸಿಕ್ಕ ಸಿಕ್ಕ ಕಡೆ ಬಾಣ ಬಿಡ್ತಾವ್ರೆ'.

'ಮನುಷ್ಯ ಸತ್ ಮೇಲಾದ್ರೂ ಉಪಯೋಗಕ್ಕೆ ಬತ್ತಾವ್ನಲ್ಲ ಅಂತ ಖುಷಿಪಡು'.

'ಸತ್ ಮೇಲ್ ಯಾಕ್ಲಾ? ಬದುಕಿದ್ದಾಗ್ಲೂ ಉದ್ದ ತುಂಡವಾಗಿ, ಚೂಪು ಮೊಂಡವಾಗಿ ಜನರನ್ನ ಹಿಂಸೆ ಮಾಡೋ ಆಯುಧ ನಮ್ ರಾಜಕೀಯದೋರ ತವ ಐತಲ್ಲ...'

'ಏನಪ್ಪಾ ಅಂತಾದ್ದು? ನಮ್ಗೆ ಗೊತ್ತಿಲ್ದೆ ಇರೋದು?'

'ನಾಲಗೆ ಕಣ್ಲಾ ನಾಲಿಗೆ' ಎಂದ ಪರ್ಮೇಶಿ. ಎಲ್ಲಾ ಹೌದೆಂದು ತಲೆಯಾಡಿಸಿದರು.

ಸಂಗತ

'ನಾಸ್ತಿಕ' ಪರಂಪರೆಗೆ ವಿರೋಧ ಏಕೆ?

ಬಹುತ್ವ ಭಾರತದ ಸೌಂದರ್ಯಕ್ಕೆ ಹೊಳಪು ನೀಡುವಲ್ಲಿ ಹಾಗೂ ವೈಚಾರಿಕ ನೆಲೆಗಳನ್ನು ವಿಸ್ತರಿಸುವಲ್ಲಿ 'ನಾಸ್ತಿಕ ಪರಂಪರೆ' ಬಹು ದೊಡ್ಡ ಕೊಡುಗೆ ನೀಡಿದೆ.

• ಸರ್ಫ್ರಾಜ್ ಚಂದ್ರಗುತ್ತಿ


'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ ಹಿನ್ನೆಲೆಯಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿ, 'ನಾಸ್ತಿಕ' ಎನ್ನುವ ಆಯ್ಕೆಯ ಅವಕಾಶ ಸಮೀಕ್ಷೆಯಲ್ಲಿ ಇರುವುದಕ್ಕೆ ವಿರೋಧವೂ ಒಂದಾಗಿದೆ.

ಈ ದೇಶದ ಮೂಲ ದಾರ್ಶನಿಕ ಪಂಥಗಳಾಗಿರುವ ನ್ಯಾಯ, ವೈಶೇಷಿಕ, ಯೋಗ, ಸಾಂಖ್ಯ, ಮೀಮಾಂಸೆ, ಲೋಕಾಯತ ಹಾಗೂ ಜೈನ, ಬೌದ್ಧಧರ್ಮಗಳೆಲ್ಲ ನಾಸ್ತಿಕವಾದಿ ಪರಂಪರೆಯಿಂದ ರೂಪುಗೊಂಡಿವೆ. ಪ್ರಾಚೀನ ಭಾರತದ ಧರ್ಮ ಯಾವತ್ತೂ ತನ್ನ ಕೇಂದ್ರಪ್ರಜ್ಞೆಯಲ್ಲಿ ದೇವರು, ದೇವಸ್ಥಾನ, ಆರಾಧನೆಗಳಂತಹ ಕಲ್ಪನೆಗಳನ್ನು ಹೊಂದಿರಲಿಲ್ಲ. ಬದಲಿಗೆ ಶೀಲ, ಕರುಣೆ, ಮೈತ್ರಿ ಹಾಗೂ ನೈತಿಕತೆಯನ್ನೇ ಅನುಸರಿಸಿಕೊಂಡು ಬಂದಿತ್ತು. ಸತ್ಯಾನ್ವೇಷಣೆ ಹಾಗೂ ಸತ್ಯದ ಅನುಸರಣೆಗೆ ಆದ್ಯತೆ ನೀಡಲಾಗಿತ್ತು. ಯಾವುದೋ ಕಾಲಘಟ್ಟದಲ್ಲಿ ಇಲ್ಲಿಯ ನೆಲಕ್ಕೆ ದೇವರು, ಆರಾಧನೆ, ಯಾಗ, ಯಜ್ಞ ಬಲಿ ಮೊದಲಾದ ನಂಬಿಕೆಗಳ ಪ್ರವೇಶವಾಯಿತು.

ವೇದಗಳು, ರಾಮಾಯಣ, ಮಹಾಭಾರತದ ಕಾಲದಲ್ಲಿಯೂ ಮಂದಿರ ಸ್ಥಾಪನೆಯ ಪ್ರಸ್ತಾಪ ಇಲ್ಲದಿರುವುದನ್ನು ಗಮನಿಸಬಹುದು. ಈ ಆಸ್ತಿಕತೆಯ ಜೊತೆ ಜೊತೆಗೆ ಮತಾಚಾರಗಳು ಹುಟ್ಟು ಪಡೆದವು. ಮೌಢ್ಯ, ಪವಾಡಗಳ ಕಲ್ಪನೆ, ತನ್ನದು ಮಾತ್ರ ಶ್ರೇಷ್ಠ ಎಂಬ ಜೀವವಿರೋಧಿ ನಿಲುವು ಮುನ್ನೆಲೆಗೆ ಬಂದ ಪರಿಣಾಮವಾದ ಧಾರ್ಮಿಕ ಹಿಂಸೆ ವರ್ತಮಾನದ ಬದುಕನ್ನು ಅಸಹನೀಯಗೊಳಿಸಿದೆ.

ಹಿಟ್ಲರನ ಧಾರ್ಮಿಕ ಶ್ರೇಷ್ಠತೆಯ ವ್ಯಸನದಿಂದಾಗಿಯೇ ಎರಡು ವಿಶ್ವಯುದ್ಧಗಳು ಸಂಭವಿಸಿವೆ. ಇಂದಿನ ಪ್ಯಾಲೆಸ್ಟೀನ್– ಇಸ್ರೇಲ್ ಸಂಘರ್ಷಕ್ಕೂ ಇದುವೇ ಕಾರಣವಾಗಿದೆ. ಹತ್ತನೇ ಶತಮಾನದ ಆಚೀಚೆ ಸಂಭವಿಸಿದ ಬೌದ್ಧ, ಜೈನ, ವಚನಕಾರರ ಮೇಲಿನ ಅಮಾನುಷ ಹತ್ಯಾಕಾಂಡ ನಡೆದದ್ದು ಉಗ್ರ ಆಸ್ತಿಕವಾದಿಗಳಿಂದ. ನಾಸ್ತಿಕರನ್ನು, ಅನ್ಯಧರ್ಮೀಯರನ್ನು ಈ ಜಗತ್ತಿನಿಂದಲೇ ಉಚ್ಚಾಟಿಸುತ್ತೇವೆ ಎನ್ನುವ ಮತಾಂಧರ ಹಿಂಸಾರತಿಯಿಂದಾಗಿ ಮನುಕುಲ ಇನ್ನಿಲ್ಲದಷ್ಟು ನಷ್ಟವನ್ನು ಅನುಭವಿಸಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಪ್ರಸಕ್ತ ಸಮೀಕ್ಷೆಯ ಭಾಗವಾದ 'ನಾಸ್ತಿಕ' ಎನ್ನುವ ಆಯ್ಕೆಯ ಔಚಿತ್ಯವನ್ನು ಗಮನಿಸಬೇಕು.

ಭಾರತ ಒಂದು ಧರ್ಮ, ಒಂದು ಭಾಷೆ, ಒಂದು ಜಾತಿ, ಒಂದು ವರ್ಣದ ನಾಡಲ್ಲ. ಒಂದು ವಾದ, ಒಂದು ಸಿದ್ಧಾಂತದ ನೆಲವೂ ಅಲ್ಲ. ಅನೇಕ ದಾರ್ಶನಿಕತೆಗಳು ಇಲ್ಲಿ ಹುಟ್ಟಿ ಬೆಳೆದಿವೆ. ಕಾಲ ಕಾಲಕ್ಕೆ ನೂರೆಂಟು ವಾಗ್ವಾದಗಳನ್ನು ಜೀವಂತವಾಗಿಟ್ಟುಕೊಂಡು ಬಂದ ನೆಲವಿದು. ಈ ಎಲ್ಲ ವೈವಿಧ್ಯ, ವಿಶೇಷಗಳನ್ನು ನಮ್ಮ ಸಂವಿಧಾನ ನಿರ್ಮಾತೃಗಳು ಪರಿಗಣಿಸಿ ಬಹುತ್ವದ ನೆಲೆಯಲ್ಲಿ ಅದನ್ನು ರಚಿಸಿದ್ದಾರೆ.



ಬಹುತ್ವ ಭಾರತದ ಮಣ್ಣಲ್ಲಿ ಆಸ್ತಿಕರ ಹಾಗೆಯೇ ನಾಸ್ತಿಕರು ಹಾಗೂ ಆಜ್ಞೇಯತಾವಾದಿಗಳೂ ಇದ್ದಾರೆ, ಇರಬೇಕು ಕೂಡ. ಆಸ್ತಿಕರಿಗೆ ಇಲ್ಲಿ ಜಾಗವಿಲ್ಲ ಎನ್ನುವ ಕಮ್ಯುನಿಸ್ಟ್‌ವಾದಿಗಳ ಅತಿರೇಕದಂತೆಯೇ, ಪ್ರಜಾತಂತ್ರ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ಭಾರತದಲ್ಲಿ ನಾಸ್ತಿಕರು ಇರಕೂಡದು ಎನ್ನುವುದು ಹಾಸ್ಯಾಸ್ಪದ. ಮೇಲಾಗಿ ಒಂದು ದೇಶದ ಅಭಿವೃದ್ಧಿ ಹಾಗೂ ವಿಕಾಸಕ್ಕೆ ಬೇಕಾದದ್ದು ಪ್ರಾಮಾಣಿಕತೆ, ನೈತಿಕತೆ, ಬದ್ಧತೆ, ಮಾನವೀಯತೆ, ಜಾತ್ಯತೀತತೆ ಹಾಗೂ ವೈಚಾರಿಕತೆ ಇರುವ ಸತ್ಯಪರ ಮನಸ್ಸುಗಳೇ ವಿನಾ ವ್ಯಕ್ತಿಯೊಬ್ಬ ಆಸ್ತಿಕನೋ ನಾಸ್ತಿಕನೋ ಎಂಬ ಚರ್ಚೆ ಅಲ್ಲ. ನಾಸ್ತಿಕತೆಯನ್ನು ವಿರೋಧಿಸುವವರು ಗಮನಿಸಬೇಕಾದದ್ದು: ಸಂವಿಧಾನ ಕರ್ತೃ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನಾಸ್ತಿಕರಾಗಿದ್ದರು ಮತ್ತು ಅವರು ತಮ್ಮ ಆಧ್ಯಾತ್ಮಿಕ ಗುರುವಾಗಿ ಒಪ್ಪಿಕೊಂಡಿದ್ದ ಬುದ್ಧ ಆಜ್ಞೇಯತಾವಾದಿ.

ಭಾರತದಲ್ಲಿ ಸಾತ್ವಿಕ ಆಸ್ತಿಕತೆಯ ಪರಿಕಲ್ಪನೆ, ಮಾದರಿಯೊಂದಿತ್ತು. ಬಸವಣ್ಣ, ಕನಕದಾಸ, ಕಬೀರ, ಪರಮಹಂಸ, ವಿವೇಕಾನಂದ, ನಾರಾಯಣಗುರು, ರಮಣ ಮಹರ್ಷಿ, ಗಾಂಧಿ, ಕುವೆಂಪು, ಮೊದಲಾದವರು ಅನುಸರಿಸಿಕೊಂಡು ಬಂದ ಮಾದರಿಯದು. ವಚನಕಾರರು, ಹರಿದಾಸರು, ಸೂಫಿಗಳನ್ನೂ ಈ ಪರಂಪರೆಗೆ ಸೇರಿಸಿಕೊಳ್ಳಬಹುದು. ಜಾತಿ–ಧರ್ಮಗಳ ಹೆಸರಲ್ಲಿ ಮನುಕುಲವನ್ನು ಬೇರ್ಪಡಿಸದೆ, ಮೂಢನಂಬಿಕೆ ಮತಾಚಾರಗಳನ್ನು ಹೊರಗಿಟ್ಟು ಸತ್ಯದ ಸ್ಥಾನದಲ್ಲಿ ದೇವರನ್ನು ಕಾಣುವ ಅಪರೂಪದ ಆಸ್ತಿಕತೆಯ ಮಾದರಿಯದು. ದೇವರೇ ಸತ್ಯ ಎನ್ನುವ ಈ ಮಹಾತ್ಮರು ಅಂತಿಮವಾಗಿ ಬಂದು ತಲುಪಿದ್ದು 'ಸತ್ಯವೇ ದೇವರು' ಎಂಬ ನೆಲೆಗೆ.

ಪೆರಿಯಾರ್ ನಾಸ್ತಿಕತೆಯನ್ನು ಬೋಧಿಸಿದ ತಮಿಳುನಾಡಲ್ಲಿ ಅಸಂಖ್ಯಾತ ಮಂದಿರಗಳು ತಲೆಯೆತ್ತಿ ನಿಂತಿವೆ. ಇಂದು ಜನ ನಾಸ್ತಿಕರನ್ನು ಅನುಮಾನದಿಂದ ನೋಡುತ್ತಿದ್ದಾರೆ ಕೂಡ. ಶೀಲಪ್ರಜ್ಞೆ, ನೈತಿಕತೆಗಳಿಲ್ಲದ ನಾಸ್ತಿಕತೆ ಉಗ್ರ ಆಸ್ತಿಕತೆಯಷ್ಟೇ ಅಪಾಯಕಾರಿ. ಅಂಬೇಡ್ಕರ್, ಲೋಹಿಯಾರವರ ನಾಸ್ತಿಕತೆಯ ಮಾದರಿ ಅನುಸರಣೀಯ. ಭಾರತದ ಉಗ್ರ ನಾಸ್ತಿಕವಾದಿಗಳು ಧರ್ಮ, ಅಧ್ಯಾತ್ಮ, ರಾಮ–ಕೃಷ್ಣ ಮೊದಲಾದ ಪದಗಳನ್ನು ಕೇಳಿಸಿಕೊಳ್ಳಲೂ ಸಿದ್ಧರಿಲ್ಲ. ಅಂಬೇಡ್ಕರ್ ಬೌದ್ಧಧರ್ಮದ ಆಧ್ಯಾತ್ಮಿಕ ವಿಚಾರಗಳನ್ನು ಮುಕ್ತವಾಗಿ ಚರ್ಚಿಸಬಲ್ಲರು. ಲೋಹಿಯಾರವರು, ರಾಮ– ಕೃಷ್ಣ– ಶಿವ– ದ್ರೌಪದಿ ಮೊದಲಾದ ಪಾತ್ರಗಳನ್ನು ಭಾರತೀಯ ಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಬಲ್ಲರು. ರಾಮಾಯಣದ ರಾಮ, ಮಹಾಭಾರತ– ಭಗವದ್ಗೀತೆಯ ಕೃಷ್ಣ ಇವರೆಲ್ಲ ಅನುಸರಣೆಯ ಮಾದರಿಗಳೇ ವಿನಾ ಆರಾಧನೆಯ ಸಂಕೇತಗಳಲ್ಲ ಎಂಬುದನ್ನು ತೋರಿಸಿಕೊಟ್ಟದ್ದು ಕೂಡ ಸಾತ್ವಿಕ ನಾಸ್ತಿಕತೆ ಎಂಬುದನ್ನು ಮರೆಯಲಾಗದು. ಭಾರತದ ಬಹುತ್ವದ ಸೌಂದರ್ಯವನ್ನು ಕಾಪಾಡುವಲ್ಲಿ, ವೈಚಾರಿಕ ನೆಲೆಗಳನ್ನು ವಿಸ್ತರಿಸುವಲ್ಲಿ ಈ ದೇಶದ ನಾಸ್ತಿಕ ಪರಂಪರೆ ಬಹುದೊಡ್ಡ ಕೊಡುಗೆ ನೀಡಿದೆ.

ಕ್ಷೋಭೆಯ ಕಾಲದಲ್ಲಿ ಪತ್ರಿಕೋದ್ಯಮದ ಮಹತ್ವ ವಿವರಿಸುವ ಜಾಗತಿಕ ಮಾಧ್ಯಮ ಲೋಕದ ಅನುಭವಿಗಳ ಅಭಿಪ್ರಾಯಗಳು

ಕಗ್ಗತ್ತಲ ಕಾಲದಲ್ಲಿ ಬೆಳಕಿನ ನಿರೀಕ್ಷೆ

• ಫರ್ನಾಂಡೊ ಬೆಲ್‌ಝುನ್ಸ್



> ಆಧುನಿಕ ತಂತ್ರಜ್ಞಾನಗಳು ಪತ್ರಿಕೋದ್ಯಮ ಮತ್ತು ಪ್ರಜಾಪ್ರಭುತ್ವಗಳ ಮೇಲೆ ದೊಡ್ಡ ಮಟ್ಟದ ಪ್ರಭಾವ ಬೀರುತ್ತಿವೆ. ಸಾಮಾಜಿಕ ಮಾಧ್ಯಮಗಳು ಸುಳ್ಳು ಮಾಹಿತಿಗಳು, ಅವುಗಳ ಪ್ರಸರಣಕ್ಕೆ ಉತ್ತೇಜನ ನೀಡುವುದರ ಜೊತೆಗೆ ಮಾಧ್ಯಮ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿವೆ. ಈ ಮಾಧ್ಯಮಗಳು ನಕಲಿ ಸುದ್ದಿಗಳನ್ನು ಹರಡುವ, ಸಮಾಜದ ಧ್ರುವೀಕರಣ ಮತ್ತು ದ್ವೇಷ ಹರಡುವ ಮೈದಾನಗಳಾಗಿವೆ. ಜಗತ್ತಿನಾದ್ಯಂತ ಕಂಡುಬರುತ್ತಿರುವ ಪ್ರಕ್ಷುಬ್ಧ ಸನ್ನಿವೇಶದಿಂದಾಗಿ ಪ್ರಜಾಪ್ರಭುತ್ವ ಮತ್ತು ಪತ್ರಿಕೋದ್ಯಮ ಸಂಕಷ್ಟಕ್ಕೆ ಸಿಲುಕಿವೆ. ಕಣ್ಣ ಮುಂದೆ ತಕ್ಷಣಕ್ಕೆ ಯಾವ ಪರಿಹಾರವೂ ಕಾಣುತ್ತಿಲ್ಲ

ಸುಳ್ಳು ಮಾಹಿತಿಗಳಿಂದಲೇ ಕೂಡಿದ ಕಾಲಘಟ್ಟದಲ್ಲಿ ನಾವು ಬದುಕುತ್ತಿದ್ದೇವೆ. ಆದರೂ ಅನೇಕ ಜನರಿಗೆ ಇದರ ಬಗ್ಗೆ ತಿಳಿದೇ ಇಲ್ಲ. ಈಗಿನ ಸನ್ನಿವೇಶವು ಗೊಂದಲ ಮತ್ತು ಅಪನಂಬಿಕೆಯಿಂದ ಕೂಡಿದೆ. ಸುಳ್ಳು ಮಾಹಿತಿಗಳು ಎಷ್ಟು ವೇಗವಾಗಿ ರೂಪಾಂತರಗೊಳ್ಳುತ್ತಿವೆ ಮತ್ತು ತುಂಬಾ ದೂರಕ್ಕೆ ತಲುಪುತ್ತಿವೆ ಎಂದರೆ, ಅವುಗಳನ್ನು ಗ್ರಹಿಸಲು ಅಥವಾ ಅವುಗಳಿಂದಾಗುವ ಪರಿಣಾಮಗಳನ್ನು ಊಹಿಸಲು ಸಾಧ್ಯವೇ ಇಲ್ಲವೇನೋ ಎಂಬಂತಾಗಿದೆ. ತೀವ್ರವಾಗಿ ಧ್ರುವೀಕರಣಗೊಂಡಿರುವ ಸಾಮಾಜಿಕ ವಾತಾವರಣದಲ್ಲಿ ಇಂತಹ ದಿಗ್ಭ್ರಾಂತಿಯನ್ನು ಸೃಷ್ಟಿಸಲಾಗುತ್ತಿದೆ.

ಅತ್ಯಂತ ಬಲಶಾಲಿಯಾದ ರಾಜಕೀಯ ಶಕ್ತಿಗಳು, ಭಾವನೆಗಳನ್ನು ಕೆರಳಿಸುವುದರಲ್ಲಿ ನಿಸ್ಸೀಮರಾದವರು ಸಾಮಾಜಿಕ ಮಾಧ್ಯಮಗಳ ಮೂಲಕ ಸಮಾಜದಲ್ಲಿ ದೊಡ್ಡ ಪ್ರಮಾಣದಲ್ಲಿ ಅಸ್ಥಿರತೆ ಸೃಷ್ಟಿಸುವ ಸಾಮರ್ಥ್ಯ ಹೊಂದಿದ್ದಾರೆ. ಸುಳ್ಳು ಮಾಹಿತಿಗಳ ತ್ವರಿತ ಪ್ರಸರಣ ಹಾಗೂ ವಿಶ್ವಾಸಾರ್ಹವಲ್ಲದ ಅಗಾಧ ಪ್ರಮಾಣದ ಮಾಹಿತಿಗಳು ಇಂತಹ ದುರ್ಬಲ ಭಾವನೆಗಳು ಮೂಡಲು ಗಮನಾರ್ಹ ಕೊಡುಗೆಗಳನ್ನು ನೀಡುತ್ತಿವೆ. ಈ ಎಲ್ಲ ಕಾರಣಗಳಿಂದ ಮತ್ತು ನಾವು ಸಾಕ್ಷೀಕರಿಸುತ್ತಿರುವ ಈಗಿನ ಬೆಳವಣಿಗೆಗಳನ್ನು ಗಮನಿಸಿದಾಗ ನಾವು 'ಬದಲಾವಣೆಯ ಯುಗ'ದ ಬದಲಿಗೆ 'ಯುಗದ ಬದಲಾವಣೆ'ಯನ್ನು ನೋಡುತ್ತಿದ್ದೇವೆಯೇನೋ ಎಂಬ ಆತಂಕ ಮೂಡುತ್ತದೆ.

ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ವಿಸ್ತರಿಸುತ್ತಿರುವ ಕೀಳು ಮಟ್ಟದ ರಾಜಕಾರಣವು ಈಗಾಗಲೇ ದುರ್ಬಲವಾಗಿರುವ ಜಾಗತಿಕ ಸನ್ನಿವೇಶ ಮತ್ತಷ್ಟು ಹಾಳಾಗಲು ಕಾರಣವಾಗುತ್ತಿದೆ. ದುರದೃಷ್ಟಕರ ಸಂಗತಿ ಎಂದರೆ, ವಿವಿಧ ದೇಶಗಳಲ್ಲಿ ಜಾರಿಯಲ್ಲಿರುವ ಸಂಸ್ಕೃತಿಹೀನ ರಾಜಕಾರಣವು ಪ್ರಜಾಪ್ರಭುತ್ವ ವಿರೋಧಿ ಕಾರ್ಯಸೂಚಿಗಳಿಗೆ ಉತ್ತೇಜನ ನೀಡಲು ಪ್ರಜಾಪ್ರಭುತ್ವವನ್ನೇ ಬಳಸುತ್ತಿದೆ. ಇಂತಹ ರಾಜಕಾರಣದಲ್ಲಿ ತೊಡಗಿಕೊಂಡಿರುವ ರಾಜಕಾರಣಿಗಳು, ಸುಳ್ಳು ಮಾಹಿತಿ ಆಧಾರಿತ ಕಾರ್ಯತಂತ್ರವನ್ನು ಜಾಗತೀಕರಣಗೊಳಿಸಿರುವ ಜಗತ್ತಿನ ಅತ್ಯಂತ ಶಕ್ತಿಶಾಲಿ ವ್ಯಕ್ತಿಯೊಬ್ಬರನ್ನು ಅನುಸರಿಸುತ್ತಿದ್ದಾರೆ. ನಾಲ್ಕು ವರ್ಷಗಳ ಹಿಂದೆ ಆ ನಾಯಕನ ಬೆಂಬಲಿಗರು ಚುನಾವಣೆಯ ಫಲಿತಾಂಶದ ವಿರುದ್ಧ ತೊಡೆ ತಟ್ಟಿದ್ದರು. ಆದರೆ, ನಾಲ್ಕು ವರ್ಷಗಳ ನಂತರ ಅದೇ ವ್ಯಕ್ತಿ ಪ್ರಜಾಸತ್ತಾತ್ಮಕವಾಗಿಯೇ ರಾಷ್ಟ್ರ ನಾಯಕನಾಗಿ ಆಯ್ಕೆಯಾಗಿದ್ದಾರೆ. ಮೊದಲೆಲ್ಲ ಅಮೆರಿಕದಲ್ಲಿ ಇಂತಹ ಬಂಡಾಯವನ್ನು ಊಹಿಸಲು ಸಾಧ್ಯವೇ ಇರಲಿಲ್ಲ. ಆದರೆ, ಅಲ್ಲಿಯೇ ಇದು ನಡೆದಿದೆ. ಜಗತ್ತಿನಾದ್ಯಂತ ಇಂತಹ ಪ್ರವೃತ್ತಿ ಕಂಡುಬರುತ್ತಿದೆ ಎಂಬುದಕ್ಕೆ ಸಾಕ್ಷ್ಯ ಎಂಬಂತೆ, ಒಂದು ವರ್ಷದ ನಂತರ ಇಂತಹುದೇ ಪರಿಸ್ಥಿತಿ ಬ್ರೆಜಿಲ್‌ನಲ್ಲಿ ಸೃಷ್ಟಿಯಾಯಿತು.

ಜನಪ್ರಿಯ ಮತ್ತು ನಿರಂಕುಶಪ್ರಭುತ್ವದ ಪ್ರವೃತ್ತಿಗಳು ತೀವ್ರಗಾಮಿ ಧೋರಣೆಯ ಹೊಸ ರಾಜಕಾರಣಿಗಳನ್ನು ಪ್ರಭಾವಿಸುತ್ತಿವೆ. ಅವರಷ್ಟೇ ಅಲ್ಲ; ಈ ಹಿಂದೆ ಮೃದು ಧೋರಣೆಗೆ ಹೆಸರಾಗಿದ್ದ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡಿರುವ ರಾಜಕಾರಣಿಗಳೂ ಇವುಗಳ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಹಂಗರಿ, ಪೋಲೆಂಡ್, ಇಸ್ರೇಲ್, ಫಿಲಿಪ್ಪೀನ್ಸ್, ಟರ್ಕಿ, ಎಲ್ ಸಾಲ್ವಡಾರ್, ಮೆಕ್ಸಿಕೊ, ಅರ್ಜೆಂಟೀನಾ, ಸ್ಪೇನ್, ಫ್ರಾನ್ಸ್ ಮತ್ತು ಇಟಲಿಗಳಲ್ಲಿ ಇಂತಹ ಪ್ರವೃತ್ತಿಯನ್ನು ಕಾಣಬಹುದು. ಈ ರೀತಿಯ ಹೊಸ ಸಿದ್ಧಾಂತದ ಪ್ರಭಾವಿ ನಾಯಕರು ಸಾಮಾಜಿಕ ಮಾಧ್ಯಮಗಳ ಮೂಲಕ ಹೊರಹೊಮ್ಮುತ್ತಿದ್ದಾರೆ. ಭಿನ್ನವಾಗಿ ಆಲೋಚಿಸುವ, ಸರ್ಕಾರಿ ಸಂಸ್ಥೆಗಳು ಹಾಗೂ ಜನರ ಪ್ರತಿನಿಧಿಯಾಗಿ ಆಯ್ಕೆಯಾಗಿರುವವರನ್ನು ನಿರಂತರವಾಗಿ ಪ್ರಶ್ನಿಸುವವರ ಮೇಲೆ ನಿರ್ದಯವಾಗಿ ದಾಳಿ ನಡೆಸಲು ಸಾಮಾಜಿಕ ಮಾಧ್ಯಮವನ್ನು ಬಳಸಲಾಗುತ್ತಿದೆ. ಅಚ್ಚರಿಯ ಸಂಗತಿ ಎಂದರೆ, ಹೀಗೆ ಪ್ರಶ್ನಿಸುವವರನ್ನು ಜನರ ಶತ್ರುಗಳು ಎಂದು ಇದೇ ಮಾಧ್ಯಮದ ಮೂಲಕ ಬಿಂಬಿಸಲಾಗುತ್ತಿದೆ. ಉದಾಹರಣೆಗೆ, ನ್ಯಾಯಾಂಗ ವ್ಯವಸ್ಥೆಯ ಮೇಲಿನ ದಾಳಿಗಳು ಉನ್ಮಾದದಿಂದ ಕೂಡಿರುತ್ತವೆ. ಅದೇ ರೀತಿ ಮಾಧ್ಯಮಗಳು ಮತ್ತು ಪತ್ರಕರ್ತರ ವಿರುದ್ಧವೂ ಯಾವುದೇ ಭೀತಿ ಇಲ್ಲದೆ ಎಲ್ಲರನ್ನೂ ಬೆಚ್ಚಿಬೀಳಿಸುವಂತೆ ನಿರ್ದಯವಾಗಿ ದಾಳಿ ನಡೆಸಲಾಗುತ್ತಿದೆ. ಈ ಎಲ್ಲವೂ ಹಲವು ಉದಾರವಾದಿ ಸಮಾಜಗಳಲ್ಲಿ ಏಕಕಾಲಕ್ಕೆ ನಡೆಯುತ್ತಿವೆ. ನಿಜವಾಗಿಯೂ ಇದು ಕಾಕತಾಳೀಯವೇ?

ನಾವು ಈ ಕಗ್ಗತ್ತಲಿನ ಕಾಲದಲ್ಲಿ ಇದ್ದೇವೆ. ಭವಿಷ್ಯದಲ್ಲಿ ಇದು ಒಂದು ಅಧ್ಯಯನದ ವಿಷಯವಾಗಲಿದೆ. ಪ್ರಮುಖ ತಂತ್ರಜ್ಞಾನಗಳು ಪತ್ರಿಕೋದ್ಯಮ ಮತ್ತು ಪ್ರಜಾಪ್ರಭುತ್ವಗಳ ಮೇಲೆ ದೊಡ್ಡ ಮಟ್ಟದ ಪ್ರಭಾವ ಬೀರುತ್ತಿವೆ. ಈ ಹೊಸ ಪ್ರಕ್ಷುಬ್ಧ ವಾತಾವರಣವು ಸುಳ್ಳು ಮಾಹಿತಿಗಳು, ಅವುಗಳ ಪ್ರಸರಣಕ್ಕೆ ಉತ್ತೇಜನ ನೀಡುವುದರ ಜೊತೆಗೆ ಮಾಧ್ಯಮ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿವೆ ಎಂಬುದು ಸ್ಪಷ್ಟ. ಕಣ್ಣ ಮುಂದೆ ತಕ್ಷಣಕ್ಕೆ ಯಾವ ಪರಿಹಾರವೂ ಕಾಣುತ್ತಿಲ್ಲ. ಜಗತ್ತಿನ ಬಹುತೇಕ ಮಾಧ್ಯಮ ಸಂಸ್ಥೆಗಳು ವರ್ಷಗಳ ಹಿಂದೆಯೇ ಬಿಕ್ಕಟ್ಟಿಗೆ ಸಿಲುಕಿವೆ. ಇದರ ನಡುವೆಯೇ, ಬಹುರಾಷ್ಟ್ರೀಯ ತಂತ್ರಜ್ಞಾನ ಕಂಪನಿಗಳ ಒಟ್ಟಾರೆ ಮಾರುಕಟ್ಟೆ ಮೌಲ್ಯವು ಫ್ರಾನ್ಸ್, ಸ್ಪೇನ್ ಅಥವಾ ಇಟಲಿಯಂತಹ ರಾಷ್ಟ್ರಗಳ ಜಿಡಿಪಿಯನ್ನು ಮೀರಿ ಬೆಳೆದಿದೆ. ಅಲ್ಗರಿದಮ್‌ಗಳ ಮೂಲಕ ನಡೆಯುವ ಸುಳ್ಳು ಮತ್ತು ಅತಿರಂಜಿತ ವಿಚಾರಗಳನ್ನು ಹರಡಲು ಪ್ರೋತ್ಸಾಹ ನೀಡುವ ಬ್ಯುಸಿನೆಸ್ ಮಾದರಿ ಆಧಾರಿತ ಸಾಮಾಜಿಕ ಮಾಧ್ಯಮಗಳ ವೇದಿಕೆಗಳಲ್ಲಿ ಪ್ರತಿ ದಿನ ಲಕ್ಷಾಂತರ ಜನರು ಹಲವು ಗಂಟೆಗಳನ್ನು ವ್ಯಯಿಸುತ್ತಿದ್ದಾರೆ. ಈ ಮಾಧ್ಯಮಗಳು ನಕಲಿ ಸುದ್ದಿಗಳನ್ನು ಹರಡುವ, ಸಮಾಜದ ಧ್ರುವೀಕರಣ ಮತ್ತು ದ್ವೇಷ ಹರಡುವ ಮೈದಾನಗಳಾಗಿವೆ.

ಉದಾರವಾದಿ ಸಮಾಜಗಳಲ್ಲಿ ಪ್ರಜಾಪ್ರಭುತ್ವವು ಹೇಗೆ ಬೇರೂರಿದೆ ಎಂದರೆ, ಎಂತಹದ್ದೇ ಪರಿಸ್ಥಿತಿಯಲ್ಲೂ ಅದು ಸುರಕ್ಷಿತವಾಗಿದೆ ಎಂಬಂತೆ ಕಾಣಿಸುತ್ತದೆ. ಆದರೆ, ಈ ವ್ಯವಸ್ಥೆ ಕೊಂಚ ಮೈಮರೆತರೂ ಅದು ಅದಕ್ಕೆ ಅಪಾಯಕಾರಿಯಾಗಿ ಪರಿಣಮಿಸಬಹುದು. ಜಗತ್ತಿನಲ್ಲೆಡೆ ಕಂಡುಬರುತ್ತಿರುವ ರಾಜಕೀಯ ಗೊಂದಲಗಳು, ಊಹಿಸಲು ಸಾಧ್ಯವಾಗದ ನಾಯಕತ್ವ ಮತ್ತು ವಿವಿಧ ಅಂತರರಾಷ್ಟ್ರೀಯ ಸಂಸ್ಥೆಗಳ ಬಗೆಗಿನ ಅಗೌರವದ ವರ್ತನೆಗಳು ದಶಕಗಳಿಂದ ಅಂಗೀಕರಿಸಿರುವ ಮತ್ತು ಗೌರವಿಸಿರುವ ಜಾಗತಿಕ ಮೌಲ್ಯಗಳ ವ್ಯವಸ್ಥೆಯ ಅಡಿಪಾಯವನ್ನೇ ಅಲುಗಾಡಿಸುತ್ತಿವೆ.

ಟೀಕೆ ಮತ್ತು ದಾಳಿಗಳ ಹೊರತಾಗಿಯೂ ಪ್ರಜಾಪ್ರಭುತ್ವಕ್ಕೆ ಯಾವ ಧಕ್ಕೆಯೂ ಆಗದು ಎಂಬುದು ನಮ್ಮ ಬಲವಾದ ಸಹಜ ನಂಬಿಕೆ. ಇತಿಹಾಸ ತೋರಿಸುವ ರೀತಿಯಲ್ಲಿ ಇದು ಯಾವಾಗಲೂ ನಿಜವಲ್ಲ. ಜಗತ್ತಿನಲ್ಲಿ ನಡೆಯುತ್ತಿರುವ ಇತ್ತೀಚಿನ ಬೆಳವಣಿಗೆಗಳು ಇದನ್ನು ಸಾರಿ ಹೇಳುತ್ತಿವೆ. ಈ ಹಿಂದೆ ಯೋಚಿಸಲೂ ಸಾಧ್ಯವಿಲ್ಲ ಎಂದು ನಂಬಲಾದ ಸಂಗತಿಗಳೆಲ್ಲ ಈಗ ನಡೆಯುತ್ತಿವೆ. ಯುರೋಪ್‌ನಲ್ಲಿ ಒಂದು ರಾಷ್ಟ್ರವು ಇನ್ನೊಂದು ದೇಶದ ಮೇಲೆ ಆಕ್ರಮಣ ಮಾಡಿರುವುದು ಅಥವಾ ಪಶ್ಚಿಮ ಏಷ್ಯಾದಲ್ಲಿ ನಾಗರಿಕರು ಮಾನವೀಯ ಮಹಾದುರಂತದ ಭಾಗವಾಗಿರುವುದು ಇದಕ್ಕೆ ಉದಾಹರಣೆ. ಈ ಬಿಕ್ಕಟ್ಟಿನ ಸ್ಥಿತಿಯಲ್ಲಿ ಸಂಕಷ್ಟಕ್ಕೆ ಗುರಿಯಾಗಿರುವುದು ಭದ್ರತೆ ಅಲ್ಲ; ಆರ್ಥಿಕತೆ ಅಲ್ಲ, ವಲಸೆಯೂ ಅಲ್ಲ ಅಥವಾ ಅನನ್ಯತೆಯೂ ಅಲ್ಲ. ಸಂಕಷ್ಟಕ್ಕೆ ಸಿಲುಕಿರುವುದು ಪ್ರಜಾಪ್ರಭುತ್ವ ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಪೂರಕವಾಗಿ ಮತ್ತು ಜನರಿಗಾಗಿ ಕೆಲಸ ಮಾಡುವ ಪತ್ರಿಕೋದ್ಯಮ. ಜನರಿಗಾಗಿ ಕೆಲಸ ಮಾಡುವ ಕಾರಣಕ್ಕಾಗಿಯೇ ಇದು ಜಾಗತಿಕ ಆಕ್ರಮಣಕ್ಕೆ ಗುರಿಯಾಗಿದೆ.

ಲೇಖಕ: ಸ್ಪೇನ್‌ನ ವೊಸಂಟೊ ಮಾಧ್ಯಮ ಸಮೂಹದ ಕಾರ್ಯನಿರ್ವಾಹಕ ಸಂಪಾದಕೀಯ ನಿರ್ದೇಶಕ. 'ಜರ್ನಲಿಸ್ಟ್ಸ್ ಇನ್ ಟೈಮ್ಸ್ ಆಫ್ ಡಾರ್ಕ್‌ನೆಸ್' ಎಂಬ ಕೃತಿಯನ್ನೂ ಬರೆದಿದ್ದಾರೆ.

ಪತ್ರಿಕೋದ್ಯಮ ಇಲ್ಲದಿದ್ದರೆ ಪ್ರಜಾಪ್ರಭುತ್ವ ಇಲ್ಲ

ವಿಶ್ವ ಸುದ್ದಿ ದಿನ ಆಚರಿಸುತ್ತಿರುವ ಈ ಸಂದರ್ಭವು ಪತ್ರಿಕೋದ್ಯಮದ ಮೌಲ್ಯ ಮತ್ತು ಪ್ರಾಮುಖ್ಯವನ್ನು ಸ್ಮರಿಸಲು ಅತ್ಯಂತ ಸೂಕ್ತವಾದ ಸಮಯ. ಸಮಾಜಗಳಿಗೆ ವೃತ್ತಿಪರವಾದ, ಸತ್ಯ ಆಧಾರಿತ ಮತ್ತು ನಿಖರ ಮಾಹಿತಿಗಳನ್ನು ನೀಡಲು ಪತ್ರಿಕೋದ್ಯಮ ಅತ್ಯಂತ ಉತ್ತಮ ವ್ಯವಸ್ಥೆ. ಇದು ನೀಡುವ ಖಚಿತ ಮಾಹಿತಿಗಳು ಸಮಾಜಗಳಿಗೆ ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಲು ಅವಕಾಶ ನೀಡುತ್ತದೆ. ಪತ್ರಿಕೋದ್ಯಮ ಎನ್ನುವುದು ಸರ್ಕಾರಗಳು, ಕಂಪನಿಗಳು ಮತ್ತು ಸಂಸ್ಥೆಗಳು ಹಾಗೂ ಅವುಗಳ ಕಾರ್ಯವೈಖರಿಯ ಮೇಲೆ ಕಣ್ಣಿಡುವ ಚಟುವಟಿಕೆಯೂ ಹೌದು. ಜನರ ಮುಖವಾಣಿಯಾಗಿ ಕಾರ್ಯನಿರ್ವಹಿಸುತ್ತಾ, ವಿಭಿನ್ನ ದೃಷ್ಟಿಕೋನಗಳನ್ನು ನೀಡುವ ಮೂಲಕ ಸಮಾಜದಲ್ಲಿ ಬಹುತ್ವಕ್ಕೆ ಉತ್ತೇಜನವನ್ನೂ ನೀಡುತ್ತದೆ.

ಪತ್ರಿಕೋದ್ಯಮವು ಈಗ ಈ ಹಿಂದೆಂದಿಗಿಂತಲೂ ಕಠಿಣ, ಸುಂದರವಾದ ಮತ್ತು ಅನಿವಾರ್ಯವಾದ ಉದ್ಯೋಗವಾಗಿದೆ. ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯು (ಎಐ) ವಾಸ್ತವದ ಬಗ್ಗೆ ನಮ್ಮ ಗ್ರಹಿಕೆಯನ್ನು ಶಾಶ್ವತವಾಗಿ ಬದಲಾಯಿಸಲಿದೆ. ಈ ತಂತ್ರಜ್ಞಾನವು ಖಂಡಿತವಾಗಿಯೂ ಸುಳ್ಳು ಮಾಹಿತಿಗಳನ್ನು ಹರಡಲು ಕೊಡುಗೆ ನೀಡಲಿದೆ ಎನ್ನುದರಲ್ಲಿ ಅನುಮಾನವೂ ಇಲ್ಲ. ಇಂತಹ ಸನ್ನಿವೇಶದಲ್ಲಿ ಮಾಹಿತಿಗಳನ್ನು ದೃಢಪಡಿಸಿಕೊಂಡು ದತ್ತಾಂಶ, ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿ, ಘಟನೆ ನಡೆಯುವ ಸ್ಥಳಗಳಿಗೆ ಭೇಟಿ ಕೊಟ್ಟು ಅಲ್ಲಿ ಏನು ನಡೆಯುತ್ತಿದೆ ಎಂಬ ಮಾಹಿತಿಯನ್ನು ವೃತ್ತಿಪರತೆಯಿಂದ ನೀಡುವ ವ್ಯಕ್ತಿಗಳು ನಮಗೆ ಬೇಕು. ಯಾಕೆಂದರೆ, ಪತ್ರಿಕೋದ್ಯಮ ಇಲ್ಲದಿದ್ದರೆ ಪ್ರಜಾಪ್ರಭುತ್ವ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲದೇ ಹೋದರೆ ಕತ್ತಲು ಪೂರ್ತಿ ಕವಿಯುತ್ತದೆ.

ವಿಶ್ವ ಸುದ್ದಿ ದಿನ
28 ಸೆಪ್ಟೆಂಬರ್ 2025

ಸತ್ಯದ ಹಾದಿ: ಪತ್ರಕರ್ತ ಏಕಾಂಗಿ

• ಫಿಲ್ ಚೆಟ್‌ವಿಂಡ್



> ಹಿಂಸೆ ಮತ್ತು ಬೆದರಿಕೆಗಳ ವ್ಯಾಪ್ತಿಯು ಜಾಗತಿಕವಾಗಿ ಹಿಗ್ಗುತ್ತಲೇ ಇದೆ. ನಿರಂಕುಶಾಧಿಕಾರದ ಪದ್ಧತಿಗಳಿಂದ ಮತ್ತು ಪತ್ರಿಕೋದ್ಯಮವನ್ನು ಸದಾ ಬಹಿರಂಗವಾಗಿ ಟೀಕಿಸುವ ಮನಃಸ್ಥಿತಿಯಿಂದ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತಿದೆ. ಇದು ಅಸ್ಥಿರ ರಾಜಕೀಯ ಪರಿಸ್ಥಿತಿ ಇರುವ ದೇಶಗಳಿಗೆ ಸೀಮಿತವಾಗಿಲ್ಲ; ಪತ್ರಿಕಾ ಸ್ವಾತಂತ್ರ್ಯದ ಸುದೀರ್ಘ ಇತಿಹಾಸವಿರುವ ದೇಶಗಳು, ಅತ್ಯುನ್ನತ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಲ್ಲಿಯೂ ಈ ವಿದ್ಯಮಾನಗಳು ಸಾಮಾನ್ಯ ಎನ್ನುವಂತಾಗಿರುವುದು ಜಾಗತಿಕ ಮೌಲ್ಯ ವ್ಯವಸ್ಥೆಯಲ್ಲಿ ಅಪಾಯಕಾರಿ ಬದಲಾವಣೆಗಳಾಗಿರುವುದನ್ನು ಸೂಚಿಸುತ್ತಿದೆ

ಪತ್ರಿಕೋದ್ಯಮದ ಮೂಲ ಕರ್ತವ್ಯಗಳಾದ ವಾಸ್ತವಾಂಶಗಳನ್ನು ಸಂಗ್ರಹಿಸುವುದು ಮತ್ತು ಮಾಹಿತಿಯನ್ನು ಪರಿಶೀಲಿಸುವುದು ದಿನದಿಂದ ದಿನಕ್ಕೆ ಕಷ್ಟವಾಗುತ್ತಿದೆ. ಹಾಗೆಯೇ ಹೆಚ್ಚು ಅಪಾಯಕಾರಿಯೂ ಆಗುತ್ತಿದೆ.

2025ರ ಮೊದಲ ಭಾಗದಲ್ಲಿ ವ್ಯವಸ್ಥಿತವಾದ ಹಿಂಸಾಚಾರ, ಬೆದರಿಕೆ ಮತ್ತು ಸೆನ್ಸಾರ್‌ಶಿಪ್‌ನಿಂದಾಗಿ ಹವಾಮಾನ ಮತ್ತು ಪರಿಸರ ಕುರಿತು ವರದಿ ಮಾಡುತ್ತಿದ್ದ ಪತ್ರಕರ್ತರ ಕೆಲಸ ದಶಕಗಳಲ್ಲಿ ಕಾಣದಷ್ಟು ಅಪಾಯಕಾರಿ ಮಟ್ಟ ಮುಟ್ಟಿತು.

ಸಾಮುದಾಯಿಕ ಬದುಕಿನ ಬುನಾದಿಯಾಗಿರುವ ಸತ್ಯಾಂಶಗಳನ್ನು ತಿರುಚುವ ಸಂಘಟಿತವಾದ ಮತ್ತು ಪ್ರಜ್ಞಾಪೂರ್ವಕವಾದ ಕ್ರಿಯೆಗಳಿಂದ ಸಮಾಜದ ಸಂರಚನೆಯೇ ಛಿದ್ರಗೊಳ್ಳುತ್ತಿದೆ. ಸುದ್ದಿಗಳನ್ನು ಸುಳ್ಳು ಎಂದು ನೀವು ಸಾಬೀತುಪಡಿಸುವ ಅಗತ್ಯವೇ ಇಲ್ಲ; ನಿರಂತರವಾಗಿ ಆರೋಪ ಹೊರಿಸುವುದು, ಅನುಮಾನಗಳನ್ನು ಬಿತ್ತುವುದು ಮತ್ತು ಪಿತೂರಿಗಳನ್ನು ಹರಡುವ ಕೆಲಸ ಮಾಡಿದರೆ ಸಾಕು; ಉಳಿದ ಕೆಲಸವನ್ನು ಸಾಮಾಜಿಕ ಜಾಲತಾಣಗಳು ಮಾಡಿ ಮುಗಿಸುತ್ತವೆ.

ಜಗತ್ತಿನಾದ್ಯಂತ ವರದಿಗಾರರನ್ನು ಹೊಂದಿರುವ, ಅಂತರರಾಷ್ಟ್ರೀಯ ಸುದ್ದಿಸಂಸ್ಥೆಯಾದ ಏಜೆನ್ಸಿ ಫ್ರಾನ್ಸ್ ಪ್ರೆಸ್‌ನ (ಎಎಫ್‌ಪಿ) ಅಂಕಿಅಂಶಗಳು ಸ್ಪಷ್ಟ ಚಿತ್ರಣ ನೀಡುತ್ತಿವೆ; ನಮ್ಮ ಸಂಸ್ಥೆಯ 25 ಪತ್ರಕರ್ತರು ಈ ವರ್ಷದ ಆರು ತಿಂಗಳಲ್ಲಿ ತೀವ್ರವಾದ ಹಿಂಸೆಗೆ ಗುರಿಯಾಗಿದ್ದಾರೆ. 2024ರಲ್ಲಿ ಇಡೀ ವರ್ಷದಲ್ಲಿ ಸಂಭವಿಸಿದ ಘಟನೆಗಳಿಗಿಂತಲೂ ಇದು ಹೆಚ್ಚಾಗಿದೆ.

ಹಿಂಸೆ ಮತ್ತು ಬೆದರಿಕೆಗಳ ವ್ಯಾಪ್ತಿಯು ಜಾಗತಿಕವಾಗಿ ಹಿಗ್ಗುತ್ತಲೇ ಇದೆ. ನಿರಂಕುಶಾಧಿಕಾರದ ಪದ್ಧತಿಗಳಿಂದ ಮತ್ತು ಪತ್ರಿಕೋದ್ಯಮವನ್ನು ಸದಾ ಬಹಿರಂಗವಾಗಿ ಟೀಕಿಸುವ ಮನಃಸ್ಥಿತಿಯಿಂದ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತಿದೆ. ಅಂಥವರಿಗೆ ರಾಜಕೀಯ ಕಾರಣಗಳಿಂದ ಕಾನೂನಿನ ಅಭಯವೂ ಸಿಕ್ಕಿರುವುದರಿಂದ ಪತ್ರಕರ್ತರ ಮೇಲಿನ ದಾಳಿಗಳು ಸಾಮಾನ್ಯವಾಗಿಬಿಟ್ಟಿವೆ. ಇದು ಅಸ್ಥಿರ ರಾಜಕೀಯ ಪರಿಸ್ಥಿತಿ ಇರುವ ದೇಶಗಳಿಗೆ ಸೀಮಿತವಾಗಿಲ್ಲ; ಪತ್ರಿಕಾ ಸ್ವಾತಂತ್ರ್ಯದ ಸುದೀರ್ಘ ಇತಿಹಾಸವಿರುವ ದೇಶಗಳು, ಅತ್ಯುನ್ನತ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಲ್ಲಿಯೂ ಈ ವಿದ್ಯಮಾನಗಳು ಸಾಮಾನ್ಯ ಎನ್ನುವಂತಾಗಿರುವುದು ಜಾಗತಿಕ ಮೌಲ್ಯ ವ್ಯವಸ್ಥೆಯಲ್ಲಿ ಅಪಾಯಕಾರಿ ಬದಲಾವಣೆಗಳಾಗಿರುವುದನ್ನು ಸೂಚಿಸುತ್ತಿದೆ.

ಜಗತ್ತಿನ ಬಹಳ ಮುಖ್ಯವಾದ ಪ್ರದೇಶಗಳಿಂದ ಪತ್ರಿಕೋದ್ಯಮವು ಕ್ರಮೇಣ ಕಣ್ಮರೆಯಾಗುತ್ತಿದೆ. ಬೆದರಿಕೆಗಳು ಅಸಹನೀಯವಾಗುತ್ತಿವೆ. ಪಶ್ಚಿಮ ಆಫ್ರಿಕಾದ ಸಾಹೆಲ್ ಪ್ರದೇಶದಿಂದ ಮತ್ತು ಮಧ್ಯ ಅಮೆರಿಕದ ನಿಕರಾಗುವ ಮತ್ತು ಎಲ್ ಸಾಲ್ವಡಾರ್‌ನಿಂದ ನಮ್ಮ ಸಂಸ್ಥೆಯ ಪತ್ರಕರ್ತರನ್ನು ಬಲವಂತವಾಗಿ ಹೊರನಡೆಯುವಂತೆ ಮಾಡಿದ್ದನ್ನು ನಾವು ಕಂಡಿದ್ದೇವೆ. ಪೂರ್ವ ಮತ್ತು ಮಧ್ಯ ಯುರೋಪ್‌ನ ನಮ್ಮ ಫ್ಯಾಕ್ಟ್ ಚೆಕ್ ಮಾಡುವ ಪತ್ರಕರ್ತರು ನಿರಂತರವಾಗಿ ಜೀವ ಬೆದರಿಕೆಗಳನ್ನು ಎದುರಿಸುತ್ತಿದ್ದು, ಮೌನವಹಿಸುವಂತೆ ಅವರ ಮೇಲೆ ಒತ್ತಡ ಹೇರಲಾಗುತ್ತಿದೆ.

ಇವಕ್ಕೆಲ್ಲ ಮೇಲಿನಿಂದಲೇ ಸಂದೇಶಗಳು ಬರುತ್ತಿವೆ. ಕಳೆದ ವರ್ಷ ಅರ್ಜೆಂಟೀನಾದ ಅಧ್ಯಕ್ಷರು ಸಾಮಾಜಿಕ ಜಾಲತಾಣದಲ್ಲಿ ಹೀಗೆ ಪೋಸ್ಟ್ ಮಾಡಿದ್ದರು: 'ಪತ್ರಕರ್ತರನ್ನು ನಾವು ಎಷ್ಟು ದ್ವೇಷಿಸಬೇಕೋ ಅಷ್ಟು ದ್ವೇಷಿಸುತ್ತಿಲ್ಲ'. 2024ರಲ್ಲಿ ಒಟ್ಟು 179 ಮಾಧ್ಯಮ ಪ್ರತಿನಿಧಿಗಳ ಮೇಲೆ ದೌರ್ಜನ್ಯಗಳು ನಡೆದಿವೆ ಎಂದು ಅರ್ಜೆಂಟೀನಾದ ಪತ್ರಿಕೋದ್ಯಮ ವೇದಿಕೆಯು ಹೇಳಿದೆ.

ಗಾಜಾ ಪರಿಸ್ಥಿತಿಯನ್ನೇ ಗಮನಿಸಿ. ಎರಡು ವರ್ಷಗಳಲ್ಲಿ ಗಾಜಾದಲ್ಲಿ ಸುಮಾರು 200 ಪತ್ರಕರ್ತರು ಹತ್ಯೆಗೊಳಗಾಗಿದ್ದಾರೆ ಎಂದು ಪತ್ರಕರ್ತರ ರಕ್ಷಣಾ ಸಮಿತಿ (ಸಿಪಿಜೆ) ಹೇಳಿದೆ. ಕನಿಷ್ಠ 20 ಪ್ರಕರಣಗಳಲ್ಲಿ ಪತ್ರಕರ್ತರನ್ನು ಉದ್ದೇಶಪೂರ್ವಕವಾಗಿಯೇ ಗುರಿ ಮಾಡಲಾಗಿದೆ ಎಂದು ಸಮಿತಿ ತಿಳಿಸಿದೆ. ಸಂಘರ್ಷದ ಪ್ರದೇಶದಲ್ಲಿ ಸಂಚರಿಸುವಾಗ ರಕ್ಷಣೆಗಾಗಿ ತೊಡುವ ವಿಶೇಷ ಜಾಕೆಟ್ ಅನ್ನು ತೊಡಲು ನಮ್ಮ ಎಎಫ್‌ಪಿಯ ಹಲವು ಪತ್ರಕರ್ತರು ನಿರಾಕರಿಸಿದರು. ಅದರಿಂದ ತಾವು ಮಾಧ್ಯಮದವರು ಎಂದು ಸುಲಭವಾಗಿ ಪತ್ತೆಯಾಗಿ, ತಮ್ಮನ್ನು ಗುರಿ ಮಾಡಲಾಗುತ್ತದೆ ಎನ್ನುವುದು ಅವರ ಆತಂಕ. ತಮಗೂ ಅಪಾಯ ಬಂದೊದಗಬಹುದು ಎನ್ನುವ ಕಾರಣಕ್ಕೆ ಪತ್ರಕರ್ತರ ಸನಿಹದಲ್ಲಿ ನಿಲ್ಲಲೂ ಜನರು ಹೆದರುತ್ತಿದ್ದರು ಎಂದು ನಮ್ಮ ಪ್ರತಿನಿಧಿಗಳು ಹೇಳುತ್ತಿದ್ದರು.

ಅನೇಕ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಪತ್ರಿಕಾ ಸ್ವಾತಂತ್ರ್ಯದ ಪಾಲು ಮಹತ್ತರವಾದುದು. ಅಂಥ ಅನೇಕ ರಾಷ್ಟ್ರಗಳ ಪೈಕಿ ಕೆಲವು ಮಾತ್ರವೇ ಸತ್ಯ, ವಾಸ್ತವಾಂಶ ಮತ್ತು ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಧ್ವನಿಯೆತ್ತುತ್ತಿವೆ. ಇದರಿಂದಾಗಿ ನಮ್ಮ ಅನೇಕ ಕೆಚ್ಚೆದೆಯ ಮತ್ತು ಬದ್ಧತೆಯ ಪತ್ರಕರ್ತರಲ್ಲಿ ತಾವು ಏಕಾಂಗಿಗಳು, ಅಸಹಾಯಕರು ಎನ್ನುವ ಭಾವನೆ ಮೂಡಿದೆ.

ಜನರ ಜೀವನದಲ್ಲಿ ಡಿಜಿಟಲ್ ತಂತ್ರಜ್ಞಾನದ ಸ್ಥಾನವನ್ನು ಜನರೇಟಿವ್ ಎಐ (ಕೃತಕ ಬುದ್ಧಿಮತ್ತೆ) ಸಾಧನಗಳು ಆಕ್ರಮಿಸಿಕೊಳ್ಳುತ್ತಿರುವ ಕಾಲಘಟ್ಟದಲ್ಲಿ ಪತ್ರಿಕೋದ್ಯಮದ ಮೇಲೆ ದಾಳಿ ಮಾಡುವ, ಸತ್ಯವನ್ನು ತಿರುಚುವ ಅಥವಾ ದುರ್ಬಲಗೊಳಿಸುವ ಪ್ರಕ್ರಿಯೆಯೂ ವ್ಯಾಪಕವಾಗಿ ನಡೆಯುತ್ತಿದೆ. ಜ್ಞಾನವನ್ನು ಪಡೆಯುವಲ್ಲಿ ಮತ್ತು ಮಾನವನ ಅಭಿವೃದ್ಧಿಯಲ್ಲಿ ಈ ಸಾಧನಗಳಿಗಿರುವ ಬೆರಗುಗೊಳಿಸುವ ಶಕ್ತಿಯನ್ನು ನಾವು ಕಾಣಬಹುದಾಗಿದೆ. ಹಾಗೆಯೇ, ಸುಳ್ಳು ಮತ್ತು ತಿರುಚಿದ ಸುದ್ದಿಗಳಿಂದ ನಮ್ಮ ಮಾಹಿತಿ ವ್ಯವಸ್ಥೆಯನ್ನು ಅವು ಹೇಗೆ ಮಲಿನ ಮಾಡಬಹುದು ಎನ್ನುವುದನ್ನು ನಾವು ಈಗಾಗಲೇ ಕಾಣುತ್ತಿದ್ದೇವೆ.

ಇದೊಂದು ಪರಿವರ್ತನೆಯ ಘಟ್ಟ ಎಂಬಂತೆ ಭಾಸವಾಗುತ್ತಿದೆ. ಸತ್ಯ ಮತ್ತು ಸುಳ್ಳಿನ ನಡುವಣ ಗೆರೆ ಅಳಿಸಿಹೋಗಿರುವ ಜಗತ್ತಿನಲ್ಲಿ ಬದುಕುವ ಬಗ್ಗೆ ಜನ ಒಮ್ಮೊಮ್ಮೆ ಚರ್ಚಿಸುತ್ತಾರೆ. ಪತ್ರಿಕೋದ್ಯಮ ಪರಿಪೂರ್ಣ ಏನಲ್ಲ ಮತ್ತು ಸದಾ ನಿಖರವಾದುದನ್ನೇ ಒದಗಿಸಲೂ ಸಾಧ್ಯವಿಲ್ಲ. ಆದರೆ, ಸರಿಯಾದ ಮಾಹಿತಿಯನ್ನು ಸಂಗ್ರಹಿಸುವ ಪ್ರಾಮಾಣಿಕ ಪ್ರಯತ್ನ ಮತ್ತು ಸತ್ಯದ ಹುಡುಕಾಟ ನಮ್ಮ ಸಮಾಜಗಳ ಆರೋಗ್ಯಕ್ಕೆ ಮೂಲಾಧಾರವಾಗಿದೆ. ಹಿಂದೆಂದಿಗಿಂತಲೂ ಹೆಚ್ಚಾಗಿ ನಾವು ಸತ್ಯದ ಪರ ನಿಲ್ಲಬೇಕಿದೆ. ಅದರ ವಿನಾ ಬೇರೊಂದು ಮಾರ್ಗವೇ ಇಲ್ಲ.


ಲೇಖಕ: ಎಎಫ್‌ಪಿ ಜಾಗತಿಕ ಸುದ್ದಿ ನಿರ್ದೇಶಕ



ಗುರುತು ಹೇಳಿಕೊಳ್ಳುವುದೂ ಅಪಾಯಕಾರಿ

ಪ್ರತಿಭಟನೆಗಳು, ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸುವ ವೇಳೆ ಪತ್ರಕರ್ತರು ತಮ್ಮ ಗುರುತನ್ನು ಬಹಿರಂಗಪಡಿಸುವುದು ಒಂದು ಸಂಪ್ರದಾಯವಾಗಿದೆ. ಹೀಗೆ ಮಾಡುವುದರಿಂದ ತಮಗೆ ಒಂದಷ್ಟು ರಕ್ಷಣೆ ಮತ್ತು ಅಧಿಕಾರ ಸಿಗುತ್ತದೆ ಎನ್ನುವುದು ಪತ್ರಕರ್ತರ ನಂಬಿಕೆ. ಆದರೆ, ಹೀಗೆ ಗುರುತಿಸಿಕೊಳ್ಳುವವರನ್ನೇ ಹೆಚ್ಚಿನ ಪ್ರಮಾಣದಲ್ಲಿ ದಾಳಿಗೆ ಗುರಿಮಾಡಲಾಗುತ್ತಿದೆ. ಅಮೆರಿಕ, ಟರ್ಕಿ, ಅರ್ಜೆಂಟೀನಾ ಮುಂತಾದ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಪ್ರತಿಭಟನೆಗಳನ್ನು ವರದಿ ಮಾಡಲು ತೆರಳಿದ್ದ ನಮ್ಮ ಸಂಸ್ಥೆಯ ಪತ್ರಕರ್ತರನ್ನು ಕಳೆದ ಕೆಲವು ವರ್ಷಗಳಿಂದ ವಿವಿಧ ರೀತಿಯ ಹಿಂಸಾತ್ಮಕ ಕೃತ್ಯಗಳಿಗೆ ಈಡು ಮಾಡಲಾಗಿದೆ. ಅವರೆಲ್ಲರೂ ಪತ್ರಕರ್ತರೆಂದೇ ಆ ಸ್ಥಳಗಳಲ್ಲಿ ಗುರತಿಸಿಕೊಂಡಿದ್ದವರು. ತಾವು ಪತ್ರಕರ್ತರಾಗಿದ್ದರಿಂದಲೇ ತಮ್ಮನ್ನು ಗುರಿ ಮಾಡಲಾಗಿದೆ ಎನ್ನುವುದು ಅವರೆಲ್ಲರ ಅನುಭವದ ಮಾತು. ಪತ್ರಕರ್ತರ ಮೇಲಿನ ಹಲ್ಲೆ, ಬಂಧನ, ಗಡಿಪಾರು ಮುಂತಾದ ಈ ಪ್ರಕರಣಗಳು ಅಥವಾ ಪತ್ರಕರ್ತರು ತಮ್ಮ ಪ್ರಾಣ ಉಳಿಸಿಕೊಳ್ಳಲು ಓಡುತ್ತಿರುವುದು, ಜನರ ಮಾಹಿತಿ ತಿಳಿಯುವ ಹಕ್ಕಿನ ಮೇಲೆ ಜಾಗತಿಕ ಮಟ್ಟದಲ್ಲಿ ಪೂರ್ಣಪ್ರಮಾಣದಲ್ಲಿ ನಡೆಯುತ್ತಿರುವ ದಾಳಿಯತ್ತ ಬೊಟ್ಟು ಮಾಡುತ್ತಿವೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

27 ಸೆಪ್ಟೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಪಂಚಮಿ ಗಂ. 12-04 ನಕ್ಷತ್ರ: ಅನುರಾಧ ಗಂ. 25-08 ಯೋಗ: ಪ್ರೀತಿ ಗಂ. 23-46 ಕರಣ: ಬಾಲವ ಗಂ. 12-04 ಕನ್ಯಾ ಮಾಸದ 10 ನೇ ದಿನ. ಮಳೆ ನಕ್ಷತ್ರ : ಹಸ್ತಾ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 10-30 , ಸೂರ್ಯೋದಯ : 06-23 ಸೂರ್ಯಾಸ್ತ : 06-20, ಮುಸ್ಲಿಂ ದಿನಾಂಕ : 04 ರಬಿಯುಸ್ಸಾನಿ, ಅದೃಷ್ಟ ಸಂಖ್ಯೆ : 8, 11

ಮೇಷ: ಗ್ರಹಗತಿಗಳು ಉತ್ತಮವಾಗಿದ್ದು ಅದೃಷ್ಟ ಹುಡುಕಿಕೊಂಡು ಬರಲಿದೆ. ಕಾಳಜಿ ಹೊಂದಿದವರ ಸಲಹೆಗಳಿಗೆ ಕಿವಿಗೊಡಿ. ಮಗನಿಂದ ಶುಭ ಸುದ್ದಿ ಬರಲಿದೆ. ಹಲ್ಲಿನ ಸಮಸ್ಯೆ ಇದ್ದಲ್ಲಿ ಬಗೆಹರಿಸಿಕೊಳ್ಳಲು ಸೂಕ್ತ ಸಮಯ.

ವೃಷಭ: ಮೇಧಾವಿ ಜನರೊಂದಿಗಿನ ಸಂಪರ್ಕ ಬೆಳೆಯುವುದರಿಂದ ಕೆಲಸ ಕಾರ್ಯಗಳನ್ನು ಸಾಧಿಸಿ ಕೊಳ್ಳುವುದಕ್ಕೆ ಸುಲಭವಾಗುವುದು. ಅನುಕಂಪ ತೋರಿಸುವ ಸಂದರ್ಭದಲ್ಲಿ ಪ್ರತಿಫಲ ನಿರೀಕ್ಷಿಸುವುದು ಸರಿಯಲ್ಲ.

ಮಿಥುನ: ನೂತನ ವಾಹನ ಖರೀದಿಯ ಯೋಚನೆಗೆ ಪೋಷಕರಿಂದ ಒಪ್ಪಿಗೆ ಸಿಗಲಿದೆ. ಸೋದರಿಯ ವಿಷಯದಲ್ಲಿ ಧಾರಾಳತನ ತೋರುವಿರಿ. ಇವೆಲ್ಲದರ- ಲ್ಲೂ ಆರ್ಥಿಕ ಪರಿಸ್ಥಿತಿಯನ್ನು ನೆನಪಿನಲ್ಲಿಟುಕೊಂಡು ಮುಂದುವರೆಯಿರಿ.

ಕರ್ಕಾಟಕ: ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವುದು ಸಂತೋಷವಾಗುವುದು, ಆದರೆ ಅತಿಯಾಗಿ ಬೀಗದಿರುವುದು ಲೇಸು. ಋಣ ಪರಿಹಾರವಾಗಿ ಕುಟುಂಬದಲ್ಲಿ ನೆಮ್ಮದಿ ಉಂಟಾಗುತ್ತದೆ.

ಸಿಂಹ: ಅನಿರೀಕ್ಷಿತವಾಗಿ ದುರ್ಘಟನೆಗಳು ಎದುರಾಗಲಿವೆ. ಯೋಜನೆಗಳು ಪೂರ್ವನಿಯೋಜಿತವಾಗಿ ವ್ಯವಸ್ಥಿತ ರೂಪದಲ್ಲಿ ಸಾಗುವುದಕ್ಕೆ ಪರಿಸ್ಥಿತಿ ಅಡ್ಡಗಾಲು ಹಾಕಿದಂತೆ ಆಗಬಹುದು. ವೃತ್ತಿಯಲ್ಲಿ ಬದಲಾವಣೆ ಇರುವುದಿಲ್ಲ.

ಕನ್ಯಾ: ಇದ್ದ ಪ್ರತಿಭೆಯನ್ನು ಇತರರು ಗಮನಿಸುವರು. ಆಸ್ತಿ ಖರೀದಿ ಮಾಡುವ ನಿರ್ಧಾರವನ್ನು ಮಾಡುವಿರಿ. ನಿಮ್ಮ ಮೇಲಧಿಕಾರಿಗಳು ಬಯಸಿದ ರೀತಿಯಲ್ಲಿ ನಿಮ್ಮ ಪರಿಶ್ರಮ, ಜವಾಬ್ದಾರಿಯುತವಾದ ನಡುವಳಿಕೆಯಿಂದಾಗಿ ಮೆಚ್ಚುವರು.

ತುಲಾ: ಪ್ರಮುಖ ಕೆಲಸಗಳು ಅನಾಯಾಸವಾಗಿ ಪೂರ್ಣಗೊಳ್ಳುವವು. ಮನೆಯಲ್ಲಿ ಮೃದು ಭಾಷಿಗಳು ಎನಿಸಿಕೊಳ್ಳುವಿರಿ. ದೂರದ ಸಂಬಂಧಿಕರೊಬ್ಬರ ಆಗಮನದಿಂದ ಮನೆಯಲ್ಲಿ ಸಡಗರ ಸೃಷ್ಟಿಸಲಿದೆ.

ವೃಶ್ಚಿಕ: ತಪ್ಪುಗಳು ಸಂಭವಿಸದಂತೆ ಗಮನಹರಿಸಿ. ರಾಸಾಯನಿಕ ವಸ್ತುಗಳ ಮಾರಾಟದಿಂದ ಹೆಚ್ಚಿನ ಆದಾಯ ಸಿಗುತ್ತದೆ. ನಿಮ್ಮ ಸಮಯ ಇಂದು ಅಮೂಲ್ಯವಾಗಿದೆ. ಆರೋಗ್ಯ ಸುಧಾರಿಸಿ ಎಂದಿನಂತೆ ಕೆಲಸಕ್ಕೆ ತೆರಳುವಿರಿ.

ಧನು: ಸ್ನೇಹಿತರು ನಿಮ್ಮ ಯೋಜನೆಗಳನ್ನು ಬೆಂಬಲಿಸಲಿದ್ದಾರೆ. ಉತ್ತಮ ಆಡಳಿತಗಾರರೆಂಬ ಖ್ಯಾತಿಯಿಂದಾಗಿ ಉನ್ನತ ಪದವಿ ಪ್ರಾಪ್ತವಾಗಲಿದೆ. ಶೀತ ಬಾಧೆಯಿಂದ ಮುಕ್ತರಾಗಲು ಆಹಾರದಲ್ಲಿ ನಿಯಮವಿರಲಿ.

ಮಕರ: ಮಂದಗತಿಯಲ್ಲಿ ಸಾಗುತ್ತಿದ್ದ ಕೆಲವು ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ತಾಕೀತು ಮಾಡಬೇಕಾಗುವುದು. ಜಾಗರೂಕತೆಯಿಂದ ವ್ಯವಹರಿಸಿ. ಈಶ್ವರನ ಸ್ಮರಣೆಯು ಶುಭವನ್ನು ನೀಡುತ್ತದೆ.

ಕುಂಭ: ಪ್ರಚಲಿತ ವಿದ್ಯಮಾನಗಳ ಬಗೆಗಿನ ಚರ್ಚಾ ವಿಷಯಗಳಲ್ಲಿ ಪಾಲ್ಗೊಳ್ಳುವಿರಿ. ಕಾರ್ಯಗಳನ್ನು ಮುಗಿಸಿಕೊಳ್ಳಲು ಮನೆಯವರಿಗೆಲ್ಲ ಆತುರ ತೋರುವುದು ಸರಿಯಲ್ಲ. ದಿನಸಿ ವರ್ತಕರಿಗೆ ಲಾಭವೂ ಇರುವುದು.

ಮೀನ: ಬದಲಾಗುವ ಬದುಕಿನ ಗತಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ವೃತ್ತಿರಂಗದಲ್ಲಿ ಕಾರ್ಯ ನಿರ್ವಹಣೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವುದು. ಮಾರಾಟ ಪ್ರತಿನಿಧಿಗಳಿಗೆ ಕಮಿಷನ್ ದೊರೆಯಲಿದೆ.

ಪದಬಂಧ 6177

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಗಾಯಗಳು ಮಾಯಲೆಂದು ಲೇಪಿಸುವ ಔಷಧ (3)
4.ತೆಂಗಿನ ಕಾಯಿನ ಒಣಗಿದ ತಿರುಳು (3)
5.ರತ್ನಖಚಿತವಾದ ಆಭರಣ (4)
6.ಮೋಸಗಾರಿಕೆ ಅಥವಾ ವಂಚಕತನ (4)
7.ಗಣಿಯ ಧಣಿ ಕಲಿಸಿರುವ ಲೆಕ್ಕಶಾಸ್ತ್ರ (3)
9.ಉತ್ತಮ ಜಾತಿಯ ಜೇನುತುಪ್ಪ (3)
13.ಮರದ ಬೊಂಬೆ ಕೆತ್ತನೆ ಕೆಲಸ ಮಾಡುವವನು (4)
14.ಉಗ್ರವಾದ ಹೊಡೆದಾಟ (4)
15.ಮಂಗಳದ್ರವ್ಯವಾದ ಕೇಸರಿಬಣ್ಣದ ಪುಡಿ (3)
16.ಪ್ರವಾಸದ ವೇಳೆಯಲ್ಲಿ ಬಂದಿರುವ ನೆರೆ (3)

ಮೇಲಿಂದ ಕೆಳಕ್ಕೆ
1.ಬೇರೆಯವರ ಅಭಿಪ್ರಾಯವನ್ನು ಊಹಿಸಿ ತಿಳಿಯುವವನು (4)
2.ಬರೀ ಮಣಿಯಲ್ಲ! ಕಿರೀಟರತ್ನವಿದು (5)
3. ಮಳೆಯಲ್ಲಿರುವ ಹೆಂಗಸು (3)
5.ಮಂದಿಯ ಮನಸ್ಸು (4)
8.ತಡವಾಗಿ ಬಿತ್ತಿರುವ ಅಲಸಂದೆ (4)
10.ಯುದ್ಧದ ಕೇಸರಿ (5)
11.ಹಣಕ್ಕಾಗಿ ನಡೆದ ಗೊಂದಲ (4)
12.ಗುಣವಂತ ಇಲ್ಲಿದ್ದಾನೆ (3)



6176ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಶನಿ 2.ಒಕ್ಕು
3.ವಾತಾಯನ 4.ಬಂಧನ
5.ಕೆನೆ 7.ಶ್ರೀನಿವಾಸ ರಾಮಾನುಜನ್
10.ರೋಮ 12.ಶತಕ
13.ಹರಿವಾಣ 14.ಹಾಲು
15.ಗದಗ

ಮೇಲಿಂದ ಕೆಳಕ್ಕೆ:
1.ಅಪಧಮನಿ 2.ಒನಕೆ
3.ವಾಲ್ಮೀಕಿರಾಮಾಯಣ
6.ಜೇನು 8.ವಾಣಿ
9.ಜಲತರಂಗ 11.ಮಹಲು

ಸುಡೊಕು 6561

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5	2		4		3		6	
	9				2			5
			5		8	7	2	
		9		3				7
	3				6		5	
8		6		4		2		3
		5		2				4
3						5		
	8	2		5			7	

6560 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಬೆಂಗಳೂರು ವಿಭಾಗದಲ್ಲೇ ಹೆಚ್ಚು!

ನೈರುತ್ಯ ರೈಲ್ವೆ ವಿಭಾಗ: ಒಂಬತ್ತು ತಿಂಗಳಲ್ಲಿ ₹5.51 ಕೋಟಿ ಮೌಲ್ಯದ ಗಾಂಜಾ ವಶ

• ನಾಗರಾಜ್ ಬಿ.ಎನ್.



ಮಾದಕ ವಸ್ತುಗಳ ಸಾಗಣೆ ಪತ್ತೆಗೆಂದೇ ಮೂರು ವಿಭಾಗಗಳಲ್ಲಿ ವಿಶೇಷ ಶ್ವಾನದಳವಿದೆ. ಪ್ರಸ್ತುತ ವರ್ಷ ಶ್ವಾನದಳದ ನೆರವಿನಲ್ಲಿ ₹1.08 ಕೋಟಿ ಮೌಲ್ಯದ 128 ಕೆ.ಜಿ. ಗಾಂಜಾ ಪತ್ತೆ ಮಾಡಲಾಗಿದೆ

ಮಂಜುನಾಥ ಸಿಪಿಆರ್‌ಒ, ನೈರುತ್ಯ ರೈಲ್ವೆ

ಮುಖ್ಯಾಂಶಗಳು

- ಮೊದಲ ಮೂರು ತಿಂಗಳಲ್ಲಿ 30 ಪ್ರಕರಣಗಳು ದಾಖಲು
- ಹೊರರಾಜ್ಯದ 13 ಸಾಗಣೆದಾರರ ಬಂಧನ
- ಕೋಡ್‌ವರ್ಡ್ ಮೂಲಕ ವ್ಯವಹಾರ

ಹುಬ್ಬಳ್ಳಿ: ನೈರುತ್ಯ ರೈಲ್ವೆ ವಲಯದ ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿ ವಿಭಾಗಗಳ ವ್ಯಾಪ್ತಿಯಲ್ಲಿ ಈ ವರ್ಷದ ಒಂಬತ್ತು ತಿಂಗಳಲ್ಲಿ ಅಂದಾಜು ₹5.51 ಕೋಟಿ ಮೌಲ್ಯದ 691 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ. ಇದರಲ್ಲಿ ₹4.59 ಕೋಟಿ ಮೌಲ್ಯದ ಗಾಂಜಾವನ್ನು ರಾಜಧಾನಿ ಬೆಂಗಳೂರು ಹಾಗೂ ಸುತ್ತಮುತ್ತ ಜಪ್ತಿ ಮಾಡಲಾಗಿದೆ.

ಜನವರಿಯಿಂದ ಸೆಪ್ಟೆಂಬರ್ 20ರವರೆಗೆ ನಡೆದ ದಾಳಿಯಲ್ಲಿ ಅತಿ ಹೆಚ್ಚು 68 ಪ್ರಕರಣ ಬೆಂಗಳೂರು ವಿಭಾಗದಲ್ಲಿ ದಾಖಲಾಗಿದೆ. ಮೊದಲ ಮೂರು ತಿಂಗಳಲ್ಲಿ 30 ಪ್ರಕರಣಗಳು ದಾಖಲಾಗಿ, ₹2 ಕೋಟಿ ಮೌಲ್ಯದ 277 ಕೆಜಿ ಗಾಂಜಾ ವಶಪಪಡಿಸಿಕೊಳ್ಳಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಹೊರರಾಜ್ಯದ 13 ಮಂದಿ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ.


ಮೈಸೂರು ವಿಭಾಗದಲ್ಲಿ 13 ಪ್ರಕರಣಕ್ಕೆ ಸಂಬಂಧಿಸಿ ₹26 ಲಕ್ಷ ಮೌಲ್ಯದ 30 ಕೆಜಿ ಗಾಂಜಾ ವಶಪಡಿಸಿಕೊಂಡು, ಮೂವರನ್ನು ಬಂಧಿಸಲಾಗಿದೆ. ಹಾಗೆಯೇ, ಹುಬ್ಬಳ್ಳಿ ವಿಭಾಗದಲ್ಲಿ 13 ಪ್ರಕರಣ ದಾಖಲಿಸಿಕೊಂಡು ₹66 ಲಕ್ಷ ಮೌಲ್ಯದ 68 ಕೆಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ.

‘ಪ್ರಮುಖ ರೈಲು ನಿಲ್ದಾಣಗಳ ಪ್ರವೇಶ ದ್ವಾರದಲ್ಲಿ ಪ್ರಯಾಣಿಕರ ಸಾಮಗ್ರಿಗಳನ್ನು ತಪಾಸಣೆ ನಡೆಸಿ, ಒಳಗೆ ಬಿಡಲಾಗುತ್ತದೆ. ಸಣ್ಣ ರೈಲು ನಿಲ್ದಾಣಗಳಲ್ಲಿ ತಪಾಸಣೆ ವ್ಯವಸ್ಥೆ ಇರುವುದಿಲ್ಲ. ಪೆಡ್ಲರ್‌ಗಳು ಅಲ್ಲಿಂದಲೇ ಮಾದಕ ವಸ್ತುಗಳನ್ನು ಸಾಗಿಸುತ್ತಾರೆ. ದಾಳಿ ನಡೆದಾಗ ಪೆಡ್ಲರ್ಸ್ ರೈಲಿನ ಯಾವುದೋ ಬೋಗಿಯಲ್ಲಿ ಇರುತ್ತಾನೆ. ಹೀಗಾಗಿ, ಮಾದಕ ವಸ್ತುಗಳು ಸಿಗುತ್ತವೆಯೇ ಹೊರತು ಪೆಡ್ಲರ್ಸ್‌ಗಳು ಸಿಕ್ಕಿಕೊಳ್ಳುವುದು ಅಪರೂಪ’ ಎಂದು ನೈರುತ್ಯ ರೈಲ್ವೆ ಮುಖ್ಯ ಸಂಪರ್ಕಾಧಿಕಾರಿ (ಸಿಪಿಆರ್‌ಒ) ಮಂಜುನಾಥ ಕನಮಡಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಆಂಧ್ರಪ್ರದೇಶದಿಂದ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರೈಲುಗಳಲ್ಲಿ ಸುಲಭವಾಗಿ ಗಾಂಜಾ ಸಾಗಿಸುತ್ತಾರೆ. ವ್ಯವಹಾರವೆಲ್ಲ ಕೋಡ್ ವರ್ಡ್ ಮತ್ತು ಮೊಬೈಲ್ ಕರೆ ಮೂಲಕ ನಡೆಸುತ್ತಾರೆ’ ಎಂದು ತಿಳಿಸಿದರು.

ಚಿಟಿಕೆ ಸುದ್ದಿ

ಬಂಗಾಳದ ಬಂಗಾರದ ದಿನಗಳು ಮರುಕಳಿಸಲಿ: ಶಾ



ಕೋಲ್ಕತ್ತ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಲ್ಲಿನ ಸಂತೋಷ ಮಿತ್ರ ಸ್ಕ್ವೇರ್‌ನಲ್ಲಿ ದುರ್ಗಾ ಪೂಜಾ ಪೆಂಡಾಲ್ ಅನ್ನು ಶುಕ್ರವಾರ ಉದ್ಘಾಟಿಸಿದರು.

ನಂತರ, ‘2026ರ ವಿಧಾನಸಭೆ ಚುನಾವಣೆ ಬಳಿಕ ನೂತನ ಸರ್ಕಾರದ ಅಸ್ತಿತ್ವದೊಂದಿಗೆ ಪಶ್ಚಿಮ ಬಂಗಾಳದ ‘ಸುವರ್ಣ ದಿನಗಳು’ ಮರುಕಳಿಸಲಿ’ ಎಂದು ದೇವಿಯಲ್ಲಿ ಪ್ರಾರ್ಥಿಸಿದರು.

ಬಂಗಾಳವು ಸುರಕ್ಷಿತ, ಶಾಂತಿಯುತ ಮತ್ತು ಸಮೃದ್ಧಿಯಿಂದ ಕೂಡಿರಬೇಕು. ನೊಬೆಲ್ ಪುರಸ್ಕೃತ ರವೀಂದ್ರನಾಥ ಠ್ಯಾಗೋರ್ ಅವರ ಕನಸು ನನಸಾಗಬೇಕು ಎಂದು ಹೇಳಿದರು.

ಇತ್ತೀಚೆಗೆ ರಾಜ್ಯದಲ್ಲಿ ನಡೆದ ಮಳೆ ಸಂಬಂಧಿತ ಅವಘಡಗಳ ಬಗ್ಗೆ ನೆನೆದು ಕಂಬನಿ ಮಿಡಿದರು. ‘ಹಬ್ಬದ ಆರಂಭದಲ್ಲಿ ಹಲವು ದುಃಖದ ಗಳಿಗೆಗೆ ಸಾಕ್ಷಿಯಾಗಿದ್ದೇವೆ. 10ಕ್ಕೂ ಹೆಚ್ಚು ಜನರು ಮಳೆ ಸಂಬಂಧಿತ ಅವಘಡಗಳಲ್ಲಿ ಮೃತಪಟ್ಟಿದ್ದಾರೆ. ಮೃತರೆಲ್ಲರಿಗೂ ನಮನ ಸಲ್ಲಿಸುವೆ’ ಎಂದರು.

ಪತ್ರಕರ್ತ ಎಂ.ಎಲ್ ಕೊಟ್ರು ನಿಧನ

ನವದೆಹಲಿ (ಪಿಟಿಐ): ದಿ ಸ್ಟೇಟ್ಸ್‌ಮನ್ ಪತ್ರಿಕೆಯ ಮಾಜಿ ಸ್ಥಾನಿಕ ಸಂಪಾದಕ ಎಂ. ಎಲ್. ಕೊಟ್ರು ಅವರು ಗುರುಗ್ರಾಮದಲ್ಲಿ ಗುರುವಾರ ತಡರಾತ್ರಿ ನಿಧನರಾದರು.

ಲಂಡನ್‌ನ ದಿ ಸಂಡೇ ಟೈಮ್ಸ್ ಪತ್ರಿಕೆಯ ಭಾರತದ ವರದಿಗಾರರಾಗಿ ಕಾರ್ಯನಿರ್ವಹಿಸಿದ್ದ ಕೊಟ್ರು ಅವರು, 1994ರಲ್ಲಿ ಪ್ರಕಟವಾದ ‘ದಿ ಕಾಶ್ಮೀರ್ ಸ್ಟೋರಿ’ಯ ಲೇಖಕರು ಮತ್ತು ‘ಏಷ್ಯಾ 72: ಅಫೀಷಿಯಲ್ ಗೈಡ್’ ಸಂಪಾದಕರಾಗಿಯೂ ಕೆಲಸ ಮಾಡಿದ್ದರು.

ಜಮ್ಮು ಮತ್ತು ಕಾಶ್ಮೀರದವರಾದ ಇವರು ಪ್ರೆಸ್ ಕ್ಲಬ್ ಆಫ್ ಇಂಡಿಯಾ (ಪಿಸಿಐ) ಮತ್ತು ಪ್ರೆಸ್ ಅಸೋಸಿಯೇಷನ್ ಜೊತೆ ಸಕ್ರಿಯವಾಗಿ ತೊಡಗಿಕೊಂಡಿದ್ದರು.

ಸುಮಾರು ಆರು ದಶಕಗಳ ಕಾಲ ಮಾಧ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ್ದ ಅವರು; ಯುವ ಪೀಳಿಗೆಗೆ ಮಾರ್ಗದರ್ಶಕರಾಗಿದ್ದರು ಎಂದು ಪಿಸಿಐ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಸಿಪಿಎಂ ಕಾರ್ಯಕರ್ತನ ಹತ್ಯೆ: 9 ಆರೋಪಿಗಳ ಖುಲಾಸೆ



ಕಣ್ಣೂರು (ಪಿಟಿಐ): ಸಿಪಿಎಂ ಕಾರ್ಯಕರ್ತನ ಹತ್ಯೆ ಪ್ರಕರಣದ ಆರೋಪಿಗಳಾಗಿದ್ದ ಒಂಬತ್ತು ಮಂದಿ ಬಿಜೆಪಿ, ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಇಲ್ಲಿನ ನ್ಯಾಯಾಲಯ ಶುಕ್ರವಾರ ಖುಲಾಸೆಗೊಳಿಸಿದೆ.

‘ಪೊಲೀಸ್ ತನಿಖೆಯಲ್ಲಿ ಗಂಭೀರ ಲೋಪಗಳಾಗಿವೆ’ ಎಂಬುದನ್ನು ಉಲ್ಲೇಖಿಸಿ ನ್ಯಾಯಾಲಯವು ಈ ಆದೇಶ ಹೊರಡಿಸಿದೆ.

2015ರಲ್ಲಿ ಕಣ್ಣೂರಿನ ಚಿಟ್ಟಾರಿಪರಂಬದಲ್ಲಿ ಪ್ರೇಮನ್ (45) ಎಂಬವರ ಮೇಲೆ ಗುಂಪೊಂದು ದಾಳಿ ಮಾಡಿತ್ತು. ನಂತರ ಆಸ್ಪತ್ರೆಯಲ್ಲಿ ಪ್ರೇಮನ್ ಸಾವಿಗೀಡಾದರು.

ಸಜೇಶ್ ಸಿ, ಪ್ರಜೇಶ್ ಡಿ, ಇಂಚಿಕಂಡಿ ನಿಶಾಂತ್, ಲಿಜಿನ್ ಪಿ., ಮನ್ನಡ್ಡಿ ವಿನೀಶ್, ಸಿ. ರಾಜೇಶ್, ನಿಖಿಲ್ ಎನ್., ಆರ್. ರಮೇಶ್ ಹಾಗೂ ರಂಜಿತ್ ಸಿ.ವಿ. ಈ ಪ್ರಕರಣದಲ್ಲಿ ಖುಲಾಸೆಗೊಂಡವರು.

ಇನ್ನೊಬ್ಬ ಆರೋಪಿ ಶ್ಯಾಮ್ ಪ್ರಸಾದ್, 2018ರಲ್ಲಿ ನಡೆದ ರಾಜಕೀಯ ಘರ್ಷಣೆಯಲ್ಲಿ ಕೊಲೆಯಾದರು ಎಂದು ವಕೀಲರು ತಿಳಿಸಿದರು.









ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಕಡಿಮೆ ಬೆಲೆಗೆ ಸೈಟ್ ಒದಗಿಸಲು ಗ್ರಾಹಕರೇ ಡೆವಲಪರ್ ಪರಿಕಲ್ಪನೆ

ಯಾವುದೇ ನಿವೇಶನ ಯೋಜನೆ ಇದ್ದರೂ ಡೆವಲಪರ್ ಸಂಸ್ಥೆಗೆ ಒಂದಿಷ್ಟು ಲಾಭ ಇದ್ದೇ ಇರುತ್ತದೆ. ಆದರೆ, ಟೆಲಿಕಾಂ ಎಂಪ್ಲಾಯೀಸ್ ಆಂಡ್ ಅದರ್ಸ್ ಹೌಸಿಂಗ್ ವೆಲ್‌ಫೇರ್ ಟ್ರಸ್ಟ್‌ನಲ್ಲಿ ಗ್ರಾಹಕರೇ ಡೆವಲಪರ್ ಆಗಿರುತ್ತಾರೆ ! ಗ್ರಾಹಕರ ಹಣದಿಂದಲೇ ಭೂಮಿ ಖರೀದಿ, ಅಭಿವೃದ್ಧಿ ನಡೆಯುತ್ತದೆ. ಹೀಗಾಗಿ, ಯೋಜನೆಯಲ್ಲಿ ಬರುವ ಲಾಭವೆಲ್ಲ ಗ್ರಾಹಕರಿಗೇ ಸಿಗುತ್ತದೆ.

ಇಂತಹದ್ದೊಂದು ಪರಿಕಲ್ಪನೆಯ ರೂವಾರಿ ಎನ್. ನರಸಿಂಹಮೂರ್ತಿ. 'ಗ್ರಾಹಕರೇ ಡೆವಲಪರ್' ಪರಿಕಲ್ಪನೆಯಲ್ಲಿ ಕಡಿಮೆ ಬೆಲೆಗೆ ನಿವೇಶನ ಒದಗಿಸುತ್ತಿದ್ದಾರೆ.

ಬಿಎಸ್‌ಎನ್‌ಎಲ್ ಉದ್ಯೋಗಿಯಾಗಿದ್ದ ನರಸಿಂಹಮೂರ್ತಿ 2017ರ ಏ.21ರಂದು ಟೆಲಿಕಾಂ ಎಂಪ್ಲಾಯೀಸ್ ಆಂಡ್ ಹೌಸಿಂಗ್ ವೆಲ್ಫೇರ್ ಟ್ರಸ್ಟ್ ಅನ್ನು ಸ್ಥಾಪಿಸಿದರು. ಆರಂಭದಲ್ಲಿ ಟೆಲಿಕಾಂ ನೌಕರರಿಗಾಗಿ ರೂಪಿಸಿದ ಈ ಯೋಜನೆಯನ್ನು ಬಳಿಕ ಇತರರಿಗೂ ವಿಸ್ತರಿಸಲಾಗಿದೆ. ನೌಕರರು, ಗ್ರಾಹಕರು ಟ್ರಸ್ಟ್‌ನ ಸದಸ್ಯತ್ವ ಪಡೆದು, ಸೈಟ್ ಪಡೆಯಲು ಅನುವು ಮಾಡಿಕೊಡಲಾಗುತ್ತದೆ. ಟ್ರಸ್ಟ್‌ನ ಸದಸ್ಯತ್ವಕ್ಕೆ 2,100 ರೂ. ನಿಗದಿಪಡಿಸಲಾಗಿದೆ. ಅದರಲ್ಲಿ 1000 ರೂ.ಗಳನ್ನು ಕಲ್ಯಾಣ ನಿಧಿಗೆ ಬಳಸಲಾಗುತ್ತದೆ. ಈ ಹಣದಲ್ಲಿ ಸಮಾಜ ಸೇವೆಗೆ, ಶಾಲೆಗಳಿಗೆ, ಅನಾಥಾಶ್ರಮಗಳಿಗೆ, ಸಂಘ ಸಂಸ್ಥೆಗಳಿಗೆ ನೆರವು ನೀಡಲು, ದೇವಾಲಯಗಳ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿದೆ.

ಕಡಿಮೆ ದರದಲ್ಲಿ ಸೈಟ್ ಹೇಗೆ ಸಾಧ್ಯ?: ನಾವು ಗ್ರಾಹಕರಿಂದ ಮೊದಲ ಕಂತು ಮತ್ತು ಎರಡನೇ ಕಂತಿನ ಹಣವನ್ನು ಪಡೆದು ಆ ಹಣದಲ್ಲಿ ಜಮೀನನ್ನು ಖರೀದಿಸುತ್ತೇವೆ. ಮೂರನೇ ಕಂತಿನ ಹಣವನ್ನು ಭೂ ಪರಿವರ್ತನೆ ಮಾಡುತ್ತೇವೆ ನಾಲ್ಕನೇ ಕಂತಿನ ಹಣದಲ್ಲಿ ಭೂಮಿಯನ್ನು ಅಭಿವೃದ್ಧಿಪಡಿಸಿ ಉಳಿದ ಕೆಲಸಗಳನ್ನು ಪೂರ್ಣಗೊಳಿಸಿ ಗ್ರಾಹಕರಿಗೆ ರಿಜಿಸ್ಟರ್ ಮಾಡಿಕೊಡುತ್ತೇವೆ ಎನ್ನುತ್ತಾರೆ ಎನ್. ನರಸಿಂಹಮೂರ್ತಿ.

ಬ್ಯಾಂಕ್ ಅಥವಾ ಫೈನಾನ್ಶಿಯರ್‌ಗಳಿಂದ ಸಾಲ ಸೌಲಭ್ಯಗಳನ್ನು ಪಡೆಯುತ್ತಿಲ್ಲ. ಡೆವಲಪರ್‌ಗಳು ಇಲ್ಲದ ಕಾರಣ ಆದರಿಂದ ಬರುವಂತಹ ಲಾಭವನ್ನೆಲ್ಲಾ ಉಳಿಸಿ ನೌಕರರಿಗೆ ಮತ್ತು ಗ್ರಾಹಕರಿಗೆ ಕಡಿಮೆ ಕೈಗೆಟಕುವ ದರದಲ್ಲಿ ನಿವೇಶನವನ್ನು ಹಂಚುತ್ತೇವೆ ಎನ್ನುತ್ತಾರೆ ಅವರು.

ಹಲವೆಡೆ ಲೇಔಟ್ ಅಭಿವೃದ್ಧಿ: ಟೆಲಿಕಾಂ ಎಂಪ್ಲಾಯೀಸ್ ಆಂಡ್ ಹೌಸಿಂಗ್ ವೆಲ್ಫೇರ್ ಟ್ರಸ್ಟ್‌ನಿಂದ ಕಳೆದ ಏಳು ವರ್ಷಗಳಿಂದ ಬೆಂಗಳೂರು, ಮೈಸೂರು, ತುಮಕೂರು ಸೇರಿದಂತೆ ಹಲವೆಡೆ ಲೇಔಟ್‌ಗಳನ್ನು ನಿರ್ಮಿಸಲಾಗಿದೆ. ಈ ಸಂಸ್ಥೆಯು ಈಗಾಗಲೇ 9 ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಆರಂಭದಲ್ಲಿ ತುಮಕೂರಿನ ನಾಗವಲ್ಲಿ ಯಲ್ಲಿ ಆರಂಭಿಸಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಆದಾದ ಬಳಿಕ ಕೋವಿಡ್-19 ಹಿನ್ನೆಲೆಯಲ್ಲಿ ಕೆಲಸಗಳು ಬಿರುಸಾಗಿ ಸಾಗಲಿಲ್ಲ, ನಂತರ ಎಂಟು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಎಲ್ಲವೂ ಪ್ರಗತಿಯಲ್ಲಿವೆ. ತುಮಕೂರಿನ ಬಸವ ಪಟ್ಟಣದಲ್ಲಿ ಟೆಲಿಕಾಂ ಹಿಲ್ಸ್ ರೆಸಿಡೆನ್ಸಿ ಯೋಜನೆಯಲ್ಲಿ ಭೂ ಪರಿವರ್ತನೆ ಮಾಡಿ ನಕ್ಷೆ ಅನುಮೋದನೆಯೊಂದಿಗೆ ಲೇಔಟ್ ನಿರ್ಮಾಣ ಪ್ರಾರಂಭವಾಗಿದೆ.

ಸಮಾಜ ಸೇವೆಗೂ ಸೈ: ನರಸಿಂಹಮೂರ್ತಿ ಅವರು ಸಮಾಜ ಸೇವೆಯಲ್ಲೂ ಹಿಂದೆ ಬಿದ್ದಿಲ್ಲ. ಧಾರ್ಮಿಕ ಮತ್ತು ಶೈಕ್ಷಣಿಕ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಇವರು 5 ರಿಂದ 6 ಸಾವಿರ ಶಾಲಾ ಮಕ್ಕಳಿಗೆ ಪುಸ್ತಕಗಳನ್ನು ವಿತರಿಸಿದ್ದಾರೆ. 250-300 ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಬ್ಲೇಜರ್‌ಗಳನ್ನು ಕೊಟ್ಟಿದ್ದಾರೆ. ನೆಲಮಂಗಲದಲ್ಲಿ ಮಹಾಲಕ್ಷ್ಮೀ ದೇವಸ್ಥಾನವನ್ನು ನಡೆಸುತ್ತಿದ್ದಾರೆ.

ಎರಡು ಶಾಖೆ: ಸಂಸ್ಥೆಯು ಗಂಗಾನಗರದಲ್ಲಿ ಪ್ರಧಾನ ಕಚೇರಿ ಹೊಂದಿದ್ದು, ಎರಡು ಶಾಖೆಗಳನ್ನು ಹೊಂದಿದೆ. ಸಂಸ್ಥೆಯಲ್ಲಿ 25 ಮಂದಿ ಪೂರ್ಣಕಾಲಿಕ, 60-70 ಮಂದಿ ಅರೆಕಾಲಿಕ ಸಿಬ್ಬಂದಿಗಳಿಗೆ ಉದ್ಯೋಗ ನೀಡಲಾಗಿದೆ.

ಹಲವು ಪ್ರಶಸ್ತಿ, ಗೌರವ: ನರಸಿಂಹಮೂರ್ತಿ ಅವರಿಗೆ ಬ್ಯುಸಿನೆಸ್ ಎಕ್ಸಲೆನ್ಸ್ ಅವಾರ್ಡ್, 'ಇಂಡಿಯಾ ಮಲೇಷಿಯಾ ಇಂಟರ್‌ನ್ಯಾಷನಲ್ ಐಕಾನಿಕ್' ಪ್ರಶಸ್ತಿ ಸೇರಿದಂತೆ ಹಲವು ಸಂಘ ಸಂಸ್ಥೆಗಳಿಂದ ಸನ್ಮಾನಗಳು ಸಂದಿವೆ. ಋಷಿ ಪ್ರಕಾಶನದಿಂದ 'ಎಮರ್ಜಿಂಗ್ ಸ್ಟಾರ್' ಎಂಬ ಪ್ರಶಸ್ತಿ ಸಿಕ್ಕಿದ್ದು, 'ರೂಟ್ಸ್ ಸಕ್ಸಸ್' ಎಂಬ ಪುಸ್ತಕದಲ್ಲಿ ನರಸಿಂಹಮೂರ್ತಿಯವರ ಜೀವನ ಚರಿತ್ರೆ ಪ್ರಕಟವಾಗಿದೆ.

ಬಿಎಸ್‌ಎನ್‌ಎಲ್‌ನಲ್ಲಿ ಯೂನಿಯನ್ ಲೀಡರ್: ಬೆಂಗಳೂರು ಮೂಲದ ನರಸಿಂಹಮೂರ್ತಿ ಅವರ ಬಾಲ್ಯ ಕಡುಬಡತನದಿಂದ ಕೂಡಿತ್ತು. ಆದರೂ ಸಂಜೆ ಕಾಲೇಜಿನಲ್ಲಿ ಓದಿಕೊಂಡು, ಬಿಎಸ್‌ಎನ್‌ಎಲ್ ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸೇರಿದರು. ಬಿಎಸ್‌ಎನ್‌ಎಲ್ಲಿ ಉದ್ಯೋಗದಲ್ಲಿದ್ದಾಗ ಬೆಂಗಳೂರು ಜಿಲ್ಲಾ ಒಕ್ಕೂಟದ ಕಾರ್ಯದರ್ಶಿಯಾಗಿ, ಕರ್ನಾಟಕ ಸರ್ಕಲ್ ಯೂನಿಯನ್ ಲೀಡರ್‌ಆಗಿ ಸೇವೆ ಸಲ್ಲಿಸಿದ್ದಾರೆ. ಎಲ್‌ಸಿಎಂ ಸದಸ್ಯರೂ ಆಗಿದ್ದರು.

ಸಮುದಾಯ ನಾಟಕ ತಂಡ ಮತ್ತು ಇತರೆ ಹಲವು ತಂಡಗಳಲ್ಲಿ ಗುರುತಿಸಿಕೊಂಡು ನಟನೆಯಲ್ಲೂ ತೊಡಗಿಸಿಕೊಂಡಿದ್ದಾರೆ. ಕಥೆ, ಕವಿತೆಗಳನ್ನು ಬರೆಯುವ ಹವ್ಯಾಸ ಹೊಂದಿದ್ದಾರೆ. ಸಿನಿಮಾ ನಿರ್ದೇಶನಕ್ಕೆ ಕೂಡ ಕೈ ಹಾಕಿದ್ದಾರೆ. ರಂಗಭೂಮಿಯಲ್ಲಿ ಉತ್ತಮ ನಟನೆಗಾಗಿ ರಾಜ್ಯಮಟ್ಟದಲ್ಲಿ 'ಉತ್ತಮ ನಟ' ಪ್ರಶಸ್ತಿ ಪಡೆದಿದ್ದಾರೆ.

■ **ಸಂಪರ್ಕ**: 9353097546

ವೆಬ್‌ಸೈಟ್: telecomemphousingtrust.com



ಎನ್.ನರಸಿಂಹಮೂರ್ತಿ ಸಂಸ್ಥಾಪಕರು, ಟೆಲಿಕಾಂ ಎಂಪ್ಲಾಯೀಸ್ ಆಂಡ್ ಅದರ್ಸ್ ಹೌಸಿಂಗ್ ವೆಲ್ಫೇರ್ ಟ್ರಸ್ಟ್

ಮುಂಬರಲಿರುವ ಯೋಜನೆಗಳು

- ಟೆಲಿಕಾಂ ಹೈ-ಟೆಕ್ ಸಿಟಿ (ದೇವನಹಳ್ಳಿ)
- ಟೆಲಿಕಾಂ ಪ್ಯಾರಡೈಸ್ ಗ್ರೀನ್ (ಕುಂದಾಣ)
- ಟೆಲಿಕಾಂ ಟೆಕ್ ಪಾರ್ಕ್ ಸಿಟಿ (ಹೆಜ್ಜಾಲ)
- ಟೆಲಿಕಾಂ ವುಡ್‌ಲ್ಯಾಂಡ್ ಸಿಟಿ (ದೊಡ್ಡಬಳ್ಳಾಪುರ)
- ಟೆಲಿಕಾಂ ಹಿಲ್ಸ್ ರೆಸಿಡೆನ್ಸಿ (ತುಮಕೂರು)
- ಟೆಲಿಕಾಂ ಸ್ಯಾಂಡಲ್ ಸಿಟಿ (ಮೈಸೂರು)
- ಟೆಲಿಕಾಂ ಅಶ್ವ ರೆಸಿಡೆನ್ಸಿ (ಕುಣಿಗಲ್) ಹಾಗೂ ಟೆಲಿಕಾಂ ಎವರ್‌ಗ್ರೀನ್ ಸಿಟಿ (ನೆಲಮಂಗಲದ ಓಬಳಾಪುರ).

TELECOM EMPLOYEES AND OTHERS HOUSING WELFARE TRUST [R]

ಟೆಲಿಕಾಂ ಎಂಪ್ಲಾಯೀಸ್ ಅಂಡ್ ಅದರ್ಸ್ ಹೌಸಿಂಗ್ ವೆಲ್‌ಫೇರ್ ಟ್ರಸ್ಟ್ (ರಿ)

telecomemphousingtrust.com +91 9480109111

Mob : +91 9353097546 | 6364940360

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER

ಕ್ಲಾಸಿಫೈಡ್ಸ್

REAL ESTATE SELLING

Sites

Anekal

KHB Sites in Surya City Near Jigani
STRRA & BMRDA Approved Plots
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Anjanapura

SITE FOR Sale Anjanapura 10 Block BDA 50X80 - 4000 sqft South Facing Contact: 9844274211

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

AVAILABLE BANASHANKARI 6th Stage, 6th Block 30x40, W/F,Near 100" Road Budget Friendly Call Lingaraju: 9663393533

WEST FACING SITE 30'x45' for sale in Banashankari 1st stage, Srinagar, for price call: 9845380312

BDA AUCTION Site, Banashankari 6th Stage, 10th Block, 20X30 Corner site, North West facing. 9900266984

BDA BSK 5th Stage Near PP Layout Uttarahalli Opposite Pattalamma Temple 30x40 E/F: 9448531837/ 9606922132

BANASHANKARI 6TH Stage,BDA 40x60, Site For Sale Near 100 Feet Road Cheque Payment: 9916817739

Chandra Layout

BDA AUCTION Site 1632 sqft. North East Corner, Rs. 25000 /sft. Chandra Layout, Near ICICI Bank. 9448016234 9945779309

Jayanagar

3RD BLOCK East Facing 2 Adjoining 40X60 BDA Sites 9Cr. Each. Settler: 9845035333/ 9880225333

PROPERTY SALE Jayanagar 30X40, 40X60, 45X90 AND JP-NAGAR 30×40, 20×65, 40×60, 50×80: 9845075792/ 9880600899

J P Nagar

BDA LAND 2400 Sft With Old Villa Brokers Excuse Genuine Buyers Only Contact Owner:9341273990

Kengeri

FOR SALE Kengeri Upanagara 40x60 BDA Site Rs.15000/- Per Sqft. Clear titles. Contact: 9844092859

Kempegowda Layout

BDA SITE AVAILABLE @ NADAPRABHU KEMPEGOWDA LAYOUT 30x40, 40x60, 50x80 Residential/ Commercial. Contact: 9686469799

NADA PRABHU Kempegowda layout BDA Site For Sale 30x40, 40x60, 50x80 Contact: 7676900174 6363496142

DIRECT OWNER Near Metro Station, Kempegowda Layout, Vishweshwaraiah Layout, 30x40, 40x60, 50x80 Commercial: 9620696913/ 9880781399

Multiple Locations

AVAILABLE/ WANTED Apartment Basavanagudi, Banashankari, Chamrajpete, Shankarapuram, V.V.Pura, Hanumanthnagar, Girinagar, Residencial/ Commercial Sites Sale: 9900399006

Nagarabhavi

30X50 WEST D-Group Nagrabhavi BDA BBMP A-Katha, 30x40 North West Corner, 30x46 Rs. 14500/- 9980409820

Nelamangala

NELMANGALA BMRDA A Katha South West Corner Site 33.5X50, (60ft, 30ft Road) Near NH-4: 8310681025

Thanisandra

4800 SQFT., CORNER PROPERTY FOR SALE, 3 sides with road access, NEAR MANYATA TECH PARK, IN THANISANDRA, Behind Elements Mall. Rs. 3.6 CRORE. 9449281474, 8237436295

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHWESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

"VISHVESWARAIAH 1ST_BLOCK 50x80_North 6th_Block 40x60_West 5th_Block 30x40 Good_location. 9448227274/ 7259675150"

AVAILABLE BDA Site Vishweshwariah Layout 3rd Block 30X40 West Facing Good Location Genuine Buyers: 7338688111

VISHWESHWARAIAH LAYOUT 9th 50x60 NW Site. 2145 Commercial 60ft RTO Road Rs. 24000/- Sqft: 9845793121

Bidadi

SITE FOR SALE, 40x60 'E' Khatha, North facing, at Bidadi 2 Sites Available, No Agreement, Single Shot Payment. 50 Lakhs each. Contact: 080-23342399 or 9538995333

Basaweshwaranagar

SITE FOR SALE VALUED 2 CRORE 50 LAKHS NOW SELLING FOR 2 CRORE ONLY: 9035883017

RMV

SITE FOR SALE 50x88 North East corner BDA site, Kalpana Chawla Road RMV 2nd Stage. Genuine buyers only. Contact: 9535673309

Mysore

SITE FOR SALE 100'x80' North facing Adipampa Road, Mysore,suitable for complex, hospital, flats. Contact: 7676058694

Hegganahalli

SITE SALE 160x100ft In Hegganahalli Cross Bangalore A Katha Borewell Brick wall Fenced: 9900287834/ 9448377834

House

Basaveshwaranagar

INDEPENDENT HOUSE LEASE 5 BHK 60 LAKHS, 3BHK 30 LAKHS, 2 BHK 30 LAKHS: 9035883017

Jayanagar

JAYANAGAR 8TH BLOCK 30x50 SALE NORTH Facing OLD HOUSE EXCELLENT LOCATION. Rs.44K NEGOTIABLE. SHIVU 9880004149 9035441234

J P Nagar

J.P.NAGAR, BDA 45x60 Excellent Residential South Facing 3 BHK 3 Unit Livable House, Site Cost only -9845232711

Mathikere

MATHIKERE OLD house for sale 24.5X54sqft South facing behind devasandra Bus stand new BEL road Contact 9360977313 /9900578022

Vishweshwariah Layout

"4BHK DUPLEX House with`Lift Railway Layout and`3BHK House Vishveshwaraiah 1st Block for sale. 9845014134"

Annapoorneshwari Nagar

BDA SITE Sale, East facing, 30X40, 3 BHK, Annapoorneshwarinagar, Nagarabhavi 2nd stage. Contact: 9019962007

Flat

Banashankari

"BANASHANKARI 2ND_STAGE 2BHK_Flat higher floor with Club house North door Rs.1.65 Crore "Sri.Ganesh Estate"- 9845286505"

Intl Airport Road



IAF YELAHANKA Hunasamaranahalli:2BHK 62L, 3BHK 72L, 3BHK with Terrace Sale Rs. 130Lakhs.Ct: 9343757676

R T Nagar

GROUND FIRST DUPLEX INDEPENDENT FLAT 1 BHK VACANT POSITION READY TO OCCUPY 60 LAKHS: 9035883017

Commerical

BTM Layout

BTM LAYOUT, Sale Commercial Corner, 2,500 sft. Site with Old House. Price: 40,000/- David 9845855663

Mysore

FOR SALE 3 Prime High End Commercial Properties - Around 2 Acres, 3 Acres and Commercial Complex in the Heart of Mysore City. Write to linamys54@gmail.com

Farm House/ Land/ Resorts

Mysore Road

FARM LAND For Sale 14 Guntas Near Chalaghatta Metro Station And RR Dental College Mysore Road: 8970306030

Industrial & Factory

Mysore Road

INDUSTRIAL CONVERTED LAND AVILABLE FOR SALE AREA 10000SQFT TO 20000 SQFT TO 1ACRE AT KUMBALGODU IND AREA MYSORE ROAD MOB:6366378787/ 9964783877

Commercial Building

Domlur

RENTAL PG building BUA 6000sft site 1600 sft for sale in domlur at Rs 6cr .Agents excuse 9845440436

REAL ESTATE BUYING

Sites

Multiple Locations

WANTED BDA_SITES Anjanapura- Arkavathi Banashankari 6th.Stage, Vishweswaraiah, Kempegowda. SAPTHAGIRI (Opp.BDA_Head Office, Kumara Park). 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

M.G. ROAD Fully furnished 3000 sft Office for Rent, Second Floor Lift/ Parking nearby Metro. Presently occupied by Bank, shifting shortly. Contact SHARIF: 9886335522.

BANASHANKARI 6TH_STAGE 80`Feet Road,11th`Block 50x80 Site Built-to-Suit. And 2nd`Block, 80`Feet Road,50x80 RENT for Vacant`Site. Call 9945724472

800 SQFT Office space for Rent No. 56/6, 2nd Floor, Nandini Layout, FTI Circle, above SBI Bank, Bangalore Contact: 9845030795

1150 SFT SW corner, for showrooms, etc : 8197237859

Flats

2 BHK for SENIOR LIVING. 30K. With Mantenance. call 9482562481

Villas/Bunglows

FOR RENT Vasanth Nagar 5 BHK Bunglow. Near Mahaveer Jain Hospital. Vegetarians Only: 9844072344/ 9844830500

Industrial And Factory

AVAILABLE OF Industrial Shed of 75000`sqft at Soukya Road, Whitefield. Available Built-to-Suit Warehouse 160000 sqft`Vijipura Hoskote Contact: 9341234288/ 9663224353/ 9845417487.

Accommodation Wanted

Flat

REQUIRED TWO bedroom flat/ house for rent with carpark within 3kms from Kumarapark/ Windsormanor. 9448355660/ 9945993784

AUTOMOTIVE

6/10 Wheeler Selling

Tipper

TIPPERS FOR SALE
10-WHEELER TIPPERS - 2 Nos is 2005 Model.
& 6-WHEELER TIPPER - 1 No
Good Working Condition.
Contact: 9945192111
Location: Bangalore

Hyundai

HYUNDAI CRETA 2018 PETROL E 1st owner, less driven for Sale contact 7353775422

JOB OPPORTUNITIES

Cook

FEMALE COOK Wanted above 45 yrs to work in Toronto (Canada) to look after taking care of children & home. Contact: S.M Srinivas/ Mamatha- 7259552215/ 7349760820

I T

A SMALL scale industry to recruit EMBEDDED ENGINEERS with a BE ,ONE YEAR exposure to writing software for MICROCHIP DEVICES.Reply to century.metering@gmail.com

BUSINESS

Business to Business

Business

PROPERTY COLLATERALS/ Joint Developments/ Take overs) R/E Buying Selling School/ Colleges/ Hospitals. Hot Drinks Factory (GOA). Dr. Swamy, Vamshadhara Projects/ Services- 9342247637.

Finance

WANTED LOANS TO BE TAKEN OVER FROM CO-OPERATIVE BANK OF ONE CRORE TWENTY LAKHS 9035883017

PERSONAL

Change of Name

I JAYASREE sudharsan d/o T.Kasinathan, Flat no.411, Majestic fortune, A block, Eswara layout 2nd main Rd, Bangalore 560062. Henceforth be known as JAYASREE UMA

CHANGE OF NAME
I, **Minati Rani Singh** W/o Pinakpani Sarkar, R/at Sapthagiri Residency, No.101, 1st Floor, 1st Main Road, BOB Colony, J P Nagar, 7th Phase, Bengaluru-560078, have changed my name to **MINATI SARKAR** vide affidavit dated 26.09.2025 before notary S.I. Balaguru, Bengaluru. Henceforth I shall be called **MINATI SARKAR** only

Lost

LOST
I, Ramappa S/o Basavannapa R/a Papanna Reddy Layout, GS Palya, Bangalore- 560100, Security officer of **Adrit Ventures Pvt. Ltd., have lost a bag containing the Statutory Registers and files of the Company.** Lost on 08.09.2025 at Electronic City, Bangalore. If anybody found please **call: 9945476542 or nearby police station.**

DOCUMENT LOST
I, **Prakash B G**, R/at No.80, Shreekuteera, 5th Cross, Santosh Nagar, Pipeline Road, T. Dasarahalli, Bengaluru-560057, have lost the **Original Sale Deed (Document / Identification No. PNY-1-03177-2016-17, CD No. PNYD645, at Book-1, Registered dtd: 17th August, 2016,** while in transit. If found please **Contact No: 8660467998.**

PUBLIC NOTICE
Notice is hereby given to the Public that my clients **Mr. Vijay Varadarajan & Mr. Madhavan Varadarajan,** who are joint owners of the property no.105, 3rd cross, KSRTC Layout, J.P. Nagar-2nd Phase, Bengaluru-560078 have lost/misplaced their original sale deed dated 22-12-2007 bearing Doc.no.JPN-1-04964-2007-08 pertaining to the said property. In that regard a Lost Article Report bearing No.1821170/2025 has been registered with Karnataka State Police. All persons are hereby informed not to deal or carry out any transaction with anyone on the basis of the said missing document. If anyone has already carried out or being carried out or anybody having any sort of claim either over the said document or over the aforesaid property, kindly inform the undersigned in writing on the below mentioned address **WITHIN 15 DAYS** from this present.
PRITHVI RAJ B. N., Advocate
No.71, ground floor, 8th cross, 1st main, Sampangiramanagar, Bengaluru-560027.
Ph: **9886563092**
E-mail: prithviraj.bn@gmail.com

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

INCHARA FARMS
Managed Villa Plots

ನವರಾತ್ರಿಯ ವಿಶೇಷ ಕೊಡುಗೆ
Registration FREE

Own a Weekend Retreat at Inchara Farms

Beautiful Serene view

"ಮೂಲ ಕೃಷಿ ಭೂಮಿ ಬೆಳೆಗೆ ಅಭಿವೃದ್ಧಿ ಪಡಿಸಿರುವ ಫಾರಂ ಲ್ಯಾಂಡಿನ ಮಾಲೀಕರಾಗಿ"

Surrounding **BMRDA PLOTS** Market Price ~~₹3000-4000~~ per sqft

Our Price ₹1299 per sqft
Plot size: 5000+ sqft


- Gated Community
- Swimming pool
- Club house
- Spread across 7 acres.
- 20+ Resort-Type Amenities
- Indoor & Out door Games & more

ನೆಲಮಂಗಲ



PRM/KA/RERA/1251/310/PR/150225/007509

BMICAPA Approved
RERA Regd.



ಬೆಂಗಳೂರು ದಕ್ಷಿಣ

Premium Plots for Premium Families

Spacious Living on a Grand 60ft Road.

Top notch Developments & Amenities

- Wide Roads - 60 ft, 40ft & 33ft.
- Amphitheatre
- Kids play area
- Semi-Opened out door gym.
- 3 Beautiful parks
- Underground Drainage & Electricity

Our Price ₹51 LACS
30x40, 30x50 and Odd Dimensions

80-90% ಬ್ಯಾಂಕ್ ಸಾಲ ಲಭ್ಯವಿದೆ

ಕೇವಲ **1.5 km** ಅಂತರದಲ್ಲಿ **ಬೆಂಗಳೂರು - ಮೈಸೂರು** ಎಕ್ಸ್‌ಪ್ರೆಸ್‌ವೇ

NOW or **NEVER**
80% SOLD OUT

RAJATHADRI GREEN CITY

9164009004
NISCHITHA PROPERTIES Pvt.Ltd.
More Than Real Estate
www.nischithaproperties.com

ARVIND PROPERTIES
FOR FAITH AND RELIABILITY

Move in for an extraordinary LIFESTYLE in the

HEART OF NATURE

RERA NO. PRM/KA/RERA/1250/307/PR/280324/006755


Grand Entrance Arch
Giving a prestigious look

Apartment-living facilities
Within a plotted development

Ready-to-build plots
Start your dream home construction soon

No Mediator Involved
Direct from land owner, transparent & hassle-free

COMFORTS



50 Acres Project
900 Premium Plots



- E - Khata
- BMRDA & RERA Approved
- Ready for Registration
- Bank Loan Available

PROXIMITY

- In the vicinity of proposed International Airport.
- Strategically located near Dabaspet industrial area.
- Minutes away from upcoming Metro and Economic Corridors.
- Located on the Intermediate Ring Road, with a newly upgraded double road ensuring seamless connectivity.
- Close to the City's future - Knowledge Health Innovation Research-City (KHIR-City) Project.

ನೆಲಮಂಗಲ ಸೊಂಡೆಕೊಪ್ಪ ರಸ್ತೆ
99986 08666
www.arvindproperties.com